ಗುಣುಗುಟ್ಟುವವರೂ, ಅಸಂತುಷ್ಟರೂ, ತಮ್ಮ ಆಶೆಗಳ ಪ್ರಕಾರ ನಡೆಯುವವರೂ, ಆಗಿದ್ದಾರೆ; ಅವರ ಬಾ
ಯಿಯು ಉಬ್ಬಿದ ಮಾತುಗಳನ್ನು ಆಡುತ್ತದೆ; [1]ಲಾಭಕ್ಕೋಸ್ಕರ ಮುಖದಾಕ್ಷಿಣ್ಯವನ್ನು ಮಾಡುತ್ತಾರೆ.
೧೭ ಆದರೆ, ಪ್ರಿಯರೇ, ನೀವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲರು ಮುಂಚೆ ಹೇಳಿದ ಮಾತುಗ
೧೮ ಳನ್ನು [2]ನೆನಪು ಮಾಡಿ ಕೊಳ್ಳಿರಿ; ಏನಂದರೆ, ಕಡೇ ಕಾಲದಲ್ಲಿ ತಮ್ಮ ಭಕ್ತಿಹೀನವಾದ ಆಶೆಗಳ ಪ್ರಕಾರ
೧೯ ನಡೆದು ಕೊಳ್ಳುವ [3]ಕುಚೋದ್ಯಗಾರರು ಇರುವರೆಂದು, ನಿಮಗೆ ಹೇಳಿದರು. ತಮ್ಮನ್ನು [4]ಬೇರೆ ಮಾಡಿ
ಕೊಳ್ಳುವವರೂ, ಪ್ರಾಣಭಾವದವರೂ, ಆತ್ಮವಿಲ್ಲದವರೂ, ಇವರೇ.
೨೦ ಆದರೆ, ಪ್ರಿಯರೇ, ನೀವು ನಿಮ್ಮ ಅತಿ [5]ಪರಿಶುದ್ಧವಾದ ವಿಶ್ವಾಸದ ಮೇಲೆ ನಿಮ್ಮನ್ನು ಕಟ್ಟಿ ಕೊಂಡು,
೨೧ ಪರಿಶುದ್ಧಾತ್ಮದಲ್ಲಿ [6]ಪ್ರಾರ್ಥಿಸಿ, ನಿತ್ಯಜೀವಕ್ಕೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯನ್ನು ಎದುರು
೨೨ ನೋಡುತ್ತಾ, [7]ದೇವರ ಪ್ರೀತಿಯಲ್ಲಿ ನಿಮ್ಮನ್ನು ಕಾಪಾಡಿ ಕೊಳ್ಳಿರಿ. ಮತ್ತು [8]ತಾರತಮ್ಯ ನೋಡಿ, ಕೆಲವ
೨೩ ರನ್ನು ಕರುಣಿಸಿರಿ; ಕೆಲವರನ್ನು [9]ಬೆಂಕಿಯೊಳಗಿಂದ ಎಳೆದು, ಭಯದಿಂದ ರಕ್ಷಿಸಿರಿ. ಮಾಂಸದಿಂದ ಮೈ
ಲಿಗೆಯಾದ ಅಂಗಿಯನ್ನು ಸಹ ಹಗೆ ಮಾಡಿರಿ.
೨೪ [10]ಬೀಳದ ಹಾಗೆ ನಿಮ್ಮನ್ನು ಕಾಪಾಡಿ, ಉಲ್ಲಾಸದಿಂದ ತನ್ನ ಮಹಿಮೆಯ ಸಮ್ಮುಖದಲ್ಲಿ ನಿರ್ಮಲರಾಗಿ
೨೫ ನಿಲ್ಲಿಸ ಶಕ್ತನಾದ, ನಮ್ಮ ರಕ್ಷಕನಾದ, ಒಬ್ಬನೇ ಜ್ಞಾನಿಯಾಗಿರುವ ದೇವರಿಗೆ, ಈಗಲೂ ಸರ್ವ ಯುಗ
ಗಳ ವರಿಗೂ ಮಹಿಮೆಯೂ, ಘನತೆಯೂ, ತ್ರಾಣವೂ, ಅಧಿಕಾರವೂ ಆಗಲಿ. ಆಮೆನ್.

1. ಗುಣುಗುಟ್ಟುವವರೂ, (೧ಕೊರಿ. ೧೦. ೧೦.) ದೇವರು ತಮಗೆ ಅನುಗ್ರಹಿಸಿದ ಸ್ಥಿತಿಯನ್ನು ಕುರಿತು ಮೊರೆ ಇಡುವವರೂ, (ಸಾಮ. ೧೯. ೩.) ತಮ್ಮ ಇಚ್ಛೆಗಳ ಪ್ರಕಾರ ನಡಿಯುವವರೂ, (ಎಫೆ. ೨. ೩.) ಉಬ್ಬಿದ ಮಾತುಗಳನ್ನಾಡುವವರೂ ಆಗಿರುವ ಭಕ್ತಿಹೀನರು ಸ್ವಂತ ಲಾಭಕ್ಕಾಗಿ ಮುಖಸ್ತುತಿ ಮಾಡುವರು.

2. (೨ಪೇತ್ರ. ೩. ೧—೩. ವಚನಗಳ ವ್ಯಾಖ್ಯಾನ ನೋಡ ಬೇಕು.) ಇದರಿಂದ ಪೇತ್ರನ ೨ನೇ ಪತ್ರಿಕೆಯು ಈ ಪತ್ರಿಕೆಗೆ ಮುಂಚೆ ಆದದ್ದೆಂದು ತಿಳಿಯ ಬೇಕು.

3. ದುರ್ಮಾರ್ಗರನ್ನು ದಂಡಿಸುವದಕ್ಕೆ ಸರ್ವಲೋಕನ್ಯಾಯಾಧಿಪತಿಯಾದ ಕ್ರಿಸ್ತನು ಪ್ರತ್ಯಕ್ಷವಾಗುವನೆಂಬ ಸತ್ಯವನ್ನು ಅಲಕ್ಷ್ಯ ಮಾಡಿ, ಕುಚೋದ್ಯ ಮಾಡಿರುವರು. (೨ಪೇತ್ರ. ೩. ೪.)

4. ಕ್ರಿಸ್ತನ ಶರೀರವಾದ ಸಭೆಯನ್ನೂ, ಆತನ ದಾಸರ ಸಂಘವನ್ನೂ ಬಿಟ್ಟು ಅಗಲಿ ಹೋಗುವವರು, (೧ಯೋಹಾ. ೨. ೧೯.) ಪ್ರಾಣಭಾವದವರು, (೧ಕೊರಿ. ೨. ೧೪.) ಆತ್ಮವಿಲ್ಲದವರು, ಇಂಥವರು ಕ್ರಿಸ್ತನನ್ನು ಸೇರಿದವರಲ್ಲ. (ರೋಮಾ. ೮. ೮, ೯.)

5. ತಿಳುವಳಿಕೆಯಿಂದಲೂ ಮನೋತ್ಸಾಹದಿಂದಲೂ ಅನುಸರಿಸುವ ಕ್ರಿಸ್ತನ ವಿಷಯವಾದ ವಿಶ್ವಾಸವು ಅಥವಾ ಸತ್ಯವು ಸಕಲ ಸದ್ಗುಣಗಳಿಗೂ ಆಸ್ಪದವಾಗಿರುತ್ತದೆ.

6. ಪರಿಶುದ್ಧಾತ್ಮನು ಕೃಪೆಯ ಆತ್ಮನಾಗಿಯೂ, ವಿಜ್ಞಾಪನೆಗಳ ಆತ್ಮನಾಗಿಯೂ ಇರುವದರಿಂದ, ದೇವರ ಚಿತ್ತಕ್ಕೆ ಸಮರ್ಪಕವಾದ ಪ್ರಾರ್ಥನೆಗಳನ್ನು ಮಾಡುವವರು ಪರಿಶುದ್ಧಾತ್ಮನಲ್ಲಿ ಪ್ರಾರ್ಥಿಸುವವರಾಗಿರ ಬೇಕು. (ಎಫೆ. ೬. ೧೮.)

7. ದೇವರ ಪ್ರೀತಿ ಎಂಬುವದು ದೇವರಲ್ಲಿಯೂ, ಆತನ ಭಕ್ತರಲ್ಲಿಯೂ ಇಡ ತಕ್ಕ ಪ್ರೀತಿಯನ್ನು ಕುರಿತದ್ದು. ಆ ಪ್ರೀತಿಯಿಂದ ತುಂಬಿರುವ ಹೃದಯವನ್ನು ಅಥವಾ ಮಂದಿರವನ್ನು ಅಶುಚಿ ಮಾಡದೆ, ಶುದ್ಧವಾಗಿರುವಂತೆ ಕಾದು ಕೊಳ್ಳ ಬೇಕು. ಆಗ ಕ್ರಿಸ್ತನು ಪ್ರಸನ್ನನಾಗುವ ಕಾಲದಲ್ಲಿ ಅನುಗ್ರಹಿಸಲ್ಪಡುವ ಕೃಪೆಯಾದ ಪರಮ ಮಹಿಮೆಯು ಸಂಪೂರ್ಣವಾಗಿ ಉಂಟಾಗುವದು.

8. ಇದರಲ್ಲಿ ಜಗಳಗಂಟಿಗರಾದ ಕೆಲವರನ್ನು ಖಂಡಿಸಿರಿ ಎಂಬ ಅರ್ಥವೂ, ಕೆಲವು ಬಲಹೀನರನ್ನು ನೋಡಿ ಅವರನ್ನು ಕರುಣಿಸಿ ಮನ್ನಿಸಿರಿ ಎಂಬ ಅರ್ಥವೂ ತೋರುತ್ತದೆ.

9. ಬೆಂಕಿಯಿಂದ ಉಂಟಾಗುವ ಅಪಾಯದ ಹಾಗೆ ಈ ಭಕ್ತಿಹೀನರಿಗೂ ಅಧಿಕ ಅಪಾಯ ಉಂಟಾಗಿದ್ದದರಿಂದ ಹೀಗೆ ಹೇಳಿ ಇದೆ. (ಜೆಕ. ೩. ೨.) ಮಿಕ್ಕಾದವರು ಈ ಅಪಾಯಕ್ಕೆ ತಪ್ಪಿಸಿ ಕೊಳ್ಳುವಂತೆ ಯತ್ನ ಮಾಡುವವರು ತಾವೇ ಅವರ ದುಷ್ಕರ್ಮಗಳಿಗೆ ಸ್ವಲ್ಪವಾದರೂ ಒಳಬೀಳದೆ ಇರ ಬೇಕು.

10. ಇದರಲ್ಲಿ ಅಡಗಿರುವ ದೇವರ ಸ್ತೋತ್ರವು, ಅಪೊಸ್ತಲನಾದ ಪೌಲನು ರೋಮಾಯರಿಗೆ ಬರೆದ ಪತ್ರಿಕೆಯಲ್ಲಿರುವ ಸ್ತೋತ್ರಕ್ಕೆ ಸ್ವಲ್ಪ ಸಮವಾಗಿದೆ. (ರೋಮಾ. ೧೬. ೨೫—೨೭.) ಭಕ್ತರು ಉತ್ತಮ ವಿಶ್ವಾಸದಿಂದ ಸರ್ವಶಕ್ತಿಯುಳ್ಳ ದೇವರ ಕೈಯನ್ನು ಹಿಡಿದಿರುವ ಮಟ್ಟಿಗೂ ಬೀಳಲಾರರು. (ಕೀರ್ತ. ೯೪. ೧೮.)

# THE REVELATION OF ST. JOHN THE DIVINE.

## ಯೋಹಾನನಿಗಾದ ದಿವ್ಯ ಪ್ರಕಟಣೆಯ ಪೀಠಿಕೆ.

ಈ ಗ್ರಂಥಕ್ಕೆ ಪ್ರಕಟಣೆ ಎಂಬ ವಿಶೇಷವಾದ ಹೆಸರುಂಟು. ಮರೆಯಾಗಿರುವ ಪರಮ ರಹಸ್ಯಗಳನ್ನು ನಮ್ಮ ಕರ್ತನಾದ ಯೇಸು ರಕ್ಷಕನು ತನಗೆ ಪ್ರಿಯನಾದ ಯೋಹಾನನಿಗೆ ಪ್ರಕಟ ಮಾಡಿದ ಕಾರಣದಿಂದ ಇದಕ್ಕೆ ಈ ಹೆಸರು ಉಂಟಾಯಿತು. (ರೋಮಾ. ೧೬. ೨೫—೨೭.) ೯೪ನೇ ಅಥವಾ ೯೫ನೇ ವರುಷದಲ್ಲಿ ರೋಮಾಯ ಚಕ್ರವರ್ತಿಯಾದ ದೋಮಿಷ್ಯನ್ ಕೈಸರನು ಧೊರೆತನ ಮಾಡುವಾಗ ಕ್ರೈಸ್ತರಿಗೆ ಸಂಭವಿಸಿದ ಉಪದ್ರದಲ್ಲಿ ಅಪೊಸ್ತಲನಾದ ಯೋಹಾನನನ್ನು ಹಿಡಿದು, ಒಬ್ಬ ಅಪರಾಧಿಯ ಹಾಗೆ ನೀರಿನ ಮೇಲೆ ಕಳುಹಿಸಿ ಬಿಡ ಬೇಕೆಂದು ಅರಸನ ಅಪ್ಪಣೆಯಾಯಿತು. ಆ ಅಪ್ಪಣೆಯ ಪ್ರಕಾರ ಯೋಹಾನನು ಏಜಿಯನ್ ಸಮುದ್ರದಲ್ಲಿರುವ ಪಾತ್ಮೊಸ್ ದ್ವೀಪದಲ್ಲಿ ಲೋಹಗಳನ್ನು ತೆಗೆಯುವ ಸುರಂಗಗಳಲ್ಲಿ ಕೆಲಸ ಮಾಡಿ ಕೊಂಡಿದ್ದನೆಂದು ಹೇಳಿ ಇದೆ. ಹೀಗಿರುವ ಕಾಲದಲ್ಲಿ ಅವನಿಗೆ ಈ ಪರಮ ದರ್ಶನ ಉಂಟಾಯಿತು. ಈ ಗ್ರಂಥವು ೯೬ನೇ ವರ್ಷದಲ್ಲಿ ಬರಿಯಲ್ಪಟ್ಟಿತೆಂದು ಊಹಿಸ ಬಹುದು.

ತಿರುಸಭೆಗೆ ಮಹೋಪದ್ರವು ಸಂಭವಿಸುವದೆಂದೂ, ಕ್ರಿಸ್ತನ ಭಕ್ತರಲ್ಲಿ ಅನೇಕರು ಸತ್ಯ ಮಾರ್ಗದಿಂದ ಜಾರಿ ಬೀಳುವರೆಂದೂ, ಪರಮ ಗುರುವಾದ ಕ್ರಿಸ್ತನೂ ಆತನ ದಾಸರಾದ ಅಪೊಸ್ತಲರೂ ಪ್ರವಾದನೆಯಾಗಿ ಹೇಳಿದ್ದರು. (ಮತ್ತಾ. ೨೪. ೧೧—೧೩. ೨ಥೆಸ್ಸ. ೨. ೩. ೨ಪೇತ್ರ. ೨. ೧, ೨; ೩. ೩.) ಲೋಕದಲ್ಲಿ ಸಂಭವಿಸುವ ಮುಖ್ಯವಾದ ಮತಭ್ರಷ್ಟತ್ವವನ್ನು ಕುರಿತೂ, ಅದರ ಕಾರಣ, ಲಕ್ಷಣ, ತತ್ಕಾಲ ವೃದ್ಧಿ, ಕಡೆಯಲ್ಲಿ ಅದಕ್ಕೆ ಸಂಭವಿಸುವ ನಾಶ ಮುಂತಾದ ವಿಷಯಗಳನ್ನು ಕುರಿತೂ, ಪೂರ್ವಿಕ ಕ್ರೈಸ್ತರು ಒಂದು ಪ್ರಕಾರ ತಿಳಿದಿದ್ದಾಗ್ಯೂ, ಅವರು ಎದುರು ನೋಡದೆ ಇದ್ದದ್ದೂ, ತರುವಾಯ ಸಂಭವಿಸುವಂಥಾದ್ದೂ ಆದ ಕಾರ್ಯಗಳಿಗೆ ಅವರು ಒಂದಾವರ್ತಿ ಆಯತ್ತರಾಗುವ ಉದ್ದೇಶ[illegible] ಅವರಿಗೆ ತಕ್ಕ ಆಲೋಚನೆಗಳೂ ಜ್ಞಾನವೂ ಆಗಾಗ್ಯೆ ಬೇಕಾಗಿದ್ದವು. ಕ್ರಿಸ್ತನ ಭಕ್ತರು ಸತ್ಯ ಮಾರ್ಗವನ್ನು ಅನುಸರಿಸಿದ್ದ ಕಾರಣ ಅವರಿಗೆ ಆಗಾಗ್ಯೆ ಕಠಿಣ ಉಪದ್ರಗಳು ಸಂಭವಿಸಿದವು. ಅಲ್ಪ ಸಂಖ್ಯೆಯುಳ್ಳವರೂ ಬಲಹೀನರೂ ಆಗಿದ್ದ ಅವರು ಸಮೂಲವಾಗಿ ನಾಶವಾಗುವದಾಗಿದ್ದರು. ಇಂಥಾ ಉಪದ್ರವೂ ಹೋರಾಟವೂ ಉಳ್ಳ ಸ್ಥಿತಿಯಲ್ಲಿದ್ದ ಅವರಿಗೆ ಈ ಗ್ರಂಥದಲ್ಲಿರುವ ಬುದ್ಧಿಬೋಧನೆಗಳೂ ದಿವ್ಯ ಜ್ಞಾನವೂ ಅಧಿಕ ಆದರಣೆಯನ್ನು ಕೊಡ ತಕ್ಕವುಗಳಾಗಿದ್ದವು. ಆ ಕಾಲದಲ್ಲಿ ಮಾತ್ರವಲ್ಲ, ಎಲ್ಲಾ ಕಾಲಗಳಲ್ಲಿಯೂ, ಸಭೆಗೂ ಲೋಕಕ್ಕೂ, ಅಥವಾ ಬೆಳಕಿಗೂ ಕತ್ತಲೆಗೂ ನಡೆಯುವ ಆತ್ಮಿಕವಾದ ಹೋರಾಟಕ್ಕೆ, ಈ ಗ್ರಂಥವು ಒಂದು ದಿವ್ಯಾಯುಧದ ಹಾಗೆ ಬಹಳ ಉಪಯೋಗವುಳ್ಳದ್ದಾಗಿದೆ. ನಾನಾ ವಿಧ ಶೋಧನೆಗಳನ್ನೂ, ಉಪದ್ರಗಳನ್ನೂ ಅನುಭವಿಸುವ ಕ್ರೈಸ್ತಭಕ್ತರ ವಿಶ್ವಾಸವು ಸ್ಥಿರ ಪಡುವದಕ್ಕೂ, ನಂಬಿಕೆ ದೃಢವಾಗುವದಕ್ಕೂ, ಈ ಗ್ರಂಥದಲ್ಲಿರುವ ಬೋಧನೆಗಳು ಬಹಳ ತಕ್ಕವುಗಳಾಗಿವೆ. ಲೋಕದಲ್ಲಿ ಸಂಭವಿಸುವ ಸಮಸ್ತ ಕಾರ್ಯಗಳೂ ಕ್ರಿಸ್ತನ ರಾಜ್ಯವು ಪೂರ್ಣವಾಗಿ ಸ್ಥಾಪಿಸಲ್ಪಡುವದಕ್ಕೂ, ಆತನ ಸಭೆಯು ನಿತ್ಯ ಮಹಿಮೆ ಹೊಂದಿದ್ದಾಗಿ ತೋರುವದಕ್ಕೂ ಹೇತುವೆಯಾಗಿ, ಮುಗಿಯುವವೆಂದು ನಿಶ್ಚಯಿಸಿರುವ ಕ್ರಿಸ್ತನ ಭಕ್ತರ ನಂಬಿಕೆಯು ದೃಢವಾಗದೆ ಇರಲಾರದು.

ಲೋಕಾಂತ್ಯದ ವರಿಗೂ ಸಲ್ಲುವಂಥ ಪ್ರವಾದನೆಗಳು ಅಡಗಿರುವ ಈ ಗ್ರಂಥವು ದೇವರ ನಿರ್ಣಯವನ್ನು ತೋರಿಸುವ ಕಡೇ ಪ್ರಕಟಣೆ ಎಂದು ಹೇಳ ಬಹುದು. ಇನ್ನು ಮೇಲೆ ಇಂಥಾ ಪ್ರಕಟಣೆಯು ಕೊಡಲ್ಪಡುವದೆಂದು ನೆನಸುವದಕ್ಕೆ ಹೇತುವೆ ಇಲ್ಲ. ಇದು ಕಡೇದಾದ ದಿವ್ಯ ಪ್ರಕಟಣೆಯಾಗಿಯೂ, ಪ್ರವಾದನಾವಾಕ್ಯಗಳ ಪೂರ್ಣತೆಯಾಗಿಯೂ ಇರುತ್ತದೆ. ದೇವರ ನಿಜ ಸಭೆಯು, ಲೋಕದ ಕಡೇ ಯುಗವಾದ ಅಂತ್ಯಕಾಲದಲ್ಲಿ ಪ್ರಬಲವಾಗುವಂಥಾದ್ದಾಗಿಯೂ, ಕ್ರಿಸ್ತನ ಮಹಿಮೆಯ ಪ್ರಸನ್ನತೆಯನ್ನೂ, ಆತನ ದಾಸರು ಹೊಂದಲಿಕ್ಕಿರುವ ಪರಮ ಪದವಿಯನ್ನೂ, ಆಸಕ್ತಿಯಿಂದ ಎದುರು ನೋಡುವಂಥಾದ್ದಾಗಿಯೂ ಇರುತ್ತದೆ. ಈ ಗ್ರಂಥಕ್ಕೆ ಸತ್ಯವೇದದ ಮುದ್ರೆ ಎಂಬ ಹೆಸರು ತಕ್ಕದ್ದಾಗಿದೆ. ವೇದದ ಮೊದಲನೇ ಗ್ರಂಥವಾದ ಉತ್ಪತ್ತಿ ಎಂಬ ಪುಸ್ತಕದಲ್ಲಿ ಮನುಷ್ಯರು ಪರದೈಸನ್ನು ಕಳಕೊಂಡದ್ದೂ, ಕಡೇ ಗ್ರಂಥವಾದ ಈ ಪ್ರಕಟಣೆಯ ಪುಸ್ತಕದಲ್ಲಿ ಅವರು ಪರದೈಸನ್ನು ತಿರಿಗಿ ಹೊಂದಿದ್ದೂ ತೋರಿಸಿ ಇದೆ.

ಈ ಗ್ರಂಥದ ಪ್ರವಾದನೆಯ ಭಾಗದಲ್ಲಿ ಉಪಮಾನಗಳೂ ಉಪಮೆಗಳೂ ತುಂಬಿರುವದರಿಂದ ಅವುಗಳ ತಾತ್ಪರ್ಯವನ್ನು ಒಂದಾವರ್ತಿ ತಿಳಿದು ಕೊಳ್ಳದೆ ಇದ್ದರೆ, ಈ ಗ್ರಂಥದ ಬೋಧನೆಯ ತಾತ್ಪರ್ಯವು ತಿಳಿಯಲಾರದು. ಈ ಉಪಮಾನಗಳಲ್ಲಿ ಅನೇಕವು ಹಳೇ ಒಡಂಬಡಿಕೆಯಲ್ಲಿರುವವುಗಳಿಗೆ ಹೋಲಿಕೆಯಾಗಿವೆ. ಇವುಗಳಲ್ಲಿ ಕೆಲವುಗಳ ತಾತ್ಪರ್ಯವನ್ನು ಸರ್ವಜ್ಞನಾದ ಕ್ರಿಸ್ತನೂ, ಆತನ ಸೇವಕರಾದ ದೇವದೂತರೂ ವಿವರಿಸಿರುವದನ್ನು ನೋಡ ಬಹುದು. ಈ ಗ್ರಂಥದಲ್ಲಿ ಅಡಗಿರುವ ಪ್ರವಾದನೆಗಳ ಜ್ಞಾನಾಭಿಪ್ರಾಯವನ್ನು ಗ್ರಹಿಸಿ ಕೊಳ್ಳುವದಕ್ಕೆ ಇದು ಉತ್ತಮ ಬಗೆಯಾಗಿದೆ. ಇದಲ್ಲದೆ ಇದರಲ್ಲಿ ಅಡಗಿರುವ ಉಪಮಾನಗಳ ಸ್ವಭಾವವನ್ನು ಯೋಚಿಸ ಬೇಕಾದದ್ದು ಬಹು ಅವಶ್ಯವಾಗಿದೆ. ಹೀಗೆ ಯೋಚಿಸುವದರಿಂದ ಉಪಮಾನಕ್ಕೂ ಅದರಿಂದ ಸೂಚಿಸಲ್ಪಟ್ಟ ಅರ್ಥಕ್ಕೂ ಒಂದು ಸಮ್ಮಂಧವಿರುವದನ್ನು ಕಾಣ ಬಹುದು. ದೃಷ್ಟಾಂತವಾಗಿ, ಅಧಿಕಾರವನ್ನು ಕಿರೀಟಕ್ಕೂ, ಮಹಿಮೆಯನ್ನು ರತ್ನಕ್ಕೂ, ಕ್ರೂರತ್ವವನ್ನು ದುಷ್ಟ ಮೃಗಕ್ಕೂ, ಉಪ

ಮಾನ ಮಾಡಿರುವದರಲ್ಲಿ ಈ ನ್ಯಾಯವು ಚನ್ನಾಗಿ ತೋರುತ್ತದೆ. ಈ ಉಪಮಾನಗಳನ್ನು ಸಮಯಕ್ಕೆ ತಕ್ಕ ಪ್ರಕಾರ ಅರ್ಥ ಮಾಡದೆ, ಯಾವಾಗಲೂ ಒಂದೇ ಅರ್ಥವನ್ನು ಅವುಗಳಿಗೆ ಕಲ್ಪಿಸುವದು ಉತ್ತಮವಾಗಿದೆ.

ಈ ಗ್ರಂಥದಲ್ಲಿ ಅಡಗಿರುವ ಉಪಮಾನಗಳ ಸಾಧಾರಣ ತಾತ್ಪರ್ಯವನ್ನು ಕುರಿತು ವಿದ್ವಾಂಸರಲ್ಲಿ ಅಧಿಕ ಭೇದವಿಲ್ಲದೆ ಇದ್ದಾಗ್ಯೂ, ಅವುಗಳಿಂದ ದಿವ್ಯ ಸತ್ಯಗಳನ್ನು ವಿವರಿಸುವದರಲ್ಲಿಯೂ, ಪ್ರವಾದನೆಗಳ ಈಡೇರೋಣವನ್ನು ಇತಿಹಾಸಗಳಲ್ಲಿರುವ ವಿಷಯಗಳ ಸಂಗಡ ಸಮ್ಮಂಧ ಮಾಡಿ ತೋರಿಸುವದರಲ್ಲಿಯೂ ಅಧಿಕ ವ್ಯತ್ಯಾಸವಾಗುವದುಂಟು. ಒಬ್ಬೊಬ್ಬರು ಒಂದೊಂದು ವಿಧವಾಗಿ ತಾತ್ಪರ್ಯ ಹೇಳುವದರಿಂದ, ಯಾರು ಹೇಳುವದು ನಿಶ್ಚಯವೋ ಎಂದು ನಿರ್ಣಯಿಸುವದು ಅಸಾಧ್ಯವಾಗಿದೆ. ಕಾರ್ಯಗಳನ್ನು ಚನ್ನಾಗಿ ಯೋಚಿಸಿ ನೋಡಿ, ಒಳ್ಳೇ ಆಲೋಚನೆಯಿಂದಲೂ, ಬುದ್ಧಿನಿಧಾನದಿಂದಲೂ ಅಭಿಪ್ರಾಯಗಳನ್ನು ಗ್ರಹಿಸಿ ಕೊಳ್ಳ ತಕ್ಕದ್ದಾಗಿದೆ.

ಈ ಗ್ರಂಥದಲ್ಲಿ ಅಡಗಿರುವ ಪರಮ ದರ್ಶನಗಳಿಂದ ಸೂಚಿಸಲ್ಪಡುವ ಕಾಲಗಳನ್ನೂ ಸಂಗತಿಗಳನ್ನೂ ಕುರಿತು ವಿದ್ವಾಂಸರಲ್ಲಿ ಭೇದವಾದ ಅಭಿಪ್ರಾಯಗಳು ಇದ್ದಾಗ್ಯೂ, ಅವುಗಳ ಹುದುವಾದ ಲಕ್ಷಣವನ್ನು ಕುರಿತೂ, ಗುರಿಯನ್ನು ಕುರಿತೂ, ಎಲ್ಲಾ ಕಾಲಗಳಲ್ಲಿರುವ ಎಲ್ಲಾ ಸಭೆಯವರಿಗೂ ಬಹುಶಾ ಒಂದೇ ವಿಧವಾದ ಅಭಿಪ್ರಾಯ ಉಂಟು. ಜಗದ್ರಕ್ಷಕನಾದ ಕ್ರಿಸ್ತನು ಪರಮ ಸಿಂಹಾಸನದಲ್ಲಿ ಆಸೀನನಾಗಿದ್ದು, ಲೋಕದಲ್ಲಿ ನಡಿಯುವ ಸಕಲ ಕಾರ್ಯಗಳನ್ನು ತನ್ನ ದಿವ್ಯ ಚಿತ್ತದ ಪ್ರಕಾರ ಆಳಿ ನಡಿಸುತ್ತಾನೆಂದೂ; ಆತನ ಸಭೆಯು ಅನೇಕ ಕಾಲವಾಗಿ ಕಷ್ಟವೂ ಹೋರಾಟವೂ ಉಳ್ಳ ಸ್ಥಿತಿಯಲ್ಲಿ ಇರುವದೆಂದೂ; ಅದರ ಶತ್ರುಗಳಾದ ಯೆಹೂದ್ಯರು ಅಪಜಯ ಹೊಂದಿದ ತರುವಾಯ, ದೇವರಿಗೂ ಮನುಷ್ಯರಿಗೂ ದೊಡ್ಡ ಶತ್ರುವಾದ ಪಿಶಾಚನು ಅದನ್ನು ಕೆಡಿಸಿ ನಾಶ ಮಾಡುವ ಉದ್ದಿಶ್ಯ, ಲೌಕಿಕ ಅಧಿಕಾರವು, ಉಪದ್ರವು, ಸುಳ್ಳು ಬೋಧನೆ ಮುಂತಾದ ಆಯುಧಗಳನ್ನು ಬಳಿಸುವನೆಂದೂ; ಇಂಥಾ ಇಕ್ಕಟ್ಟುಗಳು ಅದಕ್ಕೆ ಸಂಭವಿಸಿದಾಗ್ಯೂ ಅದು ಇನ್ನೂ ದೇವರ ಪರಾಮರಿಕೆಯೊಳಗೆ ಇರುವದೆಂದೂ; ಕ್ರಿಸ್ತನ ರಾಜ್ಯಕ್ಕೆ ವಿರೋಧವಾಗಿರುವ ಎಲ್ಲವೂ ನಾಶ ಹೊಂದುವದೆಂದೂ; ಭೂಲೋಕವೂ ಪರಲೋಕವೂ ಸಮೀಪ ಸಮ್ಮಂಧವುಳ್ಳವುಗಳಾಗಿರುವದರಿಂದ, ಸ್ತುತಿ ಸ್ತೋತ್ರವೆಂಬ ಧೂಪವು ಪರಮಾಸನಕ್ಕೆ ಏರುವದೆಂದೂ; ಶಿಷ್ಟರನ್ನು ಪರಿಪಾಲಿಸಲೂ ದುಷ್ಟರನ್ನು ಸಂಹರಿಸಲೂ ದೇವದೂತರು ಭೂಮಿಗೆ ಇಳಿಯುವರೆಂದೂ; ಶ್ರಮೆಯಲ್ಲಿಯೂ ಉಪದ್ರದಲ್ಲಿಯೂ ಹೋರಾಟದಲ್ಲಿಯೂ ಶಿಕ್ಕಿರುವ ಪರಿಶುದ್ಧ ಸಭೆಯು ಕಡೆಯಲ್ಲಿ ಸುಖವನ್ನೂ ಘನವನ್ನೂ ಪೂರ್ಣ ಭಾಗ್ಯವನ್ನೂ ಹೊಂದಿ ಬಾಳುವದೆಂದೂ; ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿ, ತನ್ನ ಪವಿತ್ರ ರಕ್ತದ ಪುಣ್ಯದಿಂದ ಲೋಕವನ್ನು ಬಿಡುಗಡೆ ಮಾಡಿ ರಕ್ಷಿಸಿದ ಕ್ರಿಸ್ತನು, ತನ್ನ ಶರಣಾಗತರಾದ ದಾಸರನ್ನು ಕೃಪಾದೃಷ್ಟಿಯಿಂದ ನೋಡಿ, ಅವರನ್ನು ಸಕಲ ಆಪತ್ತಿನಿಂದ ತಪ್ಪಿಸಿ ಕಾದು, ಪರಮ ಪದವಿಯಲ್ಲಿ ಶೇರಿಸುವನೆಂದೂ; ಕಡೆಯಲ್ಲಿ ಸೈತಾನನು ಸಮೂಲವಾಗಿ ನಾಶನವಾಗಲು, ಸರ್ವದೇಶಗಳಲ್ಲಿಯೂ ಯುಗಗಳಲ್ಲಿಯೂ ಇರುವ ದೇವರ ದಾಸರೆಲ್ಲರು ಮಹಿಮೆಯುಳ್ಳ ಒಂದೇ ಕೂಟವಾಗಿ ಪರಮ ಸಭೆಯಲ್ಲಿ ಶೇರಿ, ತಮ್ಮ ಆತ್ಮರಕ್ಷಕನೂ ಪರಮನಾಯಕನೂ ಆದ ಕ್ರಿಸ್ತನ ಪರಿಶುದ್ಧ ಸನ್ನಿಧಿಯಲ್ಲಿ ಸದಾಕಾಲವಿದ್ದು, ಆತನ ಸ್ತೋತ್ರವನ್ನು ಹಾಡುತ್ತಾ ಬಾಳುವರೆಂದೂ, ಈ ಗ್ರಂಥದಲ್ಲಿ ತೋರಿಸಿ ಇದೆ. ಎಲ್ಲರೂ ಸಂದೇಹವಿಲ್ಲದೆ ಒಪ್ಪಿಕೊಳ್ಳುವ ಈ ದಿವ್ಯ ಸತ್ಯಗಳು ಈ ಗ್ರಂಥದಲ್ಲಿ ಸ್ಪಷ್ಟವಾಗಿ ಸೂಚಿಸಲ್ಪಟ್ಟವೆ. ಇವುಗಳನ್ನು ಅತ್ಯಂತ ಭಕ್ತಿಯಿಂದ ಅನುಸರಿಸಿರುವ ದೇವದಾಸರ ವಿಶ್ವಾಸ, ಪ್ರೀತಿ, ತಾಳ್ಮೆ, ನಂಬಿಕೆ, ಸಂತೋಷ, ಧೈರ್ಯ ಮುಂತಾದ ಸುಗುಣಗಳು ಹೆಚ್ಚೆಚ್ಚಾಗಿ ಅಭಿವೃದ್ಧಿಯಾಗುವವೆಂಬುವದಕ್ಕೆ ಸಂದೇಹವಿಲ್ಲ.

ರಕ್ಷಕನಾದ ಕ್ರಿಸ್ತನ ರಕ್ಷಣೆಯ ಕ್ರಿಯೆಯನ್ನೂ, ಆತನ ಲಕ್ಷಣಗಳನ್ನೂ ಈ ಗ್ರಂಥದಲ್ಲಿ ವಿವರವಾಗಿ ಹೇಳಿ ಇದೆ. ನಿತ್ಯನಾದ ಆತನು ಈ ಭೂಮಿಯ ಮೇಲೆ ಅವತರಿಸಿ ಮರಣ ಹೊಂದಿದನೆಂದೂ, ಸ್ವಲ್ಪ ಕಾಲ ಮರಣದ ಅಧಿಕಾರಕ್ಕೆ ಒಳಪಟ್ಟಿದ್ದ ಆತನು ಮರಣವೆಂಬ ಶತ್ರುವನ್ನು ಜಯಿಸಿ, ಮಹಿಮಾಸ್ವರೂಪನಾಗಿ ಎದ್ದು, ಸಭೆಯ ನಾಯಕನಾಗಿ ಪರಲೋಕಕ್ಕೆ ಏರಿ ಹೋದನೆಂದೂ, ಅಲ್ಲಿ ನಿತ್ಯನಾಗಿಯೂ ಸರ್ವಶಕ್ತಿಯೂ ಸರ್ವಾಧಿಕಾರವೂ ಉಳ್ಳವನಾಗಿಯೂ, ಸರ್ವಸೃಷ್ಟಿಗಳಿಂದ ಮಹಿಮೆಯನ್ನೂ ಘನವನ್ನೂ ಹೊಂದುವವನಾಗಿಯೂ ಇರುವನೆಂದು ತೋರಿಸಲ್ಪಟ್ಟದೆ.

ಉಪಮಾನಗಳುಳ್ಳ ಈ ಗ್ರಂಥದ ಭಾಗವು ಎಜೇಕಿಯೇಲನು ದಾನಿಯೇಲನು ಜೆಕರೀಯನು ಎಂಬ ಪ್ರವಾದಿಗಳ ಗ್ರಂಥಗಳಿಗೆ ಸಮಾನವಾದದ್ದಾಗಿಯೂ, ಒಂದು ಪ್ರಕಾರ ಅವುಗಳ ಜೋಡಣೆಯಾಗಿಯೂ ಇದೆ ಎಂದು ಹೇಳ ಬಹುದು. ಆದದರಿಂದ ಇದರ ತಾತ್ಪರ್ಯವನ್ನು ಸರಿಯಾಗಿ ಗ್ರಹಿಸ ಬೇಕೆಂದಿರುವವರು ಮೇಲೆ ಹೇಳಿದ ಪ್ರವಾದನೆಯ ಗ್ರಂಥಗಳನ್ನು, ವಿಶೇಷವಾಗಿ ದಾನಿಯೇಲನ ಪ್ರವಾದನೆಯನ್ನು ಇದರ ಸಂಗಡ ಶೇರಿಸಿ ಓದ ಬೇಕು.

ಈ ಗ್ರಂಥವು ಎರಡು ಭಾಗಗಳುಳ್ಳದ್ದು:

1. ಮೊದಲನೇ ಭಾಗದಲ್ಲಿ, ಸಭೆಯ ಶಿರಸ್ಸಾದ ಕ್ರಿಸ್ತನ ಮಹಿಮೆಯನ್ನು ಸೂಚಿಸುವ ದರ್ಶನವೂ, ಸಣ್ಣ ಆಸ್ಯದ ಏಳು ಸಭೆಗಳಿಗೆ ಬರೆಯಲ್ಪಟ್ಟ ಪತ್ರಿಕೆಗಳೂ ಅಡಗಿರುತ್ತವೆ. (೧—೩. ಸಂಧಿ.)

2. ಈ ಗ್ರಂಥದ ಇನ್ನೊಂದು ಭಾಗದಲ್ಲಿ, ಉಂಟಾಗಲಿಕ್ಕಿರುವ ಕಾರ್ಯಗಳನ್ನು ತೋರಿಸುವ ಅನೇಕ ದರ್ಶನಗಳು ಅಡಗಿರುತ್ತವೆ. ಇವುಗಳಲ್ಲಿ ಸತ್ಯ ಸಭೆಯ ಶತ್ರುಗಳಿಗೆ ಸಂಭವಿಸುವ ಆಜ್ಞೆಯನ್ನು ಕುರಿತ ಏಳು ಮುದ್ರೆಗಳನ್ನು ಒಡೆಯೋಣವು, ಏಳು ತುತೂರಿಗಳನ್ನು ಊದೋಣವು, ಏಳು ಪಾತ್ರೆಗಳನ್ನು ಹೊಯ್ಯೋಣವು, ಎಂಬ ಮೂರು ವಿಧ ದರ್ಶನಗಳು ಮುಖ್ಯವಾದವುಗಳಾಗಿವೆ. ಇವುಗಳಲ್ಲಿ ಒಂದೊಂದಕ್ಕೂ ಹಿಂದೆಯೂ ಮುಂದೆಯೂ ಕೆಲವು ದರ್ಶನಗಳು ಬರುತ್ತವೆ. ಇವು ದೇವರ ಆಳಿಕೆಗೂ ಸಭೆಯ ತತ್ಕಾಲದ ಉಪದ್ರವಾದ ಸ್ಥಿತಿಗೂ, ತರುವಾಯ ಉಂಟಾಗುವ ಸೌಖ್ಯಸ್ಥಿತಿಗೂ ಗುರುತುಗಳಾಗಿವೆ. (೪—೨೦. ಸಂಧಿ.) ಈ ಗ್ರಂಥದ ಕಡೆಯಲ್ಲಿ ಸಭೆಗೆ ಅಂತ್ಯದಲ್ಲಿ ಉಂಟಾಗುವ ಪೂರ್ಣ ಮಹಿಮೆಯನ್ನೂ ಆನಂದ ಪದವಿಯನ್ನೂ ತೋರಿಸುತ್ತದೆ. (೨೧, ೨೨. ಸಂಧಿ.)



ಈ ಗ್ರಂಥದ ಸಂಗತಿಗಳನ್ನು ಕೆಳಗೆ ಬರುವ ರೀತಿಯಾಗಿ ಸೂಚಿಸ ಬಹುದು:

I. ಸಣ್ಣ ಆಸ್ಯದ ಏಳು ಸಭೆಗಳಿಗೆ ಬರೆದ ಪತ್ರಿಕೆಗಳು. (೧—೩. ಸಂಧಿ.)

II. ಏಳು ಮುದ್ರೆಗಳನ್ನು ಒಡೆದದ್ದು. (೪. ೧—೮. ೧. ವರಿಗೂ.)

III. ಏಳು ತುತೂರಿಗಳನ್ನು ಊದಿದ್ದು. (೮. ೨—೧೧. ಸಂಧಿ ವರಿಗೂ.)

IV. ಗಡಸರ್ಪವು, ಮೃಗವು, ಸುಳ್ಳು ಪ್ರವಾದಿ ಎಂಬ ಮೂವರು ಶತ್ರುಗಳು ಸಭೆಗೆ ವಿರೋಧವಾಗಿ ಯುದ್ಧ ಮಾಡಿದ್ದು. (೧೨—೧೪. ಸಂಧಿ.)

V. ದೇವರ ಉಗ್ರದ ಪಾತ್ರೆಗಳನ್ನು ಹೊಯ್ಯುವದು. (೧೫, ೧೬. ಸಂಧಿ.)

VI. ಸಭೆಯ ಮೂವರು ಶತ್ರುಗಳು ಅಪಜಯ ಹೊಂದಿದ್ದು. (೧೭—೨೦. ಸಂಧಿ.)

VII. ಹೊಸ ಯೆರೂಸಲೇಮು ಅಥವಾ ಪರಮ ಯೆರೂಸಲೇಮಿನ ಮಹಿಮೆಯನ್ನು ತೋರಿಸಿದ್ದು. (೨೧, ೨೨. ಸಂಧಿ.)

ಈ ಗ್ರಂಥದಲ್ಲಿರುವ ಅನೇಕ ಪ್ರವಾದನೆಗಳ ತಾತ್ಪರ್ಯವು ತಿಳಿಯದೆ ಮೊಬ್ಬಾಗಿರುವದರಿಂದಲೂ, ವಿದ್ವಾಂಸರಲ್ಲಿ ಇವುಗಳನ್ನು ಕುರಿತು ವ್ಯತ್ಯಾಸವಾದ ಅಭಿಪ್ರಾಯಗಳಿರುವದರಿಂದಲೂ, ಈ ಗ್ರಂಥದಲ್ಲಿ ವಿಧ ವಿಧವಾದ ಅಭಿಪ್ರಾಯಗಳನ್ನು ಬರೆಯದೆ, ವೇದಶಾಸ್ತ್ರಿಗಳು ಕಲ್ಪಿಸಿರುವ ಮುಖ್ಯವಾದ ತಾತ್ಪರ್ಯಗಳನ್ನು ಮಾತ್ರ ಅಲ್ಲಲ್ಲಿ ಸೂಚಿಸಿದ್ದೇವೆ.

# THE REVELATION OF ST. JOHN THE DIVINE.

# ಯೋಹಾನನಿಗಾದ ದಿವ್ಯ ಪ್ರಕಟಣೆ.

ಪೀಠಿಕೆ. ಆಶೀರ್ವಾದ; ರಕ್ಷಕನ ಸ್ತುತಿ. ಆತನು ಎರಡನೇ ಸಾರಿ ಪ್ರಸನ್ನನಾಗುವದು.

1. [1]ಯೇಸು ಕ್ರಿಸ್ತನ ಪ್ರಕಟಣೆಯು. ಇದನ್ನು ದೇವರು, ತ್ವರೆಯಿಂದ [2]ಆಗ ಬೇಕಾದವುಗಳನ್ನು ತನ್ನ
ದಾಸರಿಗೆ ತೋರಿಸುವ ಬಗ್ಯೆ, ಅವನಿಗೆ ಕೊಟ್ಟನು. ಅವನು ತನ್ನ ದೂತನ ಮುಖಾಂತರ ತನ್ನ ದಾಸನಾದ
೨ ಯೋಹಾನನಿಗೆ [3]ಅದನ್ನು ಕಳುಹಿಸಿ, ಸೂಚಿಸಿದನು. ಇವನು ದೇವರ ವಾಕ್ಯಕ್ಕೂ ಯೇಸು ಕ್ರಿಸ್ತನ ಸಾ
ಕ್ಷಿಗೂ ತಾನು ನೋಡಿದವುಗಳೆಲ್ಲಕ್ಕೂ [4]ಸಾಕ್ಷಿ ಕೊಟ್ಟನು.
೩ ಈ ಪ್ರವಾದನೆಯ ವಾಕ್ಯಗಳನ್ನು ಓದುವವನೂ, [5]ಕೇಳುವವರೂ, ಅದರಲ್ಲಿ ಬರೆದಿರುವವುಗಳನ್ನು [6]ಕೈಕೊ
ಳ್ಳುವವರೂ, ಭಾಗ್ಯವಂತರು. ಯಾಕಂದರೆ ಕಾಲವು ಸಮೀಪವಾಗಿದೆ.

1. ಈ ಸಂಧಿಯಲ್ಲಿ ಈ ಗ್ರಂಥದ ಸ್ವಭಾವವನ್ನೂ ಪೀಠಿಕೆಯನ್ನೂ ಗ್ರಂಥಕರ್ತನ ಹೆಸರನ್ನೂ, (೧—೩. ವ.) ಸಣ್ಣ ಆಸ್ಯದಲ್ಲಿರುವ ಏಳು ಸಭೆಗಳಿಗೆ ಆಶೀರ್ವಾದವನ್ನೂ, (೪, ೫. ವ.) ವಿಮೋಚಕನ ಸ್ತೋತ್ರದ ಹಾಡನ್ನೂ, (೬—೮. ವ.) ಹೇಳಿದ ತರುವಾಯ, ಸಭೆಗಳಿಗೆ ಬರೆಯಲ್ಪಟ್ಟ ಪತ್ರಿಕೆಗಳ ಪೀಠಿಕೆಯಾಗಿ ಮೊದಲನೇ ದರ್ಶನವನ್ನು ಹೇಳಿ ಇದೆ. ಈ ದರ್ಶನವು ಯೆಹೂದ್ಯರ ದೇವಾಲಯದಲ್ಲಿ ನಡಿಯುವ ಭಾವನೆಯಾಗಿರುತ್ತದೆ. ಅದರಲ್ಲಿ ಏಳು ಚಿನ್ನದ ದೀಪಸ್ತಂಭಗಳನ್ನೂ, ಅದರ ಪಾರ್ಶ್ವದಲ್ಲಿ ಏಳು ನಕ್ಷತ್ರಗಳನ್ನು ಬಲಗೈಯಲ್ಲಿ ಹಿಡಿದು, ಯಾಜಕನ ವಸ್ತ್ರಗಳನ್ನು ಧರಿಸಿ, ದಿವ್ಯ ಮಹಿಮೆ ಹೊಂದಿದ ಒಬ್ಬ ಪರಮ ಪುರುಷನು ನಿಲ್ಲುವದನ್ನೂ, ತೋರಿಸಿ ಇದೆ. (೯—೧೮. ವ.) ಆತನು ತನ್ನ ದಾಸನಾದ ಯೋಹಾನನು ಕಂಡದ್ದೂ ಕಾಣುತ್ತಿರುವದೂ ಮುಂದೆ ಕಾಣುವದೂ ಆದ ಸಮಸ್ತ ಕಾರ್ಯಗಳನ್ನೂ ಬರಿಯುವ ಹಾಗೆ ಅವನಿಗೆ ಆಜ್ಞಾಪಿಸಿ, ಏಳು ದೀಪಸ್ತಂಭಗಳು ಏಳು ಸಭೆಗಳೆಂದೂ, ಏಳು ನಕ್ಷತ್ರಗಳು ಆ ಸಭೆಗಳ ಬೆಳಕುಗಳಾಗಿ ಉರಿಯುವ ದೂತರೆಂದೂ ತಾತ್ಪರ್ಯ ಹೇಳುತ್ತಾನೆ. (೧೯, ೨೦. ವ.)

2. ಇದು ಶೀಘ್ರವಾಗಿ ಸಂಭವಿಸುವದಕ್ಕೆ ಆರಂಭಿಸಿ ಶೀಘ್ರವಾಗಿ ಈಡೇರುವ ಎಲ್ಲವನ್ನು ಸೂಚಿಸುತ್ತದೆ. (೨ ಪೇತ್ರ. ೩. ೮.) ಇದರಲ್ಲಿ ಯೋಹಾನನಿಗೆ ಪರಮ ದರ್ಶನ ಉಂಟಾದ ಕಾಲದಲ್ಲಿ ಪ್ರಾರಂಭಿಸಿದ್ದೂ, ಲೋಕಾಂತ್ಯದಲ್ಲಿ ಪೂರ್ಣವಾಗಿ ಈಡೇರುವದೂ ಆದ ಸಕಲವೂ ಅಡಗಿ ಇದೆ. ಇವುಗಳು ದೇವರ ದಾಸನಾದ ಯೋಹಾನನಿಗೆ ಮಾತ್ರವಲ್ಲ, ಕ್ರಿಸ್ತನ ಸೇವಕರಾದ ಉತ್ತಮ ಭಕ್ತರೆಲ್ಲರಿಗೂ ಪ್ರಕಟ ಮಾಡಲ್ಪಟ್ಟಿದೆ.

3. ಈ ಪ್ರಕಟಣೆ ಮೊದಲು ತಂದೆಯಾದ ದೇವರಿಂದ ಕ್ರಿಸ್ತನಿಗೆ ಕೊಡಲ್ಪಟ್ಟದ್ದಾಗಿಯೂ, (ಮಾರ್ಕ. ೧೩. ೩೨. ಯೋಹಾ. ೧೨. ೪೯. ಅಪೊ. ಕ್ರಿ. ೧. ೭. ಪ್ರಕಟ. ೫. ೫.) ತರುವಾಯ ಕ್ರಿಸ್ತನಿಂದ ದೂತನ ಮೂಲಕವಾಗಿ ಯೋಹಾನನಿಗೂ, ಅವನ ಮೂಲಕವಾಗಿ ಏಳು ಸಭೆಗಳಿಗೂ ಕೊಡಲ್ಪಟ್ಟದ್ದಾಗಿಯೂ ಇದೆ.

4. ಪರಮ ಗುರುವಾದ ಕ್ರಿಸ್ತನ ಸಂಗಡ ಪ್ರತಿ ದಿನವೂ ಇದ್ದು, ಕಂಡ ಅದ್ಭುತಗಳನ್ನೂ, ಕೇಳಿದ ಉಪದೇಶಗಳನ್ನೂ ಯೋಹಾನನು ತನ್ನ ಸುವಾರ್ತೆಯಲ್ಲಿ ಸಾಕ್ಷಿಯಾಗಿ ತಿಳಿಸಿದ್ದಾನೆ. (೧ ಯೋಹಾ. ೧. ೧—೩.) ಆದದರಿಂದ ಸುವಾರ್ತೆಯಲ್ಲಿರುವ ಸಂಗತಿಗಳು ಮನುಷ್ಯರ ಕಲ್ಪನೆಯಾದವುಗಳಾಗಿರದೆ, ಸತ್ಯಪರನಾದ ದೇವರು ತಿಳಿಸಿದ ದಿವ್ಯ ಸತ್ಯಗಳನ್ನೂ, ಆತನು ಮಾಡಿದ ಅದ್ಭುತಕ್ರಿಯೆಗಳನ್ನೂ, ಕಣ್ಣಾರ ಕಂಡವರೂ ಕಿವಿಯಾರ ಕೇಳಿದವರೂ ಆದ ಉತ್ತಮ ಭಕ್ತರು ತಿಳಿಸಿದ ಸಾಕ್ಷಿಯಾಗಿದೆ.

5. ಕ್ರಿಸ್ತನ ಸಭೆಗಳಲ್ಲಿ ವೇದಗ್ರಂಥಗಳನ್ನು ಓದುವ ವಾಡಿಕೆ ಪೂರ್ವದಲ್ಲಿ ಇತ್ತೆಂದು ಇದರಿಂದ ತೋರುತ್ತದೆ.

6. ಈ ಗ್ರಂಥದಲ್ಲಿರುವ ಸತ್ಯಗಳನ್ನು ಕೈಕೊಂಡು ನಡಿಯುವ ವರೇ ಅದರ ಪ್ರಯೋಜನ ಹೊಂದ ತಕ್ಕ ಹಾಗೆ ಓದುವವರು. ಇದು ಕಲಿತವರಿಗೂ ಕಲಿಯದವರಿಗೂ ತಕ್ಕದ್ದೇ. (ಯೆಶಾ. ೨೯. ೧೧, ೧೨.) ಕಲಿತವರು ಧ್ಯಾನಿಸ ತಕ್ಕ ಆಳವಾದ ಅಭಿಪ್ರಾಯಗಳು ಇದರಲ್ಲಿ ಉಂಟು. ಕಲಿಯದವರು ಕೇಳಿ ತಿಳಿದು ಕೊಳ್ಳ ತಕ್ಕ ಸಾಧಾರಣ ಸತ್ಯಗಳು ಸಹ ಇದರಲ್ಲಿ ಉಂಟು.



೪ ಯೋಹಾನನು [1]ಆಸ್ಯದಲ್ಲಿರುವ [2]ಏಳು ಸಭೆಗಳಿಗೆ—[3]ಇರುವವನೂ ಇದ್ದವನೂ ಬರುವವನೂ ಆಗಿರುವ
೫ ವನಿಂದಲೂ, ಅವನ ಸಿಂಹಾಸನದ ಮುಂದೆ ಇರುವ ಏಳು [4]ಆತ್ಮಗಳಿಂದಲೂ, ನಂಬಿಕೆಯಾದ ಸಾಕ್ಷಿಯೂ
ಸತ್ತವರಲ್ಲಿಂದಾದ ಚೊಚ್ಚಲವನೂ ಭೂರಾಜರ ಒಡೆಯನೂ ಆಗಿರುವ [5]ಯೇಸು ಕ್ರಿಸ್ತನಿಂದಲೂ, ನಿಮಗೆ
ಕೃಪೆಯೂ ಸಮಾಧಾನವೂ ಆಗಲಿ.
೬ ನಮ್ಮನ್ನು ಪ್ರೀತಿ ಮಾಡಿ, ತನ್ನ ರಕ್ತದಲ್ಲಿ ನಮ್ಮನ್ನು [6]ನಮ್ಮ ಪಾಪಗಳಿಂದ ತೊಳೆದು, ನಮ್ಮನ್ನು ತನ್ನ ತಂ
ದೆಯಾದ ದೇವರಿಗೆ [7]ಅರಸರನ್ನೂ ಯಾಜಕರನ್ನೂ ಮಾಡಿದ್ದಾನೆ. [8]ಅವನಿಗೆ ಯುಗಯುಗಾಂತರಗಳ ವರಿ
ಗೂ ಮಹಿಮೆಯೂ ತ್ರಾಣವೂ ಆಗಲಿ. ಆಮೆನ್.
೭ ಇಗೋ, ಮೇಘಗಳಲ್ಲಿ [9]ಬರುತ್ತಾನೆ. ಎಲ್ಲಾ ಕಣ್ಣುಗಳೂ ಅವನನ್ನು ನೋಡುವವು; ಅವನನ್ನು ತಿವಿದ
ವರು ಸಹ. ಭೂಮಿಯ ಸಕಲ ಕುಲಗಳು ಅವನ ನಿಮಿತ್ತ ಬಡುಕೊಳ್ಳುವರು. (ಜೆಕ. ೧೨. ೧೦.) ಹೌದು,
[10]ಆಮೆನ್.

1. ಆಸ್ಯವೆಂಬುವದು ರೋಮಾಯ ಅಧಿಪತಿ ಆಳುತ್ತಿದ್ದ ಸಣ್ಣ ಆಸ್ಯವು. (ಅಪೊ. ಕ್ರಿ. ೨. ೯. ವಚನದ ವ್ಯಾಖ್ಯಾನ ನೋಡ ಬೇಕು.) ಈ ಗ್ರಂಥವು ಬರೆಯಲ್ಪಟ್ಟ ಕಾಲದಲ್ಲಿ ಅದರಲ್ಲಿ ೫೦೦ ದೊಡ್ಡ ಪಟ್ಟಣಗಳಿದ್ದವೆಂದು ಚರಿತ್ರೆಗಾರರು ಹೇಳಿದ್ದಾರೆ. ಅವುಗಳಲ್ಲಿ ಎಫೆಸ, ಸ್ಮುರ್ನ, ಪೆರ್ಗಮ ಎಂಬ ಪಟ್ಟಣಗಳು ಮುಖ್ಯವಾದವುಗಳು. ಯೋಹಾನನು ತನ್ನ ಅಂತ್ಯಕಾಲದಲ್ಲಿ ಈ ಆಸ್ಯದಲ್ಲಿ ದೇವರ ಸೇವೆ ಮಾಡಿದನೆಂದು ತೋರುತ್ತದೆ. ಅದರಲ್ಲಿ ಈ ಏಳು ಸಭೆಗಳ ಹೊರ್ತು ಬೇರೆ ಸಭೆಗಳು ಸಹ ಇದ್ದವೆಂದು ತೋರುತ್ತದೆ. (ಕೊಲೊ. ೪. ೧೩.)

2. ಏಳು ಎಂಬುವದು ಯೆಹೂದ್ಯರಲ್ಲಿ ಒಂದು ಪೂರ್ಣ ಲೆಖ್ಖವು. ಈ ಲೆಖ್ಖವು ಈ ಗ್ರಂಥದಲ್ಲಿ ಆಗಾಗ್ಯೆ ಬರುತ್ತದೆ. ಏಳು ಆತ್ಮಗಳು, ಏಳು ದೂತರು, ಏಳು ನಕ್ಷತ್ರಗಳು, ಏಳು ಮುದ್ರೆಗಳು, ಏಳು ಪಾತ್ರೆಗಳು, ಎಂದು ಹಲವು ಸಾರಿ ಹೇಳಿ ಇದೆ. ಈ ಏಳು ಸಭೆಗಳು ಲೋಕದಲ್ಲಿ ಎಲ್ಲಾ ಕಾಲಗಳಲ್ಲಿರುವ ಎಲ್ಲಾ ಸಭೆಗಳಿಗೂ ಗುರುತಾಗಿವೆ ಅನ್ನ ಬಹುದು.

3. ಇದು ನಿತ್ಯನಾಗಿ ಸ್ವಯಂಭುವಾಗಿ ಇರುವ ಯೆಹೋವನನ್ನು ಕುರಿತದ್ದು. (ಹೊರ. ೩. ೧೪.)

4. ಏಳು ಆತ್ಮಗಳು ಎಂಬುವದು, ಪೂರ್ಣ ವರಗಳೂ ಹಲವು ಯತ್ನಗಳೂ ಉಳ್ಳ ಪರಿಶುದ್ಧಾತ್ಮನನ್ನು ಕುರಿತದ್ದು.

5. ಯೇಸು ಕ್ರಿಸ್ತನು ತಾನು ಬೋಧಿಸಿದ ಸತ್ಯವನ್ನು ತನ್ನ ರಕ್ತದಿಂದ ಮುದ್ರೆ ಹಾಕಿದ ನಂಬಿಕೆಯಾದ ಸಾಕ್ಷಿ. ತನ್ನ ದಾಸರು ಪುನರುತ್ಥಾನವಾಗಿ ನಿತ್ಯಜೀವ ಹೊಂದುವರೆಂಬುವದಕ್ಕೆ ಸಾಕ್ಷಿಯಾಗಿಯೂ ಸಂಚಕಾರವಾಗಿಯೂ ಇರ ತಕ್ಕ ಸತ್ತವರಲ್ಲಿಂದಾದ ಚೊಚ್ಚಲವನೂ, (ಕೊಲೊ. ೧. ೧೮. ವಚನದ ವ್ಯಾಖ್ಯಾನ ನೋಡ ಬೇಕು.) ತನ್ನ ಪುಣ್ಯಮರಣದಿಂದಲೂ ಪುನರುತ್ಥಾನದಿಂದಲೂ ನಿತ್ಯ ಮಹಿಮೆಯನ್ನೂ ರಾಜ್ಯವನ್ನೂ ಸಂಪಾದಿಸಿ, ಭೂಮಿಯ ಎಲ್ಲಾ ಅರಸುಗಳಿಗೆ ಒಡೆಯನಾಗಿದ್ದಾನೆ.

6. ನಮ್ಮ ಪಾಪಗಳನ್ನು ತೊಳೆದು ನಮ್ಮನ್ನು ಪರಮಾನಂದದಲ್ಲಿ ಶೇರಿಸುವದಕ್ಕಾಗಿ, ತನ್ನ ಪ್ರಾಣತ್ಯಾಗ ಮಾಡುವಂತೆ ಕ್ರಿಸ್ತನನ್ನು ಪ್ರೇರೇಪಿಸಿದ ಪ್ರೀತಿಯು ಮನೋವಾಕ್ಕಿಗೆ ನಿಲುಕದಂಥಾ ಉನ್ನತ ಪ್ರೀತಿಯಾಗಿದೆ. (೧ ಯೋಹಾ. ೧. ೭. ಇಬ್ರಿ. ೯. ೨೨. ವಚನಗಳ ವ್ಯಾಖ್ಯಾನ ನೋಡ ಬೇಕು.)

7. ಕೆಲ ಮುಖ್ಯ ಕೈಬರಹದ ಪ್ರತಿಗಳಲ್ಲಿ, ತಂದೆಯಾದ ದೇವರಿಗೆ ರಾಜ್ಯವನ್ನೂ ಯಾಜಕರನ್ನೂ ಮಾಡಿದ್ದಾನೆ ಎಂಬದಾಗಿ ಉಂಟು. ಕ್ರಿಸ್ತನ ರಕ್ತದ ಪುಣ್ಯದಿಂದ ಸಂಪಾದಿಸಿದ ಮಹಿಮೆಯುಳ್ಳ ರಾಜ್ಯವು ಇದೇ. ಇದರ ಪ್ರಜೆಗಳೆಲ್ಲರು ಆತ್ಮಭಾವವಾದ ಕಾಣಿಕೆಗಳಾದ ಜಪ ಸ್ತೋತ್ರ ವಿಧೇಯತ್ವದ ಸೇವೆಗಳನ್ನು ಅರ್ಪಿಸುವ ಯಾಜಕರಾಗಿರುವರು. (ಹೊರ. ೧೯. ೬. ೧ ಪೇತ್ರ. ೨. ೫.)

8. ಈ ವಚನದಲ್ಲಿ ಕ್ರಿಸ್ತನಿಗೆ ಸಲ್ಲಿಸಿದ ಮಹಿಮೆಯನ್ನೂ ೫ನೇ ವಚನದಲ್ಲಿ ಆತನಿಗೆ ಇಟ್ಟಿರುವ ಬಿರುದಾಂಕಿತಗಳನ್ನೂ ಯೋಚಿಸುವಾಗ, ಆತನು ಒಂದು ಸೃಷ್ಟಿಯಾಗಿರದೆ, ಸೃಷ್ಟಿಕರ್ತನಾಗಿದ್ದಾನೆಂದು ನಿಶ್ಚಯಿಸ ಬೇಕು. (೧ ಪೇತ್ರ. ೫. ೧೧.)

9. ಯೋಹಾನನು ಕ್ರಿಸ್ತನನ್ನು ಸ್ತುತಿಸಿದ ತರುವಾಯ, ಆತನು ಲೋಕಕ್ಕೆ ನ್ಯಾಯ ತೀರಿಸುವದಕ್ಕೆ ಎರಡನೇ ಸಾರಿ ಪ್ರತ್ಯಕ್ಷವಾಗುವದನ್ನು ಹೇಳುತ್ತಾನೆ. ಭಕ್ತರನ್ನು ಪ್ರೀತಿ ಮಾಡಿ, ತನ್ನ ರಕ್ತದಿಂದ ಅವರನ್ನು ಶುದ್ಧೀಕರಿಸಿ, ಪರಮ ಸಭೆಯಲ್ಲಿ ಅರಸರನ್ನೂ ಯಾಜಕರನ್ನೂ ಆಗ ಮಾಡಿದ ಕ್ರಿಸ್ತನು ಮೇಘಗಳಲ್ಲಿ ಬರುತ್ತಾನೆ. ಅದರ ನಿಶ್ಚಯವನ್ನು ತೋರಿಸಲೂ, ಉತ್ತಮ ಭಕ್ತರು ಆಶೆಯಿಂದ ಅದನ್ನು ಎದುರು ನೋಡಲೂ ತಕ್ಕದ್ದಾಗಿ, ಬರುತ್ತಾನೆಂದು ವರ್ತಮಾನಕಾಲದಲ್ಲಿ ಹೇಳುತ್ತಾನೆ. (ದಾನಿ. ೭. ೧೩. ಮತ್ತಾ. ೨೪. ೩೦; ೨೫. ೩೧; ೨೬. ೬೪.) ಆತನು ಹೀಗೆ ಪರಮ ಮಹಿಮೆಯಿಂದ ಬರುವಾಗ ಎಲ್ಲಾ ಕಣ್ಣುಗಳು ಆತನನ್ನು ನೋಡುವವು. ಆತನ ದಾಸರು ಆತನನ್ನು ಸಂತೋಷವಾಗಿಯೂ, ಆತನ ಶತ್ರುಗಳು ನಾಚಿಕೆಯಿಂದಲೂ ಆತನನ್ನು ನೋಡುವರು. (ಯೆಶಾ. ೨೫. ೯.) ಆತನನ್ನು ತಿವಿದವರಾದ ಯೆಹೂದ್ಯರೂ ಜನಾಂಗಗಳವರೂ ಸಹ ಎಲ್ಲರು ಆತನನ್ನು ನೋಡುವರು. (ಜೆಕ. ೧೨. ೧೦.) ಭೂಮಿಯ ಗೋತ್ರಗಳಾದ ಭಕ್ತಿಹೀನರೆಲ್ಲರು ಆತನನ್ನು ಕಂಡು ಗೋಳಾಡುವರು. ಆತನ ಶರಣಾಗತರು ಮಾತ್ರ ತಮ್ಮ ವಿಮೋಚನೆ ಸಮೀಪವಾಗಿರುವದನ್ನು ಕಂಡು ತಮ್ಮ ತಲೆಗಳನ್ನೆತ್ತಿ ಆನಂದಿಸುವರು.

10. ಹೌದು ಎಂಬುವದು ನಿಶ್ಚಯವಾಗಿ ಆಗುವದು ಎಂಬುವದನ್ನು ತೋರಿಸುವ ಗ್ರೀಕ ಶಬ್ದವಾಗಿಯೂ, ಆಮೆನ್ ಎಂಬುವದು ಹಾಗೆಯೇ ಆಗಲಿ ಎಂಬುವ ಇಬ್ರೀಯ ಶಬ್ದವಾಗಿಯೂ ಇದೆ. (೨ ಕೊರಿ. ೧. ೨೦.) ಮೇಲಿನ ಆಶ್ಚರ್ಯ ಸಂಭವವನ್ನು ಕುರಿತು ಯೋಹಾನನ ವಾಂಛೆಯನ್ನು ಮಾತ್ರವಲ್ಲ, ಅದರ ನಿಶ್ಚಯವನ್ನು ಸಹ ಸೂಚಿಸುತ್ತದೆ.

೮ ನಾನು [1]ಅಕಾರವೂ ಓಕಾರವೂ, ಆದಿಯೂ ಅಂತ್ಯವೂ, ಆಗಿದ್ಧೇನೆಂದು, ಇರುವವನೂ ಇದ್ದವನೂ ಬರು
ವವನೂ ಆಗಿರುವ ಸರ್ವಶಕ್ತನಾದ ಕರ್ತನು ಹೇಳುತ್ತಾನೆ.

ಕ್ರಿಸ್ತನ ದರ್ಶನವು; ಏಳು ಸಭೆಗಳಿಗೂ ಬರೆಯಲ್ಪಟ್ಟ ಪತ್ರಿಕೆಗಳ ಪೀಠಿಕೆ.

೯ ನಿಮ್ಮ ಸಹೋದರನೂ, ಉಪದ್ರದಲ್ಲಿಯೂ ಯೇಸು ಕ್ರಿಸ್ತನ ರಾಜ್ಯದಲ್ಲಿಯೂ ತಾಳ್ಮೆಯಲ್ಲಿಯೂ [2]ಕೂಡ
ಪಾಲುಗಾರನೂ, ಆಗಿರುವ ಯೋಹಾನನೆಂಬ ನಾನು ದೇವರ ವಾಕ್ಯದ ನಿಮಿತ್ತವೂ, ಯೇಸು ಕ್ರಿಸ್ತನ ಸಾಕ್ಷಿ
೧೦ ಯ ನಿಮಿತ್ತವೂ [3]ಪಾತ್ಮೊಸ್ ದ್ವೀಪದಲ್ಲಿ ಇದ್ದೆನು. [4]ಕರ್ತನ ದಿನದಲ್ಲಿ [5]ಆತ್ಮದಲ್ಲಿ ಇದ್ದು, ನನ್ನ ಹಿಂದೆ [6]ತುತೂರಿ
೧೧ ಯ ಹಾಗೆ ದೊಡ್ಡ ಶಬ್ದವನ್ನು ಕೇಳಿದೆನು. ಅದೇನಂದರೆ—ನಾನು [7]ಅಕಾರವೂ ಓಕಾರವೂ, ಮೊದಲಿನವನೂ
ಕಡೆಯವನೂ, ಆಗಿದ್ಧೇನೆ. ನೀನು ನೋಡುವದನ್ನು ಪುಸ್ತಕದಲ್ಲಿ ಬರೆದು, ಆಸ್ಯದಲ್ಲಿರುವ [8]ಎಫೆಸ, ಸ್ಮುರ್ನ, ಪೆ
ರ್ಗಮ, ಥುವತೈರ, ಸಾರ್ದಿ, ಫಿಲದೆಲ್ಫ್ಯ, ಲವೊದಿಕ್ಯೆಯ, ಎಂಬ ಏಳು ಸಭೆಗಳಿಗೆ ಕಳುಹಿಸು.

1. ಅಕಾರವೂ ಓಕಾರವೂ ಗ್ರೇಕವರ್ಣಮಾಲೆಯಲ್ಲಿ ಮೊದಲನೇ ಅಕ್ಷರವೂ ಕಡೇ ಅಕ್ಷರವೂ. ಇದು ತಂದೆಯಾದ ದೇವರನ್ನು ಕುರಿತದ್ದೋ? ಕುಮಾರನಾದ ಕ್ರಿಸ್ತನನ್ನು ಕುರಿತದ್ದೋ? ಎಂದು ವಿದ್ವಾಂಸರಲ್ಲಿ ತರ್ಕವುಂಟು. ಅಲ್ಫಾ ಓಮೆಗ ಎಂಬುವದು ಕ್ರಿಸ್ತನಿಗೆ ತಕ್ಕದ್ದಾಗಿರುವದರಿಂದ, (೨೨. ೧೩.) ಇಲ್ಲಿ ಕ್ರಿಸ್ತನೇ ಮಾತಾಡುತ್ತಾನೆ. ೪ನೇ ವಚನದಲ್ಲಿ ಇರುವವನೂ ಇದ್ದವನೂ ಬರುವವನೂ ಎಂಬುವದು ತಂದೆಯಾದ ದೇವರನ್ನು ಕುರಿತದ್ದು. ಆದಾಗ್ಯೂ ಇದು ತ್ರಿಯೇಕನಾದ ದೇವರನ್ನು ಕುರಿತದ್ದೆಂದು ಗ್ರಹಿಸ ಬೇಕು.

2. ಕ್ರಿಸ್ತನ ರಾಜ್ಯಕ್ಕೆ ಶೇರಿದವರೆಲ್ಲರು ಆತನ ನಿಮಿತ್ತ ಉಪದ್ರಗಳನ್ನು ಸಹಿಸುವವರಾಗಿಯೂ ತಾಳ್ಮೆಯುಳ್ಳವರಾಗಿಯೂ ಇರ ಬೇಕು. ಆತನ ನಿಮಿತ್ತ ಉಪದ್ರಕ್ಕೂ ತಾಳ್ಮೆಗೂ ರಾಜ್ಯಕ್ಕೂ ಪಾಲುಗಾರರೇ ಭಕ್ತರು.

3. ಪಾತ್ಮೊಸ್ ಎಂಬುವದು ಏಳು ಮೈಲುಗಳ ಉದ್ದವೂ ಒಂದು ಮೈಲು ಅಗಲವೂ ಉಳ್ಳ ಪರ್ವತಪ್ರದೇಶವಾದ ಒಂದು ಸಣ್ಣ ದ್ವೀಪವು. ಇದು ಸಣ್ಣ ಆಸ್ಯದ ಪಶ್ಚಿಮ ಥಡದಲ್ಲಿ ಮಿಲೇತಕ್ಕೆ ಎದುರಾಗಿಯೂ, ಎಫೆಸಕ್ಕೆ ತೆಂಪಡುವಲಾಗಿಯೂ, ಸಾಮು ದ್ವೀಪಕ್ಕೆ ದಕ್ಷಿಣವಾಗಿಯೂ, ಏಜಿಯನ್ ಸಮುದ್ರದಲ್ಲಿ ಇದೆ. ಅದಕ್ಕೆ ಈ ಕಾಲದಲ್ಲಿ ಪತೀನೊ ಎಂಬ ಹೆಸರುಂಟು. ರೋಮಾಯ ಅರಸರು ಅಪರಾಧಿಗಳನ್ನು ಅಲ್ಲಿಗೆ ಕಳುಹಿಸುವರು. ಅಲ್ಲಿಗೆ ಯೋಹಾನನು ಸಹ ಕಳುಹಿಸಲ್ಪಟ್ಟನು. ದೇವರ ವಾಕ್ಯ ಸಾರಿದ್ದೂ ಯೇಸು ಕ್ರಿಸ್ತನನ್ನು ಕುರಿತು ಸಾಕ್ಷಿ ಕೊಟ್ಟದ್ದೂ ಇದೇ ಅವನ ಅಪರಾಧವು.

4. ಇದು ಕ್ರಿಸ್ತನು ಪುನರುತ್ಥಾನವಾದಂಥ, ವಾರದ ಮೊದಲನೇ ದಿವಸವಾದಂಥ ಆದಿತ್ಯವಾರವು. ಆತನು ಏರ್ಪಡಿಸಿದ ರಾತ್ರಿಭೋಜನಕ್ಕೆ, ಕರ್ತನ ರಾತ್ರಿಭೋಜನವೆಂದೂ, (೧ ಕೊರಿ. ೧೧. ೨೦.) ಆತನು ಪುನರುತ್ಥಾನವಾದ ದಿವಸಕ್ಕೆ ಕರ್ತನ ದಿವಸವೆಂದೂ ಹೆಸರು. (ಯೋಹಾ. ೨೦. ೧೯, ೨೬. ಅಪೊ. ಕ್ರಿ. ೨೦. ೭. ವಚನಗಳ ವಾಖ್ಯಾನ ನೋಡ ಬೇಕು.) ಯೆಹೂದ್ಯರ ಸಬ್ಬತು ಶನಿವಾರ. ಕ್ರೈಸ್ತರ ಸಬ್ಬತು ಆದಿತ್ಯವಾರ. ಈ ವಾರವನ್ನು ಕುರಿತು ಈ ಕಡೇ ಗ್ರಂಥದಲ್ಲಿ ಹೇಳಿರುವದನ್ನು ಯೋಚಿಸಿದರೆ, ಕ್ರೈಸ್ತರೆಲ್ಲರು ಇದನ್ನು ಆಚರಿಸ ಬೇಕು. ಇದನ್ನು ಪರಿಶುದ್ಧವಾಗಿ ಆಚರಿಸುವವರು ಪರಿಶುದ್ಧಾತ್ಮನ ಕೃಪೆಯನ್ನು ಸಂಪೂರ್ಣವಾಗಿ ಹೊಂದುವರು.

5. ಕ್ರಿಸ್ತನ ನಿಮಿತ್ತ ಪಾತ್ಮೊಸ್ ದ್ವೀಪದಲ್ಲಿ ಶೆರೆಯವನಾಗಿದ್ದವನು ಪರಮ ಮಹಿಮೆಯನ್ನು ದರ್ಶಿಸಿದ್ದು ಆಶ್ಚರ್ಯವೇ. ಕರ್ತನ ದಿವಸದಲ್ಲಿ ಆತನ ಪುನರುತ್ಥಾನವನ್ನು ಯೋಹಾನನು ಧ್ಯಾನ ಮಾಡುವಾಗ, ಮನಸ್ಸು ಪರವಶವಾಗಿ ಪರಮ ದರ್ಶನವನ್ನು ಕಾಣುವದಕ್ಕೆ ಹೇತುವೆಯಾಯಿತು. ಆತ್ಮದಲ್ಲಿದ್ದೆನು ಎಂಬುವದು, ಭಕ್ತಿಯ ಆತ್ಮವನ್ನು ಮಾತ್ರವಲ್ಲ, ಪರಮ ದರ್ಶನದ ಆತ್ಮವನ್ನೂ ಪ್ರವಾದನೆಯ ಆತ್ಮವನ್ನೂ ಸೂಚಿಸುತ್ತದೆ. ಆತ್ಮಕ್ಕೆ ಇಂಥಾ ದರ್ಶನ ಉಂಟಾಗಿರುವಾಗ, ಪಂಚೇಂದ್ರಿಯಗಳಿಂದ ಹೊರಗಿನ ಕಾರ್ಯಗಳ ವಿಷಯವಾದ ಸಮ್ಮಂಧವು ನಿವರ್ತಿಯಾಗಿ, ಕಣ್ಣಿಗೆ ಗೋಚರವಾಗದ ಪರಮ ದರ್ಶನಗಳು ಮನಸ್ಸಿಗೆ ಗೋಚರವಾಗುವವು. ಈ ವಿಧವಾದ ದರ್ಶನವು ಯೋಹಾನನಿಗೆ ಉಂಟಾದದರಿಂದ, ಅವನು ಅವುಗಳನ್ನು ಕಂಡು, ಅವುಗಳನ್ನು ಎಲ್ಲಾ ಕಾಲಗಳಲ್ಲಿರುವ ಸಭೆಯವರಿಗೆ ಪ್ರಯೋಜನವಾಗುವಂತೆ ಬರೆಯಲಾಯಿತು.

6. ಸೀನಾಯ ಪರ್ವತದಲ್ಲಿ ನ್ಯಾಯಪ್ರಮಾಣ ಕೊಡಲ್ಪಟ್ಟಾಗ, ಅಶರೀರಿವಾಕ್ಕಿಗೆ ಗುರುತಾಗಿ ತುತೂರಿಯ ಶಬ್ದವಾಯಿತು. (ಹೊರ. ೧೯. ೧೬.) ಲೋಕಾಂತ್ಯದಲ್ಲಿಯೂ ಇಂಥಾ ಶಬ್ದ ಉಂಟಾಗುವದು. (೧ ಥೆಸ್ಸ. ೪. ೧೬. ೧ ಕೊರಿ. ೧೫. ೫೨.) ಈ ಗ್ರಂಥದಲ್ಲಿ ಅನೇಕ ಮರ್ಮವಾದ ಪ್ರವಾದನೆಗಳು ಅಡಗಿ ಇದ್ದಾಗ್ಯೂ, ಅವೆಲ್ಲಾ ಸಂಪೂರ್ಣವಾಗಿ ಈಡೇರುವಾಗ ತುತೂರಿಯ ಶಬ್ದದ ಹಾಗೆ ಸ್ಪಷ್ಟವಾಗಿ ತೋರುವವು.

7. ನಾನು ಅಕಾರವೂ ಓಕಾರವೂ ಮೊದಲಿನವನೂ ಕಡೆಯವನೂ ಎಂಬ ಹೆಸರುಗಳನ್ನು ಕ್ರಿಸ್ತನು ತನಗೆ ಸ್ವಂತ ಹೆಸರುಗಳಾಗಿ ಬಳಿಸಿರುವದನ್ನು ಈ ಗ್ರಂಥದಲ್ಲಿ ಕಾಣ ಬಹುದು. (೧೭. ವ.; ೨. ೮; ೨೧. ೬; ೨೨. ೧೩.)

8. ಎಫೆಸ ಪಟ್ಣವು ಪಾತ್ಮೊಸ್ ದ್ವೀಪಕ್ಕೆ ಬಹಳ ಸಮೀಪವಾಗಿದ್ದದರಿಂದ ಅದನ್ನು ಒಂದು ವೇಳೆ ಮೊದಲಲ್ಲಿ ಹೇಳಿ ಇದೆ. ಅದರಿಂದ ಪ್ರಾರಂಭಿಸಿ ಉತ್ತರದಲ್ಲಿಯೂ ತೆಮ್ಕೊಡಲಲ್ಲಿಯೂ ಆದ ಸುತ್ತೂ ಇರುವ ಸಭೆಗಳನ್ನು ಸೂಚಿಸಿ ಇದೆ. ಸಣ್ಣ ಆಸ್ಯದಲ್ಲಿ ಕೊಲೊಸ್ಸೆ, ಹಿಯರಾಪೊಲಿ, ತ್ರಾಲಿಸ್, ಮಕ್ನೇಷಿಯಾ ಮುಂತಾದ ಪಟ್ಣಗಳಲ್ಲಿ ಸಭೆಗಳಿದ್ದಾಗ್ಯೂ, ಅವುಗಳನ್ನು ಕುರಿತು ಹೇಳದೆ, ಎಫೆಸ ಮುಂತಾದ ಏಳು ಸಭೆಗಳನ್ನು ಮಾತ್ರ ಹೇಳಿ ಇದೆ. ಈ ಏಳು ಸಭೆಗಳೂ ಭೂಲೋಕದಲ್ಲಿ ಹೋರಾಡುವ ಸಭೆಗೆ ಗುರುತಾಗಿದ್ದವೆಂದೂ, ಈ ಸಭೆಗಳ ಸ್ಥಿತಿಯಿಂದ ಎಲ್ಲಾ ಕಾಲಗಳಲ್ಲಿರುವ ಸರ್ವ ಸಭೆಗಳ ಸ್ಥಿತಿಯೂ ತೋರುವದೆಂದೂ ವಿದ್ವಾಂಸರು ಹೇಳುತ್ತಾರೆ.



೧೨ ನನ್ನ ಸಂಗಡ ಮಾತಾಡಿದ ಶಬ್ದವನ್ನು [1]ನೋಡುವದಕ್ಕೆ ತಿರುಗಿ ಕೊಂಡೆನು; ತಿರುಗಲು, ಏಳು ಚಿನ್ನದ
೧೩ [2]ದೀಪಸ್ತಂಭಗಳನ್ನೂ, ಆ ಏಳು ದೀಪಸ್ತಂಭಗಳ [3]ಮಧ್ಯದಲ್ಲಿ [4]ಮನುಷ್ಯನ ಮಗನಿಗೆ ಸಮಾನವಾದ
ವನನ್ನೂ, ಕಂಡೆನು. ಅವನು [5]ನಿಲುವಂಗಿಯನ್ನು ತೊಟ್ಟು, [6]ಎದೆಗೆ ಹೊಂದಟ್ಟೆಯನ್ನು ಕಟ್ಟಿ ಕೊಂಡಿ
೧೪ ದ್ದನು. ಅವನ ತಲೆಯೂ ಕೂದಲುಗಳೂ ಬಿಳೀ ಉಣ್ಣೆಯಂತೆ, [7]ಹಿಮದಂತೆ, ಬಿಳುಪಾಗಿದ್ದವು; ಅವನ ಕಣ್ಣು
೧೫ ಗಳು [8]ಬೆಂಕಿಯ ಉರಿಯಂತೆಯೂ, ಅವನ ಪಾದಗಳು ಕೊಲುಮೆಯಲ್ಲಿ ಕಾಸಲ್ಪಟ್ಟ [9]ಬಿಳೀ ಹಿತ್ತಾಳಿಯಂ
೧೬ ತೆಯೂ, ಅವನ ಶಬ್ದವು [10]ಅನೇಕ ನೀರುಗಳ ಶಬ್ದದಂತೆಯೂ, ಇದ್ದವು. ಅವನ ಬಲಗೈಯಲ್ಲಿ ಏಳು
[11]ನಕ್ಷತ್ರಗಳು ಇದ್ದವು. ಅವನ ಬಾಯಿಯೊಳಗಿಂದ [12]ಹದವಾದ ಇಬ್ಬಾಯಿ ಕತ್ತಿಯು ಹೊರಟಿತು.
ಅವನ ಮುಖವು ತನ್ನ ಬಲದಿಂದ ಪ್ರಕಾಶಿಸುವ [13]ಸೂರ್ಯನ ಹಾಗಿತ್ತು.
೧೭ ಅವನನ್ನು ಕಂಡಾಗಲೇ, [14]ಸತ್ತವನ ಹಾಗೆ ಅವನ ಪಾದಗಳ ಮುಂದೆ ಬಿದ್ದೆನು. ಆಗ ತನ್ನ [15]ಬಲಗೈಯನ್ನು

1. ಅದು ಯಾರ ಶಬ್ದವೆಂದೂ ಎಲ್ಲಿಂದ ಬಂತೆಂದೂ ನೋಡುವದಕ್ಕೆ ಯೋಹಾನನು ತಿರುಗಿ ಕೊಂಡಿರುವನು.

2. ಯೆಹೂದ್ಯರ ದೇವಾಲಯದಲ್ಲಿ ಏಳು ಕೊಂಬೆಗಳುಳ್ಳ ಚಿನ್ನದ ದೀಪಸ್ತಂಭವಿತ್ತು. (ಹೊರ. ೨೫. ೩೧, ೩೨, ೩೭. ಜೆಕ. ೪. ೨. ಇಬ್ರಿ. ೯. ೨.) ಯೋಹಾನನಿಗಾದ ದರ್ಶನದಲ್ಲಿ ಏಳು ದೀಪಸ್ತಂಭಗಳು ಕಾಣಲ್ಪಟ್ಟವು. ಅವು ಏಳು ಸಭೆಗಳೆಂದು ೨೦ನೇ ವಚನದಲ್ಲಿ ಹೇಳಿ ಇದೆ. ಆ ಏಳು ಸಭೆಗಳು ಲೋಕದಲ್ಲೆಲ್ಲಾ ವ್ಯಾಪಿಸಿರುವ ಕ್ರಿಸ್ತನ ಸಭೆಯನ್ನು ಸೂಚಿಸುತ್ತವೆ. ಅವುಗಳ ಮಧ್ಯದಲ್ಲಿ ಸಭಾನಾಯಕನಾದ ಕ್ರಿಸ್ತನು ಸಂಚರಿಸಿದ ಪ್ರಕಾರ, ಸಭೆಯೆಲ್ಲಾ ಆತನಲ್ಲಿ ಒಂದಾಗಿ ಜೋಡಿಸಲ್ಪಟ್ಟು ಪರಮಾಲಂಕಾರವುಳ್ಳದ್ದಾಗಿರುತ್ತದೆ. ದೀಪವು ಅಥವಾ ಬೆಳಕು ದಿವ್ಯ ತಿಳುವಳಿಕೆಗೆ ಉಪಮಾನವಾಗಿದೆ. (ಜೆಕ. ೪. ೨. ಪ್ರಕಟ. ೧. ೨೦.) ಆದದರಿಂದ ಸಭೆಗೆ ಶೇರಿದವರು ಜೀವದ ವಾಕ್ಯವನ್ನು ಹಿಡಿದು ಕೊಂಡು ಬೆಳಕುಗಳ ಹಾಗೆ ಪ್ರಕಾಶಿಸ ಬೇಕು. (ಮತ್ತಾ. ೫. ೧೪. ಫಿಲಿ. ೨. ೧೫.)

3. ಆ ಪರಿಶುದ್ಧ ಸ್ಥಳದ ಮಧ್ಯದಲ್ಲಿ ಕ್ರಿಸ್ತನು ಯಾಜಕವಸ್ತ್ರವನ್ನು ಧರಿಸಿದವನಾಗಿ ನಿಲ್ಲುತ್ತಾನೆ.

4. ಮನುಷ್ಯನ ಮಗನು ಅಂದರೆ, ಮನುಷ್ಯರೂಪವುಳ್ಳ ಮಹಾಪುರುಷನು. ಆತನು ಮನುಷ್ಯರೂಪವುಳ್ಳವನಾಗಿದ್ದರೂ, ದೈವಜ್ಞಾನವೂ ಮಹತ್ವವೂ ಬಲವೂ ಉಳ್ಳವನಾಗಿದ್ದಾನೆ. ದೈವಲಕ್ಷಣವಾದ ನಿತ್ಯತ್ವವೂ, ಮನುಷ್ಯತ್ವಕ್ಕೆ ಶೇರಿದ ಮರಣದ ಸ್ವಭಾವವೂ ಆತನಲ್ಲಿ ಹೊಂದಿಕೆಯಾಗಿವೆ. ಮರಣವೂ ಆತ್ಮಗಳ ಲೋಕವೂ ಆತನ ಅಧಿಕಾರಕ್ಕೊಳಗಾಗಿವೆ. (೧೭, ೧೮. ವ.)

5. ಪ್ರಧಾನ ಯಾಜಕನು ಧರಿಸಿದ್ದ ಅಲಂಕಾರವಾದ ನಿಲುವಂಗಿಯ ಹಾಗೆ (ಹೊರ. ೨೮. ೨. ಕೀರ್ತ. ೧೩೩. ೨.) ಕ್ರಿಸ್ತನು ನಿಲುವಂಗಿಯನ್ನು ಧರಿಸಿದ್ದನು.

6. ಎದೆಗೆ ಕಟ್ಟಿದ್ದ ದಟ್ಟಿಯು ಚಿನ್ನದ್ದಾಗಿತ್ತು. ಇದು ರಾಜಾಧಿಕಾರಕ್ಕೂ ನೀತಿಗೂ ಸತ್ಯಕ್ಕೂ ಗುರುತಾಗಿತ್ತು. (ಯೆಶಾ. ೧೧. ೫.)

7. ಬಿಳೀ ಉಣ್ಣೆಯಂತೆ ಹಿಮದಂತೆ ಇರುವ ಕೂದಲು ಮನುಷ್ಯರ ದೊಡ್ಡ ವಯಸ್ಸಿಗೆ ಗುರುತಾಗಿದೆ. ದೇವರನ್ನು ಕುರಿತಾದರೆ, ಆತನ ಮಹತ್ವವನ್ನೂ ನಿತ್ಯತ್ವವನ್ನೂ ಕುರಿತದ್ದು. (ದಾನಿ. ೭. ೯.)

8. ಬೆಂಕಿಯ ಉರಿಯಂತೆ ಇದ್ದ ಆತನ ಕಣ್ಣುಗಳು, ಸರ್ವರ ಹೃದಯಾಂತರಂಗಗಳನ್ನು ಗ್ರಹಿಸ ತಕ್ಕ ಆತನ ಸರ್ವಜ್ಞತ್ವವನ್ನು ಸೂಚಿಸುತ್ತದೆ. (೨. ೧೮; ೧೯. ೧೨.)

9. ಕೊಲುಮೆಯಲ್ಲಿ ಕಾಸಲ್ಪಟ್ಟ ಬಿಳೀ ಹಿತ್ತಾಳಿಯಂತಿದ್ದ ಆತನ ನಡತೆಗಳು ಪ್ರಕಾಶವುಳ್ಳವುಗಳೆಂಬುವದಕ್ಕೂ, ತನ್ನ ಶತ್ರುಗಳನ್ನು ತನ್ನ ಕಾಲಿನ ಕೆಳಗೆ ತುಳಿದು ನಾಶ ಮಾಡ ತಕ್ಕ ಅಧಿಕಾರವುಳ್ಳವನೆಂಬುವದಕ್ಕೂ ಗುರುತಾಗಿವೆ. (ಯೆಶಾ. ೫೨. ೭. ಮೀಕ. ೪. ೧೩.)

10. ಅವನ ಶಬ್ದವು ಅನೇಕ ಅಲೆಗಳ ಶಬ್ದವು ಕೂಡಿದ ಸಮುದ್ರದ ಶಬ್ದದ ಹಾಗೆ ಇತ್ತು. (ಎಜೇಕಿ. ೪೩. ೨.) ಇದು ಸಮಸ್ತ ಲೋಕಗಳನ್ನೂ ಸಮಸ್ತ ಚರಾಚರಗಳನ್ನೂ ಉಂಟು ಮಾಡಿ ಆಳಿ ಕೊಂಡು ನಡಿಸುವವನ ಬಲವಾದಂಥ ಅಧಿಕಾರವುಳ್ಳಂಥ ವಾಕ್ಯವನ್ನು ಕುರಿತದ್ದು. (ಇಬ್ರಿ. ೪. ೧೨.)

11. ದೇವರ ಸೇವಕರನ್ನು ನಕ್ಷತ್ರಗಳಿಗೆ ಉಪಮಾನ ಮಾಡಿ ಇದೆ. (೨೦. ವ.) ಅವರು ನಕ್ಷತ್ರಗಳ ಹಾಗೆ ತಿಳುವಳಿಕೆ ಎಂಬ ದಿವ್ಯ ಬೆಳಕನ್ನು ಕೊಡುವವರಾಗಿದ್ದಾರೆ. ಕ್ರಿಸ್ತನು ತನ್ನ ಉತ್ತಮ ದಾಸರನ್ನು ತನ್ನ ಬಲಗೈಯಲ್ಲಿ ಹಿಡಿದು ಬಲ ಪಡಿಸಿ ಕಾಪಾಡುತ್ತಾನೆ.

12. ಇಬ್ಬಾಯಿ ಕತ್ತಿ ಎಂಬುವದು, ಕ್ರಿಸ್ತನ ವಾಕ್ಯದ ಬಲವನ್ನು ಸೂಚಿಸುತ್ತದೆ. (ಇಬ್ರಿ. ೪. ೧೨.)

13. ಆತನ ಮುಖವು ಬಲದಿಂದ ಪ್ರಕಾಶಿಸುವ ಸೂರ್ಯನ ಹಾಗಿತ್ತು. ಇದು ಆತನ ದಿವ್ಯ ಮಹಿಮೆಯನ್ನು ತೋರಿಸುತ್ತದೆ.

14. ಇಂಥಾ ಮಹಿಮಾಸ್ವರೂಪನಾಗಿ ಕಾಣಿಸಿದ ಕ್ರಿಸ್ತನನ್ನು ಯೋಹಾನನು ಕಂಡು ಮೂರ್ಛಿತನಾಗಿ ಆತನ ಪಾದದ ಮುಂದೆ ಬಿದ್ದನು. (ದಾನಿ. ೧೦. ೮—೧೨.) ಕ್ರಿಸ್ತನನ್ನು ಕಂಡವನೂ, ಆತನಿಗೆ ಸೇವೆ ಮಾಡಿದವನೂ, ಆತನ ಎದೆಗೆ ಒರಗಿ ಕೊಂಡಿದ್ದವನೂ, ಆತನು ರೂಪಾಂತರವಾದಾಗಲೂ ಪರಲೋಕಕ್ಕೇರಿ ಹೋದಾಗಲೂ ಆತನ ಮಹಿಮೆಯನ್ನು ಕಂಡವನೂ, ಪಂಚಾಶತ್ತಿನ ದಿನದಲ್ಲಿ ಪರಿಶುದ್ಧಾತ್ಮನ ಪ್ರಸಾದವಾದ ಅಗ್ನಿಸ್ನಾನ ಹೊಂದಿದವನೂ, ಪ್ರೀತಿಯಲ್ಲಿ ಮಿಂಚಿ ಬೆಳಕಿನಲ್ಲಿ ನಡೆದು ಮಹಿಮೆಯನ್ನು ಹುಡುಕಿದಂಥ ಯೋಹಾನನಿಗೆ ತನ್ನ ಕರ್ತನ ಮಹಿಮೆಯಾದ ದರ್ಶನವು ಇಷ್ಟು ಭಯವನ್ನೂ ವಿಸ್ಮಯವನ್ನೂ ಉಂಟು ಮಾಡಿತಾದರೆ, ಸಾಧಾರಣ ಕ್ರೈಸ್ತರಿಗೆ ಈ ದರ್ಶನವು ಹ್ಯಾಗಿರುವದು!

15. ಕೃಪಾನಿಧಿಯಾದ ದೇವರು ತನ್ನ ಕರುಣೆಯುಳ್ಳ ಹಸ್ತವನ್ನು ನಮ್ಮ ಮೇಲಿಡುವಾಗ ಎಂಥಾ ಭಯವಾದರೂ ಹಾರಿ ಹೋಗುವದು. ಪರಮ ರಹಸ್ಯಗಳು ಪ್ರಕಟವಾಗುವದಕ್ಕೆ ಮನುಷ್ಯರ ಮನಸ್ಸಿನಲ್ಲಿರುವ ಭಯವು ಮೊದಲು ಪರಿಹಾರವಾಗ ಬೇಕು. (ಉತ್ಪ. ೧೫. ೧.)

ನನ್ನ ಮೇಲೆ ಇಟ್ಟು, ನನಗೆ ಹೇಳಿದ್ದೇನಂದರೆ—ಅಂಜ ಬೇಡ; ನಾನು ಮೊದಲಿನವನೂ, ಕಡೆಯವನೂ,
೧೮ ಬದುಕುವವನೂ, ಆಗಿದ್ಧೇನೆ. ಸತ್ತಿದ್ದೆನು, ಮತ್ತು, ಇಗೋ, ಯುಗಯುಗಾಂತರಗಳ ವರಿಗೂ ಬದುಕುವವ
೧೯ ನಾಗಿದ್ಧೇನೆ. [1]ಆಮೆನ್. ಮತ್ತು [2]ಪಾತಾಳ ಮರಣಗಳ ಬೀಗದ ಕೈಗಳು ನನಗುಂಟು. ಕಂಡವುಗಳ
೨೦ ನ್ನೂ, [3]ಇರುವವುಗಳನ್ನೂ, [4]ಇವುಗಳ ತರುವಾಯ ಆಗುವವುಗಳನ್ನೂ, ನನ್ನ ಬಲಗೈಯಲ್ಲಿ ನೀನು ಕಂಡ
ಏಳು ನಕ್ಷತ್ರಗಳ [5]ಮರ್ಮವನ್ನೂ, ಏಳು ಚಿನ್ನದ ದೀಪಸ್ತಂಭಗಳನ್ನೂ, ಬರೆ. ಆ ಏಳು ನಕ್ಷತ್ರಗಳು, ಏಳು
ಸಭೆಗಳ [6]ದೂತರು; ನೀನು ಕಂಡ ಏಳು ದೀಪಸ್ತಂಭಗಳು ಏಳು ಸಭೆಗಳು.

ಏಳು ಸಭೆಗಳಿಗೆ ಬರೆಯಲ್ಪಟ್ಟ ಪತ್ರಿಕೆಗಳು; ಅವುಗಳಲ್ಲಿರುವ ಬುದ್ಧಿಬೋಧನೆಗಳು.

**2.** [7]ಎಫೆಸದಲ್ಲಿರುವ [8]ಸಭೆಯ ದೂತನಿಗೆ ಬರೆ—ಏಳು ನಕ್ಷತ್ರಗಳನ್ನು ತನ್ನ [9]ಬಲಗೈಯಲ್ಲಿ ಹಿಡುಕೊಂಡು,
ಏಳು ಚಿನ್ನದ ದೀಪಸ್ತಂಭಗಳ [10]ಮಧ್ಯದಲ್ಲಿ ಸಂಚರಿಸುವವನು ಹೇಳುವದೇನಂದರೆ—

1. ಆಮೆನ್ ಅಂದರೆ, ಹಾಗೆಯೇ ಆಗಲಿ ಎಂಬುವದು. ಯೇಸು ಕ್ರಿಸ್ತನು ಹೇಳಿದ ಸತ್ಯವನ್ನು ಯೋಹಾನನು ಮನಃಪೂರ್ವಕವಾಗಿ ಒಪ್ಪಿ ಕೊಂಡದ್ದನ್ನು ತೋರಿಸುತ್ತದೆ.

2. ಪಾತಾಳ ಎಂಬುವದು ಭಕ್ತರೂ ಭಕ್ತಿಹೀನರೂ ಆದ ಸತ್ತವರೆಲ್ಲರೂ ಶೇರಿರುವ ಅದೃಶ್ಯಲೋಕವನ್ನು ಕುರಿತದ್ದು. ಪಾತಾಳ ಮರಣಗಳ ಬೀಗದ ಕೈಗಳು ನನಗುಂಟು ಎಂಬುವದು, ಮರಣದ ಮೇಲೆಯೂ ಅದೃಶ್ಯಲೋಕದ ಮೇಲೆಯೂ ಕ್ರಿಸ್ತನಿಗಿರುವ ಸರ್ವಾಧಿಕಾರವನ್ನು ಸೂಚಿಸುತ್ತದೆ. ಆತನು ಮನುಷ್ಯರ ಆತ್ಮಗಳನ್ನು ಬದುಕಿಸಲೂ ಸಾಯಿಸಲೂ, ಅದೃಶ್ಯಲೋಕವನ್ನು ತೆರೆಯಲೂ ಮುಚ್ಚಲೂ ಶಕ್ತನಾಗಿಯೂ ಅಧಿಕಾರವುಳ್ಳವನಾಗಿಯೂ ಇದ್ಧಾನೆ. ಮೊದಲಿನವನೂ ಕಡೆಯವನೂ ಆಗಿರುವ ಆತನು ಮನುಷ್ಯರ ಪಾಪಪರಿಹಾರಕ್ಕಾಗಿ ಸತ್ತು, ತನ್ನ ಮರಣದಿಂದ ಪಾಪ, ಮರಣ, ಪಿಶಾಚ ಎಂಬ ಶತ್ರುಗಳನ್ನು ಜಯಿಸಿ, ಪುನರುತ್ಥಾನವಾಗಿ ಎಂದೂ ಬದುಕುತ್ತಾ, ತನ್ನ ನಂಬಿದ ಭಕ್ತರನ್ನು ಪರಮ ಪದವಿಯಲ್ಲಿ ಶೇರಿಸಿ, ಗುಣ ಪಡದ ಪಾಪಿಷ್ಠರನ್ನು ನರಕದಲ್ಲಿ ತಳ್ಳುವ ಸರ್ವಶಕ್ತಿಯುಳ್ಳವನು, ಉನ್ನತನಾದ ದೇವರಾಗಿದ್ಧಾನೆಂಬುವದಕ್ಕೆ ಸಂದೇಹವೇನು?

3. ಈ ದರ್ಶನ ಉಂಟಾದ ಕಾಲದಲ್ಲಿ ಇದ್ದ ಸಭೆಯ ಸ್ಥಿತಿಗತಿಗಳನ್ನು ೨ನೇ ೩ನೇ ಸಂಧಿಗಳಲ್ಲಿ ಹೇಳಿ ಇದೆ.

4. ಇದು ಕ್ರಿಸ್ತನ ರಾಜ್ಯಕ್ಕೆ ಸಮ್ಮಂಧವಾದಂಥಾ, ಆ ಕಾಲದಿಂದ ಲೋಕಾಂತ್ಯದ ಮಟ್ಟಿಗೂ ಸಂಭವಿಸುವಂಥಾ ಕಾರ್ಯಗಳನ್ನು ಕುರಿತದ್ದು. (೪. ೧.)

5. ಏಳು ನಕ್ಷತ್ರಗಳು ಏಳು ದೀಪಸ್ತಂಭಗಳು ಎಂಬವುಗಳ ತಾತ್ಪರ್ಯವನ್ನು ಕ್ರಿಸ್ತನು ತಾನೇ ವಿವರಿಸದಿದ್ದರೆ, ಅವು ಮನುಷ್ಯರಿಗೆ ತಿಳಿಯದ ಮರ್ಮವಾಗಿಯೇ ಇರುವವು.

6. ದೂತರು ಅಂದರೆ, ಸಭೆಯ ಮುಖ್ಯ ಬೋಧಕರನ್ನು ಅಥವಾ ಅಧ್ಯಕ್ಷರನ್ನು ಸೂಚಿಸುತ್ತದೆ.

7. ಯೋಹಾನನು ಮೊದಲು ಕಂಡ ದರ್ಶನವನ್ನು ಹೇಳಿದ ತರುವಾಯ, ಏಳು ಸಭೆಗಳಿಗೆ ಹೇಳ ತಕ್ಕ ಬುದ್ಧಿಬೋಧನೆಗಳುಳ್ಳ ಏಳು ಪತ್ರಿಕೆಗಳನ್ನು ಬರೆದಿದ್ಧಾನೆ. ಇವುಗಳಲ್ಲಿ ಒಂದೊಂದು ಪತ್ರಿಕೆಯು ಮೂರು ಭಾಗವಾಗಿರುತ್ತದೆ. ಮೊದಲನೇದು, ಪೀಠಿಕೆ. ಇದರಲ್ಲಿ ಆಯಾ ಸಭೆಯ ಸ್ಥಿತಿಗೆ ತಕ್ಕದ್ದಾಗಿ, ಕ್ರಿಸ್ತನ ಲಕ್ಷಣಗಳನ್ನು ಹೇಳಿ ಇದೆ. ಎರಡನೇದು, ಒಂದೊಂದು ಸಭೆಯ ಸ್ಥಿತಿಗತಿಗಳನ್ನು ತೋರಿಸಿ, ಅದಕ್ಕೆ ತಕ್ಕ ಬುದ್ಧಿಮತಿಗಳನ್ನೂ ಎಚ್ಚರಿಕೆಗಳನ್ನೂ ಹೇಳಿ ಇದೆ. ಮೂರನೇದು, ಜಯ ಹೊಂದುವ ಕ್ರೈಸ್ತಭಕ್ತರಿಗೆ ಉಂಟಾಗುವ ಸಂತೋಷವನ್ನು ಕುರಿತ ವಾಗ್ದತ್ತಗಳನ್ನು ಹೇಳಿ ಇದೆ. ಈ ಏಳು ಸಭೆಗಳನ್ನು ಕುರಿತು ಹೇಳಿದ ವಿಷಯಗಳನ್ನು ಯೋಚಿಸುವಾಗ, ಅವುಗಳಿಗೆ ಕಳ್ಳಬೋಧಕರಿಂದಲೂ, ಬೇರೆ ಶತ್ರುಗಳಿಂದಲೂ, ಶೋಧನೆಗಳು ಸಂಭವಿಸಿದ್ದವೆಂದೂ, ಯೆಹೂದ್ಯಮಾರ್ಗಕ್ಕೂ ವಿಗ್ರಹಾರಾಧನೆಗೂ ವ್ಯಭಿಚಾರಕ್ಕೂ ತಿರುಗಿ ಕೊಳ್ಳ ತಕ್ಕ ಹೇತುವೆಗಳು ಇದ್ದವೆಂದೂ, ಕೆಲವು ಸಭೆಗಳು ಉಪದ್ರವನ್ನು ಅನುಭವಿಸುತ್ತಾ ಇದ್ದವೆಂದೂ, ಬೇರೆ ಸಭೆಗಳು ಉಪದ್ರವನ್ನು ಎದುರು ನೋಡುವವುಗಳಾಗಿಯೂ ಇದ್ದವೆಂದೂ ತಿಳಿಯ ಬಹುದು. ಒಂದು ಸಭೆಗೆ ಮಾತ್ರ ಹೊಗಳಿಕೆ ಏನೂ ಇಲ್ಲ. ಎರಡು ಸಭೆಗಳಿಗೆ ಮಾತ್ರ ಗದರಿಕೆ ಇಲ್ಲ. ಮಾನಸಾಂತರವನ್ನು ಕುರಿತೂ, ಸತ್ಯಮಾರ್ಗದಲ್ಲಿ ಸ್ಥಿರವಾಗಿರ ಬೇಕೆಂಬದನ್ನು ಕುರಿತೂ ಹೇಳಿದ ಬುದ್ಧಿಬೋಧನೆಗಳು ತಿರಿಗಿ ತಿರಿಗಿ ಬರುತ್ತವೆ. (೨, ೩ನೇ ಸಂಧಿ.) ಪರಮ ರಹಸ್ಯಗಳು ಪ್ರಕಟವಾಗುವದಕ್ಕಿಂತ ಮುಂಚೆ, ಈ ಏಳು ಸಭೆಗಳಿಗೂ ಹೇಳಿದ ಬುದ್ಧಿಬೋಧನೆಗಳನ್ನು ಯೋಚಿಸುವಾಗ, ವೇದಸತ್ಯಗಳನ್ನು ಗ್ರಹಿಸಿ ಅವುಗಳ ಸಾರವನ್ನು ಗ್ರಹಿಸುವದಕ್ಕೆ ಮುಂಚೆ ಹೃದಯವು ಆಯತ್ತವಾಗಿರ ಬೇಕೆಂದು ಕಾಣುತ್ತದೆ.

8. ಎಫೆಸದ ಸಭೆಯಲ್ಲಿ ಅನೇಕ ಹಿರಿಯರು ಇದ್ದರೆಂಬುವದು ಪ್ರತ್ಯಕ್ಷವಾಗಿದೆ. (ಅಪೊ. ಕ್ರಿ. ೨೦. ೧೭.) ಆದದರಿಂದ ಅವರೆಲ್ಲರಿಗೂ ಮೇಲಾದ ಅಧ್ಯಕ್ಷನೇ ಈ ದೂತನೆಂದು ತೋರುತ್ತದೆ.

9. ಹಗಲನ್ನೂ ರಾತ್ರಿಯನ್ನೂ ಆಳುವದಕ್ಕೆ ಸೃಷ್ಟಿಸಲ್ಪಟ್ಟ ಸೂರ್ಯ ಚಂದ್ರ ನಕ್ಷತ್ರಗಳು, (ಉತ್ಪ. ೧. ೧೬.) ಅಧಿಕಾರ ಹೊಂದಿದ ಹಿರಿಯರನ್ನೂ ಧೊರೆತನಗಳನ್ನೂ ಸೂಚಿಸುತ್ತವೆ. (ಉತ್ಪ. ೩೭. ೯.) ಉತ್ತಮ ಬೋಧಕರನ್ನು ನಕ್ಷತ್ರಗಳಿಗೂ, (ದಾನಿ. ೧೨. ೩.) ಕಳ್ಳಬೋಧಕರನ್ನು ಮಾರ್ಗ ತಪ್ಪಿ ಅಲೆಯುವ ನಕ್ಷತ್ರಗಳಿಗೂ, (ಯೂದ. ೧೩. ವ.) ಉಪಮಾನವಾಗಿ ಹೇಳಿ ಇದೆ. ಏಳು ನಕ್ಷತ್ರಗಳನ್ನು ತನ್ನ ಬಲಗೈಯಲ್ಲಿ ಹಿಡುಕೊಂಡವನು ಎಂಬುವದರಿಂದ, ಕ್ರಿಸ್ತನು ತನ್ನ ಸೇವಕರನ್ನು ಏರ್ಪಡಿಸುತ್ತಾನೆಂದೂ, (ಲೂಕ. ೬. ೧೨, ೧೩.) ಅವರಿಗೆ ತನ್ನ ಆತ್ಮವನ್ನು ಕೊಡುತ್ತಾನೆಂದೂ, (ಯೋಹಾ. ೨೦. ೨೨.) ಕೆಲಸವನ್ನು ನೇಮಿಸುತ್ತಾನೆಂದೂ, (ಅಪೊ. ಕ್ರಿ. ೨೦. ೨೮.) ಅವರನ್ನು ತನ್ನ ಚಿತ್ತದ ಪ್ರಕಾರ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕಳುಹಿಸುತ್ತಾನೆಂದೂ, (ಅಪೊ. ಕ್ರಿ. ೮. ೨೬.) ಅವರ ಕೆಲಸ ಮುಗಿಯುವ ಮಟ್ಟಿಗೂ ಅವರನ್ನು ಆದರಿಸಿ ನಡಿಸುತ್ತಾನೆಂದೂ, (ಫಿಲಿ. ೧. ೨೬.) ಕಡೆಯಲ್ಲಿ ಅವರನ್ನು ಪರಮ ಮನೆಯಲ್ಲಿ ಶೇರಿಸಿ ಕೊಳ್ಳುವನೆಂದೂ, (೨ ಪೇತ್ರ. ೧. ೧೪. ೧ ಪೇತ್ರ. ೧. ೩, ೪.) ತಿಳಿಯ ತಕ್ಕದ್ದು.

10. ಕ್ರಿಸ್ತನು ತನ್ನ ಸಭೆಯ ಮಧ್ಯದಲ್ಲಿ ಸಂಚರಿಸಿ, ಅನುದಿನವೂ ಅದರ ಸ್ಥಿತಿಯನ್ನು ಯೋಚಿಸಿ, ಅದನ್ನು ಕಾಯುತ್ತಾ ಅದರ ಭಕ್ತಿ ಪ್ರಕಾಶಿಸುವ ಹಾಗೆ ಅನುಗ್ರಹಿಸುತ್ತಾನೆ.



೨ [1]ನಿನ್ನ ಕ್ರಿಯೆಗಳನ್ನೂ, ನಿನ್ನ [2]ಕಷ್ಟವನ್ನೂ, ನಿನ್ನ ತಾಳ್ಮೆಯನ್ನೂ, ನೀನು ದುಷ್ಟರನ್ನು ಸಹಿಸಲಾರದೆ ಇರುವ
ದನ್ನೂ ಬಲ್ಲೆನು. ಅಪೊಸ್ತಲರಾಗಿರದೆ, ತಾವು ಅಪೊಸ್ತಲರೆಂದು ಅನ್ನಿಸಿ ಕೊಂಡವರನ್ನು ಶೋಧಿಸಿ, ಅವರು
೩ [3]ಸುಳ್ಳುಗಾರರೆಂದು ಕಂಡಿ. ನೀನು ಸಹಿಸಿ ಕೊಂಡು, ತಾಳ್ಮೆಯುಳ್ಳವನಾಗಿ, ನನ್ನ ಹೆಸರಿನ ನಿಮಿತ್ತ ಕಷ್ಟ
ಪಟ್ಟು, ದಣಿಯಲಿಲ್ಲ.
೪ ಆದರೆ ನೀನು [4]ಮೊದಲಿನ ಪ್ರೀತಿಯನ್ನು ಬಿಟ್ಟು ಬಿಟ್ಟಿದ್ಧೀ, ಎಂಬುವದು ನಿನ್ನ ಮೇಲೆ ನನಗುಂಟು.
೫ ಹಾಗಾದರೆ, ಎಲ್ಲಿಂದ [5]ಬಿದ್ದು ಹೋದಿ ಎಂದು, ಜ್ಞಾಪಕ ಮಾಡಿ ಕೊಂಡು, ಮಾನಸಾಂತರ ಪಟ್ಟು, ಮೊದ
ಲಿನ ಕ್ರಿಯೆಗಳನ್ನು ಮಾಡು. ಇಲ್ಲದಿದ್ದರೆ, ನೀನು ಮಾನಸಾಂತರ ಪಡದೆ ಇದ್ದರೆ, ನಿನಗೆ ಬೇಗ ಬಂದು,
೬ ನಿನ್ನ [6]ದೀಪಸ್ತಂಭವನ್ನು ಅದರ ಸ್ಥಳದಿಂದ ತೊಲಗಿಸುವೆನು. ಆದರೆ ಇದು ನಿನಗುಂಟು; ಏನಂದರೆ—
[7]ನಿಕೊಲಾಯಿತರ ಕ್ರಿಯೆಗಳನ್ನು ಹಗೆ ಮಾಡುತ್ತೀ; ಅವುಗಳನ್ನು ನಾನೂ ಹಗೆ ಮಾಡುತ್ತೇನೆ.
೭ ಕಿವಿಯುಳ್ಳವನು [8]ಆತ್ಮವು ಸಭೆಗಳಿಗೆ ಹೇಳುವದನ್ನು ಕೇಳಲಿ. [9]ಜಯಿಸುವವನ್ಯಾವನೋ, ಅವನಿಗೆ ದೇವರ
[10]ಪರದೈಸಿನ ಮಧ್ಯದಲ್ಲಿರುವ ಜೀವವೃಕ್ಷದಿಂದ ಉಣ್ಣ ಕೊಡುವೆನು.

1. ನಿನ್ನ ಕ್ರಿಯೆಗಳನ್ನು ಬಲ್ಲೆನೆಂಬುವದು, ಏಳು ಪತ್ರಿಕೆಗಳಿಗೂ ಹುದುವಾದ ವಾಕ್ಯವಾಗಿದೆ. ಇದು ಉತ್ತಮ ಭಕ್ತರಿಗೆ ಬಹಳ ಆದರಣೆಯನ್ನೂ ಭಕ್ತಿಹೀನರಿಗೆ ಬಹಳ ಎಚ್ಚರಿಕೆಯನ್ನೂ ಕೊಡ ತಕ್ಕದ್ದು.

2. ಕಷ್ಟ ಎಂಬುವದು, ದೇವರ ಸೇವೆಯಲ್ಲಿ ಮಾಡಿದ ಸಾಧನೆಯೂ, ಕಳ್ಳಬೋಧಕರಿಗೂ ಅವಿಶ್ವಾಸಿಗಳಿಗೂ ಸ್ಥಳ ಕೊಡದೆ ಅವರನ್ನು ಎದುರಿಸುವದರಲ್ಲಿ ತೋರಿಸಿದ ಜಾಗ್ರತೆಯೂ ಸೂಚಿಸಲ್ಪಡುತ್ತದೆ.

3. ಸಭೆ ಎಂಬ ಮಂದೆಯನ್ನು ಭಕ್ಷಿಸುವ ತೋಳಗಳು ಬರುವವೆಂದು ಪೌಲನು ಪ್ರವಾದನೆಯಾಗಿ ತಿಳಿಸಿದ್ದನು. (ಅಪೊ. ಕ್ರಿ. ೨೦. ೨೯.) ಅಂಥಾ ತೋಳಗಳಾದ ಕಳ್ಳಬೋಧಕರು ಸಭೆಯಲ್ಲಿ ಹೊಕ್ಕು ಕೆಡಿಸುವದನ್ನು ಕ್ರಿಸ್ತನ ಭಕ್ತರು ಪರೀಕ್ಷಿಸಿ, ಅವರನ್ನು ಸುಳ್ಳುಗಾರರೆಂದು ಕಂಡು ಕೊಂಡರು. (೧ ಯೋಹಾ. ೪. ೧.)

4. ನಿನ್ನ ಮೇಲೆ ನನಗಿರುವ ಪ್ರೀತಿ ಕಡಿಮೆಯಾಗಲಿಲ್ಲ. ನನ್ನಲ್ಲಿಯೂ ನನ್ನ ದಾಸರಲ್ಲಿಯೂ ನೀನು ಇಟ್ಟ ಪ್ರೀತಿಯು ಬೆಳೆಯುವದಕ್ಕೆ ಬದಲಾಗಿ ಕಡಿಮೆಯಾಗಿ ಹೋಯಿತು. ಸತ್ಯದ ಮೇಲೆಯೂ ಪರಿಶುದ್ಧತ್ವದ ಮೇಲೆಯೂ ವೈರಾಗ್ಯವೂ, (೨, ೬. ವ.) ಜಾಗ್ರತೆಯೂ ತಾಳ್ಮೆಯೂ, (೨, ೩. ವ.) ನಿನ್ನಲ್ಲಿ ಉಂಟು. ಆದಾಗ್ಯೂ ಮೊದಲು ನಿನ್ನಲ್ಲಿದ್ದ ಪೂರ್ಣ ಪ್ರೀತಿಯು ಈಗ ನಿನ್ನಲ್ಲಿ ಇಲ್ಲ, ಎಂದು ಕ್ರಿಸ್ತನು ಹೇಳುತ್ತಾನೆ. ತನ್ನ ಭಕ್ತರಲ್ಲಿ ಪ್ರೀತಿಯ ಕೊರತೆಯನ್ನು ಕಾಣುವದು ಆತನಿಗೆ ಬಹಳ ವ್ಯಸನವಾಗಿರುತ್ತದೆ. ಪ್ರೀತಿಯಿಂದ ಆಗದ ಸೇವೆಯು ಆತನಿಗೆ ಹಿತವಾದದ್ದಲ್ಲ.

5. ಮೇಲಾದ ಸ್ಥಿತಿಯಲ್ಲಿದ್ದ ಸಭೆಯು ಬಿದ್ದು ಹೋದರೆ, ಮಾನಸಾಂತರ ಪಟ್ಟು ಮೊದಲು ಮಾಡುತ್ತಿದ್ದ ಪ್ರೀತಿಯ ಕ್ರಿಯೆಗಳನ್ನು ಈಗ ತಿರಿಗಿ ಮಾಡ ಬೇಕೆಂದು ಕರ್ತನು ಆಜ್ಞಾಪಿಸುತ್ತಾನೆ.

6. ದೀಪಸ್ತಂಭವನ್ನು ತೊಲಗಿಸುವೆನೆಂಬುವದು, ಕ್ರಿಸ್ತಮಾರ್ಗದ ಶ್ಲಾಘ್ಯಗಳನ್ನೂ ಆಶೀರ್ವಾದಗಳನ್ನೂ ನಿಲ್ಲಿಸುವೆನೆಂಬ ಅರ್ಥವಾಗುತ್ತದೆ. ದಯಾಪರನಾದ ಕ್ರಿಸ್ತನು ಎಫೆಸ ಸಭೆಯವರು ಮಾನಸಾಂತರ ಪಡ ಬೇಕೆಂದು ಹೇಳಿದ ಬುದ್ಧಿಯನ್ನು ಅವರು ಅಲಕ್ಷ್ಯ ಮಾಡಿದ್ದರಿಂದ, ಕರ್ತನು ಹೇಳಿದ ಪ್ರಕಾರ ಕೆಲವು ಕಾಲದೊಳಗೆ ಅವರಿಗೆ ದೊಡ್ಡ ವಿಘ್ನವು ಸಂಭವಿಸಿತು. ಆಸ್ಯಕ್ಕೆ ನೇತ್ರದೋಪಾದಿಯಾಗಿದ್ದ ಎಫೆಸ ಪಟ್ಣವು ಮಣ್ಣು ದಿಬ್ಬೆಯಾಗಿ ಬಿದ್ದದೆ. ಕ್ರೈಸ್ತರೆಂಬ ಹೆಸರು ಸಹ ಇಲ್ಲ. ಹೀಗೆ ಅದರಲ್ಲಿದ್ದ ದೀಪಸ್ತಂಭವು ತೊಲಗಿಸಲ್ಪಟ್ಟಿತು. ಆದದರಿಂದ ಎಲ್ಲಾ ಸಭೆಗಳವರೂ ಇದನ್ನು ನೆನಸಿ, ತಮಗೂ ಇಂಥಾ ಗತಿ ಬಾರದ ಹಾಗೆ ಕರ್ತನ ವಾಕ್ಯದ ಪ್ರಕಾರ ಪೂರ್ಣ ಪ್ರೀತಿಯುಳ್ಳವರಾಗಿ ನಡಿಯ ಪ್ರಯಾಸ ಪಡ ಬೇಕು.

7. ಈ ನಿಕೊಲಾಯಿತರು ಯಾರೆಂಬುವದು ತಿಳಿಯದು. ಆದರೆ ನಿಕೊಲಾ ಎಂಬ ಒಬ್ಬ ಮನುಷ್ಯನ ಶಿಷ್ಯರಾಗಿದ್ದವರು. ಅವರು ಸ್ತ್ರೀಯರನ್ನು ಹುದುವಾಗಿಟ್ಟು ಕೊಂಡು ಅನುಭವಿಸ ಬಹುದೆಂದೂ, ವಿಗ್ರಹಗಳಿಗೆ ಅರ್ಪಿಸಲ್ಪಟ್ಟವುಗಳನ್ನು ಉಣ್ಣ ಬಹುದೆಂದೂ ಬೋಧಿಸಿದರೆಂಬದಾಗಿ ತೋರುತ್ತದೆ. ಅವರ ಬೋಧನೆ ತಪ್ಪಾಗಿಯೂ, ಅವರ ನಡತೆ ಅಶುದ್ಧವಾಗಿಯೂ ಇತ್ತು. ಈ ನಿಕೊಲಾಯಿತರು ಎಫೆಸದ ಸಭೆಯಲ್ಲಿಯೂ ಪೆರ್ಗಮದ ಸಭೆಯಲ್ಲಿಯೂ ಇದ್ದರು. (೧೫. ವ.) ಅವರಿಂದ ಸಭೆಗಳಿಗೆ ಬಹಳ ವಿಘ್ನ ಸಂಭವಿಸಿದ್ದರಿಂದ ಕರ್ತನು ಅವರನ್ನು ಹಗೆ ಮಾಡುತ್ತೇನೆಂದು ಹೇಳುತ್ತಾನೆ. ಎಫೆಸ್ಯರು ಅವರನ್ನು ಹಗೆ ಮಾಡಿದ್ದರಿಂದ ಅವರನ್ನು ಹೊಗಳುತ್ತಾನೆ.

8. ಈ ಕಟ್ಟಳೆ ಏಳು ಪತ್ರಿಕೆಗಳಲ್ಲಿಯೂ ಉಂಟು. ಇದರಿಂದ ದೇವರು ಹೇಳುವ ಮಾತುಗಳನ್ನು ಜ್ಞಪ್ತಿ ಇಟ್ಟು ನಡಿಯ ತಕ್ಕದ್ದು. ಮತ್ತು ದೇವರ ಮಗನಿಗೂ ಪರಿಶುದ್ಧಾತ್ಮನಿಗೂ ಸಮ್ಮಂಧವು ತೋರುತ್ತದೆ.

9. ಪಾಪ, ಲೋಕ, ಪಿಶಾಚ ಎಂಬ ಶತ್ರುಗಳ ಸಂಗಡ ಹೋರಾಡಿ ಜಯಿಸುವ ಒಬ್ಬೊಬ್ಬ ಉತ್ತಮ ಭಕ್ತನಿಗೂ, ಈ ಗ್ರಂಥದಲ್ಲಿರುವ ವಾಗ್ದತ್ತಗಳು ಪ್ರಾಪ್ತಿಸುವವು. ಅವುಗಳಿಗೂ ಹೊಸ ಯೆರೂಸಲೇಮಿನಲ್ಲಿರುವ ದೇವಭಕ್ತರು ಅನುಭವಿಸುವ ಆಶೀರ್ವಾದಗಳಿಗೂ ಬಹಳ ಸಮ್ಮಂಧ ಉಂಟೆಂಬುವದು ಕಾಣುತ್ತದೆ. ೭. ವಚನವನ್ನು ೨೨. ೨, ೧೪. ವಚನಗಳಿಗೂ, ೧೧. ವಚನವನ್ನು ೨೦. ೬. ವಚನಕ್ಕೂ, ೩. ೪. ವಚನವನ್ನು ೭. ೯; ೧೯. ೮; ೨೦. ೧೨—೧೫. ವಚನಗಳಿಗೂ, ೩. ೨೧. ವಚನವನ್ನು ೨೦. ೪; ೨೨. ೫. ವಚನಗಳಿಗೂ ಸರಿ ನೋಡ ಬೇಕು.

10. (ಲೂಕ. ೨೩. ೪೩. ವಚನದ ವ್ಯಾಖ್ಯಾನ ನೋಡ ಬೇಕು.) ಆದಿ ತಂದೆತಾಯಿಗಳಾದ ಆದಮನೂ ಹವ್ವಳೂ ಪಾಪದಿಂದ

೮ ಮತ್ತು [1]ಸ್ಮುರ್ನದಲ್ಲಿರುವ ಸಭೆಯ [2]ದೂತನಿಗೆ ಬರೆ—ಮೊದಲಿನವನೂ, ಕಡೆಯವನೂ, ಸತ್ತವನಾಗಿದ್ದು [3]ಬದುಕುವವನೂ, ಹೇಳುವದೇನಂದರೆ—

೯ ನಿನ್ನ ಕ್ರಿಯೆಗಳನ್ನೂ ಉಪದ್ರವನ್ನೂ, ಐಶ್ವರ್ಯವಂತನಾಗಿರುವ ನಿನ್ನ [4]ಬಡತನವನ್ನೂ, ಯೆಹೂದ್ಯರಲ್ಲ, ಸೈತಾನನ ಸಭೆಯುವರಾಗಿದ್ದು, ತಮ್ಮನ್ನು ಯೆಹೂದ್ಯರನ್ನಿಸಿ ಕೊಳ್ಳುವವರ [5]ದೂಷಣೆಯನ್ನೂ ಬಲ್ಲೆನು.

೧೦ ನಿನಗೆ ಬರುವ ಶ್ರಮೆಗಳಿಗೋಸ್ಕರ ಏನೂ ಭಯ ಪಡ ಬೇಡ. ಇಗೋ, ನೀವು ಶೋಧಿಸಲ್ಪಡುವ ಹಾಗೆ ಪಿಶಾಚನು ನಿಮ್ಮಲ್ಲಿ ಕೆಲವರನ್ನು ಶೆರೆಯಲ್ಲಿ ಹಾಕುವನು. ಆಗ [6]ಹತ್ತು ದಿನಗಳ ಉಪದ್ರವು ನಿಮಗೆ ಇರುವದು. ಮರಣದ ಪರ್ಯಂತರ ನಂಬಿಕೆಯಾಗಿರು; ಆಗ [7]ಜೀವದ ಕಿರೀಟವನ್ನು ನಿನಗೆ ಕೊಡುವೆನು.

೧೧ ಕಿವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳುವದನ್ನು ಕೇಳಲಿ. ಜಯಿಸುವವನು [8]ಎರಡನೇ ಮರಣದಿಂದ ನಷ್ಟ ಪಡುವದಿಲ್ಲ.

೧೨ ಮತ್ತು [9]ಪೆರ್ಗಮದಲ್ಲಿರುವ ಸಭೆಯ ದೂತನಿಗೆ ಬರೆ—ಹದವಾದ ಇಬ್ಬಾಯಿ ಕತ್ತಿ ಉಂಟಾದವನು ಹೇಳುವದೇನಂದರೆ—

ಜಯಿಸಲ್ಪಟ್ಟು ಬಿದ್ದದರಿಂದ ಜೀವವೃಕ್ಷದ ಫಲವನ್ನು ತಿನ್ನದ ಹಾಗೆ ಏಡೆನ್ ತೋಟವಾದ ಪರದೈಸದಿಂದ ಹೊರಡಿಸಲ್ಪಟ್ಟರು. ಹಾಗೆ ಬಿದ್ದವರು (೫. ವ.) ದೇವರ ಕೃಪೆಯಿಂದ ಪಾಪವನ್ನು ಜಯಿಸಿದರೆ, ಪರದೈಸವೆಂಬ ಪರಮ ಮನೆಯಲ್ಲಿ ಜೀವವೃಕ್ಷದ ಫಲವಾದ ಸಾಯದ ವರವನ್ನೂ ನಿತ್ಯಜೀವವನ್ನೂ ಹೊಂದಿ ಬಾಳುವರು. ಪಾಪವನ್ನು ಜಯಿಸುವವರು, ತಮ್ಮ ಪಾಪದಿಂದ ಸೂರೆಯಾಗಿ ಕೊಟ್ಟ ಭಾಗ್ಯಗಳಿಗಿಂತಲೂ, ಮೇಲಾದ ಭಾಗ್ಯಗಳನ್ನು ಹೊಂದಿ ಪರಮ ಪದವಿಯಲ್ಲಿ ಸದಾಕಾಲ ಬಾಳುವರು.

1. ಸ್ಮುರ್ನ ಪಟ್ಟಣವು ಎಫೆಸಕ್ಕೆ ಉತ್ತರ ಕಡೆ ೪೫ ಮೈಲುಗಳ ದೂರದಲ್ಲಿದೆ. ಇದು ಸಣ್ಣ ಆಸ್ಯದ ಶ್ರೇಷ್ಠ ಪಟ್ಟಣಗಳಲ್ಲಿ ಒಂದಾಗಿಯೂ, ವ್ಯಾಪಾರಸ್ಥಳವಾಗಿಯೂ ಇತ್ತು. ಈಗ ಅದು ಕೂಡುವ ಮಟ್ಟಿಗೂ ಮುಖ್ಯ ಪಟ್ಟಣವಾಗಿದೆ. ಅದರಲ್ಲಿ ೧೫ ತುರುಕರ ಮಶೀದಿಗಳೂ, ಯೆಹೂದ್ಯರ ಕೆಲವು ಸಭೆಮನೆಗಳೂ ಉಂಟು. ಹಲವು ಜಾತಿಗಳ ಕ್ರೈಸ್ತರು ಆ ಪಟ್ಟಣದಲ್ಲಿದ್ದಾರೆ. ಕ್ರೈಸ್ತಬೋಧಕರಲ್ಲಿ ಕೆಲವರು ಅಲ್ಲಿದ್ದು, ಸುವಾರ್ತೆಯನ್ನು ಪ್ರಸಂಗಿಸುತ್ತಾರೆ. ಈಗ ಅದಕ್ಕೆ ಇಸ್ಮರ್ ಎಂಬ ಹೆಸರುಂಟು.

2. ಆ ದೂತನು ಯೋಹಾನನ ಶಿಷ್ಯನೂ ಆ ಕಾಲದಲ್ಲಿ ಸ್ಮುರ್ನ ಪಟ್ಟಣದ ಸಭೆಗೆ ಅಧ್ಯಕ್ಷನೂ ಆಗಿದ್ದ ಪೊಲಿಕಾರ್ಪನೆಂದು ತೋರುತ್ತದೆ. ಅವನು ೧೬೮ನೇ ವರುಷದಲ್ಲಿ ಸ್ಮುರ್ನ ಪಟ್ಟಣದಲ್ಲಿ ರಕ್ತಸಾಕ್ಷಿಯಾಗಿ ಸತ್ತನು. ಅವನನ್ನು ಅಧಿಕಾರಿಗಳು ಹಿಡಿದು, ನೀನು ಕ್ರಿಸ್ತನನ್ನು ಬೊಂಕಿದರೆ, ನಿನ್ನನ್ನು ಬಿಟ್ಟು ಬಿಡುತ್ತೇವೆಂದು ಹೇಳಿದಾಗ, ನಾನು ೮೬ ವರುಷದಿಂದ ಆತನಿಗೆ ಸೇವೆ ಮಾಡುತ್ತೇನೆ. ಆತನು ನನಗೆ ಎಂದಿಗೂ ಕೇಡು ಮಾಡಲಿಲ್ಲ. ಈ ಒಳ್ಳೇ ಕರ್ತನನ್ನು ಹ್ಯಾಗೆ ಬೊಂಕಲಿ, ಅಂದನು. ಅವನ ಹಾಗೆ ಕರ್ತನಿಗೆ ಸೇವೆ ಮಾಡುವವರು ಭಾಗ್ಯವಂತರು.

3. ೧. ೧೭, ೧೮. ವಚನಗಳ ವ್ಯಾಖ್ಯಾನ ನೋಡ ಬೇಕು. ಉಪದ್ರ ಪಡಲಿಕ್ಕಿರುವ ಸಭೆಗೆ ಕ್ರಿಸ್ತನು ತನ್ನನ್ನು ಕುರಿತು ಹೀಗೆ ಹೇಳುವದು ಅವರಿಗೆ ಬಹಳ ಧೈರ್ಯವನ್ನೂ ಉತ್ಸಾಹವನ್ನೂ ಉಂಟು ಮಾಡ ತಕ್ಕದ್ದಾಗಿದೆ.

4. ಸ್ಮುರ್ನದ ಸಭೆಯುವರಲ್ಲಿ ಅನೇಕರು ಬಡವರಾಗಿಯೂ, ಶತ್ರುಗಳಿಂದ ಆಸ್ತಿಯನ್ನು ಕಳಕೊಂಡವರಾಗಿಯೂ, ಇರುವರು. ಆದಾಗ್ಯೂ ಅವರು ಪರದಲ್ಲಿ ಸ್ಥಿರ ಭಾಗ್ಯವನ್ನು ಹೊಂದಲಿಕ್ಕಿದ್ದವರಾದದರಿಂದ ಆತ್ಮದ ಪ್ರಕಾರ ಐಶ್ವರ್ಯವುಳ್ಳವರಾಗಿದ್ದರು. (ಯಾಕೋಬ. ೨. ೫.)

5. ಭಕ್ತಿಹೀನರಾದ ಯೆಹೂದ್ಯರು ನಿಜ ಇಸ್ರಯೇಲ್ಯರಾಗಿರದೆ, (ಯೋಹಾ. ೧. ೪೭. ರೋಮಾ. ೯. ೬—೮. ಗಲಾ. ೩. ೭.) ಸೈತಾನನ ಸಭೆ, ಅಥವಾ ಸಭೆಮನೆಗೆ ಶೇರಿದವರಾಗಿ, (ಯೋಹಾ. ೮. ೪೪.) ಕ್ರೈಸ್ತರನ್ನೂ ಅವರು ಆರಾಧಿಸುವ ಕರ್ತನನ್ನೂ ದೂಷಿಸುತ್ತಾ ಇದ್ದರು.

6. ಹತ್ತು ದಿನಗಳೆಂಬುವದು, ಪೂರ್ವಿಕ ಕ್ರೈಸ್ತಸಭೆಗೆ ಸಂಭವಿಸಿದ ಹತ್ತು ಉಪದ್ರಗಳನ್ನು ಕುರಿತದ್ದೆಂದೂ, ಹತ್ತು ವರುಷಗಳಾಗಿ ನಡೆಯುತ್ತಿದ್ದ ಉಪದ್ರವನ್ನು ಕುರಿತದ್ದೆಂದೂ, ಸ್ಮುರ್ನದ ಸಭೆಗೆ ಸಂಭವಿಸಿದ ಹತ್ತು ದಿವಸಗಳ ಉಪದ್ರವನ್ನು ಕುರಿತದ್ದೆಂದೂ, ಹಲವರು ನಾನಾ ತಾತ್ಪರ್ಯ ಹೇಳುತ್ತಾರೆ. ಸಭೆಗೆ ಹತ್ತು ಸಾರಿ ಉಪದ್ರ ಸಂಭವಿಸಿದ್ದದ್ದೂ, ಹತ್ತನೇ ಉಪದ್ರವು ಹತ್ತು ವರುಷಗಳು ನಡೆಯುತ್ತಿದ್ದದ್ದೂ ಯಥಾರ್ಥವಾದಾಗ್ಯೂ, ಇದು ಆ ಕಾಲದಲ್ಲಿ ಸ್ಮುರ್ನದ ಸಭೆಯುವರಿಗೆ ಶೀಘ್ರವಾಗಿ ಸಂಭವಿಸಲಿಕ್ಕಿದ್ದ ಉಪದ್ರವನ್ನು ಕುರಿತು ಹೇಳಿರುವದರಿಂದ ಸೈತಾನನ ಪ್ರೇರೇಪಣೆಯ ಪ್ರಕಾರ ಯೆಹೂದ್ಯರಿಂದ ಸ್ಮುರ್ನದ ಸಭೆಯುವರಿಗೆ ಸಂಭವಿಸಿದ ಒಂದು ಕ್ಲುಪ್ತವಾದ ಉಪದ್ರವನ್ನು ಕುರಿತದ್ದಾಗಿದೆ.

7. ಮರಣದ ಪರ್ಯಂತರವಾದರೂ, ಮರಣ ಸಂಭವಿಸುವದಾಗಿದ್ದರೂ ಅಂತ್ಯದ ಪರ್ಯಂತರ ಯಥಾರ್ಥವುಳ್ಳವನಾಗಿ ನಡಿಯುವ ಭಕ್ತನು ಜೀವದ ಕಿರೀಟವನ್ನು ಹೊಂದುವನು. ಈ ಅಮೂಲ್ಯ ವಾಗ್ದತ್ತವನ್ನು ಕೊಟ್ಟ ಕರ್ತನೇ ಅದನ್ನು ಅವರಿಗೆ ಅನುಗ್ರಹಿಸುವನು.

8. ಶತ್ರುಗಳು ಶರೀರವನ್ನು ಮಾತ್ರ ಕೊಲ್ಲ ಕೂಡುವದು. (ಮತ್ತಾ. ೧೦. ೨೮. ಲೂಕ. ೧೨. ೪.) ಕ್ರಿಸ್ತನ ಭಕ್ತರ ಜೀವವು ದುಷ್ಟ ಮನುಷ್ಯರಿಂದಲೂ, ಪಿಶಾಚನಿಂದಲೂ, ದುರ್ಮಾರ್ಗರಿಗೆ ಪ್ರಾಪ್ತಿಸುವ ಎರಡನೇ ಮರಣದಿಂದಲೂ ನಷ್ಟ ಹೊಂದದೆ ಇರುವದು. (ಯೋಹಾ. ೧೦. ೨೮. ಪ್ರಕಟ. ೨೦. ೧೪; ೨೧. ೮.)

9. ಪೆರ್ಗಮ ಎಂಬುವದು ಮೂಸ್ಯ ದೇಶದ ಪ್ರಧಾನ ಪಟ್ಟಣವಾಗಿಯೂ, ಅತ್ತಾಲ್ಯದ ಅರಸರು ವಾಸಿಸಿದ ಸ್ಥಳವಾಗಿಯೂ, ಸ್ಮುರ್ನಕ್ಕೆ ಉತ್ತರದಲ್ಲಿ ೬೪ ಮೈಲುಗಳ ದೂರದಲ್ಲಿದ್ದ ಒಂದು



೧೩ ನಿನ್ನ ಕ್ರಿಯೆಗಳನ್ನೂ, [1]ಸೈತಾನನ ಸಿಂಹಾಸನವಿರುವಲ್ಲಿ ನೀನು ವಾಸವಾಗಿರುವದನ್ನೂ, ನೀನು ನನ್ನ ಹೆಸರನ್ನು ಹಿಡಿದು ಕೊಂಡು, ನಿಮ್ಮಲ್ಲಿಯೂ ಸೈತಾನನು ವಾಸವಾಗಿರುವಲ್ಲಿಯೂ ಕೊಲ್ಲಲ್ಪಟ್ಟ ನಂಬಿಕೆಯುಳ್ಳ ನನ್ನ ಸಾಕ್ಷಿಯಾದ [2]ಅಂತಿಪನ ದಿನಗಳಲ್ಲಿ ಸಹ ನನ್ನ ವಿಶ್ವಾಸವನ್ನು ಬೊಂಕದೆ ಇದ್ದದ್ದನ್ನೂ, ಬಲ್ಲೆನು.

೧೪ ಆದರೆ ನಿನ್ನ ಮೇಲೆ ಕೆಲವು ನನಗುಂಟು; ಏನಂದರೆ—ವಿಗ್ರಹಬಲಿಗಳನ್ನು ಉಣ್ಣುವ ಹಾಗೆಯೂ, ಜಾರತ್ವ
ಮಾಡುವ ಹಾಗೆಯೂ ಇಸ್ರಯೇಲನ ಮಕ್ಕಳ ಮುಂದೆ ಆಟಂಕವನ್ನು ಹಾಕುವದಕ್ಕೆ ಬಾಲಾಕನಿಗೆ ಬೋ
೧೫ ಧಿಸಿದ [3]ಬಿಳಾಮನ ಬೋಧನೆಯನ್ನು ಕೈಕೊಳ್ಳುವವರು ಅಲ್ಲಿ ನಿನಗೆ ಇದ್ದಾರೆ. ಅದೇ ಪ್ರಕಾರ ನಿಕೊಲಾ
೧೬ ಯಿತರ ಬೋಧನೆಯನ್ನು ಕೈಕೊಳ್ಳುವವರು ಸಹ [4]ನಿನಗೆ ಇದ್ದಾರೆ. ಅದನ್ನು ಹಗೆ ಮಾಡುತ್ತೇನೆ. ಮಾ
ನಸಾಂತರ ಪಡು; ಇಲ್ಲದಿದ್ದರೆ, ನಿನಗೆ ಬೇಗ ಬಂದು, ನನ್ನ [5]ಬಾಯಿಯ ಕತ್ತಿಯಿಂದ ಅವರ ಸಂಗಡ ಯುದ್ಧ
ಮಾಡುವೆನು.

೧೭ ಕಿವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳುವದನ್ನು ಕೇಳಲಿ. ಜಯಿಸುವವನ್ಯಾವನೋ, ಅವನಿಗೆ [6]ಬಚ್ಚಿಟ್ಟ ಮನ್ನದಲ್ಲಿ ಉಣ್ಣ ಕೊಡುವೆನು. ಮತ್ತು [7]ಬಿಳೀ ಕಲ್ಲನ್ನೂ, ಕಲ್ಲಿನ ಮೇಲೆ ಬರೆದ [8]ಹೊಸ ಹೆಸರನ್ನೂ, ಅವನಿಗೆ ಕೊಡುವೆನು. ಆ ಹೆಸರು, ಹೊಂದಿದವನಿಗೆ ಹೊರ್ತು, ಮತ್ತ್ಯಾರಿಗೂ ತಿಳಿಯದು.

ದೊಡ್ಡ ಪಟ್ಟಣವಾಗಿತ್ತು; ವಿದ್ಯದ ವಿಷಯ ಕೀರ್ತಿ ಹೊಂದಿದ್ದಾಗಿತ್ತು. ಅದರಲ್ಲಿ ಒಂದು ಪುಸ್ತಕಶಾಲೆಯಲ್ಲಿ ಎರಡು ಲಕ್ಷ ಪುಸ್ತಕಗಳಿದ್ದವೆಂದು ಹೇಳಿ ಇದೆ. ಆ ಪಟ್ಟಣದಲ್ಲಿ ಯೂಪಿತರ್, ಅಥೇನೆ, ಅಪ್ಪೊಲ್ಲೋ, ಈಸ್ಕುಲೇಪಿಯಸ್ ಎಂಬ ದೇವತೆಗಳಿಗೆ ಮುಖ್ಯ ಗುಡಿಗಳಿದ್ದವು. ಈಸ್ಕುಲೇಪಿಯಸ್ ಎಂಬ ಹೆಸರಿನಿಂದ ಒಂದು ಸರ್ಪವನ್ನು ಆರಾಧಿಸುತ್ತಿದ್ದರು. ಅದು ಆ ಪಟ್ಟಣವನ್ನು ಕಾಯುವ ದೇವತೆ ಎಂದೂ, ಅದರ ಗುಡಿಯಲ್ಲಿ ಅನೇಕ ಆಶ್ಚರ್ಯಗಳು ನಡಿಯುತ್ತವೆ ಎಂದೂ ನಂಬಿದರು. ಪೆರ್ಗಮು ಅಂದರೆ, ದೊಡ್ಡ ಗೋಪುರವೆಂಬ ಅರ್ಥವು. ವಿಗ್ರಹಾರಾಧನೆಗೆ ಮುಖ್ಯ ಸ್ಥಳವಾಗಿಯೂ, ಸೈತಾನನ ಸಿಂಹಾಸನವಾಗಿಯೂ ಇದ್ದ ಆ ಪಟ್ಟಣಕ್ಕೆ ಈ ಹೆಸರು ಸಲ್ಲುವದು. ಈಗ ಅದರಲ್ಲಿ ತುರುಕರು ಕ್ರೈಸ್ತ ದೇವಾಲಯಗಳನ್ನೆಲ್ಲಾ ಮಶೀದಿಗಳಾಗ ಮಾಡಿ ಕೊಂಡರು. ಈಗ ಅದರಲ್ಲಿ ಹೆಸರುಕ್ರೈಸ್ತರ ಹದಿನೈದು ಕುಟುಂಬಗಳುಂಟು.

1. ದೇವರ ಸಿಂಹಾಸನವಿರ ತಕ್ಕಲ್ಲಿ ಸೈತಾನನ ಸಿಂಹಾಸನವಿದ್ದದ್ದು ಆಶ್ಚರ್ಯವೇ. ಈ ದುಷ್ಟ ಪಿಶಾಚನನ್ನೇ ಆ ಪಟ್ಟಣದವರು ನಾಗಸ್ವಾಮಿ ಎಂದು ಆರಾಧಿಸಿದರು. ಅವನು ಅಲ್ಲಿ ತನ್ನ ಸಿಂಹಾಸನ ಸ್ಥಾಪಿಸಿ, ತನ್ನ ಸೇವೆ ಮಾಡುವವರನ್ನು ಆಳುತ್ತಾ, ತನಗೆ ಸೇವೆ ಮಾಡದವರನ್ನು ಉಪದ್ರ ಪಡಿಸುತ್ತಾ ಇದ್ದನು.

2. ಅಂತಿಪನು ಯಾರೆಂದು ತಿಳಿಯದು. ಪೆರ್ಗಮದಲ್ಲಿ ಕ್ರೈಸ್ತಸಭೆಗೆ ಪಿಶಾಚನ ಮಕ್ಕಳಿಂದ ಸಂಭವಿಸಿದ ಒಂದು ಉಪದ್ರದಲ್ಲಿ ಅಂತಿಪನೆಂಬ ಒಬ್ಬ ಉತ್ತಮ ಭಕ್ತನು ಸತ್ಯಕ್ಕೆ ಸಾಕ್ಷಿಯಾಗಿ ಮರಣ ಹೊಂದಿರುವನು. ಅವನ ಹೆಸರು ಅಳಿದು ಹೋಗದೆ ಇರುವ ಹಾಗೆ ಈ ಗ್ರಂಥದಲ್ಲಿ ಬರೆಯಲ್ಪಟ್ಟದೆ.

3. ಬಿಳಾಮನು ಅನ್ಯಾಯದ ಸಂಬಳಕ್ಕೆ ಆಶೆ ಪಟ್ಟು, ಇಸ್ರಯೇಲ್ಯರು ಮೋವಾಬ್ಯ ಸ್ತ್ರೀಯರ ಸಂಗಡ ವ್ಯಭಿಚಾರ ಮಾಡಲೂ, ವಿಗ್ರಹಗಳಿಗೆ ಅರ್ಪಿಸಲ್ಪಟ್ಟದ್ದನ್ನು ಉಣ್ಣಲೂ, ಮೋವಾಬ್ಯರ ಅರಸನಾದ ಬಾಲಾಕನಿಗೆ ತಂತ್ರವಾದ ಯೋಚನೆ ಹೇಳಿ ಕೊಟ್ಟನು. (ಅಂಕೆ. ೨೫. ೧; ೩೧. ೧೬. ೧ ಕೊರಿ. ೬. ೧೪, ೧೮. ೨ ಪೇತ್ರ. ೨. ೧೫.) ಇಂಥಾ ಬೋಧನೆಯನ್ನು ಕಲಿಸಿದವರೂ, ಅದನ್ನು ಅನುಸರಿಸಿದವರೂ ಅನೇಕರು ಆ ಸಭೆಯಲ್ಲಿದ್ದರು.

4. ನಿಕೊಲಾಯಿತ ಮತಸ್ಥರು ಬಿಳಾಮನ ಬೋಧನೆಯನ್ನು ಕೈಕೊಂಡಿದ್ದರೆಂದು ತೋರುತ್ತದೆ. ಅವರು ಎಫೆಸದ ಸಭೆಯಲ್ಲಿದ್ದ ಪ್ರಕಾರ ಪೆರ್ಗಮದ ಸಭೆಯಲ್ಲಿಯೂ ಇದ್ದರು.

5. ಬಾಯಿಯ ಕತ್ತಿ ಎಂಬುವದು ಸತ್ಯವೂ ನೀತಿಯೂ ಆದ ಕ್ರಿಸ್ತನ ಬಲವಾದ ವಾಕ್ಯವನ್ನು ಕುರಿತದ್ದು. (೧೨. ವ.; ೧. ೧೬.) ಇದು ನಿಕೊಲಾಯಿತ ಮತಸ್ಥರಿಗೆ ಸರಿಯಾದ ಭಕ್ತಿಹೀನರಿಗೆ ಆಜ್ಞೆಯನ್ನೂ ನಾಶನವನ್ನೂ ಉಚ್ಚರಿಸುವ ವಾಕ್ಯವಾಗಿದೆ. ಹದವುಳ್ಳ ಇಬ್ಬಾಯಿ ಕತ್ತಿಯನ್ನು ಹಿಡಿದಿರುವ ಸರ್ವಶಕ್ತನಾದ ದೇವರ ಮುಂದೆ ನಿಲ್ಲ ತಕ್ಕವನ್ಯಾರು?

6. ಬಚ್ಚಿಟ್ಟ ಮನ್ನವೆಂಬುವದು, ಒಡಂಬಡಿಕೆಯ ಪೆಟ್ಟಿಗೆಯಲ್ಲಿ ಬಚ್ಚಿಟ್ಟದ್ದ ಮನ್ನವನ್ನು ಸೂಚಿಸುತ್ತದೆ. (ಹೊರ. ೧೬. ೩೨—೩೪. ಇಬ್ರಿ. ೯. ೪.) ಇದು ಪರಲೋಕದಿಂದ ಬಂದ ಜೀವದ ರೊಟ್ಟಿಗೆ ಗುರುತಾಗಿತ್ತು. (ಯೋಹಾ. ೬. ೩೩.) ಅರಣ್ಯದಲ್ಲಿ ಪ್ರಯಾಣ ಮಾಡಿದ ಇಸ್ರಯೇಲ್ಯರು ಮನ್ನವನ್ನು ಉಂಡು ಜೀವಿಸಿದ ಪ್ರಕಾರ, ಲೋಕಾರಣ್ಯದ ಮಾರ್ಗವಾಗಿ ಪರಮ ಕಾನಾನಿಗೆ ಪ್ರಯಾಣ ಮಾಡುವ ದೇವಭಕ್ತರು, ಕ್ರಿಸ್ತನು ಕೊಡುವ ಜೀವದ ರೊಟ್ಟಿಯನ್ನು ಉಂಡು, ನಾಶವಾಗದ ಜೀವವನ್ನು ಹೊಂದಿ, ಸದಾಕಾಲ ಬಾಳುವರು.

7. ಜಯಿಸುವವನಿಗೆ ಬಿಳೀ ಕಲ್ಲನ್ನು ಕೊಡುವೆನೆಂಬುವದು, ಜಯಿಸುವ ಭಕ್ತನು ಅಪರಾಧವಿಲ್ಲದವನೆಂದು ತೀರ್ಪು ಹೊಂದುವದನ್ನು ಒಂದು ವೇಳೆ ಸೂಚಿಸುತ್ತದೆ.

8. ಹೊಸ ಹೆಸರು ಎಂಬುವದು, ದೇವರ ಕುಮಾರನೆಂಬ ಶ್ರೇಷ್ಠ ಹೆಸರನ್ನು ಒಂದು ವೇಳೆ ಸೂಚಿಸುತ್ತದೆ. (ಯೋಹಾ. ೧. ೧೨.) ಈ ಹೆಸರು ಹೊಂದಿದವನಿಗೇ ಹೊರ್ತು ಮತ್ತ್ಯಾರಿಗೂ ಅದರ ಅಮೂಲ್ಯತ್ವವು ತಿಳಿಯಲಾರದು.

೧೮ ಮತ್ತು [1]ಥುವತ್ತೈರದಲ್ಲಿರುವ ಸಭೆಯ ದೂತನಿಗೆ ಬರೆ—ಬೆಂಕಿಯ ಉರಿಯ ಹಾಗಿರುವ ಕಣ್ಣುಗಳೂ,
[2]ಬಿಳೀ ಹಿತ್ತಾಳಿಯ ಹಾಗಿರುವ ಪಾದಗಳೂ, ಉಳ್ಳ ದೇವರ ಮಗನು ಹೇಳುವದೇನಂದರೆ—
೧೯ ನಿನ್ನ ಕ್ರಿಯೆಗಳನ್ನೂ, ಪ್ರೀತಿಯನ್ನೂ, ಸೇವೆಯನ್ನೂ, ವಿಶ್ವಾಸವನ್ನೂ, ತಾಳ್ಮೆಯನ್ನೂ, [3]ಮೊದಲಿನವುಗ
ಳಿಗಿಂತ ಹೆಚ್ಚಾಗಿರುವ ನಿನ್ನ ಕಡೇ ಕ್ರಿಯೆಗಳನ್ನೂ, ಬಲ್ಲೆನು.
೨೦ ಆದರೆ ನಿನ್ನ ಮೇಲೆ ಕೆಲವು ನನಗುಂಟು; ಏನಂದರೆ—ತಾನು ಪ್ರವಾದಿ ಸ್ತ್ರೀ ಅನ್ನಿಸಿ ಕೊಳ್ಳುವ [4]ಇಜೆಬೇ
ಲೆಂಬ ಆ ಹೆಂಗಸನ್ನು ನನ್ನ ದಾಸರಿಗೆ ಜಾರತ್ವ ಮಾಡುವ ಹಾಗೆಯೂ, ವಿಗ್ರಹಬಲಿಗಳನ್ನು ಉಣ್ಣುವ ಹಾ
೨೧ ಗೆಯೂ, ಬೋಧಿಸಿ, ಮೋಸ ಮಾಡಗೊಡಿಸುತ್ತೀ; ತನ್ನ ಜಾರತ್ವವನ್ನು ಬಿಟ್ಟು, ಮಾನಸಾಂತರ ಪಡುವ
೨೨ ಹಾಗೆ, ಅವಳಿಗೆ ಕಾಲವನ್ನು ಕೊಟ್ಟೆನು; ಆದರೆ [5]ಮಾನಸಾಂತರ ಪಡಲಿಲ್ಲ. ಇಗೋ, ನಾನು ಅವಳನ್ನು
ಒಂದು [6]ಮಂಚದಲ್ಲಿಯೂ, ಅವಳ ಸಂಗಡ ವ್ಯಭಿಚಾರ ಮಾಡುವವರನ್ನು, ಅವರ ಕ್ರಿಯೆಗಳನ್ನು ಬಿಟ್ಟು
೨೩ ಮಾನಸಾಂತರ ಪಡದೆ ಹೋದರೆ, ಮಹಾ ಉಪದ್ರದಲ್ಲಿಯೂ ಹಾಕುತ್ತೇನೆ. ಮತ್ತು ಅವಳ [7]ಮಕ್ಕಳನ್ನು
ಕೊಂದೇ ಕೊಲ್ಲುವೆನು. ಆಗ [8]ಅಂತರಿಂದ್ರಿಯಗಳನ್ನೂ ಹೃದಯಗಳನ್ನೂ ಶೋಧಿಸುವವನು ನಾನೇ ಎಂದು
ಸಕಲ ಸಭೆಗಳು ತಿಳಿಯುವವು. ಮತ್ತು ನಿಮ್ಮಲ್ಲಿ ಒಬ್ಬೊಬ್ಬನಿಗೆ ನಿಮ್ಮ ಕ್ರಿಯೆಗಳ ಪ್ರಕಾರವೇ ಕೊಡುವೆನು.
೨೪ ಇದಲ್ಲದೆ ನಿಮಗೂ, ಈ [9]ಬೋಧನೆಯನ್ನು ಕೈಕೊಳ್ಳದೆ, ಸೈತಾನನ ಅಗಾಧಗಳೆಂದು ಅವರು ಹೇಳುವವು

1. ಥುವತ್ತೈರ ಪಟ್ಟಣವು ಪೆರ್ಗಮಕ್ಕೆ ತೆಮ್ಕೂಡಲಲ್ಲಿ ೫೦ ಮೈಲುಗಳ ದೂರದಲ್ಲಿತ್ತು. ಪರಿಶುದ್ಧಾತ್ಮನ ಕೃಪೆ ಹೊಂದಿ ಶ್ರೇಷ್ಠ ಭಕ್ತಳಾಗಿದ್ದ ಲೂದ್ಯಳೆಂಬವಳು ಆ ಪಟ್ಟಣದವಳಾಗಿದ್ದಳು. (ಅಪೊ. ಕ್ರಿ. ೧೬. ೧೪. ವಚನದ ವ್ಯಾಖ್ಯಾನ ನೋಡ ಬೇಕು.) ಈಗ ಅದರ ಹಳೇ ಮನೆಗಳೂ ದೇವಾಲಯಗಳೂ ಇದ್ದ ಸ್ಥಳವು ಸಹ ಕಾಣದಂತೆ ಹಾಳಾಗಿ ಹೋದವು. ಅದರಲ್ಲಿ ಮಹಮ್ಮದಿಯರಿಗೆ ಎಂಟು ಮಸೀದಿಗಳುಂಟು. ಕ್ರೈಸ್ತರಿಗೆ ದೇವಾಲಯವಿಲ್ಲ. ಹೆಸರುಕ್ರೈಸ್ತರು ಕೆಲವರಿದ್ದಾರೆ. ಆ ಸಭೆಯ ದೀಪಸ್ತಂಭವು ಪೂರ್ಣವಾಗಿ ತೊಲಗಿಸಲ್ಪಟ್ಟಿತು.

2. ದೇವರ ಮಗನಾದ ಕ್ರಿಸ್ತನು ಸಮಸ್ತ ಕಾರ್ಯಗಳನ್ನೂ ಸೂಕ್ಷ್ಮವಾಗಿ ತಿಳಿಯ ತಕ್ಕ ಬೆಂಕಿಯ ಉರಿಯ ಹಾಗಿರುವ ಕಣ್ಣುಗಳೂ, ಪರಿಶುದ್ಧವೂ ನೀತಿಯೂ ಬಲವೂ ಉಳ್ಳ ಪ್ರಕಾಶವಾದ ಬಿಳೀ ಹಿತ್ತಾಳಿಯ ಹಾಗಿರುವ ಪಾದಗಳೂ ಉಳ್ಳವನಾಗಿ ಕಾಣಲ್ಪಟ್ಟನು.

3. ಥುವತ್ತೈರದ ಸಭೆಯ ಪ್ರೀತಿಯೂ ಸೇವೆಯೂ ವಿಶ್ವಾಸವೂ ತಾಳ್ಮೆಯೂ ಹೆಚ್ಚೆಚ್ಚಾಗಿ ಅಭಿವೃದ್ಧಿಯಾದವೆಂದು ತಿಳಿಯ ತಕ್ಕದ್ದು. ಪ್ರೀತಿಯು ಸೇವೆಯಲ್ಲಿಯೂ, ವಿಶ್ವಾಸವು ತಾಳ್ಮೆಯಲ್ಲಿಯೂ, ಪ್ರೀತಿಯೂ ವಿಶ್ವಾಸವೂ ಸತ್ಕ್ರಿಯೆಗಳಲ್ಲಿಯೂ ಪ್ರಕಟವಾಗಿ ಹೆಚ್ಚುತ್ತಾ ಬಂದವು.

4. ಇಜೆಬೇಲೆಂಬವಳು ಚಿದೋನ್ಯರ ಅರಸನಾದ ಎತ್ಬಾಳನ ಮಗಳಾಗಿಯೂ, ಅರಸನಾದ ಅಹಾಬನ ಹೆಂಡತಿಯಾಗಿಯೂ ಇದ್ದಳು. (೧ಅರ. ೧೬. ೩೧.) ಒಂದು ವೇಳೆ ಅವಳು ತನ್ನನ್ನು ಪ್ರವಾದಿನಿ ಎಂದು ಹೇಳಿರುವಳು. ಅವಳು ವ್ಯಭಿಚಾರಿಗಳಿಗೂ ಶೂನ್ಯಗಳಿಗೂ ಭಕ್ತರನ್ನು ಉಪದ್ರ ಪಡಿಸುವದಕ್ಕೂ ಮಹಾ ಸಮರ್ಥಳೆಂದು ಹೆಸರು ಹೊಂದಿದವಳೇ. (೨ಅರ. ೯. ೨೨.) ಅವಳಿಂದ ಇಸ್ರಾಯೇಲ್ಯರಲ್ಲಿ ಅನೇಕಾನೇಕರು ಕೆಟ್ಟು ಹೋದರು. ಕಡೆಯಲ್ಲಿ ಅವಳು ಸಹ ನಾಶವಾದಳು. ಅವಳ ಹಾಗಿದ್ದ ಒಬ್ಬ ಸ್ತ್ರೀಯು ಥುವತ್ತೈರದ ಸಭೆಯಲ್ಲಿದ್ದು, ಜಾರತ್ವಗಳಿಂದಲೂ ಮಾಟಗಳಿಂದಲೂ ಅನೇಕರನ್ನು ಕೆಡಿಸಿರುವಳು. ಅವಳನ್ನು ಕುರಿತು ಹೀಗೆ ಹೇಳಿರ ಬಹುದು. ಅಥವಾ ಸುಳ್ಳೂ ವಂಚನೆಯೂ ಆದ ಬೋಧನೆಯನ್ನು ಇಜೆಬೇಲೆಂಬುವ ಕೆಟ್ಟ ಸ್ತ್ರೀಗೆ ಉಪಮಾನವಾಗಿ ಹೇಳಿರ ಬಹುದು.

5. ಪಾಪಕ್ಕೆ ತಕ್ಕ ದಂಡನೆ ಸಂಗಡಲೇ ಬಾರದೆ ಇರುವದಕ್ಕೆ ಇದೇ ಕಾರಣ. (೨ ಪೇತ್ರ. ೩. ೯.) ಆ ಜಾರೆಗೆ ಮಾನಸಾಂತರ ಪಡ ತಕ್ಕ ಕಾಲವಿದ್ದಾಗ್ಯೂ, ಮಾನಸಾಂತರ ಪಡ ಮನಸ್ಸಿಲ್ಲದವಳಾಗಿದ್ದಳು. ಶಕ್ತಿ ಇಲ್ಲದ್ದರಿಂದಲ್ಲ, ಮನಸ್ಸಿಲ್ಲದ್ದರಿಂದಲೇ ಮಾನಸಾಂತರ ಪಡಲಿಲ್ಲ. (ಮತ್ತಾ. ೨೩. ೩೭. ವಚನದ ವ್ಯಾಖ್ಯಾನ ನೋಡ ಬೇಕು.)

6. ಸಂತೋಷವೂ ಭೋಗವೂ ಜಾರತ್ವವೂ ಉಳ್ಳ ಮಂಚವು, ವ್ಯಾಧಿಯೂ ಉಪದ್ರವೂ ತುಂಬಿದ ಮಂಚವಾಗುವದು. ಆ ಜಾರೆಗೆ ಪ್ರಾಪ್ತಿಸಿದ ಶ್ರಮೆಯೂ ದುಃಖವೂ, ಅವಳ ಪಾಪಗಳಲ್ಲಿ ಪಾಲುಗಾರರಾಗಿದ್ದವರೆಲ್ಲರಿಗೂ ಪ್ರಾಪ್ತಿಸುವವು. ಪಾಪದ ಪ್ರಾರಂಭವು ಸಂತೋಷವಾಗಿದ್ದರೆ, ಅದರ ಅಂತ್ಯವು ಭಯಂಕರವಾದ ಉಪದ್ರವೇ ಆಗುವದು.

7. ಇದು ಆ ಜಾರೆಯು ಹೆತ್ತ ಮಕ್ಕಳನ್ನಾದರೂ, ಅವಳನ್ನು ಹಿಂಬಾಲಿಸಿದ ಶಿಷ್ಯರನ್ನಾದರೂ ಸೂಚಿಸುತ್ತದೆ. ಅವರು ಮಾನಸಾಂತರ ಪಡದಿದ್ದರೆ, ಅವರಿಗೆ ಕಠಿಣ ನಾಶವು ನಿಶ್ಚಯವಾಗಿ ಬರುವದೆಂಬುವದಕ್ಕೆ, ಅವರನ್ನು ಕೊಲ್ಲಲೇ ಕೊಲ್ಲುವೆನು ಎಂದು ಹೇಳಿ ಇದೆ.

8. ಅಂತರಿಂದ್ರಿಯಗಳನ್ನೂ ಹೃದಯಗಳನ್ನೂ ಶೋಧಿಸುವದೂ, ಒಬ್ಬೊಬ್ಬನಿಗೂ ಅವನವನ ಕ್ರಿಯೆಗಳ ಪ್ರಕಾರ ಫಲ ಕೊಡುವದೂ, ಮಹಾ ದೇವರಾದ ಯೆಹೋವನ ಕೆಲಸವೇ. (೧ ಅರ. ೮. ೪೦. ಯೆರೆ. ೧೭. ೧೦. ಕೀರ್ತ. ೬೨. ೧೨.) ಈ ಲಕ್ಷಣಗಳು ಕ್ರಿಸ್ತನ ವಿಷಯದಲ್ಲಿಯೂ ಹೇಳಲ್ಪಟ್ಟಿರುವದರಿಂದ ಆತನು ಮಹಾ ದೇವರಾದ ಯೆಹೋವನೆಂಬುವದು ಪ್ರತ್ಯಕ್ಷವಾಗಿದೆ.

9. ಈ ಬೋಧನೆ ಎಂಬುವದು, ಮನುಷ್ಯರ ಆತ್ಮಗಳನ್ನು ವಂಚಿಸಿ, ನರಕದ ಮಕ್ಕಳಾಗ ಮಾಡುವ ಸೈತಾನನ ಅಗಾಧಗಳೆಂಬ ಮೋಸಕರವಾದ ಬೋಧನೆಗಳನ್ನು ಸೂಚಿಸುತ್ತದೆ. ಇಂಥಾ ತಪ್ಪಾದ ಬೋಧನೆಗಳನ್ನು ಅನುಸರಿಸದ ಕೆಲ ಉತ್ತಮ ಭಕ್ತರು ಥುವತ್ತೈರದ ಸಭೆಯಲ್ಲಿದ್ದರು.



ಗಳನ್ನು ತಿಳಿಯದೆ, ಥುವತ್ತೈರದಲ್ಲಿ ಇರುವ ಮಿಕ್ಕಾದವರಿಗೂ, ನಾನು ಹೇಳುವದೇನಂದರೆ—[1]ಬೇರೆ ಭಾರ
೨೫ ವನ್ನು ನಿಮ್ಮ ಮೇಲೆ ಹಾಕೆನು. ಆದರೆ ನಿಮಗುಂಟಾದದ್ದನ್ನು [2]ನಾನು ಬರುವ ಪರ್ಯಂತರ ಹಿಡಿದು
ಕೊಳ್ಳಿರಿ.
೨೬ ಮತ್ತು ಜಯಿಸಿ, ಅಂತ್ಯದ ಪರ್ಯಂತರ ನನ್ನ ಕ್ರಿಯೆಗಳನ್ನು ಕೈಕೊಳ್ಳುವವನಿಗೆ ಜನಾಂಗಗಳ ಮೇಲೆ ಅಧಿ
೨೭ ಕಾರವನ್ನು ಕೊಡುವೆನು. ನಾನೂ ನನ್ನ ತಂದೆಯಿಂದ ಹೊಂದಿದ ಮೇರೆಗೆ, ಅವನು ಕುಂಬಾರನ ಪಾತ್ರೆ
ಗಳು ಒಡೆಯಲ್ಪಡುವ ಪ್ರಕಾರ, [3]ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು. (ಕೀರ್ತ. ೨. ೮, ೯.)
೨೮, ೨೯ ಮತ್ತು [4]ಉದಯನಕ್ಷತ್ರವನ್ನು ಅವನಿಗೆ ಕೊಡುವೆನು. ಕಿವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳು
ವದನ್ನು ಕೇಳಲಿ.

3. ಮತ್ತು [5]ಸಾರ್ದಿಯಲ್ಲಿರುವ ಸಭೆಯ ದೂತನಿಗೆ ಬರೆ—ದೇವರ [6]ಏಳು ಆತ್ಮಗಳೂ ಏಳು ನಕ್ಷತ್ರಗಳೂ
ಉಂಟಾದವನು ಹೇಳುವದೇನಂದರೆ—
ನಿನ್ನ ಕ್ರಿಯೆಗಳನ್ನೂ, ನೀನು ಬದುಕುತ್ತೀ ಎಂದು ಹೆಸರನ್ನು ಹೊಂದಿ, ಸತ್ತವನಾಗಿದ್ದೀ ಎಂಬುವದನ್ನೂ,
೨ ಬಲ್ಲೆನು. ಎಚ್ಚರಿಕೆಯಾಗಿರು; [7]ಸಾಯಲಾಗಿರುವ ಉಳಿದವುಗಳನ್ನು ದೃಢ ಪಡಿಸು. ಯಾಕಂದರೆ ನಿನ್ನ
೩ ಕ್ರಿಯೆಗಳು ದೇವರ ಸನ್ನಿಧಿಯಲ್ಲಿ ಸಂಪೂರ್ಣವಾದವುಗಳೆಂದು ನಾನು ಕಾಣಲಿಲ್ಲ. ಆದದರಿಂದ ನೀನು
ಹ್ಯಾಗೆ ಹೊಂದಿ, ಕೇಳಿದ್ದೀ ಎಂದು, ಜ್ಞಾಪಕ ಮಾಡಿ ಕೊಂಡು, ಕೈಕೊಂಡು, ಮಾನಸಾಂತರ ಪಡು.
ನೀನು ಎಚ್ಚರಿಕೆಯಾಗದಿದ್ದರೆ, [8]ಕಳ್ಳನಂತೆ ನಿನ್ನ ಮೇಲೆ ಬರುವೆನು. ಮತ್ತು ಯಾವ ಘಳಿಗೆಯಲ್ಲಿ ನಿನ್ನ

1. ಇಂಥಾ ದುರ್ಮಾರ್ಗವನ್ನೂ, ಆತ್ಮವನ್ನು ಕೊಲ್ಲುವ ಕೆಟ್ಟ ವಿಷವಾದ ಸುಳ್ಳು ಬೋಧನೆಯನ್ನೂ ದೃಢವಾಗಿ ಎದುರಿಸಿ, ಆತ್ಮವನ್ನು ಕಳಂಕ ಪಡಿಸದೆ ಕಾದು ಕೊಳ್ಳ ಬೇಕಾದ ಭಾರವನ್ನೇ ಹೊರ್ತು, ಬೇರೆ ಭಾರವನ್ನು ನಿಮ್ಮ ಮೇಲೆ ಹಾಕುವದಿಲ್ಲವೆಂದು, ಭಕ್ತರಿಗೆ ಉತ್ಸಾಹ ಉಂಟಾಗ ತಕ್ಕದ್ದಾಗಿ ಕರ್ತನು ಹೇಳುತ್ತಾನೆ.

2. ನಾನು ಬಂದು ನಿಮ್ಮನ್ನು ನನ್ನ ಬಳಿಯಲ್ಲಿ ಶೇರಿಸಿ ಕೊಂಡು, ಜನಾಂಗಗಳ ಮೇಲೆ ಅಧಿಕಾರ ಕೊಡುವ ಪರ್ಯಂತರ (೨೬. ವ.) ನೀವು ನಿಮ್ಮ ವಿಶ್ವಾಸವನ್ನೂ ಯಥಾರ್ಥತ್ವವನ್ನೂ ದೃಢವಾಗಿ ಹಿಡಿದು ಕೊಳ್ಳ ಬೇಕೆಂದು ಕ್ರಿಸ್ತನು ಹೇಳುತ್ತಾನೆ.

3. ಮೆಸ್ಸೀಯನಾದ ಲೋಕರಕ್ಷಕನು ಪರಮ ತಂದೆಯಿಂದ ಹೊಂದಿದ ಅಧಿಕಾರದ ಹಾಗೆ (ಕೀರ್ತ. ೨. ೮, ೯.) ಆತನ ಕೃಪೆಯಿಂದ ಪಾಪ, ಪಿಶಾಚ, ಲೋಕವೆಂಬ ಶತ್ರುಗಳನ್ನು ಜಯಿಸುವ ಭಕ್ತನು ಅಧಿಕಾರ ಹೊಂದುವನು. ಈ ಅಧಿಕಾರಕ್ಕೆ ಅಣಗದಂಥ ದುಷ್ಟರೆಲ್ಲರು ಕಬ್ಬಿಣದ ಕೋಲಿನಿಂದ ಬಡಿಯಲ್ಪಟ್ಟು ಪುಡಿ ಪುಡಿಯಾಗುವ ಮಣ್ಣಿನ ಪಾತ್ರೆಗಳ ಹಾಗೆ ನಾಶವಾಗುವರು.

4. ರಕ್ಷಕನಾದ ಕ್ರಿಸ್ತನೇ ಉದಯದ ನಕ್ಷತ್ರವಾಗಿ ಪ್ರಕಾಶಿಸುವವನು. (೨೨. ೧೬. ವಚನದ ವ್ಯಾಖ್ಯಾನ ನೋಡ ಬೇಕು.) ಆತನೇ ನಿತ್ಯವೆಂಬ ದಿವಸಕ್ಕೆ ಉದಯನಕ್ಷತ್ರದ ಹಾಗಿರುವವನು. ಉದಯನಕ್ಷತ್ರದಿಂದ ಸೂಚಿಸಲ್ಪಟ್ಟ ರಾಜಾಧಿಕಾರವನ್ನೂ ಶ್ರೇಷ್ಠತ್ವವನ್ನೂ ಕ್ರಿಸ್ತನ ಭಕ್ತರೆಲ್ಲರೂ, ತಮ್ಮ ಪರಮ ಅರಸನಾದ ಕ್ರಿಸ್ತನಿಂದ ಹೊಂದುವರು. ಅವರ ತಲೆಗಳ ಮೇಲೆ ಮಹಿಮೆಯ ಕಿರೀಟವು ಇಡಲ್ಪಡುವಾಗ, ಅವರು ಆಕಾಶದಲ್ಲಿರುವ ನಕ್ಷತ್ರಗಳ ಹಾಗೆ ಪ್ರಜ್ವಲಿಸುವರು. ಭಕ್ತರಿಗೆ ಇಂಥಾ ಮಹಿಮೆಯು ಸುವರ್ಣಲೋಕದಲ್ಲಿ ಉಂಟಾಗುವದರಿಂದ ಅದನ್ನು ಭೂಲೋಕದಲ್ಲಿ ಹೊಂದಲು ಅಪೇಕ್ಷಿಸುವದು ಸರಿಯಲ್ಲ. ಆ ಮಹಿಮೆಗೆ ಪಾಲುಗಾರರಾಗುವದಕ್ಕೆ ಈ ಲೋಕದಲ್ಲಿ ಕಷ್ಟ, ಶ್ರಮೆ, ನಿಂದೆ, ಅವಮಾನಗಳನ್ನು ಅನುಭವಿಸ ಬೇಕಾದರೆ, ಸಂತೋಷ ಪಡ ಬೇಕು.

5. ಸಾರ್ದಿ ಪಟ್ಟಣವು ಲೂದ್ಯ ರಾಜ್ಯಕ್ಕೆ ಮುಖ್ಯ ನಗರವಾಗಿತ್ತು; ಈಗ ಸಣ್ಣ ಗ್ರಾಮವಾಗಿದೆ; ತುರುಕರ ಅಧೀನದಲ್ಲಿ ಇರುತ್ತದೆ. ಹೆಸರುಕ್ರೈಸ್ತರು ಕೆಲವರಾಗಿ ಅಲ್ಲಿ ವಾಸ ಮಾಡುತ್ತಿದ್ದಾಗ್ಯೂ, ಅವರಿಗೆ ಒಂದು ಗುಡಿ ಇಲ್ಲ. ಈಗ ಅದಕ್ಕೆ ಸಾರ್ತ್ ಎಂಬ ಹೆಸರುಂಟು.

6. ಏಳು ಆತ್ಮಗಳುಂಟಾದ ಯೇಸು ರಕ್ಷಕನು ಏಳು ನಕ್ಷತ್ರಗಳಾದ ಸಭೆಗಳಿಗೆ ಆತ್ಮದ ಜೀವವನ್ನು ಕೊಡುವವನಾಗಿದ್ದಾನೆ. ಸಾರ್ದಿ ಸಭೆಯ ಸ್ಥಿತಿಗೆ ತಕ್ಕದ್ದಾಗಿ ಕ್ರಿಸ್ತನ ಲಕ್ಷಣಗಳಲ್ಲಿ ಒಂದು ಲಕ್ಷಣವನ್ನು ತೋರಿಸಿ ಇದೆ. ಆ ಸಭೆಯು ಸುಳ್ಳು ಬೋಧನೆಗಳನ್ನು ಅನುಸರಿಸಿ ಇತ್ತೆಂದೂ, ಅಥವಾ ಅಕ್ರಮ ಕ್ರಿಯೆಗಳನ್ನು ನಡಿಸಿತೆಂದೂ ಹೇಳದೆ ಇದ್ದಾಗ್ಯೂ, ಆತ್ಮದ ಪ್ರಕಾರ ಜೀವವಿಲ್ಲದಂಥ ಸತ್ತ ಸ್ಥಿತಿಯಲ್ಲಿ ಇತ್ತೆಂದು ಹೇಳಿ ಇದೆ. ಅದು ಕ್ರಿಸ್ತನ ಸಭೆ ಎಂಬ ಹೆಸರು ಹೊಂದಿದ್ದಾಗ್ಯೂ, ಅದರ ಸಾರವನ್ನೂ ಸತ್ವವನ್ನೂ ಗ್ರಹಿಸಲಿಲ್ಲ.

7. ಉತ್ತಮ ಭಕ್ತರಲ್ಲಿ ಇನ್ನೂ ಕೆಲವರು ಉಳಿದಿದ್ದರು. ಅವರ ಭಕ್ತಿ ಅಭಿವೃದ್ಧಿಯಾಗುವದಕ್ಕೆ ಹೇತುವೆಯಾಗಿ ಅವರಿಗೆ ಸತ್ಯವನ್ನು ಬೋಧಿಸ ಬೇಕೆಂದು ದೇವರು ಅಪ್ಪಣೆ ಕೊಡುತ್ತಾನೆ. ಸ್ವಲ್ಪ ಉರಿಯುವ ಬತ್ತಿಗೆ ಎಣ್ಣೆಯನ್ನು ಹೊಯಿದು ಚನ್ನಾಗಿ ಉರಿಯುವಂತೆ ಮಾಡುವ ಪ್ರಕಾರ, ಬಲಹೀನ ವಿಶ್ವಾಸಿಗಳಿಗೆ ದಿವ್ಯ ವಾಕ್ಯವೆಂಬ ಆತ್ಮಾಹಾರವನ್ನು ಕೊಟ್ಟು ಅವರನ್ನು ಬಲ ಪಡಿಸುವದು ಉತ್ತಮ ಬೋಧಕರ ಮುಖ್ಯ ಹಂಗಾಗಿದೆ.

8. ಆದಿಯಲ್ಲಿ ಕೇಳಿ ತಿಳಿದು ಕೊಂಡ ದಿವ್ಯ ಸತ್ಯಗಳನ್ನು ದೃಢವಾಗಿ ಹಿಡಿಯದೆ, ಅವುಗಳನ್ನು ಬಿಟ್ಟು ಬಿಟ್ಟವರು ಗುಣಪಡದೆ ಇದ್ದರೆ, ಕರ್ತನಾದ ಕ್ರಿಸ್ತನು ಕಳ್ಳನಂತೆ ಆಕಸ್ಮಿಕವಾಗಿ ಬಂದು ಅವರನ್ನು ಶಿಕ್ಷಿಸುವನು.

೪ ಮೇಲೆ ಬರುವೆನೋ, ಅರಿಯದೆ ಇರುವಿ. ತಮ್ಮ ವಸ್ತ್ರಗಳನ್ನು ಕಳಂಕ ಮಾಡಿ ಕೊಳ್ಳದ [1]ಕೆಲವು ಮಂದಿ
ಸಾರ್ದಿಯಲ್ಲಿಯೂ ನಿನಗಿದ್ದಾರೆ. ಅವರು ಪಾತ್ರರಾಗಿರುವದರಿಂದ, ನನ್ನ ಸಂಗಡ ಬಿಳೀ ವಸ್ತ್ರಗಳಲ್ಲಿ ಸಂಚ
ರಿಸುವರು.
೫ ಜಯಿಸುವವನ್ಯಾವನೋ, ಅವನು [2]ಬಿಳೀ ವಸ್ತ್ರಗಳನ್ನು ಧರಿಸಿ ಕೊಳ್ಳುವನು; ಮತ್ತು ಅವನ ಹೆಸರನ್ನು
[3]ಜೀವದ ಪುಸ್ತಕದಿಂದ ಅಳಿಸೆನು; ಮತ್ತು ಅವನ ಹೆಸರನ್ನು ನನ್ನ ತಂದೆಯ ಸನ್ನಿಧಿಯಲ್ಲಿಯೂ, ಅವನ ದೂ
೬ ತರ ಸನ್ನಿಧಿಯಲ್ಲಿಯೂ ಅರಿಕೆ ಮಾಡುವೆನು. ಕಿವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳುವದನ್ನು ಕೇಳಲಿ.
೭ ಮತ್ತು [4]ಫಿಲದೆಲ್ಫ್ಯದಲ್ಲಿರುವ ಸಭೆಯ ದೂತನಿಗೆ ಬರೆ—ಪರಿಶುದ್ಧನೂ, ಸತ್ಯವಂತನೂ, [5]ದಾವೀದನ
ಬೀಗದ ಕೈ ಉಂಟಾದವನೂ, ಯಾರೂ ಮುಚ್ಚದ ಹಾಗೆ ತೆರೆಯುವವನೂ, ಯಾರೂ ತೆರೆಯದ ಹಾಗೆ
ಮುಚ್ಚುವವನೂ, ಆಗಿರುವವನು ಹೇಳುವದೇನಂದರೆ—
೮ ನಿನ್ನ ಕ್ರಿಯೆಗಳನ್ನು ಬಲ್ಲೆನು. ಇಗೋ, ಯಾರೂ ಮುಚ್ಚಲಾರದ [6]ತೆರೆದಿರುವ ಬಾಗಲನ್ನು ನಿನ್ನ ಮುಂ
ದೆ ಇರಿಸಿದ್ದೇನೆ. ಯಾಕಂದರೆ [7]ಸ್ವಲ್ಪ ಬಲ ಉಂಟಾದವನಾಗಿ, ನೀನು ನನ್ನ ವಾಕ್ಯವನ್ನು ಕೈಕೊಂಡು,
೯ ನನ್ನ ಹೆಸರನ್ನು ಬೊಂಕಲಿಲ್ಲ. ಇಗೋ, ಯೆಹೂದ್ಯರಾಗಿರದೆ, ತಾವು ಯೆಹೂದ್ಯರನ್ನಿಸಿ ಕೊಂಡು, ಸುಳ್ಳು
ಹೇಳುವವರಾದ ಸೈತಾನನ [8]ಸಭೆಯವರನ್ನು ಒಪ್ಪಿಸುತ್ತೇನೆ. ಇಗೋ, ಅವರು ಬಂದು, ನಿನ್ನ ಪಾದಗಳ

1. ಪಾಪದಿಂದ ಮೈಲಿಗೆಯಾದವರಾಗಿ ಆತ್ಮದ ಜೀವವಿಲ್ಲದೆ ಇದ್ದ ಸಭೆಯಲ್ಲಿ, ಪಾಪದ ಮೈಲಿಗೆ ಇಲ್ಲದ ಪರಿಶುದ್ಧರು ಕೆಲವು ಮಂದಿ ಇದ್ದರು. ಮಹಿಮೆಗೆ ಪಾತ್ರರಾದ ಅವರು ಬಿಳೀ ವಸ್ತ್ರಗಳನ್ನು ಧರಿಸಿ, ಸುವರ್ಣಲೋಕದಲ್ಲಿ ಸುಖವಾಗಿ ಬಾಳುವರು.

2. ಬಿಳೀ ವಸ್ತ್ರವೆಂಬುವದು, ಶುದ್ಧತ್ವವನ್ನೂ ಸಂತೋಷವನ್ನೂ ರಾಜತ್ವವನ್ನೂ ಸೂಚಿಸುತ್ತದೆ. (೪. ೪; ೧೯. ೮. ಸೊಲೊ. ಗೀತ. ೫. ೧೪.) ಬೆಳಕಿನ ಮಕ್ಕಳು ಬೆಳಕಿನ ವಸ್ತ್ರವನ್ನು ಧರಿಸಿ ಕೊಂಡು, ಹೊಸ ಯೆರೂಸಲೇಮಿನಲ್ಲಿ ಪೂರ್ಣ ಶುದ್ಧವೂ, ಸಂತೋಷವೂ, ರಾಜಮಹಿಮೆಯೂ ಹೊಂದಿ ವಿರಾಜಿಸುವರು.

3. ಪಟ್ಣವಾಸಿಗಳೆಂಬ ಶ್ಲಾಘ್ಯವನ್ನು ಹೊಂದಿದವರ ಹೆಸರುಗಳನ್ನು ಒಂದು ಪುಸ್ತಕದಲ್ಲಿ ಬರೆಯುವದೂ, ಸಜ್ಜನರ ಹೆಸರುಗಳನ್ನು ಪ್ರಸ್ತಾಪ ಪಡಿಸುವದೂ, ದುರ್ಜನರ ಹೆಸರುಗಳನ್ನು ಅಳಿಸಿ ಬಿಡುವದೂ, ಪೂರ್ವಿಕರಲ್ಲಿ ಪದ್ಧತಿ ಇತ್ತು. ಇದು ಯೆಹೂದ್ಯರಲ್ಲಿಯೂ ಇತ್ತು. (ಹೊರ. ೩೨. ೩೨. ಯೆಶಾ. ೪. ೩.) ಇದೇ ಪ್ರಕಾರ ಮೋಕ್ಷಪಟ್ಣದ ಬಾಧ್ಯತೆಯನ್ನೂ ನಿತ್ಯಜೀವವನ್ನೂ ಹೊಂದುವವರ ಹೆಸರನ್ನು ದೇವರು ಒಂದು ಪುಸ್ತಕದಲ್ಲಿ ಬರೆದಿರುವ ಭಾವನೆಯಾಗಿ ಹೇಳಿ ಇದೆ. ಪಾಪದಿಂದ ಕಳಂಕವಾಗದೆ, ಕ್ರಿಸ್ತನ ನೀತಿಯ ವಸ್ತ್ರವನ್ನು ಧರಿಸಿರುವ ಉತ್ತಮ ಭಕ್ತರ ಹೆಸರುಗಳು ಆ ಪುಸ್ತಕದಲ್ಲಿ ಬರೆಯಲ್ಪಟ್ಟಿರುವವು.

4. ಫಿಲದೆಲ್ಫ್ಯ ಪಟ್ಣವು ಸಾರ್ದಿ ಪಟ್ಣಕ್ಕೆ ತೆಮ್ಮೂಡಲಾಗಿ ೨೫ ಮೈಲುಗಳ ದೂರದಲ್ಲಿತ್ತು. ಅದು ಲೂದ್ಯದ ಮುಖ್ಯ ಪಟ್ಣಗಳಲ್ಲಿ ಎರಡನೇದಾಗಿತ್ತು. ಈಗ ಅದಕ್ಕೆ ಅಲ್ಲಷೇರ್ ಎಂಬ ಹೆಸರುಂಟು. ಆ ಸಭೆಯು ದೇವರ ತಾಳ್ಮೆಯ ವಾಕ್ಯವನ್ನು ಕಾದುಕೊಂಡದರಿಂದ, ಭೂನಿವಾಸಿಗಳನ್ನು ಶೋಧಿಸುವದಕ್ಕೆ ಭೂಚಕ್ರದ ಮೇಲೆ ಎಲ್ಲಿಯೂ ಬರಲಾಗಿರುವ ಶೋಧನೆಯ ಕಾಲಕ್ಕೆ ತಪ್ಪುವಂತೆ, ನಾನು ನಿನ್ನನ್ನು ಕಾಯುವೆನು ಎಂಬ ವಾಗ್ದತ್ತವು ಅದಕ್ಕುಂಟಾಯಿತು. ಆ ವಾಗ್ದತ್ತದ ಪ್ರಕಾರ ಆ ಸಭೆಗೆ ಸಂಭವಿಸಿತೆಂದು ಚರಿತ್ರೆಯಿಂದ ತಿಳಿಯ ಬಹುದು. ರೋಮಾಯ ಅರಸರಿಂದ ಬೇರೆ ಸಭೆಗಳಿಗೆ ಉಪದ್ರ ಸಂಭವಿಸಿದಾಗ, ಆ ಸಭೆಗೆ ಯಾವ ವಿಘ್ನವಿಲ್ಲದೆ ಸುಖವಾಗಿತ್ತು. ಮಹಮ್ಮದಿಯರಿಂದ ಉಂಟಾದ ಉಪದ್ರದಲ್ಲಿಯೂ ಅದಕ್ಕೆ ಯಾವ ನಷ್ಟವೂ ಆಗಲಿಲ್ಲ. ಅದು ಯಥಾರ್ಥವಾಗಿ ನಡಿಯುತ್ತಿದ್ದ ಕಾಲದ ಮಟ್ಟಿಗೂ, ದೇವರು ತನ್ನ ವಾಗ್ದತ್ತದ ಪ್ರಕಾರ ಅದನ್ನು ಕಾಪಾಡಿದನು. ೧೩೯೨ನೇ ವರುಷದಲ್ಲಿ ಅದು ತುರ್ಕರ ವಶವಾಯಿತು. ಈಗ ಅದರಲ್ಲಿ ನಾಲ್ಕು ದೇವಾಲಯಗಳೂ, ಕ್ರೈಸ್ತರ ೨೦೦ ಮನೆಗಳೂ ಉಂಟು.

5. ಬೀಗದ ಕೈ ಎಂಬದು, ಅಧಿಕಾರವನ್ನೂ ಬಲವನ್ನೂ ಕುರಿತದ್ದು. (೧. ೧೮. ಮತ್ತಾ. ೧೬. ೧೯.) ಇದು ಯೆಶಾ. ೨೨. ೨೨. ವಚನದ ಹಾಗಿದೆ. ಆ ವಾಕ್ಯದಲ್ಲಿ ಎಲ್ಯಕೀಮನಿಗೆ ದೊರಕುವ ಯೆಹೂದದ ರಾಜ್ಯಭಾರವನ್ನು ದಾವೀದನ ಬೀಗದ ಕೈಗೆ ಉಪಮಾನವಾಗಿ ಹೇಳಿ ಇದೆ. ಇದು ದಾವೀದನ ಕುಲದಲ್ಲಿ ಹುಟ್ಟಿ ಅವನ ಸಿಂಹಾಸನದಲ್ಲಿ ಎಂದೆಂದಿಗೂ ಆಸೀನನಾಗಿರುವ ಕ್ರಿಸ್ತನು ಸರ್ವಲೋಕದ ಮೇಲೆಯೂ ಸಭೆಯ ಮೇಲೆಯೂ ಹೊಂದಿರುವ ಸರ್ವಾಧಿಕಾರವನ್ನು ಸೂಚಿಸುತ್ತದೆ. (ಮತ್ತಾ. ೨೮. ೧೮.) ಸಮಸ್ತವೂ ಆತನ ಆಜ್ಞಾಚಕ್ರದಲ್ಲಿ ಅಡಗಿ ಇದೆ.

6. ತೆರೆದಿರುವ ಬಾಗಲು ಎಂಬುವದು, ಕ್ರಿಸ್ತನ ಮಾರ್ಗವನ್ನು ಪ್ರಸಿದ್ಧ ಮಾಡ ತಕ್ಕ ಒಳ್ಳೇ ಸಮಯಗಳನ್ನೂ ಅನುಕೂಲಗಳನ್ನೂ ಸೂಚಿಸುತ್ತದೆ. (೧ ಕೊರಿ. ೧೬. ೯. ೨ ಕೊರಿ. ೨. ೧೨. ಕೊಲೊ. ೪. ೩.)

7. ಆ ಸಭೆಯಲ್ಲಿದ್ದ ಭಕ್ತರು ಕೊಂಚ ಮಂದಿಯಾಗಿಯೂ ಜ್ಞಾನದ ವಿಷಯದಲ್ಲಿ ಬಲಹೀನರಾಗಿಯೂ ಇದ್ದರೆಂದು ತೋರುತ್ತದೆ. ಆದಾಗ್ಯೂ ಅವರು ತಮ್ಮ ಬಲಹೀನತ್ವವನ್ನು ತಿಳಿದು ಕೊಂಡ ಉತ್ತಮರಾದದರಿಂದ, ಅವರು ದೇವರ ವಾಕ್ಯವನ್ನು ಕೈಕೊಳ್ಳುವಂತೆ, ಅವರ ಬಲಹೀನತ್ವದಲ್ಲಿ ದೇವರು ತನ್ನ ಬಲವನ್ನು ಸಂಪೂರ್ಣವಾಗಿ ತೋರುವಂತೆ ದಯ ಪಾಲಿಸಿದನು.

8. ೨. ೯. ವಚನದ ವ್ಯಾಖ್ಯಾನ ನೋಡ ಬೇಕು.



ಮುಂದೆ [1]ನಮಸ್ಕರಿಸಿ, ನಾನು ನಿನ್ನನ್ನು ಪ್ರೀತಿ ಮಾಡಿದೆನೆಂದು ತಿಳುಕೊಳ್ಳುವ ಹಾಗೆ, ಮಾಡುವೆನು.
೧೦ ನೀನು ನನ್ನ [2]ತಾಳ್ಮೆಯ ವಾಕ್ಯವನ್ನು ಕೈಕೊಂಡದರಿಂದ, ನಾನು ಸಹ ಭೂನಿವಾಸಿಗಳನ್ನು ಶೋಧಿಸುವ
ದಕ್ಕೆ ಸಮಸ್ತ ಭೂಮಿಯ ಮೇಲೆ ಬರಲಾಗಿರುವ [3]ಶೋಧನೆಯ ಘಳಿಗೆಯಿಂದ ನಿನ್ನನ್ನು ತಪ್ಪಿಸಿ ಕಾಪಾಡು
೧೧ ವೆನು. ಇಗೋ, ಬೇಗ [4]ಬರುತ್ತೇನೆ. ಯಾರಾದರೂ ನಿನ್ನ ಕಿರೀಟವನ್ನು ತಕ್ಕೊಳ್ಳದ ಹಾಗೆ, ನಿನಗುಂಟಾ
ದದ್ದನ್ನು ಹಿಡಿದುಕೋ.
೧೨ ಜಯಿಸುವವನ್ಯಾವನೋ, ಅವನನ್ನು ನನ್ನ ದೇವರ ಮಂದಿರದಲ್ಲಿ [5]ಸ್ತಂಭವಾಗಿ ಇಡುವೆನು. ಅವನು
ಅಲ್ಲಿಂದ ಇನ್ನು ಮೇಲೆ ಹೊರಟು ಹೋಗನು. ಮತ್ತು ನನ್ನ ದೇವರ ಹೆಸರನ್ನೂ, ನನ್ನ ದೇವರ ಬಳಿಯಿಂದ
ಪರಲೋಕದಿಂದಿಳಿದು ಬರುವ ಹೊಸ ಯೆರೂಸಲೇಮೆಂಬ ನನ್ನ ದೇವರ ಪಟ್ಣದ ಹೆಸರನ್ನೂ, ನನ್ನ ಹೊಸ
೧೩ ಹೆಸರನ್ನೂ, ಅವನ ಮೇಲೆ ಬರೆಯುವೆನು. ಕಿವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳುವದನ್ನು
ಕೇಳಲಿ.
೧೪ ಮತ್ತು [6]ಲವೊದಿಕ್ಯೆಯದವರ ಸಭೆಯ ದೂತನಿಗೆ ಬರೆ—[7]ಆಮೆನ್ ಎಂಬವನೂ, ನಂಬಿಕೆಯೂ ಸತ್ಯವೂ
ಉಳ್ಳ ಸಾಕ್ಷಿಯೂ, ದೇವರ ಸೃಷ್ಟಿಯ [8]ಆದಿಯೂ ಆಗಿರುವವನು ಹೇಳುವದೇನಂದರೆ—
೧೫ ನಿನ್ನ ಕ್ರಿಯೆಗಳನ್ನೂ, ನೀನು ತಂಪಲ್ಲ, [9]ಬಿಸಿಯಲ್ಲ ಎಂಬುವದನ್ನೂ ಬಲ್ಲೆನು. ನೀನು ತಂಪಾದರೂ ಬಿಸಿ
೧೬ ಯಾದರೂ ಇದ್ದರೆ, ಒಳ್ಳೇದು. ಹಾಗಾದರೆ, ನೀನು ತಂಪೂ ಬಿಸಿಯೂ ಅಲ್ಲದೆ, ಉಗುರುಬೆಚ್ಚಗೆ ಆಗಿರು

1. ದೇವರನ್ನೂ ಆತನ ದಾಸರನ್ನೂ ನಿಂದಿಸಿ, ತಾವು ಸತ್ಯಸಭೆಯವರೆಂದು ಹೆಚ್ಚಳಪಟ್ಟ ಸೈತಾನನ ಸಭೆಯವರಾದ ಯೆಹೂದ್ಯರು ಕ್ರಿಸ್ತನ ಭಕ್ತರ ಪಾದಗಳ ಮುಂದೆ ನಮಸ್ಕರಿಸಿ, ದೇವರು ನಿಮ್ಮಲ್ಲಿದ್ದಾನೆಂದು ಅರಿಕೆ ಮಾಡುವ ಹಾಗೆ ಸಂಭವಿಸುವದು.

2. ತಾಳ್ಮೆಯ ವಾಕ್ಯವೆಂಬುವದು, ಕ್ರಿಸ್ತನ ತಾಳ್ಮೆಯನ್ನೂ, ಆತನ ದಾಸರು ಆತನ ಮಹಿಮೆಗೆ ಪಾತ್ರರಾಗುವದಕ್ಕೆ ಉಪದ್ರಗಳನ್ನು ಅನುಭವಿಸುವದರಲ್ಲಿ ಇರ ತಕ್ಕ ತಾಳ್ಮೆಯನ್ನೂ ಕುರಿತು ಕಲಿಸುವ ಸುವಾರ್ತೆಯನ್ನು ಕುರಿತದ್ದು.

3. ಇದು ಒಂದು ವೇಳೆ ಕೈಸರನಾದ ತ್ರಾಜನನ ಕಾಲದಲ್ಲಿ ಸಭೆಗೆ ಪ್ರಾಪ್ತಿಸಿದ ಉಪದ್ರವನ್ನು ಸೂಚಿಸುತ್ತದೆ. ನೀರೋ, ದೋಮಿಷ್ಯನ್ ಎಂಬ ರಾಜರಿಂದ ಸಂಭವಿಸಿದ ಉಪದ್ರಗಳಿಗಿಂತ, ತ್ರಾಜನನ ಕಾಲದಲ್ಲಿ ಸಭೆಗೆ ಉಂಟಾದ ಉಪದ್ರವು ಅಧಿಕವಾಗಿಯೂ ಅಘೋರವಾಗಿಯೂ ಇತ್ತು.

4. ಉಪದ್ರವನ್ನು ತಾಳ್ಮೆಯಿಂದ ಸಹಿಸಿ, ಮರಣದ ಪರ್ಯಂತರ ಸತ್ಯವನ್ನು ಬಿಡದೆ, ಸ್ಥಿರವಾಗಿ ನಡಿಯುವ ಭಕ್ತರಿಗೆ ಜೀವದ ಕಿರೀಟವನ್ನು ಕೊಡುವದಕ್ಕೆ ಜೀವದಧಿಪತಿಯಾದ ಕ್ರಿಸ್ತನು ಬೇಗ ಬರುವನು. (೨೨. ೧೨. ೨ ತಿಮೊ. ೪. ೮.) ಆದದರಿಂದ ಆ ಮಹಿಮೆಯ ಕಿರೀಟವನ್ನು ಯಾರಾದರೂ ತಕ್ಕೊಳ್ಳದ ಹಾಗೆ, ವಿಶ್ವಾಸ, ನಂಬಿಕೆ, ತಾಳ್ಮೆಗಳನ್ನು ಅಂತ್ಯದ ಮಟ್ಟಿಗೂ ಸ್ಥಿರವಾಗಿ ಹಿಡಿದು ಕೊಳ್ಳ ಬೇಕು. ಅದನ್ನು ಅಪಹರಿಸ ತಕ್ಕ ಶತ್ರುಗಳು ಅನೇಕರಿದ್ದಾರೆ. ಆದಾಗ್ಯೂ ಭಕ್ತರು ಅದಕ್ಕೆ ಸಮ್ಮತಿಸದಿದ್ದರೆ, ಪಿಶಾಚರು ಸಹ ಅದನ್ನು ಕಸುಕೊಳ್ಳಲಾರರು.

5. ಆತ್ಮದ ಶತ್ರುಗಳನ್ನು ಜಯಿಸುವ ದೈವಭಕ್ತರು ದೇವರ ಮಂದಿರವಾಗಿರುವದಲ್ಲದೆ, (೧ ಪೇತ್ರ. ೨. ೫.) ಅದಕ್ಕೆ ಆಧಾರವಾಗಿಯೂ ಅಲಂಕಾರವಾಗಿಯೂ ಇರುವ ಸ್ತಂಭಗಳಾಗಿಯೂ ಇದ್ದಾರೆ. (ಗಲಾ. ೨. ೯.) ಅವುಗಳಲ್ಲಿ ಅವರು ದೇವರಿಗೆ ಸೇರಿದವರೆಂದೂ, (೧೪. ೧.) ಕ್ರಿಸ್ತನಿಗೆ ಸೇರಿದವರೆಂದೂ, (೨. ೧೭.) ಹೊಸ ಯೆರೂಸಲೇಮಿಗೆ ಸೇರಿದವರೆಂದೂ, (೨೧. ೨.) ಅವರ ಹೆಸರುಗಳು ಬರೆಯಲ್ಪಟ್ಟಿರುವವು.

6. ಲವೊದಿಕ್ಯೆಯ ಎಂಬುವದು ಫ್ರುಗ್ಯ ದೇಶಕ್ಕೆ ಮುಖ್ಯ ಪಟ್ಣವಾಗಿಯೂ, ರೋಮಾಯ ಅಧಿಪತಿ ವಾಸಿಸಿದ ಸ್ಥಳವಾಗಿಯೂ ಇತ್ತು. ಅದು ಎಫೆಸಕ್ಕೆ ಪೂರ್ವ ದಿಕ್ಕಿಗೆ ೪೦ ಮೈಲುಗಳ ದೂರದಲ್ಲಿಯೂ, ಫಿಲದೆಲ್ಫ್ಯ ಕೊಲೊಸ್ಸೆ ಪಟ್ಣಗಳಿಗೆ ಮಧ್ಯದಲ್ಲಿಯೂ ಇತ್ತು. ಅದು ವ್ಯಾಪಾರಕ್ಕೆ ತಕ್ಕ ಸ್ಥಳವಾಗಿದ್ದದರಿಂದ ಐಶ್ವರ್ಯದಲ್ಲಿ ಶ್ರೇಷ್ಠ ಪಟ್ಣವಾಗಿತ್ತು. ಆದರೆ ಈಗ ಆ ಪಟ್ಣದ ಮಹಿಮೆ ಎಲ್ಲಾ ನಾಶವಾಗಿದೆ. ನನ್ನ ಬಾಯಿಯಿಂದ ಕಾರುವೆನು ಎಂದು ಕರ್ತನು ಹೇಳಿದ ಪ್ರಕಾರ ಆ ಸಭೆಗೆ ಪ್ರಾಪ್ತವಾಯಿತು. ಈಗ ತುರ್ಕರು ಅದನ್ನು ಎಸ್ಕಿಹಿಸ್ಸಾರ್ ಎಂದು ಕರೆಯುತ್ತಾರೆ.

7. ಆಮೆನ್ ಎಂಬುವದು, ಯಥಾರ್ಥವನ್ನೂ ನಿಶ್ಚಯವನ್ನೂ ಸೂಚಿಸುತ್ತದೆ. ಇದರಲ್ಲಿ ನಂಬಿಕೆಯೂ ಸತ್ಯವೂ ಉಳ್ಳ ಸಾಕ್ಷಿಯಾದ ಕ್ರಿಸ್ತನನ್ನು ಕುರಿತು ಹೀಗೆ ಹೇಳಿ ಇದೆ. ದೇವರ ವಾಗ್ದತ್ತಗಳೆಲ್ಲಾ ಆತನಲ್ಲಿ ಹೌದು, ಆತನಲ್ಲಿ ಆಮೆನ್, ಆಗಿವೆ. ಅವು ನಿಶ್ಚಯವಾಗಿ ಈಡೇರುವವು. (೨ ಕೊರಿ. ೧. ೨೦.)

8. (ಎಫೆ. ೧. ೨೩. ಕೊಲೊ. ೧. ೧೫. ವಚನಗಳ ವ್ಯಾಖ್ಯಾನ ನೋಡ ಬೇಕು.) ಆದಿ ಎಂಬುವದು ಆದಿಕಾರಣನೆಂಬುವ ಅರ್ಥವಾಗುತ್ತದೆ. ಆತನೇ ಸೃಷ್ಟಿಕರ್ತನಾಗಿಯೂ ಇದ್ದಾನೆ.

9. ತಂಪು ಎಂಬುವದು ಭಕ್ತಿವಿಷಯದಲ್ಲಿ ನಿಶ್ಚಿಂತೆಯನ್ನೂ, ಬಿಸಿ ಎಂಬುವದು ಭಕ್ತಿವಿಷಯದಲ್ಲಿ ಪೂರ್ಣ ಆಶೆಯನ್ನೂ ಕುರಿತದ್ದು. ತಂಪೂ ಬಿಸಿಯೂ ಅಲ್ಲದೆ ಉಗುರುಬೆಚ್ಚಗೆ ಇರುವದು, ಸತ್ಯಮಾರ್ಗದ ಸಾರವನ್ನು ಗ್ರಹಿಸದೆ, ವಿಶ್ವಾಸಕ್ಕೆ ತಕ್ಕ ಸತ್ಕ್ರಿಯೆಗಳನ್ನು ಮಾಡದೆ, ಮೋಸವಾದ ಸ್ಥಿತಿಯಲ್ಲಿರುವದನ್ನು ಕುರಿತದ್ದು. ಭಕ್ತಿಯ ವೇಷವನ್ನು ಧರಿಸಿ ಕೊಂಡು ಅದರ ಸಾರವೂ ಬಲವೂ ಇಲ್ಲದವರಾಗಿರುವದಕ್ಕಿಂತ, ಅದನ್ನು ಅರಿಯದೆ ಇರುವದು ವಾಸಿ.

೧೭ ವದರಿಂದ, ನಿನ್ನನ್ನು ನನ್ನ ಬಾಯಿಯಿಂದ [1]ಕಾರುವೆನು. ಹ್ಯಾಗಂದರೆ, [2]ಐಶ್ವರ್ಯವಂತನೂ, ದ್ರವ್ಯಸ್ಥನೂ,
ಏನೂ ಕಡಿಮೆ ಇಲ್ಲದವನೂ, ಆಗಿದ್ದೇನೆ, ಅಂದು ಕೊಂಡು, ನೀನು ಸಂಕಟವುಳ್ಳವನೂ, ಕರುಣೆಗೆ ತಕ್ಕವನೂ,
೧೮ ಬಡವನೂ, ಕುರುಡನೂ, ಬೆತ್ತಲೆಯಾದವನೂ ಆಗಿದ್ದೀ ಎಂದು ಅರಿಯೆ. ನೀನು ಐಶ್ವರ್ಯವಂತನಾ
ಗುವ ಹಾಗೆ, ಬೆಂಕಿಯಲ್ಲಿ [3]ಶೋಧಿಸಿದ ಭಂಗಾರವನ್ನೂ, ನಿನ್ನ ಬೆತ್ತಲೆತನದ ನಾಚಿಕೆಯು ಕಾಣದ ಹಾಗೆ,
ನಿನಗೆ ಧರಿಸಿ ಕೊಳ್ಳುವದಕ್ಕೆ [4]ಬಿಳೀ ವಸ್ತ್ರಗಳನ್ನೂ ನನ್ನಿಂದ ಕೊಂಡು ಕೊಂಡು, ನೀನು ನೋಡುವ ಹಾಗೆ
೧೯ ನಿನ್ನ ಕಣ್ಣುಗಳಿಗೆ [5]ಅಂಜನವನ್ನು ಹಚ್ಚ ಬೇಕೆಂದು, ನಿನಗೆ ಆಲೋಚನೆ ಹೇಳುತ್ತೇನೆ. [6]ನಾನು ಸ್ನೇಹಿಸುವ
೨೦ ವರನ್ನಷ್ಟು ಖಂಡಿಸಿ, ಶಿಕ್ಷಿಸುತ್ತೇನೆ. ಆದದರಿಂದ ಆಸಕ್ತಿ ಪಟ್ಟು, ಮಾನಸಾಂತರ ಪಡು. ಇಗೋ, ಬಾಗ
ಲಿನ ಹತ್ತರ ನಿಂತು ಕೊಂಡು, ತಟ್ಟುತ್ತೇನೆ. ಯಾವನಾದರೂ ನನ್ನ ಶಬ್ದವನ್ನು ಕೇಳಿ, ಬಾಗಲನ್ನು ತೆರೆದರೆ,
ನಾನು [7]ಅವನ ಬಳಿಗೆ ಪ್ರವೇಶಿಸಿ, ಅವನ ಸಂಗಡ ಉಣ್ಣುವೆನು; ಅವನು ನನ್ನ ಸಂಗಡ ಉಣ್ಣುವನು.
೨೧ ಜಯಿಸುವವನ್ಯಾವನೋ, ಅವನಿಗೆ ನನ್ನ ಸಂಗಡ ನನ್ನ [8]ಸಿಂಹಾಸನದಲ್ಲಿ ಕೂಡ್ರ ಕೊಡುವೆನು; ನಾನು ಸಹ
೨೨ ಜಯಿಸಿ, ನನ್ನ ತಂದೆಯು ಸಂಗಡ ಅವನ ಸಿಂಹಾಸನದಲ್ಲಿ ಕೂತು ಕೊಂಡ ಹಾಗೆಯೇ. ಕಿವಿಯುಳ್ಳವನು
ಆತ್ಮವು ಸಭೆಗಳಿಗೆ ಹೇಳುವದನ್ನು ಕೇಳಲಿ.

1. ಉಗುರುಬೆಚ್ಚಗಿರುವ ನೀರನ್ನು ಕುಡಿಯುವವರಿಗೆ ವಾಂತಿಯುಂಟಾಗುವ ಪ್ರಕಾರ, ಭಕ್ತಿವಿಷಯದಲ್ಲಿ ಉಗುರುಬೆಚ್ಚಗಿರುವವರನ್ನು ಕ್ರಿಸ್ತನು ಅರೋಚಿಸಿ ತಳ್ಳಿ ಬಿಡುವನು.

2. ಲವೊದಿಕ್ಯೆಯದ ಸಭೆಯವರು ಗರ್ವ ಪಟ್ಟು, ತಾವು ಭಕ್ತಿಯಲ್ಲಿ ಸಂಪೂರ್ಣರೆಂದು ಹೆಚ್ಚಳ ಪಟ್ಟರು. ಆದಾಗ್ಯೂ ಅವರು ಭಕ್ತಿಯಲ್ಲಿ ಬಡವರೂ, ದೇವರ ಸತ್ಯದ ವಿಷಯ ಕುರುಡರೂ, ದೈವನೀತಿ ಇಲ್ಲದೆ ಬೆತ್ತಲೆಯಾದವರೂ ಆಗಿದ್ದು ಕರುಣೆಗೆ ತಕ್ಕವರಾಗಿದ್ದರು.

3. ಬೆಂಕಿಯಲ್ಲಿ ಪುಠವಿಟ್ಟ ಭಂಗಾರವೆಂಬುವದು, ಉತ್ತಮ ಭಕ್ತಿಯನ್ನು ಸೂಚಿಸುತ್ತದೆ. ದೇವಭಕ್ತಿಯು ಪುಠವಿಟ್ಟ ಭಂಗಾರಕ್ಕಿಂತಲೂ ಅಧಿಕ ಅಮೂಲ್ಯವಾದದ್ದು. (೧ ಪೇತ್ರ. ೧. ೭.) ಬೆಂಕಿಗೆ ಸಮಾನವಾದ ಶೋಧನೆಗಳನ್ನು ಅನುಭವಿಸಿದವರ ಭಕ್ತಿಯು ಕಡೇ ದಿವಸದ ಶೋಧನೆ ಎಂಬ ಬೆಂಕಿಯಿಂದ ನಾಶವಾಗಲಾರದು. ಇಂಥಾ ವಿಶ್ವಾಸವೆಂಬ ಭಂಗಾರವುಳ್ಳವರೇ ಐಶ್ವರ್ಯವಂತರು. ಇದನ್ನು ದೇವರ ಬಳಿಯಲ್ಲಿ ಕ್ರಯವಿಲ್ಲದೆ ತೆಗೆದು ಕೊಳ್ಳಬಹುದು. (ಯೆಶಾ. ೫೫. ೧, ೨.)

4. ದರಿದ್ರರು ಐಶ್ವರ್ಯವಂತರಾಗುವ ವಿಧವನ್ನು ಹೇಳಿ, ನಿರ್ವಾಣಿಗಳು ವಸ್ತ್ರಾಲಂಕಾರವುಳ್ಳವರಾಗ ತಕ್ಕ ವಿಧವು ಹೇಳಲ್ಪಟ್ಟದೆ. ಅವರು ಧರಿಸಿ ಕೊಳ್ಳ ತಕ್ಕ ಬಿಳೀ ವಸ್ತ್ರವು ಕ್ರಿಸ್ತನ ನೀತಿಯು ಅಥವಾ ಪುಣ್ಯವು. (ಫಿಲಿ. ೩. ೯.) ಈ ಬಿಳೀ ವಸ್ತ್ರವನ್ನು ಧರಿಸಿದವರು ನ್ಯಾಯತೀರ್ವಿಕೆಯ ದಿವಸದಲ್ಲಿ ನೀತಿವಂತರಾಗಿ ಕಾಣುವರು.

5. ಇಲ್ಲಿ ಕುರುಡರು ದೃಷ್ಟಿ ಹೊಂದ ತಕ್ಕ ಯೋಚನೆಯುಂಟು. ಅಂಜನವೆಂಬುವದು ಪರಿಶುದ್ಧಾತ್ಮನ ಅಭಿಷೇಕವನ್ನು ಕುರಿತದ್ದು. (೧ ಯೋಹಾ. ೨. ೨೦.) ಈ ದಿವ್ಯಾಭಿಷೇಕವನ್ನು ಹೊಂದದವರ ಮನೋನೇತ್ರಗಳು ದೃಷ್ಟಿ ಇಲ್ಲದವುಗಳಾಗಿರುವವು. ಅವರಿಗೆ ದಿವ್ಯ ಕಾರ್ಯಗಳ ಮಹಿಮೆಯೂ, ಪರಿಶುದ್ಧತ್ವದ ಘನತೆಯೂ, ಪರಲೋಕದ ಮನೆಯ ಅಲಂಕಾರವೂ ಕಾಣಿಸಲಾರದು.

6. ಇದು, ಸಾಮ. ೩. ೧೧, ೧೨ನೇ ವಚನಗಳ ತಾತ್ಪರ್ಯವುಳ್ಳದ್ದು. ಪ್ರೀತಿಗೆ ಖಂಡನೆಯೂ ಇರುವದು. ತಂದೆಯು ಮಗನನ್ನು ಶಿಕ್ಷಿಸುವ ಪ್ರಕಾರ, ದೇವರು ತನ್ನ ಮಕ್ಕಳನ್ನು ಒಳ್ಳೇದಕ್ಕಾಗಿ ಶಿಕ್ಷಿಸುತ್ತಾನೆ. (ಇಬ್ರಿ. ೧೨. ೫—೧೧.)

7. ಇದು ಕ್ರಿಸ್ತನಿಗೂ ಆತನ ಭಕ್ತರಿಗೂ ಉಂಟಾಗಿರುವ ಅನ್ಯೋನ್ಯವನ್ನು ಕುರಿತದ್ದು. ಸಾಕ್ಷಾದ್ದೇವರೂ ವಿಮೋಚಕನೂ ಆದ ಆತನು ಒಬ್ಬೊಬ್ಬನ ಹೃದಯದ ಬಾಗಲಲ್ಲಿ ನಿಂತು ತಾಳ್ಮೆಯಿಂದಲೂ ಆಶೆಯಿಂದಲೂ ತಟ್ಟುತ್ತಾನೆ. ಬಾಗಲು ತೆರಿಯ ಬೇಕೆಂದು ಬಲವಂತ ಮಾಡದೆ, ಬಹು ಅಕ್ಕರೆಯಿಂದಲೂ ಮಮತೆಯಿಂದಲೂ ತಟ್ಟುತ್ತಾನೆ. ಆತನ ಶಬ್ದವನ್ನು ಕೇಳಿ ಬಾಗಲು ತೆರೆಯುವವರ ಹೃದಯದಲ್ಲಿ ವಾಸ ಮಾಡಿ, ಅವರ ಸಂಗಡ ಅನ್ಯೋನ್ಯವಾಗಿರುವನು. ಪರಮರಾಜ್ಯದ ಮೇಲುಗಳನ್ನು ಒಂದು ಔತಣಕ್ಕೆ ಉಪಮಾನಿಸಿ ಇದೆ. (ಯೆಶಾ. ೨೫. ೬. ಮತ್ತಾ. ೮. ೧೧.) ಜೀವದ ರೊಟ್ಟಿಯಾದ ಕ್ರಿಸ್ತನು ಆತ್ಮದ ಮೇಲುಗಳುಳ್ಳ ಈ ಪರಮ ಔತಣವನ್ನು ಸಿದ್ಧ ಮಾಡಿ, ಅದನ್ನು ಹೊಂದುವ ಹಾಗೆ ತನ್ನ ಸೇವಕರ ಮುಖಾಂತರವಾಗಿಯೂ, ತನ್ನ ದಿವ್ಯ ಕ್ರಿಯೆಗಳ ಮೂಲಕವಾಗಿಯೂ ಎಲ್ಲರನ್ನು ಕರೆಯುತ್ತಾನೆ. (ಲೂಕ. ೧೨. ೩೬—೩೮.)

8. ಇದು ದೇವದಾಸರಿಗೆ ಉಂಟಾಗುವ ಹೆಚ್ಚಾದ ಮಹಿಮೆಯನ್ನೂ ಅಧಿಕಾರವನ್ನೂ ಕುರಿತ ಶ್ರೇಷ್ಠ ವಾಗ್ದತ್ತವಾಗಿದೆ. (೨. ೨೬.) ತಂದೆಯ ಸಿಂಹಾಸನವು ಆತನ ಸಂಗಡ ಒಂದಾಗಿರುವ ದೇವರ ಮಗನಿಗೂ ಹುದುವಾದದ್ದು. ಕ್ರಿಸ್ತನ ಸಿಂಹಾಸನವು ಆತನಿಗೂ ಜಯ ಹೊಂದಿದ ಆತನ ಭಕ್ತರಿಗೂ ಹುದುವಾದದ್ದು. ಆತನ ಹಾಗೆ ಉಪದ್ರವನ್ನು ಸಹಿಸಿ, ಶತ್ರುಗಳನ್ನು ಜಯಿಸಿ, ಜಯ ಬಿರುದು ಹೊಂದಿದ ಭಕ್ತರು ಆತನ ಸಂಗಡ ಎಂದೆಂದಿಗೂ ಆಳುವರು.



ದೇವರ ಪರಿಶುದ್ಧ ಸನ್ನಿಧಾನವನ್ನೂ ಆರಾಧನೆಯನ್ನೂ ಕುರಿತ ದರ್ಶನವು.

**4.** [1]ಇವುಗಳಾದ ತರುವಾಯ ನಾನು ನೋಡಲಾಗಿ, ಇಗೋ, [2]ಪರಲೋಕದಲ್ಲಿ ತೆರೆದಿರುವ ಬಾಗಲು;
ಮತ್ತು ನನ್ನ ಸಂಗಡ ಮಾತಾಡುವ ತುತೂರಿಯ ಹಾಗೆ ನಾನು [3]ಕೇಳಿದ ಮೊದಲನೇ ಶಬ್ದವು—ಇಲ್ಲಿಗೆ
ಏರಿ ಬಾ, ಇವುಗಳ ತರುವಾಯ ಆಗ ಬೇಕಾದವುಗಳನ್ನು ನಿನಗೆ ತೋರಿಸುವೆನು, ಅಂದಿತು.
೨ ಸಂಗಡಲೇ [4]ಆತ್ಮದಲ್ಲಿದ್ದೆನು; ಮತ್ತು, ಇಗೋ, ಪರಲೋಕದಲ್ಲಿ ಸಿಂಹಾಸನವಿತ್ತು; ಮತ್ತು ಸಿಂಹಾಸನದ
೩ ಮೇಲೆ [5]ಕೂತು ಕೊಳ್ಳುವವನು ಇದ್ದನು. ಕೂತು ಕೊಳ್ಳುವವನು ನೋಟಕ್ಕೆ [6]ವಜ್ರ ಅಕ್ಕೀಕ ಕಲ್ಲುಗ
ಳಿಗೆ ಸಮಾನವಾಗಿದ್ದನು; ಮತ್ತು ಸಿಂಹಾಸನದ ಸುತ್ತಲು ನೋಟಕ್ಕೆ ಪಚ್ಚೇ ಕಲ್ಲಿಗೆ ಸಮಾನವಾದ [7]ಮಳೆ
ಬಿಲ್ಲು ಇತ್ತು.

1. ೪ನೇ ಸಂಧಿಯಿಂದ ೬ನೇ ಸಂಧಿಯ ವರೆಗೂ ಇರುವ ವಿಷಯಗಳು ಈ ಗ್ರಂಥದ ಎರಡನೇ ಭಾಗಕ್ಕೆ ಶೇರಿದವುಗಳಾಗಿವೆ. ಮೊದಲನೇ ಭಾಗವು ಏಳು ಸಭೆಗಳಿಗೆ ಮುಂಚಿನ ಮೊದಲನೇ ದರ್ಶನದಿಂದ ಪ್ರಾರಂಭವಾಯಿತು. ಈ ಎರಡನೇ ಭಾಗವು ಏಳು ಮುದ್ರೆಗಳಿಗೆ ಮುಂಚಿನದಾದ ಎರಡನೇ ದರ್ಶನದಿಂದ ಪ್ರಾರಂಭಿಸುತ್ತದೆ. ಈ ದರ್ಶನವು ಪರಲೋಕದಲ್ಲಿ ಸಂಭವಿಸಿದಂತೆ ಹೇಳಿರುತ್ತದೆ. ಯೆಶಾ. ೬ನೇ ಸಂಧಿಯಲ್ಲಿ ಹೇಳಲ್ಪಟ್ಟ ದರ್ಶನವು ಯೆಹೋವನ ಸಿಂಹಾಸನವು ಇದ್ದ ಯೆಹೂದ್ಯರ ದೇವಾಲಯದಲ್ಲಿ ಕಂಡ ಭಾವನೆಯಾಗಿ ಹೇಳಲ್ಪಟ್ಟಿರುವ ಪ್ರಕಾರ, ಈ ದರ್ಶನದಲ್ಲಿಯೂ ದೇವರು ಪರಮ ಸಿಂಹಾಸನದ ಮೇಲೆ ಆಸೀನನಾಗಿರುವಂತೆ ಹೇಳಿ ಇದೆ. (೨. ವ.) ಆತನ ಮಹಿಮೆಯ ಪ್ರಕಾಶವು ಜ್ಯೋತಿರ್ಮಯವಾದ ರತ್ನಗಳಿಗೆ ಸಮಾನವಾಗಿಯೂ, ಆತನ ಕೃಪಾಪ್ರಕಾಶವು ಕೃಪೆಯ ವಾಗ್ದತ್ತಕ್ಕೆ ಗುರುತಾಗಿರುವ ಶೋಭಿತವಾದ ಮಳೆಬಿಲ್ಲಿಗೆ ಸಮಾನವಾಗಿಯೂ ಇತ್ತು. (೩. ವ.) ಆ ಆಸನದ ಸುತ್ತಲೂ ಯೆಹೂದ್ಯ ಯಾಜಕರಂತಿರುವ ಹಿರಿಯರು ಚಿನ್ನದ ಕಿರೀಟಗಳನ್ನು ಧರಿಸಿದವರಾಗಿ ಕುಳಿತ್ತಿದ್ದ ತಗ್ಗಾದ ಸಿಂಹಾಸನಗಳಿದ್ದವು. (೪. ವ.) ಆ ಮಹತ್ವದ ಆಸನದಿಂದ ಗುಡುಗುಗಳೂ ಮಿಂಚುಗಳೂ ಹೊರಟದ್ದಲ್ಲದೆ, ಅದರ ಮುಂದೆ ಏಳು ದೀಪಗಳು ಉರಿಯುತ್ತಿದ್ದವು. (೫. ವ.) ಅದರ ಮುಂದೆ ಸ್ಫಟಿಕಕ್ಕೆ ಸಮಾನವಾದ ಶುದ್ಧ ಪ್ರಕಾಶವುಳ್ಳ ತಳಾಸಿಕೆ ಇತ್ತು. ಮತ್ತು ಕೆರೂಬಿಗಳ ಹಾಗೆ ಮಹಿಮೆಯುಳ್ಳ ಜೀವಿಗಳು ನಾಲ್ಕು ಪಕ್ಕೆಗಳಲ್ಲಿಯೂ ನಿಂತು, ದೇವರನ್ನು ಎಡೆ ಬಿಡದೆ ಆರಾಧಿಸುತ್ತಿದ್ದವು. (೬—೮. ವ.) ಅದರಲ್ಲಿ ಹಿರಿಯರು ಸಹ ಕೂಡಿ ಕೊಂಡು ದೇವರನ್ನು ಆರಾಧಿಸಿದರು. (೯—೧೧. ವ.) ದೇವರಾದ ಯೆಹೋವನ ಬಲಗೈಯಲ್ಲಿ ಒಂದು ಸುರಳಿಯು ಇತ್ತು. (೫. ೧.) ಅದನ್ನು ತೆರೆದು ಓದ ತಕ್ಕವರು ಪರಲೋಕವಾಸಿಗಳಲ್ಲಿ ಒಬ್ಬರೂ ಇರಲಿಲ್ಲ. ಹೊಡಿಯಲ್ಪಟ್ಟ ಕುರಿಯ ಹಾಗೆಯೂ, ದಿವ್ಯಾಧಿಕಾರವನ್ನೂ ಜ್ಞಾನವನ್ನೂ ಅಲಂಕಾರವಸ್ತ್ರದ ಹಾಗೆ ಧರಿಸಿದವನಾಗಿಯೂ, ಪರಮ ಸಭೆಯ ಮಧ್ಯದಲ್ಲಿ ತೋರಿದ ಕ್ರಿಸ್ತನು ಮಾತ್ರ ಅದನ್ನು ತೆರೆದು ಓದ ತಕ್ಕವನಾಗಿದ್ದನು. (೨—೭. ವ.) ಆತನು ಆ ಸುರಳಿಯನ್ನು ತೆಗೆದು ಕೊಂಡಾಗ, ಪರಲೋಕ ಭೂಲೋಕ ಪಾತಾಳಲೋಕವೆಂಬ ಮೂರು ಲೋಕಗಳೂ ಪರಮಾಸನದಲ್ಲಿ ಕುಳಿತಿರುವವನಿಗೂ ಕುರಿಮರಿಗೂ ಅಡ್ಡ ಬಿದ್ದು ಆರಾಧಿಸಿ ಕೊಂಡಾಡಿದವು. (೮—೧೪. ವ.)

2. ಸಭೆಯ ತತ್ಕಾಲದ ಸ್ಥಿತಿಯನ್ನು ಕುರಿತ ದರ್ಶನವನ್ನು ಯೋಹಾನನು ಕಂಡ ತರುವಾಯ ಮುಂದಿನ ಕಾಲದ ಸ್ಥಿತಿಯನ್ನು ಕುರಿತು ತಿಳಿಯ ಎದುರು ನೋಡಿ ಕೊಂಡಿರುವನು. ಹೀಗಿರುವ ಸಮಯದಲ್ಲಿ ಫಕ್ಕನೆ ಪರಲೋಕದ ಬಾಗಲು ತೆರೆಯಲ್ಪಟ್ಟಿತು. ಪ್ರವಾದಿಯಾದ ಎಜೇಕಿಯೇಲನಿಗೆ ಪರಮ ದರ್ಶನ ಉಂಟಾದಾಗ, ಹೀಗೆಯೇ ಆಕಾಶವು ತೆರೆಯಲ್ಪಟ್ಟಿತು, ಎಂದು ಹೇಳಿ ಇದೆ. (ಎಜೇಕಿ. ೧. ೧.)

3. ಮುಂಚೆ ಅವನು ಕೇಳಿದ್ದ ಶಬ್ದವನ್ನೇ (೧. ೧೨.) ಈಗ ಗುಡುಗಿನ ಶಬ್ದದ ಹಾಗೆ ಕೇಳಿದನು. "ಇಲ್ಲಿಗೆ ಏರಿ ಬಾ, ಇವುಗಳ ತರುವಾಯ ಆಗ ಬೇಕಾದವುಗಳನ್ನು ನಿನಗೆ ತೋರಿಸುವೆನು" ಎಂದು ಹೇಳಿದ ಶಬ್ದವು ಕ್ರಿಸ್ತನ ಶಬ್ದವೆಂದು ಕೆಲವರು ನೆನಸುತ್ತಾರೆ. (೧. ೧೦—೧೩.) ಇನ್ನು ಮೇಲೆ ಆಗ ಬೇಕಾದವುಗಳೆಂಬುವದು, ಸುರಳಿಯಲ್ಲಿ ಅಡಗಿರುವಂಥ (೫. ೧.) ಅಪೊಸ್ತಲನ ಕಾಲದಿಂದ ಕರ್ತನು ಪ್ರಸನ್ನನಾಗುವ ಕಾಲದ ಮಟ್ಟಿಗೂ, ಆದ್ಯಂತವಾಗಿ ತಿರುಸಭೆಗೆ ಸಂಭವಿಸಲಿಕ್ಕಿರುವಂಥ ಸಮಸ್ತ ಕಾರ್ಯಗಳನ್ನು ಸೂಚಿಸುತ್ತದೆ.

4. ತನ್ನ ಕರ್ತನ ಶಬ್ದವನ್ನು ಕೇಳಿದ ದಾಸನು ಪರಿಶುದ್ಧಾತ್ಮನ ಶ್ರೇಷ್ಠ ವರವನ್ನು ಹೊಂದಿ, ಪರಮಾಲಯದಲ್ಲಿ ಶೇರಿ, ಪರಮ ದರ್ಶನಗಳನ್ನು ನೋಡ ತಕ್ಕ ಶ್ಲಾಘ್ಯವನ್ನು ಹೊಂದಿದನು. (೧. ೧೦. ೨ಕೊರಿ. ೧೨. ೧—೪. ಎಜೇಕಿ. ೧೧. ೧, ೫.)

5. ಕೂತು ಕೊಳ್ಳುವವನು ಎಂಬುವದು, ನಿತ್ಯ ತಂದೆಯಾದ ಯೆಹೋವನನ್ನು ಕುರಿತದ್ದು. (೮. ವ. ದಾನಿ. ೭. ೯.) ನಿತ್ಯ ದೇವರು ಕುಳಿತಿದ್ದ ಈ ಸಿಂಹಾಸನವು ನ್ಯಾಯಾಸನವಲ್ಲ. ಇದು ಸಮಸ್ತ ಲೋಕಗಳನ್ನೂ ಪರಿಪಾಲಿಸಿ ನಡಿಸುವದಕ್ಕೆ ಸಲ್ಲುವ ಮೇಲಾದ ಅಧಿಕಾರವನ್ನು ಸೂಚಿಸುತ್ತದೆ. (ಕೀರ್ತ. ೧೦೩. ೧೯—೨೧.)

6. ವಜ್ರವು ಶುದ್ಧ ಬಿಳೀ ಬಣ್ಣವಾಗಿಯೂ, ಅಕ್ಕೀಕವು ಬೆಂಕಿಯ ಹಾಗೆ ಕೆಂಪು ಬಣ್ಣವುಳ್ಳದ್ದಾಗಿಯೂ ಇರುತ್ತವೆ. ಈ ಎರಡು ರತ್ನಗಳೂ ಅಗ್ನಿಯೋಪಾದಿಯಾಗಿ ತೋರುವ ದೇವರ ದಿವ್ಯ ಲಕ್ಷಣಗಳನ್ನು ಸೂಚಿಸುತ್ತವೆಯೇ ಹೊರ್ತು, ಆತನ ಸ್ವರೂಪವನ್ನು ತೋರಿಸುವದಲ್ಲ. ಹೀಗಿರುವದರಿಂದ ದೇವರ ಹಾಗೆ ಸ್ವರೂಪಗಳನ್ನು ಮಾಡಿ ಪೂಜಿಸುವದು ಬುದ್ಧಿಹೀನವೂ ಪಾಪವೂ ಆಗಿದೆ.

7. ಈ ಮಳೆಬಿಲ್ಲು ದೇವರ ಕನಿಕರಕ್ಕೆ ಗುರುತಾಗಿದೆ. (ಉತ್ಪ. ೯. ೯—೧೪. ಎಜೇಕಿ. ೧. ೪, ೨೮.) ಮಳೆಬಿಲ್ಲಿನಲ್ಲಿ ಏಳು ವಿಧ ಬಣ್ಣಗಳಿದ್ದಾಗ್ಯೂ, ಕಣ್ಣಿಗೆ ಬಹು ತಂಪಾಗಿ ತೋರುವದು. ಪಚ್ಚೇ ಬಣ್ಣವೇ ಅದರಲ್ಲಿ ಅಧಿಕವಾಗಿ ತೋರುವದು.

೪ ಮತ್ತು ಸಿಂಹಾಸನದ ಸುತ್ತಲು ಇಪ್ಪತ್ತನಾಲ್ಕು ಸಿಂಹಾಸನಗಳು ಇದ್ದವು; ಮತ್ತು ಬಿಳೀ ವಸ್ತ್ರಗಳನ್ನು
ಧರಿಸಿ ಕೊಂಡು, [1]ಸಿಂಹಾಸನಗಳ ಮೇಲೆ ಕೂತು ಕೊಂಡಿರುವ ಇಪ್ಪತ್ತನಾಲ್ಕು ಹಿರಿಯರನ್ನು ಕಂಡೆನು;
೫ ಅವರು ತಮ್ಮ ತಲೆಗಳ ಮೇಲೆ ಚಿನ್ನದ ಕಿರೀಟಗಳು ಉಂಟಾದವರಾಗಿದ್ದರು. ಮತ್ತು ಸಿಂಹಾಸನದಿಂದ
[2]ಮಿಂಚುಗಳೂ ಗುಡುಗುಗಳೂ ಶಬ್ದಗಳೂ ಹೊರಟವು; ಮತ್ತು ಏಳು ಬೆಂಕಿಯ ದೀಪಗಳು ಸಿಂಹಾಸ
೬ ನದ ಮುಂದೆ ಉರಿದವು. ಇವು ದೇವರ [3]ಏಳು ಆತ್ಮಗಳಾಗಿವೆ. ಸಿಂಹಾಸನದ ಮುಂದೆ ಸ್ಫಟಿಕಕ್ಕೆ ಸಮಾನ
ವಾದ [4]ಗಾಜಿನ ಸಮುದ್ರವು; ಸಿಂಹಾಸನದ ಮಧ್ಯದಲ್ಲಿಯೂ ಸುತ್ತಲೂ ಹಿಂದೆ ಮುಂದೆ [5]ಕಣ್ಣುಗಳಿಂದ
೭ ತುಂಬಿರುವ [6]ನಾಲ್ಕು ಜೀವಿಗಳು. ಮೊದಲನೇ ಜೀವಿಯು ಸಿಂಹಕ್ಕೆ ಸಮಾನವಾದದ್ದು; ಎರಡನೇ ಜೀವಿ
ಯು ಕರುವಿಗೆ ಸಮಾನವಾದದ್ದು; ಮೂರನೇ ಜೀವಿಯು ಮನುಷ್ಯನ ಹಾಗೆ ಮುಖವುಳ್ಳದ್ದು; ನಾಲ್ಕನೇ
೮ ಜೀವಿಯು ಹಾರುವ ಹದ್ದಿಗೆ ಸಮಾನವಾದದ್ದು. ಮತ್ತು ನಾಲ್ಕು ಜೀವಿಗಳು, ಒಂದೊಂದು ಆರಾರು
ರೆಕ್ಕೆಗಳುಳ್ಳದ್ದಾಗಿ, ಸುತ್ತಲೂ [7]ಒಳಗೆಯೂ ಕಣ್ಣುಗಳಿಂದ ತುಂಬಿದ್ದಾಗಿ,

ಅಪರಿಮಿತವಾದ ಜ್ಞಾನಕ್ಕೂ, ಅಗ್ರಾಹ್ಯವಾದ ದಿವ್ಯ ಕೃತ್ಯಗಳಿಗೂ ಗುರುತಾಗಿರುವ ಮೇಘದಿಂದ ಸುತ್ತಲ್ಪಟ್ಟಿರುವ ಸಿಂಹಾಸನವು, ಮಹಾ ಕರುಣೆಗೂ ನಂಬಿಕೆಗೂ ಗುರುತಾಗಿರುವ ಮಳೆಬಿಲ್ಲಿನಿಂದಲೂ ಆವರಿಸಲ್ಪಟ್ಟದ್ದಾಗಿತ್ತು.

1. ಮೇಲೆ ಹೇಳಿದ ಉನ್ನತವಾದ ಸಿಂಹಾಸನದ ಸುತ್ತಲೂ ಇಪ್ಪತ್ತನಾಲ್ಕು ತಗ್ಗಾದ ಸಿಂಹಾಸನಗಳಿದ್ದವು. (೧. ೬; ೩. ೨೧.) ಅವುಗಳ ಮೇಲೆ ಬಿಳೀ ವಸ್ತ್ರಗಳನ್ನು ಧರಿಸಿ ಚಿನ್ನದ ಕಿರೀಟಗಳನ್ನು ಇಟ್ಟು ಕೊಂಡವರಾಗಿದ್ದ ಇಪ್ಪತ್ತನಾಲ್ಕು ಹಿರಿಯರು ಕುಳಿತಿದ್ದರು. ಈ ಇಪ್ಪತ್ತನಾಲ್ಕು ಹಿರಿಯರು ವಿಮೋಚಿಸಲ್ಪಟ್ಟ ಸಭೆಗೆ ಗುರುತಾಗಿರ ಬಹುದು; ಅವರ ಲೆಖ್ಖವು ಯೆಹೂದ್ಯ ಯಾಜಕರಲ್ಲಿದ್ದ ಇಪ್ಪತ್ತನಾಲ್ಕು ಒಂತುಗಳ ಹಾಗಾದರೂ, ಅಥವಾ ಯೆಹೂದ್ಯರಿಗೆ ಮೂಲವಾಗಿದ್ದ ಹನ್ನೆರಡು ಗೋತ್ರಪಿತೃಗಳಿಗೂ, ಕ್ರಿಸ್ತಸಭೆಗೆ ಶ್ರೇಷ್ಠರಾಗಿದ್ದ ಹನ್ನೆರಡು ಅಪೊಸ್ತಲರಿಗೂ ಗುರುತಾಗಿಯಾದರೂ, ಇತ್ತೆಂದು ತಿಳಿಯ ಬಹುದು, (೧. ೬; ೫. ೧೦.) ಈ ಇಪ್ಪತ್ತನಾಲ್ಕು ಹಿರಿಯರು ಬಿಳೀ ವಸ್ತ್ರಗಳನ್ನು ಧರಿಸಿ ಕೊಂಡವರಾಗಿಯೂ ತಮ್ಮ ತಲೆಗಳ ಮೇಲೆ ಚಿನ್ನದ ಕಿರೀಟಗಳುಂಟಾದವರಾಗಿಯೂ ಇದ್ದರು. ಇದರಿಂದ ಅವರು ಪರಿಶುದ್ಧರಾಗಿಯೂ ವಿಶ್ವಾಸದ ಹೋರಾಟದಲ್ಲಿ ಜಯಿಸಿದವರಾಗಿಯೂ ಇದ್ದರೆಂದು ತೋರುತ್ತದೆ.

2. ಸಿಂಹಾಸನದಿಂದ ಹೊರಟ ಮಿಂಚುಗಳೂ ಗುಡುಗುಗಳೂ ದೇವರ ಬಲವನ್ನೂ ನೀತಿಯುಳ್ಳ ಶಿಕ್ಷೆಗಳನ್ನೂ ತೋರಿಸುತ್ತವೆ. (ಕೀರ್ತ. ೯೭. ೩.)

3. ಇದು ಪರಿಶುದ್ಧಾತ್ಮನ ಅನೇಕ ವಿಧ ವರಪ್ರಸಾದಗಳನ್ನು ಸೂಚಿಸುತ್ತದೆ. (೧. ೪. ವಚನದ ವ್ಯಾಖ್ಯಾನ ನೋಡ ಬೇಕು.) ಪರಮ ಸಿಂಹಾಸನದ ಮುಂದೆ ದೀಪಗಳ ಹಾಗೆ ಉರಿದು ಪ್ರಕಾಶಿಸುತ್ತಿರುವ ಪರಿಶುದ್ಧಾತ್ಮನು ಭೂಲೋಕದಲ್ಲಿರುವ ಸಭೆಯನ್ನು ಪ್ರಕಾಶಿಸ ಮಾಡುವದಕ್ಕೆ ಕಳುಹಿಸಲ್ಪಡುತ್ತಾನೆ.

4. ಪರಮ ಸಿಂಹಾಸನದ ಮುಂದೆ ಸ್ಫಟಿಕದಂಥಾ ಗಾಜಿನ ಸಮುದ್ರವಿತ್ತು. ಇದು ನಿರ್ಮಲವಾದ ಆಕಾಶವನ್ನು ಸೂಚಿಸುತ್ತದೆ. (ಹೊರ. ೨೪. ೧೦. ಎಜೇಕಿ. ೧. ೨೨.) ಯೆಹೋವನು ಆಕಾಶಗಳಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ; ಆತನ ರಾಜ್ಯವು ಸಮಸ್ತವನ್ನು ಆಳುತ್ತದೆ.

5. ಕಣ್ಣುಗಳು ಎಂಬುವದು, ಜ್ಞಾನ, ತಿಳುವಳಿಕೆ, ವಿವೇಕ, ಜಾಗ್ರತೆ ಎಂಬವುಗಳನ್ನು ಸೂಚಿಸುತ್ತವೆ. (ಎಜೇಕಿ. ೧. ೧೫.) ಆ ಜೀವಿಗಳು ಮುಂದೆಯೂ ಹಿಂದೆಯೂ ಕಣ್ಣುಗಳಿಂದ ತುಂಬಿದ್ದವು ಎಂಬದರಲ್ಲಿ, ದೇವರ ಸನ್ನಿಧಿಯಲ್ಲಿ ನಿಂತು ಆತನನ್ನು ಎಡೆ ಬಿಡದೆ ಆರಾಧಿಸಿದ ಕೆರೂಬಿಗಳ ಹೆಚ್ಚಾದ ಜ್ಞಾನವೂ ಜಾಗ್ರತೆಯೂ ತೋರುತ್ತದೆ. ಮತ್ತು ಅವು ಸಿಂಹಕ್ಕೂ ಕರುವಿಗೂ, ಮನುಷ್ಯನಿಗೂ, ಹದ್ದಿಗೂ ಸಮಾನವಾಗಿದ್ದವೆಂದು ಹೇಳಿರುವದರಲ್ಲಿ, ಅವುಗಳಿಗುಂಟಾಗಿರುವ ಮಹತ್ವವೂ, ಪ್ರಯಾಸವೂ, ಸಹತಾಪವೂ, ಪರಕ್ಕೆ ಸಮ್ಮಂಧವಾದ ಮಹಿಮೆ ಎಂಬ ನಾಲ್ಕು ವಿಧ ಲಕ್ಷಣಗಳು ತೋರುತ್ತವೆ.

6. ಈ ಜೀವಿಗಳು ಕೆರೂಬಿಗಳನ್ನು ಸೂಚಿಸುತ್ತವೆ. (ಎಜೇಕಿ. ೧೦. ೨೦.) ಇಂಥಾ ಕೆರೂಬಿಗಳು ಜೀವವೃಕ್ಷದ ಸುತ್ತಲೂ ಕಾವಲಿ ಇದ್ದದರಿಂದ, (ಉತ್ಪ. ೩. ೨೪.) ಇವು ಜೀವವುಳ್ಳ ಆತ್ಮಗಳಾಗಿದ್ದವೆಂದು ತೀರ್ಮಾನಿಸ ಬಹುದು. ಅವರ ಹಾಗೆ ಚಿನ್ನದಿಂದ ಮಾಡಿದ ಸ್ವರೂಪಗಳು ಒಡಂಬಡಿಕೆಯ ಪೆಟ್ಟಿಗೆಯ ಮೇಲೆ ಕೃಪಾಸನವನ್ನು ಮುಚ್ಚಿ ಕೊಂಡಿದ್ದವು. ಪೇತ್ರನು ಇವುಗಳನ್ನು ಕುರಿತು ದೇವದೂತರು ಕಣ್ಣಿಟ್ಟು ನೋಡುತ್ತಾರೆಂದು ಹೇಳಿದನೆಂದು ತೋಚುತ್ತದೆ. (೧ಪೇತ್ರ. ೧. ೧೨.) ಕೆರೂಬಿಗಳು ದೇವರ ರಥವೆಂದೂ, (೧ ದಿನಚ. ೨೮. ೧೮.) ಕೆರೂಬನ ಮೇಲೆ ಕೂತು ಹಾರಿದನೆಂದೂ, (ಕೀರ್ತ. ೧೮. ೧೦.) ಕೆರೂಬಿಗಳಲ್ಲಿ ಕೂತವನೆಂದೂ (ಕೀರ್ತ. ೮೧. ೧.) ಹೇಳಿರುವದರಿಂದ ಅವು ಪರಮ ಸಿಂಹಾಸನದ ಬಳಿಯಲ್ಲಿರುವ ಉನ್ನತ ಅಂತಸ್ತುಳ್ಳ ದೂತರೆಂದೂ, ದೇವರ ಸನ್ನಿಧಿಯಲ್ಲಿ ಪ್ರಕಾಶಿಸಿ, ಘಾಳಿಯ ಹಾಗೆ ಹಾರಿ ಹೋಗಿ ಆತನಿಗೆ ಸೇವೆ ಮಾಡುವವರೆಂದೂ ತಿಳಿಯ ತಕ್ಕದ್ದು.

7. ಯೆಶಾಯನು ಕಂಡ ದರ್ಶನದಲ್ಲಿ ಸೆರಫಿಯರಲ್ಲಿ ಒಬ್ಬೊಬ್ಬನಿಗೆ ಆರಾರು ರೆಕ್ಕೆಗಳಿದ್ದವು. ಎರಡು ರೆಕ್ಕೆಗಳಿಂದ ಮುಖವನ್ನೂ, ಎರಡು ರೆಕ್ಕೆಗಳಿಂದ ಕಾಲುಗಳನ್ನೂ ಮುಚ್ಚಿ ಕೊಂಡು, ಎರಡು ರೆಕ್ಕೆಗಳಿಂದ ಹಾರಿದರೆಂದು ಹೇಳಿ ಇದೆ. (ಯೆಶಾ. ೬. ೧, ೨.) ಇದರಿಂದ ಪರಮ ಸಿಂಹಾಸನದ ಸುತ್ತಲೂ ನಿಂತು ದೇವರನ್ನು ಆರಾಧಿಸುವ ದೂತರ ಜಾಗ್ರತೆಯೂ, ಅತ್ಯಂತ ಭಯಭಕ್ತಿಯೂ, ಮನೋದೀನತ್ವವೂ ಚನ್ನಾಗಿ ತೋರುತ್ತದೆ. ಅವುಗಳ ಮುಂದೆಯೂ ಹಿಂದೆಯೂ ಒಳಗೂ ಕಣ್ಣುಗಳಿಂದ ತುಂಬಿದವುಗಳಾಗಿದ್ದವೆಂಬುವದರಿಂದ ಅವುಗಳ ಧ್ಯಾನವುಳ್ಳ ಚಿಂತೆಯು ತೋರುತ್ತದೆ. ಹೀಗೆ ಪರಮ ಸಿಂಹಾಸನದಲ್ಲಿ ಕುಳಿತಿರುವ



ರಾತ್ರಿ ಹಗಲು ವಿಶ್ರಾಂತಿಯಾಗದೆ ಹೇಳುವದೇನಂದರೆ—ಇದ್ದವನೂ ಇರುವವನೂ ಬರುವವನೂ ಆಗಿರು
ವಂಥ, ಸರ್ವಶಕ್ತನಾದ ದೇವರಾಗಿರುವಂಥ, ಕರ್ತನು ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು. (ಯೆಶಾ.
೬. ೩.)
೯ ಮತ್ತು ಆ ಜೀವಿಗಳು ಯುಗಯುಗಾಂತರಗಳ ವರೆಗೂ ಬದುಕುವಂಥ, ಸಿಂಹಾಸನದ ಮೇಲೆ ಕೂತು
೧೦ ಕೊಳ್ಳುವವನಿಗೆ ಮಹಿಮೆಯನ್ನೂ ಘನವನ್ನೂ ಸ್ತೋತ್ರವನ್ನೂ ಕೊಡಲಾಗಿ, ಇಪ್ಪತ್ತನಾಲ್ಕು ಹಿರಿಯರು
ಸಿಂಹಾಸನದ ಮೇಲೆ ಕೂತು ಕೊಂಡವನ ಮುಂದೆ ಬಿದ್ದು, ಯುಗಯುಗಾಂತರಗಳ ವರೆಗೂ ಬದುಕುವವ
೧೧ ನಿಗೆ ನಮಸ್ಕರಿಸಿ, ತಮ್ಮ [1]ಕಿರೀಟಗಳನ್ನು ಸಿಂಹಾಸನದ ಮುಂದೆ ಹಾಕಿ, ಹೇಳುವದೇನಂದರೆ— ಕರ್ತನೇ,
ನೀನು ಮಹಿಮೆಯನ್ನೂ ಘನವನ್ನೂ ಬಲವನ್ನೂ ಹೊಂದ ಯೋಗ್ಯನಾಗಿದ್ಧೀ;
ಯಾಕಂದರೆ ನೀನು ಎಲ್ಲವುಗಳನ್ನು ಸೃಷ್ಟಿಸಿದಿ,
[2]ನಿನ್ನ ಚಿತ್ತದಿಂದ ಅವು ಉಂಟಾಗಿವೆ, ಮತ್ತು ಸೃಷ್ಟಿಸಲ್ಪಟ್ಟವು.

ಮುದ್ರೆ ಹಾಕಿದ್ದ ಸುರಳಿಯನ್ನು ತೆರೆಯುವದಕ್ಕೆ ವಿಮೋಚಕನ ಕೈಗೆ ಕೊಟ್ಟದ್ದು; ಪರಮ ಸಭೆ ಆತನನ್ನು ಸ್ತುತಿಸಿದ್ದು.

5. ಮತ್ತು ಸಿಂಹಾಸನದ ಮೇಲೆ ಕೂತು ಕೊಂಡವನ ಬಲಗೈಯಲ್ಲಿ [3]ಒಳಗೆಯೂ ಹಿಂದೆಯೂ ಬರೆದದ್ದಾ
ಗಿಯೂ, ಏಳು ಮುದ್ರೆಗಳಿಂದ ಮುದ್ರಿತವಾಗಿಯೂ, ಇರುವ ಸುರಳಿಯನ್ನು ಕಂಡೆನು.
೨ ಮತ್ತು ಈ ಸುರಳಿಯನ್ನು ತೆರೆಯಲೂ, ಅದರ ಮುದ್ರೆಗಳನ್ನು ಒಡೆಯಲೂ, ಯೋಗ್ಯನು ಯಾವನು?
೩ ಎಂದು ದೊಡ್ಡ ಶಬ್ದದಿಂದ ಸಾರುವ ಬಲಿಷ್ಠ ದೂತನನ್ನು ಕಂಡೆನು. ಮತ್ತು ಪರಲೋಕದಲ್ಲಿಯೂ ಭೂ

ತ್ರಿಯೇಕ ದೇವರನ್ನು, ಸರ್ವಸೃಷ್ಟಿಗಳಲ್ಲಿ ಶ್ರೇಷ್ಠ ಸೃಷ್ಟಿಗಳಾದ ಕೆರೂಬಿಗಳು ಸೆರಫಿಯರು ಮಹಾ ಧ್ಯಾನದಿಂದ ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನೆಂದು ಎಡೆ ಬಿಡದೆ ಕೊಂಡಾಡುತ್ತಾರೆ. ಆ ಪರಮ ಸಭೆಯ ಉತ್ತಮ ತರದ ಆರಾಧನೆ ಎಷ್ಟೋ ಇಂಪಾದದ್ದು!

1. ಕೆರೂಬಿಗಳು ಪರಮ ಸಿಂಹಾಸನದಲ್ಲಿ ಕುಳಿತಿರುವ ತ್ರಿಯೇಕ ದೇವರಾದ ಯೆಹೋವನನ್ನು ಕೊಂಡಾಡಿ ಸ್ತುತಿಸ ಪ್ರಾರಂಭಿಸಿದಾಗಲೇ ಚಿನ್ನದ ಕಿರೀಟಗಳುಳ್ಳಂಥ, ಬಿಳೀ ವಸ್ತ್ರಗಳನ್ನು ಧರಿಸಿದಂಥ, ಇಪ್ಪತ್ತನಾಲ್ಕು ಹಿರಿಯರೂ ತಮ್ಮ ಆಸನಗಳನ್ನು ಬಿಟ್ಟೆದ್ದು, ತಮ್ಮ ಕಿರೀಟಗಳನ್ನು ತೆಗದಿಟ್ಟು, ಸಾಷ್ಟಾಂಗವೆರಗಿ, ಕೆರೂಬಿಗಳ ಸಂಗಡ ತಮ್ಮ ದೇವರನ್ನು ಅತ್ಯಂತ ಭಕ್ತಿಯಿಂದ ಆರಾಧಿಸಿ ಸ್ತುತಿಸಿದರು. ಮಹಾ ಕೀರ್ತಿ ಹೊಂದಿದ ಒಬ್ಬ ಚಕ್ರವರ್ತಿಯು ಆ ಸ್ಥಾನದಲ್ಲಿರುವಾಗ, ಅವನಿಂದ ಅಧಿಕಾರವನ್ನೂ ಘನವನ್ನೂ ಹೊಂದಿದ ಮಂತ್ರಿಗಳು ಪ್ರಭುಗಳು ಎಲ್ಲರೂ ತಮ್ಮ ಮಹಿಮೆಯನ್ನು ಎಣಿಸದೆ, ತಮ್ಮ ಅರಸನ ಮಹಿಮೆಯನ್ನು ಎಣಿಸಿ, ವಿನಯದಿಂದ ಅವನನ್ನು ವಂದಿಸುವ ಪ್ರಕಾರ, ಪರಮ ಅರಸನಾದ ನಿತ್ಯದೇವರಿಂದ ಸರ್ವ ಮಹಿಮೆಯನ್ನು ಹೊಂದಿದ ಕೆರೂಬಿಗಳು ಪರಿಶುದ್ಧವಂತರು ಮುಂತಾದ ಪರಮ ಸಭೆಯವರು ತಮ್ಮ ಮಹಿಮೆಯನ್ನು ಮರೆತು, ತಮಗೆ ಮಹಿಮೆಯನ್ನು ಕೊಟ್ಟ ಮಹಾ ದೇವರನ್ನು ಅತ್ಯಂತ ಭಕ್ತಿ ವಿನಯದಿಂದ ಸ್ತುತಿಸಿ ಕೊಂಡಾಡುವರು.

2. ಸರ್ವಶಕ್ತಿಯುಳ್ಳ ದೇವರ ಚಿತ್ತದಿಂದಲೇ ಸಮಸ್ತವೂ ಉತ್ಪತ್ತಿಯಾದವು. ಆದದರಿಂದ ಸೃಷ್ಟಿಕರ್ತನನ್ನು ಸರ್ವಸೃಷ್ಟಿಗಳೂ ಆರಾಧಿಸ ಬೇಕು. ಸೃಷ್ಟಿಕರ್ತನಾದ ದೇವರು ಕೃಪಾನಿಧಿಯಾಗಿದ್ದಾನೆ. ಆದದರಿಂದ ಈ ವಚನದಲ್ಲಿ ಇಪ್ಪತ್ತನಾಲ್ಕು ಹಿರಿಯರು ಸೃಷ್ಟಿಕರ್ತನನ್ನು ಆರಾಧಿಸುವಂತೆಯೂ, ೫. ೮—೧೨. ವಚನಗಳಲ್ಲಿ ಕೃಪಾನಿಧಿಯಾಗಿರುವ ದೇವರನ್ನು ಆರಾಧಿಸುವಂತೆಯೂ ಹೇಳಿ ಇದೆ. ಸರ್ವ ಸೃಷ್ಟಿಗಳೂ ಒಂದಾಗಿ ಕೂಡಿ ಆತನನ್ನು ಹೊಗಳಿ ಆರಾಧಿಸುವದನ್ನು ಕಾಣ ಬಹುದು. (೫. ೧೩, ೧೪.)

3. ಅದು ಒಳಗೂ ಹೊರಗೂ ಬರದದ್ದಾಗಿದ್ದ ಪೂರ್ಣ ಪುಸ್ತಕವಾಗಿದ್ದದರಿಂದ (ಎಜೇಕಿ. ೨. ೯, ೧೦.) ಅದಕ್ಕೆ ಒಂದನ್ನೂ ಕೂಡಿಸ ಬಾರದು. (ಪ್ರಕಟ. ೨೨. ೧೮.) ಅದು ಏಳು ಮುದ್ರೆಗಳಿಂದ ಮುದ್ರಿಸಲ್ಪಟ್ಟದ್ದಾಗಿದ್ದದರಿಂದ ಅದರ ಮುದ್ರೆಗಳನ್ನು ಒಡೆಯದಿದ್ದರೆ, ಅದರ ಸಂಗತಿಗಳು ಒಬ್ಬರಿಗೂ ತಿಳಿಯಲಾರದು. ಈ ಸುರಳಿಯು ಹೊರಗಡೆ ಏಳು ಮುದ್ರೆಗಳುಳ್ಳದ್ದಾಗಿದ್ದದರಿಂದ ಏಳು ತೊಗಲುಗಳಿಂದ ಮಾಡಲ್ಪಟ್ಟು ಒಂದು ಉರುಟಾದ ಕೋಲಿಗೆ ಸುತ್ತಿದ್ದಾಗಿಯೂ ಇತ್ತು. ಒಂದೊಂದು ಮುದ್ರೆಯನ್ನು ಒಡೆಯಲು ಒಂದೊಂದು ಸುರಳಿಯಲ್ಲಿ ಇದ್ದ ಸಂಗತಿಯನ್ನು ಓದ ತಕ್ಕದ್ದಾಗಿತ್ತು. ಈ ಪುಸ್ತಕವು ಯೋಹಾನನ ಕಾಲದಿಂದ ಲೋಕಾಂತ್ಯದ ಪರ್ಯಂತರ ಲೋಕದಲ್ಲಿ ವಿಶೇಷವಾಗಿ ತಿರುಸಭೆಯಲ್ಲಿ ನಡಿಯುವ ವರ್ತಮಾನಗಳನ್ನು ಪ್ರವಾದನೆಯಾಗಿ ತೋರಿಸುವ ಗ್ರಂಥವಾಗಿದೆ. ಎಜೇಕಿಯೇಲನು ಇಸ್ರಯೇಲರಿಗೆ ಸಂಭವಿಸುವ ಕಾರ್ಯಗಳನ್ನು ಪ್ರವಾದಿಸ ಬೇಕೆಂದು ಅವನಿಗೆ ದೇವರ ಅಪ್ಪಣೆಯಾದಾಗ, ಅವನ ಮುಂದೆ ಒಂದು ಸುರಳಿಯನ್ನು ಹಾಸಿದನೆಂದು ಹೇಳಿ ಇದೆ. (ಎಜೇಕಿ. ೨. ೯.) ಹಾಗೆಯೇ ದಾನಿಯೇಲನು ಪ್ರವಾದನೆಯನ್ನು ಮುಗಿಸ ಅಪ್ಪಣೆ ಹೊಂದಿದಾಗ, ಪುಸ್ತಕಕ್ಕೆ ಮುದ್ರೆ ಹಾಕು ಎಂದು ಹೇಳಿ ಇದೆ. (ದಾನಿ. ೧೨. ೪, ೯.) ಈ ಪುಸ್ತಕವು ದೇವರ ಬಲಗೈಯಲ್ಲಿತ್ತು, ಎಂದು ಹೇಳಿರುವದರಿಂದ ಲೋಕದಲ್ಲಿ ಆಗುವ ಮಾರ್ಪಡುವಿಕೆಗಳಿಂದ ದೇವರು ಮಾರ್ಪಡದೆ, ಸರ್ವಲೋಕಾಧಿಪತಿಯಾಗಿ ಸಿಂಹಾಸನದಲ್ಲಿ ಆಸೀನನಾಗಿದ್ದಾನೆಂದೂ, ಆತನ ಅಪರಿಮಿತ ಜ್ಞಾನದ ಪ್ರಕಾರವೂ ಯತ್ನದ ಪ್ರಕಾರವೂ ಸಮಸ್ತ ಕಾರ್ಯಗಳು ನಡಿಯುತ್ತವೆಂದೂ ತಿಳಿಯ ಬಹುದು.

ಲೋಕದಲ್ಲಿಯೂ ಭೂಲೋಕದ ಕೆಳಗೂ [1]ಆ ಸುರಳಿಯನ್ನು ತೆರೆಯಲಾದರೂ, ಅದನ್ನು [2]ನೋಡಲಾದ
೪ ರೂ, ಯಾರಿಂದಲೂ ಆಗಲಿಲ್ಲ. ಮತ್ತು ಆ ಸುರಳಿಯನ್ನು ತೆರೆದು ಓದುವದಕ್ಕೂ, ಅದನ್ನು ನೋಡುವ
೫ ದಕ್ಕೂ, ಯೋಗ್ಯನಾದ ಯಾವನಾದರೂ ಸಿಕ್ಕದ ಕಾರಣ ನಾನು ಬಹಳವಾಗಿ [3]ಅತ್ತೆನು. ಆಗ ಹಿರಿಯ
ರಲ್ಲಿ ಒಬ್ಬನು ನನಗೆ ಹೇಳಿದ್ದೇನಂದರೆ—ಅಳ ಬೇಡ; ಇಗೋ, [4]ಯೆಹೂದನ ಕುಲದ ಸಿಂಹವೂ ದಾವೀದನ
ಬೇರೂ ಆಗಿರುವವನು ಆ ಸುರಳಿಯನ್ನು ತೆರೆಯುವದಕ್ಕೂ, ಅದರ ಏಳು ಮುದ್ರೆಗಳನ್ನು ಒಡೆಯುವದ
ಕ್ಕೂ, [5]ಜಯಿಸಿದ್ದಾನೆ.
೬ ಮತ್ತು ನಾನು ನೋಡಲಾಗಿ, ಇಗೋ, ಸಿಂಹಾಸನದ, ನಾಲ್ಕು ಜೀವಿಗಳ ಮಧ್ಯದಲ್ಲಿಯೂ, ಹಿರಿಯರ
ಮಧ್ಯದಲ್ಲಿಯೂ, [6]ಕುರಿಮರಿಯು ಕೊಯ್ಯಲ್ಪಟ್ಟಂತೆ, ನಿಂತು ಕೊಂಡಿತು. ಅದಕ್ಕೆ ಏಳು ಕೊಂಬುಗಳೂ
೭ ಏಳು ಕಣ್ಣುಗಳೂ ಇದ್ದವು; ಅವು ಸಕಲ ಭೂಮಿಗೆ ಕಳುಹಿಸಲ್ಪಟ್ಟ ದೇವರ ಏಳು ಆತ್ಮಗಳಾಗಿವೆ. ಅದು
ಬಂದು, ಸಿಂಹಾಸನದ ಮೇಲೆ ಕೂತು ಕೊಂಡವನ ಬಲಗೈಯಿಂದ ಸುರಳಿಯನ್ನು ತೆಗೆದು ಕೊಂಡಿತು.
೮ ಸುರಳಿಯನ್ನು ತೆಗೆದಾಗ, ನಾಲ್ಕು ಜೀವಿಗಳೂ [7]ಇಪ್ಪತ್ತನಾಲ್ಕು ಹಿರಿಯರೂ, ಒಬ್ಬೊಬ್ಬನು ವೀಣೆಗಳ
ನ್ನೂ, ಪರಿಶುದ್ಧರ ಪ್ರಾರ್ಥನೆಗಳಾದ ಧೂಪದಿಂದ ತುಂಬಿರುವ ಚಿನ್ನದ ಪಾತ್ರೆಗಳನ್ನೂ, ಹಿಡುಕೊಂಡವರಾಗಿ,
ಕುರಿಮರಿಯ ಮುಂದೆ ಬಿದ್ದು,

1. ಆ ಸುರಳಿಯ ಮುದ್ರೆಯನ್ನು ಒಡೆಯಲೂ ಓದಲೂ ತಕ್ಕವನ್ಯಾರೆಂದು, ಒಬ್ಬ ಬಲಿಷ್ಠ ದೂತನು ಸಾರಲಾಗಿ, ಮನುಷ್ಯರಿಂದಲೂ ದೂತರಿಂದಲೂ ಅದು ಆಗದ ಕಾರಣ ಪರಲೋಕವು ಮೌನವಾಯಿತು. ಯಾರೂ ಅದನ್ನು ಒಡೆದು ಓದಲಾರದೆ ಇದ್ದರು.

2. ಸುರಳಿಯನ್ನು ತೆರೆದು ಓದುವದಕ್ಕಾದರೂ ಅದನ್ನು ನೋಡುವದಕ್ಕಾದರೂ ಸರ್ವಲೋಕದಲ್ಲಿ ಒಂದು ಸೃಷ್ಟಿಯಿಂದಲೂ ಆಗದೆ ಇತ್ತು. ದೇವರ ರಹಸ್ಯಗಳನ್ನು ಯಾರು ಗ್ರಹಿಸ ತಕ್ಕವರು?

3. ಸುರಳಿಯಲ್ಲಿರುವ ಸಂಗತಿಗಳನ್ನು ತಿಳಿಯದಿದ್ದರೆ, ಸಭೆಗೆ ಬರುವ ಪ್ರಯೋಜನಗಳನ್ನು ಗ್ರಹಿಸ ಕೂಡದಲ್ಲ ಎಂದು ಯೋಹಾನನು ಬಹಳವಾಗಿ ಅತ್ತನು.

4. "ಯೆಹೂದನ ಕುಲದ ಸಿಂಹವು" ಎಂಬುವದರಲ್ಲಿ, ಯಾಕೋಬನು ಯೆಹೂದನ ಕುಲವನ್ನು ಕುರಿತು ಹೇಳಿದ ಪ್ರವಾದನೆಯ ಸಾರವೂ, (ಉತ್ಪ. ೪೯. ೮—೧೦.) ದಾವೀದನ ಬೇರು ಎಂಬುವದರಲ್ಲಿ, ಯೆಶಾಯನು ದಾವೀದನ ಕುಲವನ್ನು ಕುರಿತು ಹೇಳಿದ ಪ್ರವಾದನೆಯ ಸಾರವೂ ಅಡಗಿ ಇದೆ. (ಯೆಶಾ. ೧೧. ೧.) ಇವು ಯೆರೆಮೀಯ ಜೆಕರೀಯ ಎಂಬ ಪ್ರವಾದಿಗಳ ಗ್ರಂಥಗಳಲ್ಲಿ ಸಹ ಉಂಟು. ಯೆಹೂದನ ಕುಲದಲ್ಲಿ ಹುಟ್ಟಿದ ದಾವೀದನು ಸೊಲೊಮೋನನು ಮುಂತಾದ ಅರಸರು ಸಿಂಹದ ಹಾಗೆ ಶತ್ರುಗಳನ್ನು ಜಯಿಸಿ ಜಯಶಾಲಿಗಳಾಗಿ ತೋರಿದರು. ದಾವೀದನ ಕುಲದಲ್ಲಿ ಉದಯಿಸಿದ ಜಗದ್ರಕ್ಷಕನಾದ ಕ್ರಿಸ್ತನು ಯೆಹೂದ ಕುಲದ ಸಿಂಹವಾಗಿ, ದಾವೀದನ ಸಿಂಹಾಸನದ ಮೇಲೆ ಎಂದೆಂದಿಗೂ ಆಸೀನನಾಗಿದ್ದು ತಿರುಸಭೆಯ ಸರ್ವ ಶತ್ರುಗಳನ್ನು ಜಯಿಸಿ, ಜಯಶೀಲನಾಗಿ ತೋರುವನು. ಆತನು ಶಕ್ತಿಯಲ್ಲಿಯೂ, ಶಬ್ದದಲ್ಲಿಯೂ, ಮಹತ್ವದಲ್ಲಿಯೂ, ಭಯಂಕರವಾದ ದಂಡನೆಗಳನ್ನು ಸಲ್ಲಿಸುವ ಅಧಿಕಾರದಲ್ಲಿಯೂ, ರಾಜತ್ವದಲ್ಲಿಯೂ, ಸಿಂಹಕ್ಕೆ ಸಮಾನವಾದವನಾಗಿದ್ದಾನೆ. ಯೆಹೂದನ ಕುಲದ ಸಿಂಹವಾದ ಆತನು ದಾವೀದನ ಬೇರಾಗಿಯೂ ಇದ್ದಾನೆ. ದಾವೀದನ ಕುಲದಲ್ಲಿ ಹುಟ್ಟಿದ ಆತನು ದಾವೀದನ ಮಗನಾಗಿದ್ದಾಗ್ಯೂ, ದಾವೀದನ ಬೇರಾಗಿರುವದರಿಂದ ದಾವೀದನ ಕರ್ತನಾಗಿಯೂ ಇದ್ದಾನೆ.

5. ಮಧ್ಯಸ್ಥನಾದ ಕ್ರಿಸ್ತನು ಶತ್ರುಗಳ ಮೇಲೆ ಜಯ ಹೊಂದಿದ್ದರಿಂದ ಆತನು ಸುರಳಿಯನ್ನು ತೆರೆದು ಓದ ತಕ್ಕವನಾಗಿದ್ದಾನೆ. ನಿತ್ಯ ವಾಕ್ಯವಾಗಿರುವ ಕ್ರಿಸ್ತನಿಗೆ, ತಂದೆಯಾದ ದೇವರ ಚಿತ್ತದ ನಿರ್ಣಯಗಳೆಲ್ಲಾ ಆದ್ಯಂತವಾಗಿ ತಿಳಿದಿದ್ದಾಗ್ಯೂ, ಮುಖ್ಯವಾಗಿ ಆತನು ಮಧ್ಯಸ್ಥನಾಗಿ ಲೋಕದಲ್ಲಿ ಅವತರಿಸಿ, ಶತ್ರುಗಳನ್ನು ಜಯಿಸಿದ ಕಾರಣದಿಂದ ಸುರಳಿಯ ಮುದ್ರೆಯನ್ನು ಒಡೆದು ಅದರ ಸಂಗತಿಗಳನ್ನು ಸರ್ವರಿಗೂ ಪ್ರಕಟ ಮಾಡ ತಕ್ಕವನಾಗಿದ್ದಾನೆ. ಅಳುತ್ತಿದ್ದ ಯೋಹಾನನಿಗೆ ಹಿರಿಯರಲ್ಲೊಬ್ಬನು ಈ ಆದರಣೆಯ ಮಾತುಗಳನ್ನು ಹೇಳಿದ್ದರಿಂದ, ಪರಮ ಸಭೆಗೂ ಲೋಕದಲ್ಲಿರುವ ಸಭೆಗೂ ಉಂಟಾಗಿರುವ ಸಮ್ಮಂಥವೂ ಸಹತಾಪವೂ ಚನ್ನಾಗಿ ಕಾಣುತ್ತದೆ.

6. ಆತನು ಕೊಯ್ಯಲ್ಪಟ್ಟ ಕುರಿಯಂತೆ ಇದ್ದದರಿಂದ ಜಯ ಹೊಂದಿದ ಸಿಂಹವಾಗಿದ್ದನು. ಶಿಲುಬೆಯ ಮೇಲೆ ತನ್ನನ್ನು ತಾನೇ ಪಾಪನಿವಾರಣಬಲಿಯಾಗಿ ಅರ್ಪಿಸಿದ ಯೇಸು ಕ್ರಿಸ್ತನೇ ಪರಮ ಸಭೆಯ ಮಧ್ಯದಲ್ಲಿ ಸರ್ವಸೃಷ್ಟಿಗಳ ಆರಾಧನೆಯನ್ನು ಹೊಂದುವವನಾಗಿ ಪ್ರಕಾಶಿಸುತ್ತಾನೆ. ಏಳು ಕೊಂಬುಗಳು ಎಂಬುವದು ಕ್ರಿಸ್ತನ ಸಂಪೂರ್ಣವಾದ ಶಕ್ತಿಯನ್ನೂ, ಏಳು ಕಣ್ಣುಗಳೆಂಬುವದು ಆತನ ಸರ್ವಜ್ಞತ್ವವನ್ನೂ ಸೂಚಿಸುತ್ತದೆ.

7. ಕುರಿಮರಿಯಾಗಿ ತೋರಿದ ಯೇಸು ಕ್ರಿಸ್ತನು ಪರಮ ಸಿಂಹಾಸನದ ಮೇಲೆ ಆಸೀನನಾಗಿದ್ದ ಸರ್ವಶಕ್ತನಾದ ದೇವರ ಬಲಗೈಯಲ್ಲಿದ್ದ ಸುರಳಿಯನ್ನು ತೆಗೆದು ಕೊಂಡಾಗ, ಪರಮ ಸಭೆಯವರು ಆತನ ಪಾದದ ಮುಂದೆ ಸಾಷ್ಟಾಂಗ ಬಿದ್ದು, ಆತನನ್ನು ಸ್ತುತಿಸಿ ಕೊಂಡಾಡಿದರು. ಆತನಿಗೆ ಸಾಷ್ಟಾಂಗವೆರಗಿ ಆರಾಧಿಸಿದ ಇಪ್ಪತ್ತನಾಲ್ಕು ಹಿರಿಯರು ಪೂರ್ವ ಯಾಜಕರ ಹಾಗೆ ವೀಣೆಗಳನ್ನೂ, ಪರಿಶುದ್ಧರ ಪ್ರಾರ್ಥನೆಗಳಾದ ಧೂಪವರ್ಗದಿಂದ ತುಂಬಿದ ಚಿನ್ನದ ಕಲಶಗಳನ್ನೂ ಹಿಡಿದು ಕೊಂಡಿದ್ದರು. ದೇವಭಕ್ತರ ಪ್ರಾರ್ಥನೆಗಳು ಸುಗಂಧವಾಸನೆಯಾದ ಧೂಪವರ್ಗದ ಹಾಗೆ ದೇವರಿಗೆ ಪ್ರಿಯವಾಗಿದೆ ಎಂದು ಈ ವಚನದಿಂದ ತಿಳಿಯಬಹುದು. (ಕೀರ್ತ. ೧೪೧. ೨.)



೯ [1]ಹೊಸ ಹಾಡನ್ನು ಹಾಡುತ್ತಾ ಹೇಳುವದೇನಂದರೆ—ನೀನು ಸುರಳಿಯನ್ನು ತೆಗೆದು, ಅದರ ಮುದ್ರೆಗಳನ್ನು
ಒಡೆಯುವದಕ್ಕೆ ಯೋಗ್ಯನಾಗಿದ್ದೀ;
ಯಾಕಂದರೆ ನೀನು ಕೊಲ್ಲಲ್ಪಟ್ಟೆ, ನಿನ್ನ ರಕ್ತದಿಂದ ನಮ್ಮನ್ನು ಸಕಲ ಕುಲ, ಭಾಷೆ, ಪ್ರಜೆ, ಜನಾಂಗಗಳೊ
ಳಗಿಂದ ದೇವರಿಗೆ [2]ಕೊಂಡು ಕೊಂಡಿ.
೧೦ ನಮ್ಮ ದೇವರಿಗೆ [3]ನಮ್ಮನ್ನು ಅರಸರನ್ನೂ ಯಾಜಕರನ್ನೂ ಮಾಡಿದಿ.
ಮತ್ತು ಭೂಮಿಯ ಮೇಲೆ ಆಳುವೆವು.
೧೧ ಮತ್ತು ನೋಡಲಾಗಿ, ಸಿಂಹಾಸನದ, ಜೀವಿಗಳ, ಹಿರಿಯರ, ಸುತ್ತಲು [4]ಅನೇಕ ದೂತರ ಶಬ್ದವನ್ನು ಕೇಳಿ
ದೆನು; ಅವರ ಲೆಖ್ಖವು ಅಯುತಗಳ ಅಯುತಗಳೂ, ಸಹಸ್ರಗಳ ಸಹಸ್ರಗಳೂ ಆಗಿತ್ತು.
೧೨ ಅವರು ದೊಡ್ಡ ಶಬ್ದದಿಂದ ಹೇಳಿದ್ದು—ಕೊಲ್ಲಲ್ಪಟ್ಟ ಕುರಿಮರಿಯು ಬಲ, ಐಶ್ವರ್ಯ, ಜ್ಞಾನ, ಶಕ್ತಿ, ಘನ,
ಮಹಿಮೆ, ಸ್ತೋತ್ರಗಳನ್ನು [5]ಹೊಂದ ಯೋಗ್ಯವಾಗಿದೆ.
೧೩ ಮತ್ತು ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ, ಭೂಲೋಕದ ಕೆಳಗೂ, ಸಮುದ್ರದ ಮೇಲೆಯೂ,
ಅವುಗಳೊಳಗೂ, ಇರುವ ಸೃಷ್ಟಿಗಳೆಲ್ಲಾ,
ಸಿಂಹಾಸನದ ಮೇಲೆ ಕೂತು ಕೊಂಡವನಿಗೂ, [6]ಕುರಿಮರಿಗೂ, ಸ್ತೋತ್ರ, ಘನ, ಮಹಿಮೆ, ತ್ರಾಣ,
ಯುಗಯುಗಾಂತರಗಳ ವರೆಗೂ ಉಂಟಾಗಲಿ, ಎಂದು ಹೇಳುವದನ್ನು ಕೇಳಿದೆನು.
೧೪ ಮತ್ತು ನಾಲ್ಕು ಜೀವಿಗಳು, ಆಮೆನ್ ಅಂದವು. ಮತ್ತು ಇಪ್ಪತ್ತನಾಲ್ಕು ಹಿರಿಯರು ಬಿದ್ದು, ಯುಗ
ಯುಗಾಂತರಗಳ ವರೆಗೂ ಬದುಕುವವನಿಗೆ ನಮಸ್ಕರಿಸಿದರು.

ಮುದ್ರಿಸಲ್ಪಟ್ಟ ಸುರಳಿಯು; ಮೊದಲನೇ ಆರು ಮುದ್ರೆಗಳನ್ನು ಒಡೆದದ್ದು.

6. [7]ಮತ್ತು ಕುರಿಮರಿಯು ಮುದ್ರೆಗಳಲ್ಲಿ ಒಂದು ಒಡೆಯುವದನ್ನು ನಾನು ನೋಡಲಾಗಿ, ನಾಲ್ಕು ಜೀವಿ

1. ಸೃಷ್ಟಿಯ ಹಾಡು ಹಳೇ ಹಾಡು. (ಯೋಬ. ೩೮. ೭. ಪ್ರಕಟ. ೪. ೯—೧೧.) ವಿಮೋಚನೆಯ ಹಾಡು ಹೊಸ ಹಾಡು. ಅದು ದೇವರ ನಿರ್ಣಯವನ್ನು ಹೊಸದಾಗಿ ಪ್ರಕಟ ಮಾಡಿದ್ದರಿಂದಲೂ, ಆ ಅದ್ಭುತಕ್ರಿಯೆಯಲ್ಲಿ ತೋರಿದ ದೇವರ ಮಹಾ ಪ್ರೀತಿಯು ಸರ್ವಲೋಕದವರಿಗೆ ಸದಾ ಹೊಸದಾಗಿರುವ ಕಾರಣದಿಂದಲೂ ಅದು ಹೊಸ ಹಾಡಾಗಿದೆ.

2. ಈ ಇಪ್ಪತ್ತನಾಲ್ಕು ಹಿರಿಯರು ವಿಮೋಚಿಸಲ್ಪಟ್ಟ ಸಭೆಯವರಿಗೆ ಪ್ರತಿನಿಧಿಗಳಾಗಿದ್ದು ಕ್ರಿಸ್ತನಿಂದ ತಮಗುಂಟಾದ ದೊಡ್ಡ ವಿಮೋಚನೆಗೋಸ್ಕರ ಆತನನ್ನು ಸ್ತುತಿಸುತ್ತಾರೆ.

3. 'ನಮ್ಮನ್ನು' ಎಂಬುವದು ಹಿರಿಯರಿಂದ ಸೂಚಿಸಲ್ಪಟ್ಟ ಸಭೆಯವರೆಲ್ಲರನ್ನು ಕುರಿತದ್ದು. ಭೂಮಿಯಲ್ಲಿ ತಮ್ಮ ಕರ್ತನಿಗೆ ಇರುವ ಧೊರೆತನದಲ್ಲಿ ಆತನ ದಾಸರಿಗೂ ಪಾಲು ಉಂಟು. (ಎಫೆ. ೧. ೨೩.) ಆತನು ಆಳುವದರಿಂದ ಆತನ ಭಕ್ತರು ಸಹ ಆತನ ಸಂಗಡ ಆಳುವರು.

4. ಪರಲೋಕವಾಸಿಗಳಾದ ಲೆಖ್ಖವಿಲ್ಲದ ಪರಿಶುದ್ಧ ದೂತರು ತಮ್ಮ ಕರ್ತನಿಗೆ ಸ್ತೋತ್ರವಾಗಿ ಹೊಸ ಹಾಡನ್ನು ಹಾಡಿದ ಪರಿಶುದ್ಧವಂತರ ಸಂಗಡ ಕೂಡಿ ಕೊಂಡು ಹಾಡಿದರು.

5. ಅವರು ಆತನ ಲಕ್ಷಣಗಳನ್ನು ಹೇಳಿ ಆತನನ್ನು ಹೊಗಳುತ್ತಾರೆ. ಸರ್ವ ಸ್ವತಂತ್ರನಿಗೆ ಬಲವೂ, ಸರ್ವೋಪಕಾರಿಗೆ ಐಶ್ವರ್ಯವೂ, ಸರ್ವಜ್ಞನಿಗೆ ಜ್ಞಾನವೂ, ಸಮಸ್ತವನ್ನು ಮಾಡ ತಕ್ಕವನಿಗೆ ಶಕ್ತಿಯೂ, ಸರ್ವಕ್ಕೂ ಕರ್ತನಾದವನಿಗೆ ಘನವೂ, ಮಹತ್ವವುಳ್ಳವನಿಗೆ ಮಹಿಮೆಯೂ, ಕೃತಜ್ಞತೆಯ ಸ್ತೋತ್ರವನ್ನು ಹೊಂದ ತಕ್ಕವನಿಗೆ ಸ್ತೋತ್ರವೂ ಉಂಟಾಗಲೆಂದು ಆರ್ಭಟದಿಂದ ಹೊಗಳಿ ಸ್ತುತಿಸಿದರು.

6. ಜೀವಕೋಟಿಗಳಿಂದ ಬಂದ ಸ್ತೋತ್ರವೂ ಹೊಗಳಿಕೆಯೂ ಕುರಿಮರಿಯಾಗಿ ತೋರಿದ ಯೇಸು ರಕ್ಷಕನಿಗೆ ಬಂತು. ಪರಲೋಕ ಭೂಲೋಕ ಪಾತಾಳಲೋಕವೆಂಬ ತ್ರಿಲೋಕಗಳಲ್ಲಿರುವ ಸರ್ವಸೃಷ್ಟಿಗಳೂ ಸಿಂಹಾಸನದಲ್ಲಿ ಆಸೀನನಾಗಿದ್ದಾತನನ್ನೂ, ಕುರಿಮರಿಯಾದ ಆತನ ಪರಿಶುದ್ಧ ಮಗನನ್ನೂ ಹೊಗಳಿ ಸ್ತುತಿಸಿದರು. ಅವರು ಮಹೋನ್ನತವಾದವುಗಳಲ್ಲಿ ದೇವರಿಗೆ ಮಹಿಮೆಯು ಎಂದು ಹಾಡಿದ ಹಾಡು ಸಂಪೂರ್ಣವಾಯಿತು.

7. ಸುರಳಿಯ ಮುದ್ರೆಗಳನ್ನು ಒಡೆದಾಗ, ಅವುಗಳ ಕಾರ್ಯಗಳಿಗೆ ಗುರುತಾದ ರೂಪಗಳು ದರ್ಶನದಲ್ಲಿ ಕಾಣಲ್ಪಟ್ಟವು. ಮೊದಲನೇದು, ಕಾಣಲ್ಪಟ್ಟ ಬಿಳೀ ಕುದುರೆಯ ಮೇಲೆ ಕೂತವನಿಗೆ ಬಿಲ್ಲು ಇತ್ತು; ಮತ್ತು ಕಿರೀಟವು ಕೊಡಲ್ಪಟ್ಟಿತು; ಅವನು ಬಹಳ ಜಯ ಹೊಂದುವವನಾಗಿ ಹೊರಟನು. (೬. ೧, ೨.) ಎರಡನೇದು, ಕೆಂಪು ಕುದುರೆಯ ಮೇಲೆ ಕೂತವನು, ಭೂಮಿಯಲ್ಲಿ ಸಮಾಧಾನವು ಇಲ್ಲದೆ ಹೋಗುವದೆಂದೂ, ಅದರ ಪ್ರಜೆಗಳು ಒಬ್ಬರನ್ನೊಬ್ಬರು ಕೊಂದು ಮಡಿದು ಹೋಗುವರೆಂದೂ ಹೇಳುವದನ್ನು ತೋರಿಸುವದಕ್ಕೆ ಒಂದು ದೊಡ್ಡ ಕತ್ತಿಯನ್ನು ಹಿಡಿದಿದ್ದನು. (೩, ೪. ವ.) ಮೂರನೇದು, ಒಂದು ಕರೀ ಕುದುರೆಯು ಕಾಣಲ್ಪಟ್ಟಿತು. ಅದರ ಮೇಲೆ ಕೂತವನು, ಬರವು ಬರುವದೆಂಬುವದಕ್ಕೆ ಗುರುತಾಗಿ ಒಂದು ತ್ರಾಸು ಹಿಡಿದಿದ್ದನು. (೫, ೬. ವ.) ನಾಲ್ಕನೇ ಮುದ್ರೆಯನ್ನು ಒಡೆದಾಗ, ವಿವರ್ಣವಾದ ಕುದುರೆಯು

೨ ಗಳಲ್ಲಿ ಒಂದು, ಗುಡುಗಿನ ಶಬ್ದದ ಹಾಗೆ, [1]ಬಂದು ನೋಡು, ಎಂದು ಹೇಳುವದನ್ನು ಕೇಳಿದೆನು. ಮತ್ತು
ನಾನು ನೋಡಲಾಗಿ, ಇಗೋ, [2]ಬಿಳೀ ಕುದುರೆಯು; ಅದರ ಮೇಲೆ ಕೂತು ಕೊಂಡವನಿಗೆ ಬಿಲ್ಲು ಇತ್ತು;
ಕಿರೀಟವು ಅವನಿಗೆ ಕೊಡಲ್ಪಟ್ಟಿತು; ಮತ್ತು ಅವನು ಜಯಿಸುವವನಾಗಿಯೂ, ಜಯಿಸುವ ಹಾಗೆಯೂ,
ಹೊರಟನು.
೩ ಎರಡನೇ ಮುದ್ರೆಯನ್ನು ಒಡೆದಾಗ, ಎರಡನೇ ಜೀವಿಯು, ಬಂದು ನೋಡು, ಎಂದು ಹೇಳುವದನ್ನು ಕೇ
೪ ಳಿದೆನು. ಆಗ [3]ಕೆಂಪಾದ ಬೇರೆ ಕುದುರೆ ಹೊರಟಿತು; ಅದರ ಮೇಲೆ ಕೂತು ಕೊಂಡವನಿಗೆ, ಒಬ್ಬರನ್ನೊ
ಬ್ಬರು ಕೊಲ್ಲುವ ಹಾಗೆ, ಭೂಮಿಯಿಂದ ಸಮಾಧಾನವನ್ನು ತೆಗೆಯುವ ಅಧಿಕಾರವು ಕೊಡಲ್ಪಟ್ಟಿತು; ಮತ್ತು
ದೊಡ್ಡ ಕತ್ತಿ ಅವನಿಗೆ ಕೊಡಲ್ಪಟ್ಟಿತು.
೫ ಮೂರನೇ ಮುದ್ರೆಯನ್ನು ಒಡೆದಾಗ, ಮೂರನೇ ಜೀವಿಯು, ಬಂದು ನೋಡು, ಎಂದು ಹೇಳುವದನ್ನು
ಕೇಳಿದೆನು. ಮತ್ತು ನೋಡಲಾಗಿ, ಇಗೋ, [4]ಕರೀ ಕುದುರೆಯು; ಅದರ ಮೇಲೆ ಕೂತು ಕೊಂಡವನ ಕೈ

ಕಾಣಲ್ಪಟ್ಟಿತು. ಅದರ ಮೇಲೆ ಕೂತವನಿಗೆ ಮರಣವೆಂಬುವ ಹೆಸರಿತ್ತು. ಪಾತಾಳವು ಅವನನ್ನು ಹಿಂಬಾಲಿಸಿತು. ಅವನು ನಾನಾ ಉಪದ್ರಗಳಿಂದ ಭೂಮಿಯ ಕಾಲು ಭಾಗವನ್ನು ನಾಶ ಮಾಡಿದನು. (೬, ೮. ವ.) ಐದನೇ ಮುದ್ರೆಯನ್ನು ಒಡೆದಾಗ, ಯಾವ ರೂಪವೂ ತೋರಲಿಲ್ಲ. ರಕ್ತಸಾಕ್ಷಿಗಳಾಗಿ ಸತ್ತ ಭಕ್ತರ ಆತ್ಮಗಳು ಬಲಿಪೀಠದ ಕೆಳಗೆ ಕಾಣಿಸಲ್ಪಟ್ಟವು. ಅವರು ಮನುಷ್ಯರ ಅಕ್ರಮವನ್ನು ಕುರಿತು ದೇವರಿಗೆ ಮೊರೆ ಇಟ್ಟರು. ನಿರಪರಾಧಕ್ಕೂ ಜಯಕ್ಕೂ ಗುರುತಾಗಿರುವ ಬಿಳೀ ವಸ್ತ್ರವನ್ನು ಹೊಂದಿದ ಅವರಿಗೆ, ಉಳಿದ ಭಕ್ತರು ಅವರ ಹಾಗೆ ಉಪದ್ರ ಪಟ್ಟು ತೀರುವ ಪರ್ಯಂತರ ಪಾತಕರಿಗೆ ನೀತಿಯಾದ ದಂಡನೆ ತಾಮಸವಾಗಿರುವದೆಂದು ಹೇಳಲ್ಪಟ್ಟಿತು. (೯—೧೧. ವ.) ಆರನೇ ಮುದ್ರೆಯನ್ನು ಒಡೆದಾಗ ಒಂದು ಭಯಂಕರವಾದ ನೋಟವು ಕಾಣಲ್ಪಟ್ಟಿತು. ಲೋಕವು ನೆಲೆ ತಪ್ಪಿ ನಾಶವಾಯಿತು. ಲೋಕದ ಪ್ರಜೆಗಳು ಕುರಿಮರಿಯ ಉಗ್ರ ಕೋಪವನ್ನು ತಾಳಲಾರದೆ ನಡುಗುತ್ತಾ ನಿಂತರು. (೧೨—೧೭. ವ.) ಲೋಕದಲ್ಲಿ ಇಂಥಾ ದೇವರ ದಂಡನೆಗಳು ಸಂಭವಿಸಿದ ಕಾಲದಲ್ಲಿ ದೇವರ ದಾಸರು ಯಾವ ವಿಘ್ನವೂ ಇಲ್ಲದೆ ಕ್ಷೇಮವಾಗಿದ್ದರು. (೭. ೧—೩.) ಇಸ್ರಯೇಲ್ಯರಲ್ಲಿ ದೇವರ ಕೃಪೆಯನ್ನು ಹೊಂದಿದ ಉತ್ತಮ ಭಕ್ತರು ಐಗುಪ್ತ ದೇಶದಲ್ಲಿದ್ದ ತಮ್ಮ ಪೂರ್ವಿಕರು ಕೋಪಾಜ್ಞೆಗೆ ತೊಲಗುವಂತೆ ಧರಿಸಿದ ಗುರುತಿನ ಪ್ರಕಾರ, ಇವರು ಮುದ್ರೆಯನ್ನು ಧರಿಸಿ ಕೊಂಡು, ದೇವರ ಉಗ್ರ ಕೋಪಕ್ಕೆ ತಪ್ಪಿಸಿ ಕೊಂಡರು. (೪—೮. ವ.) ತರುವಾಯ ಲೆಖ್ಖವಿಲ್ಲದ ಒಂದು ಮಹಾ ಸಮೂಹವು ಪರಮ ಸಭೆಯ ಸಂಗಡ ಕೂಡಿ ಕೊಂಡು, ದೊಡ್ಡ ಉಪದ್ರದಲ್ಲಿದ್ದ ತಮ್ಮ ರಕ್ಷಣೆಯು ಸಂಪೂರ್ಣವಾಗಿ, ತಾವು ಪರಮ ಪದವಿಯಲ್ಲಿ ಶೇರಿದ್ದಕ್ಕಾಗಿ, ದೇವರನ್ನೂ ಕುರಿಮರಿಯನ್ನೂ ಅಂತರ್ಯದ ಸಂತೋಷದಿಂದ ಹೊಗಳಿ ಕೊಂಡಾಡಿದರು. (೯—೧೭. ವ.) ಕಡೇ ಮುದ್ರೆಯಾದ ಏಳನೇ ಮುದ್ರೆಯನ್ನು ಒಡೆದಾಗ ಪರಲೋಕದಲ್ಲಿ ನಿಶ್ಶಬ್ದವಾಯಿತು. (೮. ೧.)

1. ದಿವ್ಯ ದರ್ಶನವನ್ನು ಕಂಡ ಭಕ್ತನಾದ ಯೋಹಾನನು ಆಶ್ಚರ್ಯಭರಿತನಾಗಿ ಮೈಮರೆತವನಾಗಿರುವನು. ತ್ರಿಲೋಕಗಳಲ್ಲಿರುವ ಸರ್ವಸೃಷ್ಟಿಗಳಲ್ಲಿ ಯಾರೂ ತೆರೆಯ ಕೂಡದ ಸುರಳಿಯನ್ನು ಕುರಿಮರಿಯಾದ ಕ್ರಿಸ್ತನು ತೆಗೆದು ಕೊಂಡು ತೆರೆದದ್ದನ್ನು ಕಂಡ ಯೋಹಾನನಿಗೆ ಬಹಳ ಆನಂದವೂ ಉಲ್ಲಾಸವೂ ಉಂಟಾಯಿತು. ಆದದರಿಂದ ನಾಲ್ಕು ಜೀವಿಗಳಲ್ಲಿ ಒಂದು, ಅತಿಶಯವನ್ನು ಹತ್ತರ ಬಂದು ನೋಡು ಎಂಬದಾಗಿ ಗುಡುಗಿನಂತೆ ಮಹಾ ಶಬ್ದದಿಂದ ಹೇಳಿದನು.

2. ಈ ಆರು ಮುದ್ರೆಗಳನ್ನು ಒಡೆದಾಗ ಕಾಣಲ್ಪಟ್ಟ ದರ್ಶನಗಳು, ಕ್ರಿಸ್ತನ ರಾಜ್ಯವನ್ನು ಎದುರಿಸಿದ ರೋಮ ರಾಜ್ಯದಲ್ಲಿ ಸಂಭವಿಸಿದ ಕಾರ್ಯಗಳನ್ನು ತೋರಿಸುತ್ತವೆಂದು ಅನೇಕ ವಿದ್ವಾಂಸರು ನೆನಸುತ್ತಾರೆ. ದಾನಿಯೇಲನ ಪ್ರವಾದನೆಯಲ್ಲಿ, ಬಾಬೆಲು, ಫಾರ್ಸ್ಯ, ಗ್ರೇಕ, ರೋಮಾಯ, ಎಂಬ ನಾಲ್ಕು ರಾಜ್ಯಗಳನ್ನು, ಸಿಂಹ, ಕರಡಿ, ಚಿರತೆ, ಒಂದು ಭಯಂಕರವಾದ ಮೃಗ ಎಂಬ ಮೃಗಗಳಿಗೆ ಉಪಮಾನಿಸಿ ಹೇಳಿರುವದರಿಂದ, ಈ ದರ್ಶನಗಳಲ್ಲಿ ಕಾಣಲ್ಪಟ್ಟ ಕುದುರೆಯು ರೋಮ ರಾಜ್ಯವನ್ನು ಸೂಚಿಸುತ್ತದೆಂದು ತೋರುತ್ತದೆ. ಹೀಗಾದರೆ ಕುದುರೆಗಳ ಮೇಲೆ ಕೂತವರು ರೋಮ ರಾಜ್ಯದ ಚಕ್ರವರ್ತಿಗಳನ್ನು ಸೂಚಿಸುತ್ತಾರೆ. ಮೊದಲನೇ ಮುದ್ರೆಯು ಒಡೆಯಲ್ಪಡುವಾಗ ಕಾಣಲ್ಪಟ್ಟ ಬಿಳೀ ಕುದುರೆ, ಜಯಕ್ಕೂ ಕ್ಷೇಮಕ್ಕೂ ಗುರುತಾಗಿದೆ. ೯೬ನೇ ವರುಷ ಮೊದಲು ೧೮೦ನೇ ವರುಷದ ವರೆಗೂ ರೋಮಾಯರಿಗೆ ಜಯಕ್ಷೇಮ ಕಾಲವಾಗಿತ್ತೆಂದು ಚರಿತ್ರೆಗಾರರು ಬರೆದಿದ್ದಾರೆ. ಆದದರಿಂದ ಈ ಪ್ರವಾದನೆಯು ರೋಮ ರಾಜ್ಯದಲ್ಲಿ ಆ ಕಾಲದಲ್ಲಿ ಉಂಟಾಗಿದ್ದ ಜಯದ ಸಂಗತಿಯನ್ನು ಕುರಿತದ್ದಾಗಿದೆ ಎಂದು ತಿಳಿಯ ಬೇಕು.

3. ಎರಡನೇ ಮುದ್ರೆಯನ್ನು ಒಡೆದಾಗ, ಕೆಂಪಾದ ಬೇರೆ ಕುದುರೆ ಹೊರಟಿತು. ಬಿಳೀ ಕುದುರೆಯಿಂದ ಸೂಚಿಸಲ್ಪಟ್ಟ ಕ್ಷೇಮ ಕಾಲ ಕಳೆದು ಹೋಗಲು, ಕೆಂಪು ಕುದುರೆಯಿಂದಲೂ, ಅದರ ಮೇಲೆ ಕೂತವನು ಹಿಡಿದಿದ್ದ ಕತ್ತಿಯಿಂದಲೂ ಸೂಚಿಸಲ್ಪಟ್ಟ ಯುದ್ಧಕಾಲ ಉಂಟಾಯಿತು. ರೋಮಾಯರ ಚರಿತ್ರವನ್ನು ಯೋಚಿಸುವಾಗ ಈ ಪ್ರವಾದನೆ ಈಡೇರಿತೆಂದು ತೋರುತ್ತದೆ. ೧೮೫ ವರುಷ ಮೊದಲು ೨೮೪ನೇ ವರುಷದ ವರಿಗೂ "ಒಬ್ಬರನ್ನೊಬ್ಬರು ಕೊಲ್ಲುವ ಹಾಗೆ" ಎಂದು ಹೇಳಿದ ಪ್ರಕಾರ ರೋಮ ರಾಜ್ಯದಲ್ಲಿ ಎಲ್ಲೆಲ್ಲಿಯೂ ಕಲಹವೂ ರಕ್ತಪ್ರವಾಹವೂ ಆಗಿತ್ತು. ಅರಸುಗಳಲ್ಲಿ ಅನೇಕರು ಒಬ್ಬರನ್ನೊಬ್ಬರು ಕೊಂದರು. ಅವರು ಹಿಡಿದಿದ್ದ ಖಡ್ಗವು ರಕ್ತದಲ್ಲಿ ತೊಯಿದು ಕೆಂಪಾಗಿತ್ತೆಂದು ಹೇಳಬಹುದು.

4. ಮೂರನೇ ಮುದ್ರೆಯನ್ನು ಒಡೆದಾಗ, ಕರೀ ಕುದುರೆ ಕಾಣಲ್ಪಟ್ಟಿತು. ಮತ್ತೂ ಉಪದ್ರವು ಅಧಿಕವಾಯಿತೇ ಹೊರ್ತು ಕಡಿಮೆಯಾಗಲಿಲ್ಲ. ಕರೀ ಕುದುರೆ ಉಪದ್ರಕ್ಕೂ ಕೊರತೆಗೂ,



೬ ಯಲ್ಲಿ ತ್ರಾಸು ಇತ್ತು. ಆಗ ನಾಲ್ಕು ಜೀವಿಗಳ ಮಧ್ಯದಲ್ಲಿ [1]ಶಬ್ದವನ್ನು ಕೇಳಿದೆನು; ಏನಂದರೆ, ದೆನಾರಿಗೆ
[2]ಶೇರು ಗೋಧಿಯು; ದೆನಾರಿಗೆ ಮೂರು ಶೇರು ಜವೆಗೋಧಿಯು; ಎಣ್ಣೆಯನ್ನೂ ದ್ರಾಕ್ಷೇ ರಸವನ್ನೂ [3]ಕೆಡಿಸ
ಬೇಡ.
೭ ನಾಲ್ಕನೇ ಮುದ್ರೆಯನ್ನು ಒಡೆದಾಗ, ಬಂದು ನೋಡು, ಎಂದು ಹೇಳುವ ನಾಲ್ಕನೇ ಜೀವಿಯ ಶಬ್ದವನ್ನು
೮ ಕೇಳಿದೆನು. ಮತ್ತು ನೋಡಲಾಗಿ, ಇಗೋ, [4]ವಿವರ್ಣವಾದ ಕುದುರೆಯು; ಅದರ ಮೇಲೆ ಕೂತವನ
ಹೆಸರು ಮರಣವು; ಮತ್ತು [5]ಪಾತಾಳವು ಅವನನ್ನು ಹಿಂಬಾಲಿಸಿತು; ಮತ್ತು ಅವರಿಗೆ ಭೂಮಿಯ ಕಾಲು
ಭಾಗದ ಮೇಲೆ ಕತ್ತಿಯಿಂದಲೂ, ಹಸಿವೆಯಿಂದಲೂ, [6]ಮರಣದಿಂದಲೂ, ಭೂಮಿಯ ಮೃಗಗಳಿಂದಲೂ,
ಕೊಲ್ಲುವ ಅಧಿಕಾರವು ಕೊಡಲ್ಪಟ್ಟಿತು.
೯ ಐದನೇ ಮುದ್ರೆಯನ್ನು ಒಡೆದಾಗ, ದೇವರ ವಾಕ್ಯಕ್ಕೋಸ್ಕರವೂ, ಅವರು ಹಿಡುಕೊಂಡ ಸಾಕ್ಷಿಗೋ
೧೦ ಸ್ಕರವೂ, ಕೊಲ್ಲಲ್ಪಟ್ಟವರ ಪ್ರಾಣಗಳನ್ನು [7]ಬಲಿಪೀಠದ ಕೆಳಗೆ ಕಂಡೆನು. ಅವರು ದೊಡ್ಡ ಶಬ್ದದಿಂದ ಕೂಗಿ
ಹೇಳಿದ್ದು, ಪರಿಶುದ್ಧನೂ ಸತ್ಯವಂತನೂ ಆಗಿರುವ ಯಜಮಾನನೇ! ನೀನು ನಮ್ಮ ರಕ್ತಕ್ಕೋಸ್ಕರ ಭೂನಿವಾ
೧೧ ಸಿಗಳಿಗೆ ನ್ಯಾಯವನ್ನೂ ಮುಯ್ಯಿಗೆ ಮುಯ್ಯನ್ನೂ ತೀರಿಸದೆ ಇರುವದು [8]ಎಷ್ಟು ಮಟ್ಟಿಗೂ? ಆಗಲವ

ಅದರ ಮೇಲೆ ಕೂತವನು ಹಿಡಿದಿದ್ದ ತ್ರಾಸು ಕಠಿಣ ಕ್ಷಾಮಕ್ಕೂ ಗುರುತುಗಳಾಗಿದ್ದವು. ರೋಮ ರಾಜ್ಯವು ಇಂಥಾ ಸ್ಥಿತಿಯಲ್ಲಿತ್ತು. ೨೧೨ನೇ ವರುಷದಲ್ಲಿ ಅರಸನಾದ ಕರಕ್ಕಲನೆಂಬವನು ಕಠಿಣವಾದ ಕಂದಾಯವನ್ನು ಏರ್ಪಡಿಸುವ ಹಾಗೆ ಕ್ರೂರ ನಿಬಂಧನೆ ಮಾಡಿದಂದಿನಿಂದ ರೋಮ ರಾಜ್ಯದಲ್ಲೆಲ್ಲಾ ಪ್ರಜೆಗಳು ಹೆಚ್ಚು ಕಂದಾಯದ ಭಾರವನ್ನು ತಾಳಲಾರದೆ ಬಹಳ ಕಷ್ಟ ಪಟ್ಟರು. ಅದರಿಂದ ದೇಶದಲ್ಲಿ ಘೋರ ಬರ ಉಂಟಾಯಿತು.

1. ಈ ಶಬ್ದವು ದೇವರ ಸಿಂಹಾಸನದಿಂದಲೇ ಹೊರಟಿತು.

2. ಶೇರು ಎಂಬುವದಕ್ಕೆ ಮೂಲ ಭಾಷೆಯಲ್ಲಿ ಕೀನಿಕ್ಸ್ ಎಂಬದಾಗಿ ಉಂಟು. ಅದು ಒಂದು ಶೀಸೆ ಅಥವಾ ಕುಪ್ಪಿ ಅಳತೆಗೆ ಸರಿಯಾಗಿರುವದು. ಒಂದು ದೆನಾರಿ ಎಂಬುವದು ಹೆಚ್ಚು ಕಡಿಮೆ ಐದು ಆಣೆಗೆ ಸರಿಯಾಗಿರುವದು. ಒಂದು ಕೀನಿಕ್ಸ್ ಗೋಧಿಯು, ಒಂದು ದಿವಸಕ್ಕೆ ಒಬ್ಬ ಮನುಷ್ಯನ ಭೋಜನಕ್ಕೆ ಸರಿಯಾಗಿಯೂ, ಒಂದು ದೆನಾರಿಯು ಒಂದು ಆಳಿನ ಕೂಲಿಗೆ ಸರಿಯಾಗಿಯೂ ಇರುವದು. ಆದದರಿಂದ ಒಬ್ಬನು ತನ್ನ ಸ್ವಂತ ಭೋಜನಕ್ಕೆ ಒಂದು ದಿವಸದ ಕೂಲಿಯನ್ನೆಲ್ಲಾ ಖರ್ಚು ಮಾಡಬೇಕಾಗಿದ್ದರೆ, ತನ್ನ ಕುಟುಂಬಸಂರಕ್ಷಣೆ ಮುಂತಾದ ಬೇರೆ ಖರ್ಚುಗಳಿಗೆ ಏನೂ ಉಳಿಯುವದಿಲ್ಲ. ಆದದರಿಂದ ಧಾರಣೆ ಹೆಚ್ಚು ಅಥವಾ ಬರಗಾಲವನ್ನು ಸೂಚಿಸುತ್ತದೆ.

3. ರೋಮ ರಾಜ್ಯದ ಪ್ರಜೆಗಳು ಗೋಧಿ, ಜವೆಗೋಧಿ, ಎಣ್ಣೆ, ದ್ರಾಕ್ಷೇ ರಸ ಮುಂತಾದವುಗಳನ್ನು ಕಂದಾಯದ ಹಣಕ್ಕೆ ಬದಲಾಗಿ ಸಲ್ಲಿಸುವದುಂಟು. ಜೀವನಾಧಾರಕ್ಕೆ ಉಪಯೋಗವಾದ ಇವುಗಳಲ್ಲಿ ಗೋಧಿಯೂ ಜವೆಗೋಧಿಯೂ ಬಹಳ ಕಡಿಮೆಯಾಗಿ ಹೋದರೂ, ಎಣ್ಣೆಯನ್ನೂ ದ್ರಾಕ್ಷೇ ರಸವನ್ನೂ ಕೆಡಿಸ ಬೇಡವೆಂದು ಕಟ್ಟಳೆ ಕೊಡಲ್ಪಟ್ಟದ್ದು ಉಪದ್ರದಲ್ಲಿಯೂ ಕನಿಕರವನ್ನು ತೋರಿಸುವದಾಗಿದೆ.

4. ನಾಲ್ಕನೇ ಮುದ್ರೆಯನ್ನು ಒಡೆದಾಗ, ವಿವರ್ಣವಾದ ಕುದುರೆಯು ಕಾಣಲ್ಪಟ್ಟಿತು. ಅದರ ಮೇಲೆ ಕೂತವನಿಗೆ ಭಯಂಕರಗಳ ದೂತನಾದ ಮರಣವೆಂಬುವ ಹೆಸರಿತ್ತು. ಈ ಮರಣದೂತನಿಂದ ಕಡಿಯಲ್ಪಟ್ಟು ಸತ್ತವರನ್ನು ನುಂಗುವದಕ್ಕೆ ಪಾತಾಳವು ಅವನನ್ನು ಹಿಂಬಾಲಿಸಿತು. ಅವನು ಲೋಕದ ಪ್ರಜೆಗಳನ್ನು ಕೊಲ್ಲುವದಕ್ಕೆ ಪ್ರಯೋಗಿಸಿದ ಆಯುಧಗಳು ನಾಲ್ಕು. ಅವಕ್ಕೆ ಕತ್ತಿ, ಬರ, ಕೊಳ್ಳೆಮರಣ, ದುಷ್ಟ ಮೃಗಗಳು ಎಂಬ ಹೆಸರುಂಟು. ಈ ಬಾಧೆಗಳಿಂದ ರೋಮ ರಾಜ್ಯದ ಹೆಚ್ಚು ಭಾಗದ ಭೂಮಿಯ ನಾಲ್ಕನೇ ಭಾಗ ನಾಶವಾಯಿತು. ಫಿಲಿಪ್ಪನೆಂಬ ಅರಸನು ಸತ್ತ ೨೪೯ನೇ ವರುಷದಿಂದ ಇಪ್ಪತ್ತು ವರುಷ ಕಾಲವು ರೋಮ ರಾಜ್ಯದಲ್ಲಿ ಹೇಳ ಕೂಡದ ನಿರ್ಬಂಧವೂ ಸಂಕಟವೂ ಉಂಟಾಗಿತ್ತು. ಮ್ಲೇಚ್ಛ ಜಾತಿಯವರು ಆ ರಾಜ್ಯದಲ್ಲೆಲ್ಲಾ ಹುಲಿಯ ಹಾಗೆ ಹಾರಿ, ದೇಶಗಳನ್ನೂ ಪಟ್ಣಗಳನ್ನೂ ಹಿಡಿದು ನಾಶ ಮಾಡಿ, ಪ್ರಜೆಗಳನ್ನು ಕೊಂದು ಸರ್ವವನ್ನು ಕೊಳ್ಳೆ ಮಾಡಿದರು. ಅದರಿಂದ ರಾಜ್ಯದಲ್ಲೆಲ್ಲಾ ಬರವೂ ಕೊಳ್ಳೆಜಾಡ್ಯವೂ ಉಂಟಾಗಿತ್ತು. ಈ ಕೊಳ್ಳೆಜಾಡ್ಯದಿಂದ ಲೆಖ್ಖವಿಲ್ಲದ ಜನರು ಸತ್ತರು. ಹಾಗೆಯೇ ದುಷ್ಟ ಮೃಗಗಳಿಂದಲೂ ಅನೇಕರು ನಾಶವಾದರು. ವಿವರ್ಣವಾಗಿ ಕಾಣಲ್ಪಟ್ಟ ಕುದುರೆಯು ಇಂಥಾ ನಾಶನಕ್ಕೆ ಗುರುತಾಗಿತ್ತು.

5. ಪಾತಾಳವು ಎಂಬುವದು ಸತ್ತವರ ಆತ್ಮಗಳು ವಾಸಿಸುವ ಸ್ಥಳವು. ಮರಣವೆಂಬ ಭಯಂಕರ ದೂತನಿಗೆ ಪಾತಾಳವು ತಕ್ಕ ಸಹಾಯವಾಗಿದೆ.

6. ಮರಣವೆಂಬುವದು ಮನುಷ್ಯರನ್ನು ಕನಿಕರವಿಲ್ಲದೆ ಕ್ರೂರವಾಗಿ ಕೊಲ್ಲುವ ಕೊಳ್ಳೆಜಾಡ್ಯವನ್ನು ಸೂಚಿಸುತ್ತದೆಂದು ತೋರುತ್ತದೆ.

7. ಐದನೇ ಮುದ್ರೆಯನ್ನು ಒಡೆದಾಗ, ಹೊಸ ನೋಟವು ಕಾಣಲ್ಪಟ್ಟಿತು; ಇದು ದೇವಾಲಯದಲ್ಲಿ ಕಾಣಲ್ಪಟ್ಟಿತು. ಬಲಿಗಳ ರಕ್ತವು ಚೆಲ್ಲಲ್ಪಟ್ಟ ಬಲಿಪೀಠದ ಕೆಳಗೆ ದೇವರ ವಾಕ್ಯದ ನಿಮಿತ್ತವೂ, ಅವರು ಕೊಟ್ಟ ಸಾಕ್ಷಿಯ ನಿಮಿತ್ತವೂ ಕೊಲ್ಲಲ್ಪಟ್ಟವರ ಆತ್ಮಗಳು ಯೋಹಾನನಿಗೆ ಕಾಣಲ್ಪಟ್ಟವು.

8. ಹೋರಾಡುವ ಸಭೆಗೆ ಸಂಭವಿಸುವ ಉಪದ್ರಗಳನ್ನು ಕುರಿತು ಜಯ ಹೊಂದಿದ ಸಭೆಗೆ ಚಿಂತೆಯೂ ಸಹತಾಪವೂ ಇರುತ್ತದೆ ಎಂಬುವದನ್ನು ಇದರಿಂದ ತಿಳಿಯ ಬಹುದು.

ರಲ್ಲಿ ಒಬ್ಬೊಬ್ಬನಿಗೆ [1]ಬಿಳೀ ಅಂಗಿಗಳು ಕೊಡಲ್ಪಟ್ಟವು; ಮತ್ತು ಅವರ ಹಾಗೆಯೇ ಕೊಲ್ಲಲ್ಪಡುವದಕ್ಕಿರುವ
ಅವರ ಸಹೋದರರೂ ಜತೆದಾಸರೂ ಸಂಪೂರ್ಣವಾಗುವ ಪರ್ಯಂತರ, ಇನ್ನು ಸ್ವಲ್ಪ ಕಾಲ [2]ವಿಶ್ರಾಂತಿ
ಯಾಗಿರ ಬೇಕೆಂದು, ಅವರಿಗೆ ಹೇಳಲ್ಪಟ್ಟಿತು.
೧೨ ಮತ್ತು [3]ಆರನೇ ಮುದ್ರೆಯನ್ನು ಒಡೆದಾಗ, ನೋಡಿದೆನು; ಆಗ ಇಗೋ, ಮಹಾ ಭೂಕಂಪ ಉಂಟಾ
ಯಿತು; ಸೂರ್ಯನು ಕೂದಲಿನ ಗೋಣಿಯ ಹಾಗೆ ಕಪ್ಪಾದನು; ಚಂದ್ರನು ರಕ್ತದ ಹಾಗೆ ಆದನು.
೧೩ ಮತ್ತು ಬಿರುಘಾಳಿಯಿಂದ ಅಲ್ಲಾಡುವ ಅತ್ತೀ ಮರವು ತನ್ನ ಕಾಯಿಗಳನ್ನು ಉದರಿಸುವ ಪ್ರಕಾರ, [4]ಆಕಾ
೧೪ ಶದ ನಕ್ಷತ್ರಗಳು ಭೂಮಿಯ ಮೇಲೆ ಬಿದ್ದವು. ಮತ್ತು ಆಕಾಶವು ಸುತ್ತಲ್ಪಡುವ ಸುರಳಿಯ ಹಾಗೆ
ಹೋಗಿ ಬಿಟ್ಟಿತು; ಮತ್ತು ಪರ್ವತಗಳೂ ದ್ವೀಪಗಳೂ ಎಲ್ಲಾ ತಮ್ಮ ಸ್ಥಳಗಳಿಂದ ತೊಲಗಿ ಹೋದವು.
೧೫ ಮತ್ತು ಭೂರಾಜರೂ, ದೊಡ್ಡ ಧೊರೆಗಳೂ, ಐಶ್ವರ್ಯವಂತರೂ, ಸಹಸ್ರಾಧಿಪತಿಗಳೂ, ಪರಾಕ್ರಮಶಾಲಿ
೧೬ ಗಳೂ, ಎಲ್ಲಾ ದಾಸರೂ, ಸ್ವತಂತ್ರರೂ, ಬೆಟ್ಟಗಳ ಗವಿಗಳಲ್ಲಿಯೂ ಗುಡ್ಡಗಳಲ್ಲಿಯೂ ಅಡಗಿ ಕೊಂಡು, ಬೆಟ್ಟ
ಗಳಿಗೂ ಗುಡ್ಡಗಳಿಗೂ ಹೇಳುವದೇನಂದರೆ—ನಮ್ಮ [5]ಮೇಲೆ ಬೀಳಿರಿ, ಸಿಂಹಾಸನದ ಮೇಲೆ ಕೂತು ಕೊಂ
೧೭ ಡವನ ಮುಖಕ್ಕೂ, ಕುರಿಮರಿಯ ಕೋಪಕ್ಕೂ, ನಮ್ಮನ್ನು ಮರೆ ಮಾಡಿರಿ. ಯಾಕಂದರೆ ಅವನ ಕೋ
ಪದ ಮಹಾ ದಿನವು ಬಂತು, ಮತ್ತು ನಿಲ್ಲ ಶಕ್ತನು ಯಾರು?

---

1. ಬಿಳೀ ಅಂಗಿಗಳು ಘನಕ್ಕೂ ಅಂಗೀಕಾರಕ್ಕೂ ಜಯಕ್ಕೂ ಗುರುತುಗಳಾಗಿವೆ. ಪರಮ ಸಭೆಗೆ ಶೇರಿದವರು ಸಕಲ ಶತ್ರುಗಳನ್ನೂ ಜಯಿಸಿದವರಾಗಿಯೂ, ಮಹಿಮೆಯನ್ನು ಧರಿಸಿಕೊಂಡವರಾಗಿಯೂ, ದೇವರಿಂದ ಅಂಗೀಕಾರ ಹೊಂದಿದವರಾಗಿಯೂ ವಿರಾಜಿಸಿ, ದೇವಪುತ್ರರೆಲ್ಲರೂ ಮಹಿಮೆ ಹೊಂದುವ ಕಾಲವನ್ನು ಆಶೆಯಿಂದ ಎದುರು ನೋಡುವವರಾಗಿಯೂ ಇದ್ದಾರೆ.

2. ಉಪದ್ರವನ್ನು ಅನುಭವಿಸುವ ಅವರ ಸಹೋದರರು ಅವರ ಹಾಗೆ ರಕ್ತಸಾಕ್ಷಿಗಳಾಗಿ ಸಾಯುವದರಿಂದ, ಶತ್ರುಗಳ ಅಕ್ರಮದ ಅಳತೆಯು ಸಂಪೂರ್ಣವಾಗುವ ಮಟ್ಟಿಗೂ, ಇನ್ನೂ ಸ್ವಲ್ಪ ಕಾಲ, ಪರಮ ಸಭೆಗೆ ಶೇರಿದವರು ಪರದೈಸಿನಲ್ಲಿ ತಾಳ್ಮೆಯಿಂದ ಕಾದು ಕೊಂಡು, ವಿಶ್ರಾಂತಿಯಾಗಿರ ಬೇಕೆಂದು ಅವರಿಗೆ ಹೇಳಲ್ಪಟ್ಟಿತು. ಅವರಿಗೆ ಬಹು ದೀರ್ಘವಾಗಿ ಕಂಡ ಕಾಲವು, ದೇವರಿಗೆ ಸ್ವಲ್ಪ ಕಾಲವಾಗಿತ್ತು. ಈ ಕಾಲವು ಗತಿಸಿದ ತರುವಾಯ ಸತ್ಯಪರನಾದ ದೇವರು ಶತ್ರುಗಳಿಗೆ ಮುಯ್ಯಿಗೆ ಮುಯ್ಯಿ ತೀರಿಸುವನು. ಈ ಮುದ್ರೆಯಿಂದ ಸೂಚಿಸಲ್ಪಟ್ಟ ಪ್ರವಾದನೆಯು, ಎರಡನೇ ಮೂರನೇ ಶತಾಬ್ದಗಳಲ್ಲಿ ತಿರುಸಭೆಗೆ ಸಂಭವಿಸಿದ ಉಪದ್ರಗಳಿಂದ ಈಡೇರಿತು. ಆ ಶತಾಬ್ದಗಳಲ್ಲಿ ಸಂಭವಿಸಿದ ಹತ್ತು ಉಪದ್ರಗಳಲ್ಲಿ ಕಡೆಯಾಗಿ ದಿಯೊಕ್ಲೇಷನ್ ಎಂಬ ಅರಸನ ಕಾಲದಲ್ಲಿ ಸಂಭವಿಸಿದ ಉಪದ್ರವು ಬಹಳ ಅಘೋರವಾಗಿತ್ತು. ಆಗ ಕ್ರೈಸ್ತರಿಗೆ ದ್ರವ್ಯನಷ್ಟವು, ಶೆರೆಯು, ಇಕ್ಕಟ್ಟು, ಮರಣ ಮುಂತಾದ ವಿಪತ್ತುಗಳು ಸಂಭವಿಸಿದ್ದಲ್ಲದೆ, ಅವರು ಅನುಸರಿಸಿದ್ದ ಮಾರ್ಗಕ್ಕೆ ಆಧಾರವಾದ ವೇದಗ್ರಂಥವನ್ನು ಸಹ ಕಳಕೊಳ್ಳುವ ಉಪದ್ರವು ಪ್ರಾಪ್ತಿಸಿತು. ಆಗ ಅನೇಕ ಭಕ್ತರು ರಕ್ತಸಾಕ್ಷಿಗಳಾಗಿ ಸತ್ತು, ಸತ್ಯಕ್ಕೆ ಸಾಕ್ಷಿ ಕೊಟ್ಟರು. ಅದು ರಕ್ತಸಾಕ್ಷಿಗಳ ಯುಗವೆಂದು ಚರಿತ್ರೆಯಲ್ಲಿ ಹೇಳಿ ಇದೆ.

3. ಆರನೇ ಮುದ್ರೆಯನ್ನು ಒಡೆದಾಗ, ಮಹಾ ಭಯಂಕರವಾದ ನೋಟವು ಕಾಣಲ್ಪಟ್ಟಿತು. ದೇವರ ಕೋಪಕ್ಕೆ ಗುರುತಾಗಿ ಆಕಾಶದಲ್ಲಿಯೂ ಭೂಮಿಯಲ್ಲಿಯೂ ಉಂಟಾದ ನೋಟಗಳು, ಕಲ್ಲುಗುಂಡಿಗೆಯಾದರೂ ಕರಗ ತಕ್ಕ ಭಯಂಕರಗಳಾಗಿದ್ದವು. (೧೭. ವ.) ಇದು ದೇವದಾಸರಾದ ರಕ್ತಸಾಕ್ಷಿಗಳನ್ನು ನಾಶ ಮಾಡಿದ ಬಲಗಳಿಗೂ ಅಧಿಕಾರಗಳಿಗೂ ಉಂಟಾಗುವ ಸರ್ವನಾಶವನ್ನು ಸೂಚಿಸುತ್ತದೆಂದು ತೋರುತ್ತದೆ. (ಯೆಶಾ. ೧೩. ೯, ೧೦; ೩೪. ೧—೪. ಎಜೇಕಿ. ೩೨. ೭.)

4. ಆರನೇ ಮುದ್ರೆಯನ್ನು ಒಡೆದಾಗಲೇ ಭೂಮಿ ಗಡಗಡನೆ ನಡುಗಿ ಕಂಪಿಸಿತು; ಸೂರ್ಯನು ಕಪ್ಪಾದನು; ಚಂದ್ರನು ಕೆಂಪಗಾದನು; ಆಕಾಶದ ನಕ್ಷತ್ರಗಳು, ಘಾಳಿಯಿಂದ ಉದರುವ ಅತ್ತೀಕಾಯಿಗಳ ಹಾಗೆ ಉದರಿದವು. ಆಕಾಶವು ಸುತ್ತಲ್ಪಟ್ಟ ಸುರಳಿಯ ಹಾಗೆ ತೊಲಗಿ ಹೋಯಿತು. ಪರ್ವತಗಳೂ ದ್ವೀಪಗಳೂ ಭೂಮಿಯ ಅದರುವಿಕೆಯಿಂದ ಸ್ಥಳ ತಪ್ಪಿ ಹೋದವು. ಭೂನಿವಾಸಿಗಳಾದ ಹಿರಿಯರು, ಕಿರಿಯರು, ಅರಸರು, ಪ್ರಜೆಗಳು, ಸ್ವತಂತ್ರರು, ದಾಸರು ಮುಂತಾದ ಸರ್ವರೂ ಭೂಮ್ಯಾಕಾಶಗಳಲ್ಲಿ ಉಂಟಾದ ಭಯಂಕರ ನೋಟಗಳನ್ನು ಕಂಡು ತತ್ತಳಿಸಿದರು.

5. ಇದು ಭಯದಿಂದಲೂ ಅಪಾಯದಿಂದಲೂ ಹುಟ್ಟಿದ ಮೊರೆ ಇಡುವಿಕೆಯು. ಇದು ಹೊಶೇ. ೧೦. ೮. ವಚನಕ್ಕೆ ಸರಿಯಾಗಿದೆ. (ಯೆಶಾ. ೨. ೧೯—೨೧. ಲೂಕ. ೨೩. ೩೦.) ಈ ಪ್ರವಾದನೆಯಲ್ಲಿ ಸೂಚಿಸಿದ ದೊಡ್ಡ ಮಾರ್ಪಡುವಿಕೆಯು, ರಕ್ತಸಾಕ್ಷಿಗಳ ಯುದ್ಧದ ತರುವಾಯ ರೋಮ ರಾಜ್ಯದಲ್ಲಿ ಕೊನ್‌ಸ್ತಂತೀನ್ ಎಂಬ ಅರಸನ ಕಾಲದಲ್ಲಿ ಸಂಭವಿಸಿತು. ಆ ಅರಸನ ವಿರಿಯಾದ ಮಕ್ಸನ್‌ಷಿಯಸ್ ಎಂಬವನ ಸಂಗಡ ಯುದ್ಧ ಮಾಡ ಹೋಗುವಾಗ, ಆಕಾಶದಲ್ಲಿ ಬೆಂಕಿಯಂತೆ ಉರಿಯುವ ಒಂದು ಶಿಲುಬೆಯನ್ನೂ, ಅದರ ಪಕ್ಕದಲ್ಲಿ "ಇದರಿಂದ ಜಯಿಸು" ಎಂದು ಬರೆದಿದ್ದದ್ದನ್ನೂ ಕಂಡನಂತೆ; ಅಂದಿನಿಂದ ಅವನು ಶಿಲುಬೆಧ್ವಜವನ್ನು ತನ್ನ ಸೈನ್ಯಕ್ಕೆ ಬಿರುದಾಗಿ ಮಾಡಿ ಕೊಂಡು, ಅವನು ಸಹ ಕ್ರಿಸ್ತನ ಮಾರ್ಗವನ್ನು ಅನುಸರಿಸಿದನು. ಅಜ್ಞಾನಮಾರ್ಗವನ್ನು ನೆಲೆಗೊಳಿಸುವದಕ್ಕೆ ಅನೇಕರು ಅವನ ಸಂಗಡ ಯುದ್ಧ ಮಾಡಿದರು. ಹೀಗೆ ನಡೆದ ಹತ್ತು ಹನ್ನೊಂದು ಘೋರ ಯುದ್ಧಗಳಲ್ಲಿ ಶಿಲುಬೆಧ್ವಜವನ್ನು ಹಿಡಿದಿದ್ದ ಕೊನ್‌ಸ್ತಂತೀನನೇ ಶತ್ರುಗಳನ್ನೆಲ್ಲಾ ಜಯಿಸಿ, ಜಯಶೀಲನಾಗಿ ರೋಮ ರಾಜ್ಯಕ್ಕೆ ಏಕ ಚಕ್ರವರ್ತಿಯಾದನು. ಆದ ಕೂಡಲೇ ವಿಗ್ರಹಾಲಯಗಳನ್ನೆಲ್ಲಾ ನಿರ್ಮೂಲ ಮಾಡಿ, ಅವುಗಳಲ್ಲಿ ನಡಿಯುತ್ತಿದ್ದ ಬಲಿಗಳನ್ನು ನಿಲ್ಲಿಸಿ, ಕ್ರಿಸ್ತನ ಮಾರ್ಗವೇ ಇನ್ನು ಮೇಲೆ ತನ್ನ ರಾಜ್ಯದಲ್ಲೆಲ್ಲಾ ಶ್ರೇಷ್ಠ ಮಾರ್ಗವೆಂದು, ಸಾರಲಾಜ್ಞಾಪಿಸಿದನು. ಅವನ ತರುವಾಯ ಬಂದ ಅರಸರು ಸಹ, ಅಜ್ಞಾನಮಾರ್ಗವನ್ನು ನಾಶ ಮಾಡುವದಕ್ಕೆ ತಕ್ಕ ನಿಬಂಧನೆಗಳನ್ನು ಏರ್ಪಡಿಸಿದರು. ಆದದರಿಂದ ನಾಲ್ಕನೇ ಶತಾಬ್ದ ಮುಗಿಯುವಷ್ಟರಲ್ಲಿ ರೋಮ ರಾಜ್ಯದಲ್ಲಿ, ನಕ್ಷತ್ರಗಳ ಹಾಗೆ ಕಾಣಿಸಿದ ಅಜ್ಞಾನದ ಅರಸರು ಅಧಿಕಾರಿಗಳು ಎಲ್ಲರೂ ನಿರ್ಮೂಲವಾದರು. ಅದರ ಧೊರೆತನಗಳು ಮತಾಚಾರಗಳು ಎಲ್ಲಾ ನೆಲೆ ತಪ್ಪಿದವು. ಸ್ವಲ್ಪ ಕಾಲಕ್ಕೆ ಮುಂಚೆ ಕ್ರೈಸ್ತರಿಗೆ ಮರೆ ಹೊಗುವ ಸ್ಥಳಗಳಾಗಿದ್ದ ಬೆಟ್ಟಗಳಲ್ಲಿಯೂ ಗವಿಗಳಲ್ಲಿಯೂ, ಅಜ್ಞಾನರು ತಮ್ಮ ಮತಾಚರಣೆಗಳನ್ನು ಬಚ್ಚಿಟ್ಟರು. ೩೦೬ನೇ ವರುಷದಿಂದ ೩೩೭ನೇ ವರುಷದ ಮಟ್ಟಿಗೂ, ರೋಮ ರಾಜ್ಯದಲ್ಲಿ ಅಜ್ಞಾನಮತವು ನಿಂತು ಹೋಗಿ, ಕ್ರಿಸ್ತನ ಮಾರ್ಗವು ಸ್ಥಾಪಿಸಲ್ಪಟ್ಟ ಮಹಾ ಮುಖ್ಯ ಸಂಗತಿಯನ್ನೇ, ಈ ಆರನೇ ಮುದ್ರೆಯ ಪ್ರವಾದನೆಯಲ್ಲಿ ಸೂಚಕವಾಗಿದೆ ಎಂಬುವದು ಅನೇಕ ವಿದ್ವಾಂಸರ ತಾತ್ಪರ್ಯವಾಗಿದೆ. ರೋಮ ರಾಜ್ಯದಲ್ಲಿ ಅಜ್ಞಾನವು ನಿವರ್ತಿಯಾಗಿ ಕ್ರಿಸ್ತನ ಮಾರ್ಗವು ಪ್ರಬಲವಾದ ಪ್ರಕಾರ, ಕಡೇ ಕಾಲದಲ್ಲಿ ಲೋಕದ ಸುಳ್ಳು ಮತಗಳೆಲ್ಲಾ ನಿರ್ಮೂಲವಾಗಿ, ಸತ್ಯಮಾರ್ಗವು ಪ್ರಬಲವಾಗುವದು ಎಂಬುವದಕ್ಕೆ ಸಂದೇಹವಿಲ್ಲ.



ದೇವರ ಸೇವಕರ ಕ್ಷೇಮವನ್ನೂ ವಿಮೋಚಿಸಲ್ಪಟ್ಟವರ ಭಾಗ್ಯವನ್ನೂ ಕುರಿತ ಎರಡು ದರ್ಶನಗಳು.

7. [1]ಇವುಗಳ ತರುವಾಯ ಭೂಮಿಯ ನಾಲ್ಕು ದಿಕ್ಕುಗಳಲ್ಲಿ ನಿಂತು ಕೊಂಡಿರುವ ನಾಲ್ಕು ದೂತರನ್ನು
ಕಂಡೆನು; ಅವರು ಭೂಮಿಯಲ್ಲಾಗ್ಯದರೂ, ಸಮುದ್ರದಲ್ಲಾಗ್ಯದರೂ, ಯಾವ ಮರದ ಮೇಲಾದರೂ, ಘಾ
ಳಿಯು ಬೀಸದ ಹಾಗೆ, ಭೂಮಿಯ [2]ನಾಲ್ಕು ಘಾಳಿಗಳನ್ನು ಹಿಡಿಯುತ್ತಿದ್ದರು.
೨ ಮತ್ತು ಜೀವವುಳ್ಳ ದೇವರ ಮುದ್ರೆ ಉಂಟಾಗಿ, [3]ಸೂರ್ಯೋದಯದಿಂದ ಏರಿ ಬರುವ ಬೇರೊಬ್ಬ ದೂತ
ನನ್ನು ಕಂಡೆನು. ಇವನು ಭೂಮಿಯನ್ನೂ ಸಮುದ್ರವನ್ನೂ ಕೆಡಿಸುವ ಅಧಿಕಾರವನ್ನು ಹೊಂದಿದ ನಾಲ್ಕು
೩ ದೂತರಿಗೆ ಮಹಾ ಶಬ್ದದಿಂದ ಕೂಗಿ ಹೇಳಿದ್ದೇನಂದರೆ, ನಾವು ನಮ್ಮ ದೇವರ ದಾಸರಿಗೆ ಅವರ [4]ಹಣೆಗಳ
ಮೇಲೆ ಮುದ್ರೆ ಹಾಕುವ ಪರ್ಯಂತರ ಭೂಮಿಯನ್ನಾದರೂ, ಸಮುದ್ರವನ್ನಾದರೂ, [5]ಮರಗಳನ್ನಾದರೂ
ಕೆಡಿಸ ಬೇಡಿರಿ.
೪ ಮತ್ತು ಮುದ್ರೆ ಹೊಂದಿದವರ ಲೆಖ್ಖವನ್ನು ಕೇಳಿದೆನು—ಇಸ್ರಯೇಲ ಮಕ್ಕಳ ಎಲ್ಲಾ ಕುಲಗಳಲ್ಲಿ ಮುದ್ರೆ

---

1. ಇವುಗಳು, ಎಂಬುವದು ಆರನೇ ಮುದ್ರೆಯಲ್ಲಿ ಪ್ರವಾದನೆಯಾಗಿ ಬರೆದಿದ್ದ ಸಂಗತಿಗಳೇ. ಸಭೆಗೆ ಪ್ರಾಪ್ತಿಸಿದ ದೊಡ್ಡ ಉಪದ್ರವನ್ನೂ, ಅದರ ತರುವಾಯ ಅದಕ್ಕುಂಟಾದ ಕ್ಷೇಮವನ್ನೂ ಈ ಪ್ರವಾದನೆಯಲ್ಲಿ ಸೂಚಿತವಾದ ಮುಖ್ಯ ವಿಷಯಗಳು. ಇದರ ತರುವಾಯ ಆದ ಸಂಗತಿಗಳನ್ನು ಏಳನೇ ಮುದ್ರೆಯ ಪ್ರವಾದನೆಯಲ್ಲಿ ಸೂಚಿಸಲ್ಪಟ್ಟದೆ. ಇವೆರಡಕ್ಕೂ ಮಧ್ಯದಲ್ಲಿ ರೋಮ ರಾಜ್ಯದಲ್ಲಿ ಸ್ವಲ್ಪ ಕಾಲ ಉಂಟಾಗಿದ್ದ ಸಮಾಧಾನವನ್ನು ಸೂಚಿಸುತ್ತದೆ. ಕ್ರಿಸ್ತನ ಸಭೆಗೆ ಉಂಟಾದ ಜಯವನ್ನು ಸಹ ಈ ಸಂಧಿಯಲ್ಲಿ ಹೇಳಿ ಇದೆ.

2. ಘಾಳಿಗಳು ಎಂಬುವದು, ಭೂಮಿಯಲ್ಲಿ ನಾಶವನ್ನು ಉಂಟು ಮಾಡುವ ಕಾರ್ಯಗಳನ್ನು ಕುರಿತದ್ದು. (೨, ೩. ವ. ಯೆರೆ. ೪೯. ೩೬, ೩೭; ೫೧. ೧, ೨. ದಾನಿ. ೭. ೨.) ಭೂಮಿಯ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದೂತರು ನಿಂತು, ನಾಲ್ಕು ಘಾಳಿಗಳಾದ ನಾಶನವನ್ನು ಬರ ಮಾಡುವ ಕಾರ್ಯಗಳು ಒಂದೂ ಭೂಲೋಕದಲ್ಲಿ ಸಂಭವಿಸದ ಹಾಗೆ ಮಾಡಿದರು. ಹಾಗೆಯೇ ಅರಸನಾದ ಕೊನ್‌ಸ್ತಂತೀನನ ಕಾಲದಲ್ಲಿ ರೋಮ ರಾಜ್ಯವೂ ಕ್ರಿಸ್ತನ ಸಭೆಯೂ ಶತ್ರುಗಳ ಎಲ್ಲಾ ವಿಘ್ನಗಳಿಗೆ ತೊಲಗಿ ಸುಖವಾಗಿದ್ದವು. ಕ್ರಿಸ್ತನ ಮಾರ್ಗವು ರಾಜ್ಯದಲ್ಲೆಲ್ಲಾ ಪ್ರಬಲವಾಗುತ್ತಾ ಬಂತು. ಅನೇಕರು ಸ್ನಾನ ಹೊಂದಿ ಸಭೆಯಲ್ಲಿ ಶೇರಿದರು. ಭೂಗುಹೆಗಳಲ್ಲಿಯೂ ಬೆಟ್ಟಗಳ ಗವಿಗಳಲ್ಲಿಯೂ ಅಡಗಿ ಕೊಂಡು ದೇವಾರಾಧನೆ ಮಾಡುತ್ತಿದ್ದವರಿಗೆ ಅಲಂಕಾರವಾದ ದೇವಾಲಯಗಳೂ, ಆರಾಧನೆಗೆ ತಕ್ಕ ಅನುಕೂಲಗಳೂ ಉಂಟಾದವು. ಅದು ಕ್ರೈಸ್ತಸಭೆಗೆ ಸೌಖ್ಯವಾದ ಕಾಲವಾಗಿತ್ತು.

3. ಜೀವವುಳ್ಳ ದೇವರ ಮುದ್ರೆ ಉಂಟಾಗಿ, ಸೂರ್ಯೋದಯದಿಂದ ಏರಿ ಬಂದ ದೂತನು, ಒಡಂಬಡಿಕೆಯ ದೂತನಾದ ಕ್ರಿಸ್ತನನ್ನು ಕುರಿತದ್ದೆಂದು ತೋರುತ್ತದೆ. ಮುದ್ರೆ ಎಂಬುವದು ಪರಿಶುದ್ಧಾತ್ಮನನ್ನು ಕುರಿತದ್ದು. (ಎಫೆ. ೪. ೩೦.) ದೇವರ ದಾಸರು ಯಾರೆಂದು ತಿಳಿಯುವದಕ್ಕೆ ಕ್ರಿಸ್ತನು ತನ್ನ ಪರಿಶುದ್ಧಾತ್ಮನ ಮುದ್ರೆಯನ್ನು ಅವರಿಗೆ ಹಾಕುತ್ತಾನೆ.

4. ದೇವಭಕ್ತರಿಗೆ ಹಣೆಗಳ ಮೇಲೆ ಹಾಕಲ್ಪಟ್ಟ ಮುದ್ರೆಯು ಅವರು ವಿಘ್ನವಿಲ್ಲದೆ ಕ್ಷೇಮವಾಗಿದ್ದದ್ದಕ್ಕೆ ಗುರುತಾಗಿತ್ತು. ಐಗುಪ್ತದಲ್ಲಿದ್ದ ಇಸ್ರಯೇಲ್ಯರು ಸಂಹಾರದೂತನಿಂದ ಉಂಟಾದ ಆಪತ್ತಿಗೆ ತೊಲಗಿ ಸುಖ ಹೊಂದುವದಕ್ಕೆ ಅವರಿಗೆ ಒಂದು ಗುರುತು ಇತ್ತು. (ಹೊರ. ೧೨. ೧೩.) ಆದರೆ ಅದರಲ್ಲಿ ಒಂದು ವ್ಯತ್ಯಾಸ ಉಂಟು. ಅಲ್ಲಿ ಮನೆಗಳಿಗೆ ಮುದ್ರೆ ಹಾಕಲ್ಪಟ್ಟಿತು. ಇಲ್ಲಿ ಜನರ ಹಣೆಗಳಲ್ಲಿ ಮುದ್ರೆ ಹಾಕಲ್ಪಟ್ಟಿತು. ಒಬ್ಬೊಬ್ಬನಿಗೂ ಹೃದಯದ ಭಕ್ತಿಯು ಇರ ಬೇಕೆಂಬ ಸತ್ಯವು ಇದರಿಂದ ಪ್ರಕಟವಾಯಿತು. (ಮತ್ತಾ. ೩. ೯, ೧೦.) ಭೂಲೋಕದಲ್ಲಿ ಸಾಧಾರಣವಾಗಿ ಸಂಭವಿಸುವ ಕಷ್ಟಗಳಿಗೆ ಕ್ರೈಸ್ತರು ಸಹ ಒಳಪಟ್ಟಿದ್ದಾರೆ. ಆದಾಗ್ಯೂ ಅಕ್ರಮಗಳಲ್ಲಿ ಮುಣುಗಿರುವ ಪಟ್ಣಗಳಿಗೂ ದೇಶಗಳಿಗೂ ಸಂಭವಿಸುವ ಭಯಂಕರವಾದ ದೇವದಂಡನೆಗೆ ಅವರು ನಿವರ್ತಿಯಾದವರಾಗಿದ್ದಾರೆ. (ಉತ್ಪ. ೬. ೧೭, ೧೮; ೭. ೧; ೧೯. ೧೬, ೨೨. ಮತ್ತಾ. ೨೪. ೧೫, ೧೬.)

5. ಭೂಮಿ ಸಮುದ್ರ ಮರಗಳು ಎಂಬುವದು ಸಾಧಾರಣವಾಗಿ ಲೋಕವನ್ನೂ ಅದರ ನಿವಾಸಿಗಳನ್ನೂ ಸೂಚಿಸುತ್ತದೆ.

೫ ಹೊಂದಿದವರು [1]ನೂರ ನಾಲ್ವತ್ತನಾಲ್ಕು ಸಾವಿರ. ಯೆಹೂದನ ಕುಲದಲ್ಲಿ ಮುದ್ರೆ ಹೊಂದಿದವರು
ಹನ್ನೆರಡು ಸಾವಿರ. ರೂಬೆನನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಗಾಡನ ಕುಲ
೬ ದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಅಶೇರನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು
ಸಾವಿರ. ನೆಫ್ತಲೀಮನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಮನಾಸೆಯ ಕುಲದಲ್ಲಿ
೭ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಸಿಮೆಯೋನನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆ
ರಡು ಸಾವಿರ. ಲೇವಿಯ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಇಸ್ಸಕಾರನ ಕುಲದಲ್ಲಿ
೮ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಜೆಬುಲೋನನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು
ಸಾವಿರ. ಯೋಸೆಫನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಬೆನ್ಯಮೀನನ ಕುಲದಲ್ಲಿ
ಮುದ್ರೆ ಹೊಂದಿದವರು ಹನ್ನೆರಡು ಸಾವಿರ.

೯ ಇವುಗಳ ತರುವಾಯ ನಾನು ನೋಡಲಾಗಿ, ಇಗೋ, ಸಮಸ್ತ ಜನಾಂಗ, ಕುಲ, ಪ್ರಜೆ, ಭಾಷೆಗಳೊಳ
ಗಿಂದ ಯಾರೂ ಎಣಿಸಲಾರದ [2]ಮಹಾ ಸಮೂಹವು ಸಿಂಹಾಸನದ ಮುಂದೆಯೂ ಕುರಿಮರಿಯ ಮುಂ
ದೆಯೂ ನಿಂತಿತು. ಅವರು [3]ಬಿಳೀ ಅಂಗಿಗಳನ್ನು ತೊಟ್ಟು ಕೊಂಡವರಾಗಿ, ತಮ್ಮ ಕೈಗಳಲ್ಲಿ [4]ಖರ್ಜೂರದ
೧೦ ಕೊಂಬೆಗಳನ್ನು ಹಿಡುಕೊಂಡು, ಮಹಾ ಶಬ್ದದಿಂದ ಕೂಗಿ ಹೇಳಿದ್ದೇನಂದರೆ, ಸಿಂಹಾಸನದಲ್ಲಿ ಕೂತು
ಕೊಂಡಿರುವ ನಮ್ಮ ದೇವರಿಗೂ, ಕುರಿಮರಿಗೂ ರಕ್ಷಣೆಯು.

೧೧ ಮತ್ತು ಸಿಂಹಾಸನದ, ಹಿರಿಯರ, ನಾಲ್ಕು ಜೀವಿಗಳ ಸುತ್ತಲು ದೂತರೆಲ್ಲರು ನಿಂತು, ಸಿಂಹಾಸನದ ಮುಂ
೧೨ ದೆ ಮೋರೆ ಕೆಳಗಾಗಿ ಬಿದ್ದು, ದೇವರಿಗೆ ನಮಸ್ಕರಿಸಿ, ಹೇಳಿದ್ದೇನಂದರೆ, [5]ಆಮೆನ್, ನಮ್ಮ ದೇವರಿಗೆ ಸ್ತೋ
ತ್ರವು, ಮಹಿಮೆಯು, ಜ್ಞಾನವು, ಸ್ತುತಿಯು, ಘನವು, ಬಲವು, ಶಕ್ತಿಯು ಯುಗಯುಗಾಂತರಗಳ ವರೆಗೂ
ಉಂಟಾಗಲಿ. ಆಮೆನ್.

೧೩ ಆಗ ಹಿರಿಯರಲ್ಲಿ ಒಬ್ಬನು ಉತ್ತರ ಕೊಟ್ಟು, ಬಿಳೀ ಅಂಗಿಗಳನ್ನು ತೊಟ್ಟು ಕೊಂಡ ಇವರು ಯಾರು?
೧೪ ಎಲ್ಲಿಂದ ಬಂದಿದ್ದಾರೆ? ಎಂದು ನನಗೆ ಹೇಳಿದನು. ಆಗ ಅವನಿಗೆ, ಕರ್ತನೇ, ನೀನು ಬಲ್ಲಿ, ಅಂದೆನು. ಮತ್ತು

1. ಒಂದೊಂದು ಕುಲದಲ್ಲಿಯೂ ಮುದ್ರೆ ಹಾಕಲ್ಪಟ್ಟವರು ಹನ್ನೆರಡು ಸಾವಿರವಾಗಿ, ಹನ್ನೆರಡು ಕುಲಗಳಿಗೂ ಲಕ್ಷಾನಾಲ್ವತ್ತನಾಲ್ಕು ಸಾವಿರ ಮಂದಿ ಇದ್ದರು. ಇದು ಯಥಾರ್ಥವಾಗಿ ಇಸ್ರಯೇಲ್ಯರನ್ನು ಕುರಿತ ಲೆಖ್ಖವಾಗಿರದೆ, ಕ್ರಿಸ್ತನ ಭಕ್ತರನ್ನು ಉಪಮಾನವಾಗಿ ಸೂಚಿಸುವ ಲೆಖ್ಖವಾಗಿದೆ. ಅದರಿಂದ ಕ್ರಿಸ್ತನು ಉದಯಿಸಿದ ಯೆಹೂದನ ಕುಲವನ್ನು ಮೊದಲಲ್ಲಿ ಹೇಳಿ ಇದೆ. ಲೇವಿಯ ಕುಲದಲ್ಲಿ ಬಹು ಕಾಲವಾಗಿದ್ದ ಯಾಜಕಕ್ರಮವು ನಿಂತು ಹೋದದರಿಂದ ಆ ಕುಲವನ್ನು ಬೇರೆ ಕುಲಗಳ ಸಂಗಡ ಶೇರಿಸಿ ಹೇಳಿ ಇದೆ. ದಾನನ ಕುಲದವರು ವಿಗ್ರಹಾರಾಧನೆಗೆ ಒಳಪಟ್ಟದ್ದರಿಂದ ಆ ಕುಲವನ್ನು ಇಲ್ಲಿ ಬಿಟ್ಟದೆ. ದಾನನ ಕುಲಕ್ಕೂ ಎಫ್ರಾಯಿಮನ ಕುಲಕ್ಕೂ ಬದಲಾಗಿ, ಲೇವಿಯ ಕುಲವನ್ನೂ ಯೋಸೆಫನ ಕುಲವನ್ನೂ ಹೇಳಿ ಇದೆ. ಕುಲಸ್ತ್ರೀಯರಲ್ಲಿ ಹುಟ್ಟಿದ ಮಕ್ಕಳೆಂದೂ, ದಾಸಿಯರಲ್ಲಿ ಹುಟ್ಟಿದ ಮಕ್ಕಳೆಂದೂ, ಭೇದ ಮಾಡದೆ, ಈ ಕುಲಗಳೆಲ್ಲಾ ಹೇಳಲ್ಪಟ್ಟಿರುವದನ್ನು ಯೋಚಿಸುವಾಗ, ದಾಸನು ಸ್ವತಂತ್ರನು ಎಂಬ ಭೇದವಿಲ್ಲದೆ ಎಲ್ಲರೂ ಕ್ರಿಸ್ತನಲ್ಲಿ ಒಂದಾಗಿದ್ದಾರೆ. (ಗಲಾ. ೩. ೨೮.)

2. ಲೆಖ್ಖವಿಲ್ಲದ ಮಹಾ ಸಮೂಹವು ಜಯ ಹೊಂದಿದ ಸಭೆಯನ್ನು ಸೂಚಿಸುತ್ತದೆ. ಜೀವಕ್ಕೆ ಹೋಗುವ ಮಾರ್ಗದಲ್ಲಿ ನಡಿಯುವ ಭಕ್ತರ ಸಂಖ್ಯೆಯು ಎಲ್ಲಾ ಕಾಲಗಳಲ್ಲಿಯೂ ಕೊಂಚವಾಗಿದ್ದಾಗ್ಯೂ, ಒಂದೊಂದು ಯುಗದಲ್ಲಿಯೂ ಒಂದೊಂದು ದೇಶದಲ್ಲಿಯೂ ಇರುವ ಸಕಲ ಜಾತಿ, ಕುಲ, ಭಾಷೆಗಳವರಾದ ಭಕ್ತರ ಸಂಖ್ಯೆಯು ಲೆಖ್ಖವಿಲ್ಲದ ಸಮೂಹವಾಗಿರುತ್ತದೆ. ಅವರ ದೇಶ, ಜಾತಿ, ಭಾಷೆಗಳು ಬೇರೆ ಬೇರೆಯಾಗಿದ್ದಾಗ್ಯೂ, ಈಗ ವ್ಯತ್ಯಾಸವಿಲ್ಲದೆ ಎಲ್ಲರೂ ಬಿಳೀ ಅಂಗಿಗಳನ್ನು ಧರಿಸಿದವರಾಗಿಯೂ ಖರ್ಜೂರದ ಕೊಂಬೆಗಳನ್ನು ಹಿಡಿದವರಾಗಿಯೂ, ಪರಮ ಸಿಂಹಾಸನದ ಮುಂದೆ ನಿಂತು, ಪಾಪ, ಲೋಕ, ಪಿಶಾಚನೆಂಬ ಶತ್ರುಗಳ ವಿಘ್ನದಿಂದ ತಮ್ಮನ್ನು ವಿಮೋಚಿಸಿ ಪರಮ ಪದವಿಗೆ ಶೇರಿಸಿದ ದೇವರನ್ನು ಅತ್ಯಂತ ಭಕ್ತಿಯಿಂದ ಹೊಗಳಿ ಕೊಂಡಾಡಿದರು.

3. ಬಿಳೀ ಅಂಗಿಗಳು ಪರಿಶುದ್ಧತ್ವಕ್ಕೆ ಗುರುತಾಗಿದ್ದವು. (೬. ೧೧. ವಚನದ ವ್ಯಾಖ್ಯಾನ ನೋಡ ಬೇಕು.)

4. ಖರ್ಜೂರದ ಕೊಂಬೆಗಳು ಗ್ರೇಕರಲ್ಲಿ ಜಯಕ್ಕೆ ಗುರುತಾಗಿಯೂ, ಯೆಹೂದ್ಯರಲ್ಲಿ ಸಂತೋಷಕ್ಕೆ ಗುರುತಾಗಿಯೂ ಇದ್ದವು. (ಲೇವಿ. ೨೩. ೪೦. ಯೋಹಾ. ೧೨. ೧೩.)

5. ವಿಮೋಚಿಸಲ್ಪಟ್ಟ ಸಭೆಯ ಸ್ತೋತ್ರದ ಹಾಡನ್ನು ದೇವದೂತರು ಕೇಳಿದಾಗಲೇ ಅವರು ಸಹ ಅವರ ಸಂಗಡ ಕೂಡಿಕೊಂಡು, ಸಿಂಹಾಸನದ ಮೇಲೆ ಕುಳಿತಿರುವ ದೇವರನ್ನು ಸ್ತುತಿಸಿ ಆರಾಧಿಸಿದರು. (೫. ೮—೧೪. ವಚನಗಳ ವ್ಯಾಖ್ಯಾನ ನೋಡ ಬೇಕು.)



ಅವನು ನನಗೆ ಹೇಳಿದ್ದು, ಇವರು [1]ಮಹಾ ಉಪದ್ರದೊಳಗಿಂದ ಬಂದವರಾಗಿದ್ದಾರೆ; ಕುರಿಮರಿಯ
೧೫ [2]ರಕ್ತದಲ್ಲಿ ತಮ್ಮ ಅಂಗಿಗಳನ್ನು ಒಗೆದು, ಬಿಳುಪು ಮಾಡಿದ್ದಾರೆ. ಆದ ಕಾರಣ ಅವರು ದೇವರ ಸಿಂಹಾಸನದ
ಮುಂದೆ ಇದ್ದು, ಅವನ [3]ಮಂದಿರದಲ್ಲಿ ರಾತ್ರಿ ಹಗಲು ಅವನನ್ನು ಸೇವಿಸುತ್ತಾರೆ. ಮತ್ತು ಸಿಂಹಾಸನದ
೧೬ ಮೇಲೆ ಕೂತವನು [4]ಅವರ ಮೇಲೆ ತನ್ನ ಗುಡಾರ ಹಾಕಿ ಕೊಳ್ಳುವನು. ಇನ್ನು ಮೇಲೆ ಅವರಿಗೆ [5]ಹಸಿವೆ
ಯಾದರೂ ದಾಹವಾದರೂ ಆಗದೆ, ಸೂರ್ಯನ ಬಿಸಿಲಾದರೂ ಯಾವ ಕಾವಾದರೂ ತಗಲದೆ ಇರುವದು.
೧೭ (ಯೆಶಾ. ೪೯. ೧೦.) ಯಾಕಂದರೆ ಸಿಂಹಾಸನದ ಮಧ್ಯದಲ್ಲಿರುವ ಕುರಿಮರಿಯು ಅವರನ್ನು [6]ಮೇಯಿಸಿ,
ಜೀವವುಳ್ಳ ನೀರುಬುಗ್ಗೆಗಳಿಗೆ ನಡಿಸುವದು; ಮತ್ತು ದೇವರು [7]ಕಣ್ಣೀರೆಲ್ಲಾ ಅವರ ಕಣ್ಣುಗಳಿಂದ ಒರಸುವನು.
(ಯೆಶಾ. ೨೫. ೮.)

ಏಳನೇ ಮುದ್ರೆಯನ್ನು ಒಡೆದದ್ದು; ಏಳು ತುತೂರಿಗಳು.

**8.** ಮತ್ತು ಏಳನೇ ಮುದ್ರೆಯನ್ನು ಒಡೆದಾಗ, ಪರಲೋಕದಲ್ಲಿ ಹೆಚ್ಚು ಕಡಿಮೆ ಅರ್ಧ ತಾಸು [8]ನಿಶ್ಶಬ್ದವಾ
ಯಿತು.

1. ಬಿಳೀ ಅಂಗಿಗಳನ್ನು ಧರಿಸಿ ಕೊಂಡು ಪರಮಾಸನದ ಮುಂದೆ ನಿಂತ ಲೆಖ್ಖವಿಲ್ಲದ ಸಮೂಹವು ಯಾರೋ ಎಂಬುವದನ್ನು ತಿಳಿಯಲು ಯೋಹಾನನು ಅಪೇಕ್ಷೆಯಾಗಿರುವನು. ಆಗ ಹಿರಿಯರಲ್ಲೊಬ್ಬನು ಅವನನ್ನು ನೋಡಿ, ಇವರು ಯಾರೆಂದು ಕೇಳಲು, ಅವನು, ನೀನೇ ಬಲ್ಲಿ, ಅಂದನು. ಆಗ ಹಿರಿಯನು, ಇವರು ಮಹಾ ಉಪದ್ರದೊಳಗಿಂದ ಬಂದವರು ಎಂದು ಹೇಳಿದನು. ಇದು ೬. ೯—೧೧. ವಚನಗಳಲ್ಲಿ ಸೂಚಿಸುವ ಮಹಾ ಉಪದ್ರವನ್ನು ಕುರಿತದ್ದು. ಇದು ರೋಮಾಯ ಅರಸನಾದ ದಿಯೊಕ್ಲೇಷನ ಕಾಲದಲ್ಲಿ ಸಭೆಗೆ ಸಂಭವಿಸಿದ ಘೋರ ಉಪದ್ರವನ್ನು ಸೂಚಿಸುತ್ತದೆ ಎಂದು ಕೆಲ ವಿದ್ವಾಂಸರು ನೆನಸುತ್ತಾರೆ.

2. ತನ್ನನ್ನು ತಾನೇ ಪಾಪನಿವಾರಣಬಲಿಯಾಗಿ ಅರ್ಪಿಸಿದ ಕ್ರಿಸ್ತನ ರಕ್ತದ ಪುಣ್ಯವೂ, ಅದರಿಂದುಂಟಾದ ಶುದ್ಧತ್ವವೂ ಇದರಲ್ಲಿ ಚನ್ನಾಗಿ ತೋರುತ್ತದೆ. ಮಿಕ್ಕಾದ ರಕ್ತಗಳು ಅಶುದ್ಧ ಉಂಟು ಮಾಡುವವು. ಕ್ರಿಸ್ತನ ರಕ್ತವಾದರೆ, ಸಮಸ್ತ ಅಶುದ್ಧವನ್ನು ಪರಿಹರಿಸಿ ಶುದ್ಧ ಮಾಡುವದು. (೧ ಯೋಹಾ. ೧. ೭. ಎಫೆ. ೧. ೭.) ಪರಮ ಸಿಂಹಾಸನದ ಮುಂದೆ ನಿಲ್ಲುವ ಭಕ್ತರು ಭೂಮಿಯಲ್ಲಿದ್ದಾಗ ಪಾಪವನ್ನೂ ಅಶುದ್ಧತ್ವವನ್ನೂ ಪರಿಹರಿಸುವದಕ್ಕೆ ತೆರೆಯಲ್ಪಟ್ಟ ಬುಗ್ಗೆಯಲ್ಲಿ ಸ್ನಾನ ಮಾಡಿ (ಜೆಕ. ೧೩. ೧.) ತಮ್ಮನ್ನು ಶುದ್ಧ ಮಾಡಿ ಕೊಂಡದರಿಂದ ಕ್ರಿಸ್ತನ ನೀತಿವಸ್ತ್ರವಾದ ಬಿಳೀ ಅಂಗಿಗಳನ್ನು ಧರಿಸಿ ಕೊಂಡವರಾಗಿ ಪರಮ ಸಭೆಯಲ್ಲಿ ವಿರಾಜಿಸುತ್ತಾರೆ. ಇನ್ನು ಮೇಲೆ ಪಾಪದ ಮೈಲಿಗೆ ಸ್ವಲ್ಪವಾದರೂ ಅವರಿಗೆ ತಗಲದು.

3. ಮಂದಿರವೆಂಬುವದು, ಹೊರಗಿನ ಪ್ರಕಾರವಲ್ಲ, ಯಾಜಕರು ಸೇವೆ ಮಾಡಿದ ಪರಿಶುದ್ಧ ಸ್ಥಳವೇ. (ಇಬ್ರೀ. ೯. ೨, ೬.) ಈ ಗ್ರಂಥದಲ್ಲಿ ಮಂದಿರವೆಂದು ಬಳಿಸಿರುವ ಮೂಲ ಭಾಷೆಯ ಪದಕ್ಕೆ ಇದೇ ತಾತ್ಪರ್ಯವು. ಕ್ರಿಸ್ತನ ರಕ್ತದ ಪುಣ್ಯದಿಂದ ಭಕ್ತರಿಗೆ ಪರಮ ಬಾಧ್ಯತೆಯ ಸಾಧನವು ದೊರಕ್ಕಿದ್ದರಿಂದ, ಅವರು ಪರಿಶುದ್ಧ ಸ್ಥಳದಲ್ಲಿ ಊಳಿಗ ಮಾಡುವ ಯಾಜಕರ ಹಾಗೆ, ದಿವ್ಯ ಮಂದಿರದಲ್ಲಿ ನಿಂತು ರಾತ್ರೀ ಹಗಲು ಕರ್ತನಿಗೆ ಸೇವೆ ಮಾಡುತ್ತಾರೆ.

4. ಇದು ಆಚರಣೆಯ ಗುಡಾರದಲ್ಲಿ ದೇವರ ಸಮುಖವು ಪ್ರತ್ಯಕ್ಷವಾದ ಪ್ರಕಾಶವುಳ್ಳ ಮೇಘವನ್ನಾದರೂ, ಯೋಹಾ. ೧. ೧೪ಲ್ಲಿ ಆತನು ನಮ್ಮಲ್ಲಿ ವಾಸ ಮಾಡಿದನು ಎಂಬ ಸತ್ಯವನ್ನಾದರೂ ಸೂಚಿಸುತ್ತದೆ ಎಂದು ತೋರುತ್ತದೆ. ಭೂಲೋಕದಲ್ಲಿ ಮನುಷ್ಯರೊಳಗೆ ವಾಸ ಮಾಡಿದ ಕ್ರಿಸ್ತನು ಪರಲೋಕದಲ್ಲಿ ಭಕ್ತರೊಂದಿಗೆ ಎಂದೆಂದಿಗೂ ವಾಸ ಮಾಡುವನು.

5. ಭಕ್ತರು ಭೂಮಿಯಲ್ಲಿ ಪರದೇಶಿಗಳಾಗಿ ಸಂಚರಿಸಿದಾಗ, ಅವರು ಅನುಭವಿಸಿದ ಉಪದ್ರಗಳಲ್ಲಿ ಹಶಿವೆಯೂ ದಾಹವೂ ಒಂದಾಗಿತ್ತು. (ಇಬ್ರೀ. ೧೧. ೩೬—೩೮.) ಹಸುರುಗಾವಲುಗಳಲ್ಲಿಯೂ ಶಾಂತವಾದ ನೀರುಗಳ ಬಳಿಯಲ್ಲಿಯೂ ಇರುವವರಿಗೆ ಹಸಿವೆ ದಾಹಗಳುಂಟಾಗಲಾರವು. ಇಹದಲ್ಲಿ ಉಪದ್ರ, ದುಃಖ, ಶ್ರಮೆಗಳನ್ನು ಸಹಿಸಿದವರು ಪರದಲ್ಲಿ ಅವುಗಳ ಬಾಧೆ ಎಷ್ಟು ಮಾತ್ರವೂ ಇಲ್ಲದೆ ಪರಮ ಸುಖವುಳ್ಳವರಾಗಿರುವರು.

6. ಕುರುಬನು ಕುರಿಗಳನ್ನು ಮೇಯಿಸುವ ಪ್ರಕಾರ, ಒಳ್ಳೇ ಕುರುಬನಾದ ಕ್ರಿಸ್ತನು ತನ್ನ ಮಂದೆಗೆ ಶೇರಿದ ಕುರಿಗಳನ್ನು ಮೇಯಿಸಿ, ಅವರನ್ನು ಜೀವದ ಜಲಬುಗ್ಗೆಗಳ ಬಳಿಗೆ ನಡಿಸುವನು. (ಕೀರ್ತ. ೨೩. ೨. ಯೋಹಾ. ೪. ೧೦; ೧೦. ೧—೧೮. ವಚನಗಳ ವ್ಯಾಖ್ಯಾನ ನೋಡ ಬೇಕು.) ಕರ್ತನು ತನ್ನ ದಾಸರನ್ನು ಅಪರಿಮಿತ ಜ್ಞಾನದಿಂದಲೂ ಪ್ರೀತಿಯಿಂದಲೂ ಕಾಪಾಡಿ, ಅವರಿಗೆ ಆತ್ಮನ ಸಂತೋಷಗಳನ್ನು ಸಂಪೂರ್ಣವಾಗಿ ಅನುಗ್ರಹಿಸುವನು. (೨೨. ೧.)

7. ಭಕ್ತರು ಕಣ್ಣೀರಿನ ತಗ್ಗಾದ ಲೋಕದಲ್ಲಿದ್ದಾಗ ಆಗಾಗ್ಯೆ ಕಣ್ಣೀರು ಬಿಟ್ಟರು. ಪರದಲ್ಲಿ ಕರುಣಾನಿಧಿಯಾದ ದೇವರು ತನ್ನ ಪರಿಶುದ್ಧ ಹಸ್ತದಿಂದ ಒರಸುವದರಿಂದ ಇನ್ನು ಅವರು ಕಣ್ಣೀರು ಬಿಡಲಾರರು. (ಯೆಶಾ. ೨೫. ೮; ೬೬. ೧೩.)

8. ಏಳನೇ ಮುದ್ರೆಯನ್ನು ಒಡೆದಾಗ ಪರಲೋಕದಲ್ಲಿ ಅರ್ಧ ತಾಸು ಉಂಟಾದ ನಿಶ್ಶಬ್ದವು, ಯೆಹೂದ್ಯರ ದೇವಾಲಯದಲ್ಲಿ ಯಾಜಕನು ಧೂಪವರ್ಪಿಸುವಾಗ ಹೊರಗಿನ ಪ್ರಾಕಾರದಲ್ಲಿದ್ದ ಜನರಲ್ಲಿ ಉಂಟಾಗಿದ್ದ ನಿಶ್ಶಬ್ದಕ್ಕೆ ಸಮಾನವಾಗಿತ್ತು. (ಲೂಕ. ೧. ೨೧.) ಇದರಿಂದ ರೋಮ ರಾಜ್ಯದಲ್ಲಿಯೂ ಸಭೆಯಲ್ಲಿಯೂ ಸ್ವಲ್ಪ ಕಾಲ ಸಮಾಧಾನ ಉಂಟಾಗಿರುವದೆಂದೂ, ತರುವಾಯ ಆ ಸಮಾಧಾನವು ಅತಿ ಶೀಘ್ರವಾಗಿ ನಿಂತು ಹೋಗುವದೆಂದೂ ತಿಳಿಯ ಬಹುದು. ಹಾಗೆಯೇ ರೋಮಾಯ ಅರಸನಾದ ಮಹಾ ಕೊನ್‌ಸ್ತಂತೀನ್ ಎಂಬವನ ಆಳಿಕೆಯ ಹದಿಮೂರನೇ ವರುಷ

೨ [1]ಆಗ ದೇವರ ಮುಂದೆ ನಿಂತಿರುವ ಏಳು [2]ದೂತರನ್ನು ಕಂಡೆನು; ಮತ್ತು ಅವರಿಗೆ ಏಳು [3]ತುತೂರಿಗಳು
೩ ಕೊಡಲ್ಪಟ್ಟವು. ಮತ್ತು ಬೇರೊಬ್ಬ ದೂತನು ಬಂದು, ಚಿನ್ನದ ಧೂಪಾರ್ತಿಯನ್ನು ಹಿಡಿದು ಕೊಂಡು,
[4]ಧೂಪಪೀಠದ ಹತ್ತರ ನಿಂತನು. ಮತ್ತು [5]ಪರಿಶುದ್ಧರೆಲ್ಲರ ಪ್ರಾರ್ಥನೆಗಳ ಸಂಗಡ [6]ಸಿಂಹಾಸನದ ಮುಂದಿ
೪ ರುವ ಚಿನ್ನದ ಧೂಪಪೀಠದ ಮೇಲೆ ಇಡುವದಕ್ಕೆ ಅವನಿಗೆ [7]ಬಹಳ ಧೂಪ ಕೊಡಲ್ಪಟ್ಟಿತು. ಆಗ ಧೂಪದ
ಹೊಗೆಯು ಪರಿಶುದ್ಧರ ಪ್ರಾರ್ಥನೆಗಳ ಸಂಗಡ ದೂತನ ಕೈಯೊಳಗಿಂದ [8]ದೇವರ ಮುಂದೆ ಏರಿ ಬಂತು.
೫ ಮತ್ತು ದೂತನು ಧೂಪಾರ್ತಿಯನ್ನು ತೆಗೆದು, ಧೂಪಪೀಠದ ಬೆಂಕಿಯಿಂದ ಅದನ್ನು ತುಂಬಿಸಿ, [9]ಭೂಮಿಗೆ
ಬಿಸಾಟನು. ಆಗ ಶಬ್ದಗಳೂ, ಗುಡುಗುಗಳೂ, ಮಿಂಚುಗಳೂ, ಭೂಕಂಪವೂ, ಉಂಟಾದವು.

ದಲ್ಲಿ ರೋಮ ರಾಜ್ಯದಲ್ಲೆಲ್ಲಾ ಸಮಾಧಾನ ಉಂಟಾಗಿತ್ತೆಂದೂ, ಆ ಅರಸನು ಸತ್ತು ಹೂಣಲ್ಪಟ್ಟ ಕೂಡಲೇ ಆ ಸಮಾಧಾನ ನಿವರ್ತಿಯಾಯಿತೆಂದೂ, ರೋಮಾಯರ ಚರಿತ್ರವನ್ನು ಬರೆದವರು ಹೇಳುತ್ತಾರೆ.

1. ಏಳು ಪತ್ರಿಕೆಗಳಿಗೂ ಏಳು ಮುದ್ರೆಗಳಿಗೂ ಮುಂಚೆ ಒಂದು ಪರಮ ದರ್ಶನ ಉಂಟಾಗಿದ್ದ ಪ್ರಕಾರ, ಏಳು ವೇದನೆಗಳಿಗೆ ಗುರುತಾಗಿದ್ದ ಏಳು ತುತೂರಿಗಳು ಊದುವದಕ್ಕಿಂತ ಮುಂಚೆ ಒಂದು ದರ್ಶನ ಉಂಟಾಯಿತು. ಇದು ಪರಮ ಮಂದಿರದಲ್ಲಿ ನಡಿಯಿತು. ಇದರಲ್ಲಿ ಏಳು ದೂತರು ತುತೂರಿಗಳನ್ನು ಊದುವದಕ್ಕೆ ಸಿದ್ಧವಾಗಿ ನಿಂತು ಕೊಂಡಿದ್ದ ಹಾಗೆಯೂ, ಇನ್ನೊಬ್ಬ ದೂತನು ಪರಿಶುದ್ಧವಂತರ ಪ್ರಾರ್ಥನೆಗಳಾದ ಧೂಪವರ್ಗವು ತುಂಬಿದ ಧೂಪಕಲಶವನ್ನು ಪೀಠದ ಬಳಿಗೆ ತಂದು ಅದರಲ್ಲಿ ಬೆಂಕಿಯನ್ನು ಹಾಕಿ ಅದನ್ನು ಭೂಮಿಯ ಮೇಲೆ ಬಿಸಾಟನೆಂದೂ, ಅದರ ತರುವಾಯ ಭಯಂಕರವಾದ ಉಪದ್ರಗಳು ಉಂಟಾದವೆಂದೂ, (೮. ೨—೫) ಎಲ್ಲಾ ಸಿದ್ಧವಾದ ತರುವಾಯ ನಾಲ್ಕು ದೂತರು ತುತೂರಿಗಳನ್ನು ಊದಿದರೆಂದೂ, ಆಗ ಪರಿಶೆಯಾಗಿ ಉಂಟಾದ ಕಠಿಣ ಉಪದ್ರಗಳಿಂದ, ಭೂಮಿಯೂ, ಸಮುದ್ರವೂ, ನದಿಗಳೂ, ಆಕಾಶಜ್ಯೋತಿಗಳೂ ನಷ್ಟವಾಗಿ, ದೇವರ ಕೋಪದಿಂದ ಸರ್ವ ಸೃಷ್ಟಿಗಳಿಗೂ ಕೇಡು ಸಂಭವಿಸಿತೆಂದೂ ಹೇಳಿ ಇದೆ. (೬—೧೨. ವ.) ಬೇರೆ ತುತೂರಿಗಳನ್ನು ಕುರಿತು, ೯. ೧—೧೧; ೯. ೧೨; ೧೧. ೧೫. ವರಿಗೂ, ೧೧. ೧೪—೧೯. ವಾಕ್ಯಗಳಲ್ಲಿ ನೋಡ ಬೇಕು.

2. ದೂತರೆಂಬುವದು, ದೇವರ ಆಶೀರ್ವಾದಗಳನ್ನೂ ನ್ಯಾಯತೀರ್ವಿಕೆಗಳನ್ನೂ ಲೋಕದವರಿಗೆ ಸಾರುವ ಪರಮ ಆತ್ಮಗಳನ್ನು ಕುರಿತದ್ದು. (೧. ೪. ವಚನದ ವ್ಯಾಖ್ಯಾನ ನೋಡ ಬೇಕು.) ಈ ಏಳು ದೂತರು ಬೇರೆ ದೂತರಿಗಿಂತ ಅಧಿಕ ಶ್ರೇಷ್ಠರಾಗಿ ದೇವರ ಸಮೀಪದಲ್ಲಿ ನಿಂತು ಕೊಂಡಿದ್ದರು.

3. ಯೆಹೂದ್ಯರಲ್ಲಿ ಮುಖ್ಯವಾದ ಹಬ್ಬಗಳಲ್ಲಿಯೂ ಯುದ್ಧಗಳಲ್ಲಿಯೂ ತುತೂರಿಗಳನ್ನು ಊದುವದುಂಟು. ಯೆರಿಕೋ ಪಟ್ಣವನ್ನು ಹಿಡಿಯುವಾಗ ಒಡಂಬಡಿಕೆಯ ಪೆಟ್ಟಿಗೆಯನ್ನು ಹೊತ್ತು ಕೊಂಡು ಯಾಜಕರು ಆ ಪಟ್ಣವನ್ನು ಸುತ್ತುತ್ತಾ ಏಳು ತುತೂರಿಗಳನ್ನು ಊದಿದರು. ಏಳನೇ ದಿವಸ ಅದನ್ನು ಏಳು ಸಾರಿ ಸುತ್ತಿ ಬಂದು, ತುತೂರಿಗಳನ್ನು ಊದಿದರು. (ಯೆಹೋಶು. ೬. ೪.) ಹಾಗೆಯೇ ಈ ಪ್ರವಾದನೆಯಲ್ಲಿಯೂ ತುತೂರಿಗಳನ್ನು ಊದಿದರೆಂಬದಾಗಿ ಉಂಟು. ಇದು ಕ್ರಿಸ್ತಮಾರ್ಗದ ವಿರೋಧಿಗಳ ಸಂಗಡ ನಡಿಯುವ ಯುದ್ಧಕ್ಕೂ, ಒಡಂಬಡಿಕೆಪೆಟ್ಟಿಗೆಯಾದ ಸಭೆಯ ಅಭಿವೃದ್ಧಿಗೂ, ದೇವರ ಮಹತ್ತಾದ ನ್ಯಾಯತೀರ್ವಿಕೆಗಳನ್ನು ಅತ್ಯಂತ ಭಯಭಕ್ತಿಯಿಂದ ಒಪ್ಪಿಕೊಳ್ಳುವ ಪರಮ ಸಭೆಯ ಮಹಾನಂದಕ್ಕೂ, ಬಂಧಕದಲ್ಲಿರುವ ಸಭೆಯು ಬಿಡುಗಡೆ ಹೊಂದುವ ಯೂಬಿಲಿಯ ಮಹೋತ್ಸವದಿವಸಕ್ಕೂ ಗುರುತಾಗಿ ಇದೆ ಎಂದು ಹೇಳ ಬಹುದು.

4. ಇದು ಚಿನ್ನದ ಧೂಪಪೀಠವಾಗಿರ ಬಹುದು. ಧೂಪಾರ್ತಿಯನ್ನು ಹಿಡುಕೊಂಡು ನಿಂತ ದೂತನು ಒಡಂಬಡಿಕೆಯ ದೂತನಾದ ಕ್ರಿಸ್ತನೆಂದು ತಿಳಿಯ ಬಹುದು. ಪಾಪ ಮುಚ್ಚುವ ಮಹಾ ದಿವಸದಲ್ಲಿ ಪ್ರಧಾನ ಯಾಜಕನು ಇಂಥಾ ಧೂಪಾರ್ತಿಯನ್ನು ಹಿಡುಕೊಂಡು ಮಹಾ ಪರಿಶುದ್ಧ ಸ್ಥಳದಲ್ಲಿ ಪ್ರವೇಶಿಸಿದ ಪ್ರಕಾರ, (ಇಬ್ರಿ. ೯. ೪.) ಮಹಾ ಪ್ರಧಾನ ಯಾಜಕನಾದ ಯೇಸು ಕ್ರಿಸ್ತನು ಪರಿಶುದ್ಧವಂತರ ಪ್ರಾರ್ಥನೆಗಳಾದ ಧೂಪಾರ್ತಿಯನ್ನು ಹಿಡಿದು, ಪರಮಾಸನದ ಮುಂದೆ ಆಸೀನನಾಗಿದ್ದಾನೆ.

5. ಇವರು ಮಹಾ ಉಪದ್ರದೊಳಗಿಂದ ತಪ್ಪಿಸಿ ಕೊಂಡ ಭಕ್ತರಾಗಿರ ಬಹುದು. (೬. ೯; ೭. ೧೪.) ಈಗ ಅವರೆಲ್ಲರು ತಮ್ಮ ವ್ಯಾಜ್ಯವನ್ನು ವಿಚಾರಿಸ ಬೇಕೆಂದು ಯೆಹೋವನಾದ ಮಹಾ ದೇವರನ್ನು ಬೇಡಿ ಕೊಳ್ಳುತ್ತಾರೆ. (೬. ೧೦.)

6. ಸಿಂಹಾಸನ ಎಂಬುವದು ದೇವರ ಮಹಿಮೆಯು ಪ್ರಕಟವಾದ ಕೃಪಾಸನವನ್ನು ಸೂಚಿಸ ಬಹುದು. (ಹೊರ. ೨೫. ೨೦, ೨೨.)

7. ಮಧ್ಯಸ್ಥನಾದ ಕ್ರಿಸ್ತನಿಗೆ ಬಹಳ ಧೂಪವು ಕೊಡಲ್ಪಟ್ಟಿತು. ಆತನು ಪರಮ ಸಿಂಹಾಸನದ ಮುಂದೆ ಆಸೀನನಾಗಿದ್ದು ತನ್ನ ಜನರಿಗೋಸ್ಕರ ಯಾವಾಗಲೂ ಪ್ರಾರ್ಥನೆ ಮಾಡುತ್ತಾನೆ. ಆತನು ತಂದೆಯ ಚಿತ್ತಕ್ಕೆ ಒಳಪಟ್ಟು, ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿದ್ದರಿಂದ ಸಂಪಾದಿಸಿದ ಮಹಾ ಪುಣ್ಯವೂ, ಪ್ರಧಾನ ಯಾಜಕನಾಗಿದ್ದು ಆತನು ಮಾಡುವ ಪ್ರಾರ್ಥನೆಯ ಪುಣ್ಯವೂ ಒಂದಾಗಿ ಕೂಡಿರುವದರಿಂದ, ಆತನಿಗೆ ಬಹಳ ಧೂಪವು ಕೊಡಲ್ಪಟ್ಟಿತೆಂದು ಹೇಳ ಬಹುದು. ಭಕ್ತರ ಪ್ರಾರ್ಥನೆಗಳಾದ ಧೂಪಕ್ಕೆ ಸುವಾಸನೆ ಕೊಡುವಂಥಾದ್ದು, ಈ ರಕ್ಷಕನ ಮಹಾ ಪುಣ್ಯವಾದ ಧೂಪವೇ.

8. ಪರಿಶುದ್ಧವಂತರ ಪ್ರಾರ್ಥನೆಗಳು ಕ್ರಿಸ್ತನ ವಿಜ್ಞಾಪನೆಯಾದ ಧೂಪದ ಸಂಗಡ ಕಲತಿದ್ದದರಿಂದ ಅದು ದೇವರಿಗೆ ಸುಗಂಧವಾಸನೆಯಾದ ಕಾಣಿಕೆಯಾಗಿತ್ತು. ಈ ಕಾಣಿಕೆಯನ್ನು ಆತನು ಅಂಗೀಕರಿಸಿದ್ದಕ್ಕೆ ದೃಷ್ಟಾಂತವಾಗಿ, ಆತನ ನೀತಿಯುಳ್ಳ ನ್ಯಾಯತೀರ್ವಿಕೆಗಳು ಲೋಕದಲ್ಲಿ ಅತಿ ಶೀಘ್ರವಾಗಿ ಸಂಭವಿಸಿದವು.

9. ಭಕ್ತರ ಪ್ರಾರ್ಥನೆಗಳು ಅಡಗಿರುವ ಧೂಪಾರ್ತಿಯು, ದೇವರ ನೀತಿಯುಳ್ಳ ನ್ಯಾಯತೀರ್ಪುಗಳಿಗೆ ಗುರುತಾಗಿರುವ ಬಲಿಪೀಠದ ಬೆಂಕಿಯಿಂದ ತುಂಬಿಸಿ, ಭೂಮಿಯ ಮೇಲೆ ಬಿಸಾಡಲಾಗಿ ಶಬ್ದಗಳೂ, ಗುಡುಗುಗಳೂ, ಮಿಂಚುಗಳೂ, ಭೂಕಂಪ



ಮೊದಲನೇ ನಾಲ್ಕು ತುತೂರಿಗಳನ್ನು ಊದಿದ್ದು; ಆಕಾಶ, ಭೂಮಿ, ಸಮುದ್ರ ಮುಂತಾದ ಎಲ್ಲವನ್ನು ನಷ್ಟ ಪಡಿಸುವ ಬಾಧೆಗಳು.

೬ ಮತ್ತು ಏಳು ತುತೂರಿಗಳು ಉಂಟಾದ ಏಳು ದೂತರು ಊದುವದಕ್ಕೆ ತಮ್ಮನ್ನು ಸಿದ್ಧ ಮಾಡಿ ಕೊಂ
ಡರು.
೭ ಮೊದಲನೇ ದೂತನು ಊದಲಾಗಿ, ರಕ್ತದಿಂದ ಕಲಿಸಿದ ಕಲ್ಮಳೆಯೂ ಬೆಂಕಿಯೂ ಉಂಟಾಗಿ, ಭೂಮಿಗೆ
ಹಾಕಲ್ಪಟ್ಟವು. ಆಗ ಮರಗಳಲ್ಲಿ [1]ಮೂರನೇ ಭಾಗವು ಬೆಂದು ಹೋಯಿತು; ಮತ್ತು ಹಶಿ ಹುಲ್ಲೆಲ್ಲಾ ಬೆಂ
ದು ಹೋಯಿತು.
೮ ಎರಡನೇ ದೂತನು ಊದಲಾಗಿ, ಬೆಂಕಿ ಉರಿಯುವ [2]ದೊಡ್ಡ ಬೆಟ್ಟದ ಹಾಗೆ ಇರುವಂಥಾದ್ದು ಸಮುದ್ರ
೯ ದಲ್ಲಿ ಹಾಕಲ್ಪಟ್ಟಿತು. ಆಗ ಸಮುದ್ರದ ಮೂರನೇ ಭಾಗವು ರಕ್ತವಾಯಿತು. ಮತ್ತು ಸಮುದ್ರದಲ್ಲಿರುವ
ಪ್ರಾಣವುಳ್ಳ ಜಂತುಗಳ ಮೂರನೇ ಭಾಗವು ಸತ್ತಿತು; ಹಡಗಗಳ ಮೂರನೇ ಭಾಗವು ನಾಶವಾಯಿತು.
೧೦ ಮೂರನೇ ದೂತನು ಊದಲಾಗಿ, ಆಕಾಶದಿಂದ ದೀಪದಂತೆ ಉರಿಯುವ ದೊಡ್ಡ ನಕ್ಷತ್ರವು ಬಿತ್ತು; ಅದು
೧೧ ನದಿಗಳ ಮೂರನೇ ಭಾಗದ ಮೇಲೆಯೂ ನೀರುಬುಗ್ಗೆಗಳ ಮೇಲೆಯೂ ಬಿತ್ತು. ಆ ನಕ್ಷತ್ರದ ಹೆಸರು
[3]ಮಾಚಿಪತ್ರೆ ಎಂದು ಹೇಳಲ್ಪಡುತ್ತದೆ. ಮತ್ತು ನೀರುಗಳ ಮೂರನೇ ಭಾಗವು ಮಾಚಿಪತ್ರೆಯಾಯಿತು;
ಅವು ಕಹಿಯಾದ ಕಾರಣ ಆ ನೀರುಗಳಿಂದ ಮನುಷ್ಯರಲ್ಲಿ ಅನೇಕರು ಸತ್ತರು.
೧೨ ನಾಲ್ಕನೇ ದೂತನು ಊದಲಾಗಿ, ಸೂರ್ಯನ ಮೂರನೇ ಭಾಗವೂ, ಚಂದ್ರನ ಮೂರನೇ ಭಾಗವೂ,

ವೂ ಮುಂತಾದ ಭಯಂಕರವಾದ ಉಪದ್ರಗಳು ಸಂಭವಿಸಿದವು. ಅರಸನಾದ ಕೊನ್‌ಸ್ತಂತೀನನು ಸತ್ತ ತರುವಾಯ ಅವನ ಕುಮಾರರಲ್ಲಿ ಉಂಟಾದ ಕ್ರೂರ ಯುದ್ಧಗಳಿಂದ ರೋಮ ರಾಜ್ಯಕ್ಕೂ, ವಿಪರೀತವಾದ ಮತಭೇದಗಳಿಂದ ಕ್ರಿಸ್ತನ ಸಭೆಗೂ ದೊಡ್ಡ ಆಪತ್ತುಗಳು ಸಂಭವಿಸಿದವೆಂದು ಚರಿತ್ರದಿಂದ ಪ್ರಕಟವಾಗಿದೆ.

1. (ಎಜೇಕಿ. ೫. ೧೨. ಜೆಕ. ೧೩. ೮.) ಮೂರನೇ ಭಾಗವೆಂಬುವದು ಒಂದು ದೊಡ್ಡ ಭಾಗವನ್ನು ಸೂಚಿಸುತ್ತದೆ. ಕರುಣಾನಿಧಿಯಾದ ದೇವರು ಕೋಪದಲ್ಲಿಯೂ ಕರುಣೆಯನ್ನು ನೆನಸಿ, (ಹಬ. ೩. ೨.) ಈ ಭಯಂಕರವಾದ ನ್ಯಾಯತೀರ್ವಿಕೆಗಳಿಂದ ಫಲವೇನೂ ಬಾರದಿರುವಲ್ಲಿ ಸರ್ವನಾಶ ಮಾಡದ ಹಾಗೆ ತಾಮಸವಾಗಿದ್ದಾನೆ. ಮೊದಲನೇ ದೂತನು ತುತೂರಿಯನ್ನು ಊದಿದ ಕೂಡಲೇ ಉಂಟಾದ ರಕ್ತದಿಂದ ಕಲಸಿದ ಕಲ್ಮಳೆಯು ಯುದ್ಧದಿಂದ ಉಂಟಾಗುವ ಕಠಿಣ ನಾಶನಕ್ಕೆ ಗುರುತಾಗಿತ್ತು. ಇಂಥಾ ಬಾಧೆ ಐಗುಪ್ತದಲ್ಲಿ ಉಂಟಾಯಿತು. (ಹೊರ. ೯. ೨೩.) ಭೂಮಿ ಎಂಬುವದು ರೋಮ ರಾಜ್ಯವನ್ನೂ, ಮರಗಳು ಹುಲ್ಲು ಎಂಬುವದು ಅದರಲ್ಲಿ ನಾಗರೀಕಕ್ಕೆ ಗುರುತಾಗಿ ತೋರಿದ ನಾನಾ ವಿಧ ಏರ್ಪಾಟುಗಳನ್ನೂ ಸ್ಥಾಪನೆಗಳನ್ನೂ ಕುರಿತದ್ದಾಗಿರ ಬಹುದು. ವಾಲನ್ಸ್ ಅರಸನು ಆಳುವಾಗ ಉತ್ತರ ದೇಶಗಳಿಂದ ಮ್ಲೇಛ್ಛರು ದಾನ್ಯೂಬ್ ನದಿಯನ್ನು ದಾಟಿ ರೋಮ ರಾಜ್ಯದಲ್ಲಿ ಹೊಕ್ಕು, ಅನೇಕ ನಾಡು ನಗರಗಳನ್ನು ಅಗ್ನಿಬಾಧೆಯಿಂದ ನಾಶ ಮಾಡಿ, ಅನೇಕ ಜನರನ್ನು ಕಡಿದು ಕೊಂದು, ಬೀದಿಗಳಲ್ಲಿ ರಕ್ತಪ್ರವಾಹವಾಗ ಮಾಡಿದರು. ತಿಯೊಡೋಷಿಯು ಎಂಬ ಅರಸನು ಅವರನ್ನು ತಡೆದದರಿಂದ ರಾಜ್ಯಕ್ಕೆ ಸರ್ವನಾಶ ಉಂಟಾಗಲಿಲ್ಲ.

2. ಎರಡನೇ ದೂತನು ತುತೂರಿ ಊದಿದಾಗ ಉಂಟಾದ ನೋಟವು ಮಹಾ ಭಯಂಕರವಾಗಿತ್ತು. ಬೆಂಕಿ ಉರಿಯುವ ಒಂದು ಬೆಟ್ಟದಂಥಾದ್ದು ಸಮುದ್ರದಲ್ಲಿ ಬಿದ್ದಾಗ, ಅದರಲ್ಲಿ ಮೂರನೇ ಭಾಗ ರಕ್ತವಾಯಿತು. ಲೆಖ್ಖವಿಲ್ಲದ ಜೀವಜಂತುಗಳೂ ಅಘೋರವಾದ ಅಲೆಗಳೂ ಉಳ್ಳ ಸಮುದ್ರವು, ಅನೇಕ ಜಾತಿಗಳೂ ಕಲಹಗಳೂ ತುಂಬಿದ ಒಂದು ದೊಡ್ಡ ರಾಜ್ಯವನ್ನು ಸೂಚಿಸುತ್ತದೆ. (ಕೀರ್ತ. ೬೫. ೭; ೯೩. ೪. ಯೆಶಾ. ೫೭. ೨೦. ಹಬ. ೧. ೧೪.) ಹಡಗಗಳೆಂಬುವದು, ಅನೇಕ ಹಡಗಗಳುಳ್ಳ ದೊಡ್ಡ ರಾಜ್ಯವನ್ನು ಸೂಚಿಸುತ್ತದೆ. ಬೆಂಕಿ ಉರಿಯುವ ಬೆಟ್ಟವೆಂಬುವದು, ವಿಘ್ನವನ್ನುಂಟು ಮಾಡುವ ಬಲವಾದ ರಾಜ್ಯವನ್ನು ಸೂಚಿಸುತ್ತದೆ. (ಯೆರೆ. ೫೧. ೨೫.) ಉತ್ತರ ದಿಕ್ಕಿನಲ್ಲಿದ್ದ ಮ್ಲೇಛ್ಛ ಜಾತಿಯವರಿಂದ ರೋಮ ರಾಜ್ಯಕ್ಕೆ ಸಂಭವಿಸಿದ ದೊಡ್ಡ ನಾಶನವನ್ನು ಈ ಉಪಮಾನದಿಂದ ತೋರಿಸಿರ ಬಹುದು. ತಿಯೊಡೋಷಿಯು ಎಂಬ ಅರಸನು ಸತ್ತ ತರುವಾಯ, ಉತ್ತರದಿಂದ ಮ್ಲೇಛ್ಛರು ಪ್ರವಾಹದೋಪಾದಿಯಾಗಿ ರೋಮ ರಾಜ್ಯದಲ್ಲಿ ಹರಿದು ಬಂದು ಸರ್ವವನ್ನು ಕೊಳ್ಳೆ ಮಾಡಿದರು. ಅವರಲ್ಲಿ ಹನ್‌ಸ್ ಜಾತಿಯವರಿಗೆ ಅಧಿಪತಿಯಾಗಿದ್ದ ಅಟ್ಟಿಲಾ ಎಂಬವನಿಂದ ಆ ರಾಜ್ಯಕ್ಕೆ ಉಂಟಾದ ನಾಶನವು ಸಾಮಾನ್ಯವಾದದ್ದಲ್ಲ. ದೇವರ ಚಬುಕು, ಎಂದು ಅವನಿಗೆ ಹೆಸರಾಗಿತ್ತು. ಅವನ ತರುವಾಯ ಹೆರುಳಿ ಎಂಬ ಜಾತಿಯವರಿಗೆ ಮುಖ್ಯಸ್ಥನಾಗಿದ್ದ ಒಡೇಸರ್ ಎಂಬವನಿಂದ ೪೭೬ನೇ ವರುಷದಲ್ಲಿ ರೋಮ ರಾಜ್ಯಕ್ಕೆ ಅಂತ್ಯ ಉಂಟಾಯಿತು.

3. ಮೂರನೇ ದೂತನು ತುತೂರಿಯನ್ನು ಊದಿದಾಗ, ಆಕಾಶದಿಂದ ದೀಪದಂತೆ ಉರಿಯುವ ನಕ್ಷತ್ರವು ಬಿತ್ತು. ಅದಕ್ಕೆ ಮಾಚಿಪತ್ರೆ ಎಂಬ ಹೆಸರು. ನಕ್ಷತ್ರವೆಂಬುವದು ಲೋಕದ ರಾಜ್ಯಕ್ಕೆ ಶೇರಿದ ಒಬ್ಬ ಅಧಿಪತಿಯನ್ನು ಸೂಚಿಸುತ್ತದೆ. ಮಾಚಿಪತ್ರೆ ಅಂದರೆ ಕಹಿ, ಇಂಥಾ ಅಧಿಪತಿಗಳಿಂದ ಮನುಷ್ಯರಿಗೆ ಉಂಟಾಗುವ ನಷ್ಟವನ್ನೂ ನಾಶನವನ್ನೂ ಸೂಚಿಸುತ್ತದೆ. ಇದು ಮೇಲೆ ಹೇಳಿದ ಮ್ಲೇಛ್ಛ ಜಾತಿಯವರ ಮುಖ್ಯಸ್ಥರಿಂದ ರೋಮ ರಾಜ್ಯಕ್ಕೆ ಉಂಟಾದ ನಾಶನವನ್ನು ಕುರಿತದ್ದಾಗಿರ ಬಹುದು.

ನಕ್ಷತ್ರಗಳ ಮೂರನೇ ಭಾಗವೂ, ಹೊಡೆಯಲ್ಪಟ್ಟವು. ಇದರಿಂದ ಅವುಗಳ ಮೂರನೇ ಭಾಗವು ಕತ್ತಲಾಗಿ,
ಹಗಲು ಅದರ ಮೂರನೇ ಭಾಗದ ಪರ್ಯಂತರ ಪ್ರಕಾಶಿಸಲಿಲ್ಲ; [1]ರಾತ್ರಿಯು ಹಾಗೆಯೇ.

ಮೂರು ಬಾಧೆಗಳು ಬರುವವೆಂದು ಸಾರಿದ್ದು; ಮೊದಲನೇ ಬಾಧೆಯಾದ ಐದನೇ ತುತೂರಿಯು ಊದಿದ್ದು;
ಪಾತಾಳದಿಂದ ಮಿಡಿತೆಗಳು ಹೊರಟದ್ದು.

೧೩ [2]ಮತ್ತು ನೋಡಲಾಗಿ, ಮಧ್ಯಾಕಾಶದಲ್ಲಿ ಹಾರುವ ದೂತನನ್ನು ಕೇಳಿದೆನು. ಅವನು ಮಹಾ ಶಬ್ದದಿಂ
ದ ಹೇಳಿದ್ದೇನಂದರೆ, ಊದಲಿರುವ ಮೂರು ದೂತರ ಮಿಕ್ಕಾದ ತುತೂರಿಯ ಧ್ವನಿಗಳಿಗೋಸ್ಕರ ಭೂಮಿ
ವಾಸಿಗಳಿಗೆ ಅಯ್ಯೋ! ಅಯ್ಯೋ! [3]ಅಯ್ಯೋ!

9. ಮತ್ತು ಐದನೇ ದೂತನು ಊದಲಾಗಿ, [4]ಆಕಾಶದಿಂದ ಭೂಮಿಯ ಮೇಲೆ ಬಿದ್ದ ನಕ್ಷತ್ರವನ್ನು ಕಂ
೨ ಡೆನು; ಮತ್ತು ಅವನಿಗೆ [5]ಅಗಾಧದ ಗುಂಡಿಯ ಬೀಗದ ಕೈ ಕೊಡಲ್ಪಟ್ಟಿತು. ಅಗಾಧದ ಗುಂಡಿಯನ್ನು
ತೆರೆದನು; ಮತ್ತು ಗುಂಡಿಯೊಳಗಿಂದ ದೊಡ್ಡ ಕೊಲುಮೆಯ ಹೊಗೆಯ ಹಾಗೆ [6]ಹೊಗೆ ಏರಿತು; ಮತ್ತು
೩ ಸೂರ್ಯನೂ ಆಕಾಶವೂ ಗುಂಡಿಯ ಹೊಗೆಯಿಂದ ಕತ್ತಲಾದವು. ಆ ಹೊಗೆಯೊಳಗಿಂದ [7]ಮಿಡಿತೆಗಳು
ಭೂಮಿಯ ಮೇಲೆ ಬಂದವು; ಮತ್ತು ಭೂಮಿಯಲ್ಲಿರುವ ಚೇಳುಗಳಿಗೆ ಇರುವ ಅಧಿಕಾರದ ಪ್ರಕಾರ ಅವು
೪ ಗಳಿಗೆ ಅಧಿಕಾರವು ಕೊಡಲ್ಪಟ್ಟಿತು. ಭೂಮಿಯ ಹುಲ್ಲನ್ನಾದರೂ, ಹಸುರಾದ ಯಾವದನ್ನಾದರೂ,

1. ನಾಲ್ಕನೇ ದೂತನು ತುತೂರಿಯನ್ನು ಊದಿದಾಗ ಹಗಲಲ್ಲಿಯೂ ರಾತ್ರಿಯಲ್ಲಿಯೂ ಬೆಳಕು ಕೊಡುವ ಆಕಾಶಜ್ಯೋತಿಗಳ ಪ್ರಕಾಶದ ಮೂರನೇ ಭಾಗವು ಕತ್ತಲಾಯಿತು. ಇದು ರೋಮ ರಾಜ್ಯದಲ್ಲಿ ಅಧಿಕಾರವನ್ನು ಕುರಿತು ಉಂಟಾದ ಮಾರ್ಪಡುವಿಕೆಯನ್ನು ಕುರಿತದ್ದು. ೪೭೬ನೇ ವರುಷದಲ್ಲಿ ಒಡೇಸರ್ ಎಂಬವನು ರೋಮಾಯರ ಪಶ್ಚಿಮ ರಾಜ್ಯವನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಟ್ಟು, ತನ್ನನ್ನು ಇತಲಿ ದೇಶಕ್ಕೆ ಅರಸನಾಗ ಮಾಡಿ ಕೊಂಡನು. ಅವನ ಕಾಲದ ತರುವಾಯ ಆ ರಾಜ್ಯದಲ್ಲಿ ಹಲವು ಮಾರ್ಪಡುವಿಕೆಗಳುಂಟಾದವು. ೫೬೬ನೇ ವರುಷದಲ್ಲಿ, ಬಹು ಕಾಲದಿಂದ ಲೋಕದ ರಾಣಿ ಎಂದು ಹೆಸರು ಹೊಂದಿದ ರೋಮ ರಾಜ್ಯವು, ರವನ್ನಾ ಪಟ್ಣದ ಒಬ್ಬ ಚಿಕ್ಕ ಅರಸನಿಗೆ ಒಳಪಟ್ಟ ದೇಶವಾಯಿತು. ಹೀಗೆ ಆಕಾಶಜ್ಯೋತಿಗಳ ಹಾಗೆ ತೋರಿದ ರೋಮ ರಾಜ್ಯದ ಅಧಿಪತಿಗಳೆಲ್ಲರೂ ತಮ್ಮ ಅಧಿಕಾರವನ್ನು ಕಳಕೊಂಡು ಅನ್ಯ ಧೊರೆತನಕ್ಕೆ ಒಳಪಟ್ಟರು.

2. ಮೇಲೆ ಹೇಳಿದ ಬಾಧೆಗಳಿಗಿಂತ ಮಹಾ ಕಠಿಣ ಬಾಧೆಗಳು ಭೂಲೋಕದಲ್ಲಿ ಸಂಭವಿಸುವವೆಂದು ಈ ವಚನದಲ್ಲಿ ಹೇಳಿ ಇದೆ. ಐದನೇ ತುತೂರಿಯನ್ನು ಊದಿದಾಗ, ಪಾತಾಳದ ಬಾಗಲು ತೆರೆಯಲ್ಪಟ್ಟು, ಆದರಿಂದ ಚೇಳುಗಳ ವಿಷಕ್ಕೆ ಸಮಾನವಾದ ಮಿಡಿತೆಗಳು ಹೊರಟವು. (೯. ೧—೧೧.) ಆರನೇ ತುತೂರಿಯನ್ನು ಊದಿದಾಗ, ಸಂಹಾರದೂತರಲ್ಲಿ ನಾಲ್ಕು ಮಂದಿ ಶಾಪ ಹೊಂದಿದ ಮನುಷ್ಯರ ಮೂರನೇ ಭಾಗವನ್ನು ನಾಶ ಮಾಡ ಹೊರಟರು. ಕ್ರೂರ ಭೂತಗಳಿಗೆ ಸಮಾನವಾದ ಸೈನ್ಯಗಳು ತೀವ್ರವಾಗಿ ಬಂದು ಎಲ್ಲರನ್ನು ನಾಶ ಮಾಡಿದವು. (೧೨—೧೯. ವ.) ಇಂಥಾ ಕಠಿಣ ಶಿಕ್ಷೆಗಳು ಭೂಲೋಕದಲ್ಲಿ ನಡೆದಾಗ್ಯೂ, ಶಿಕ್ಷೆಗೆ ತಪ್ಪಿದವರು ಇನ್ನೂ ಗುಣ ಪಡದೆ ಇದ್ದರು. (೨೦, ೨೧. ವ.) ಈ ಸಂಗತಿಗಳೆಲ್ಲಾ ಈ ಭಾಗದಲ್ಲಿ ನೋಡ ಬಹುದು.

3. ಮೂವರು ದೂತರು ಊದಲಿರುವ ಮೂರು ತುತೂರಿಗಳಿಂದ ಭೂಲೋಕದಲ್ಲಿ ಕಠಿಣ ಆಪತ್ತುಗಳು ಸಂಭವಿಸಲಿಕ್ಕಿರುವದರಿಂದ ಆಪತ್ತನ್ನು ತೋರಿಸುವ ಅಯ್ಯೋ ಎಂಬ ಶಬ್ದವನ್ನು ಮೂರು ಸಾರಿ ಹೇಳಿ ಇದೆ. ಭೂಲೋಕದಲ್ಲಿ ಸಂಭವಿಸಿದ ಕಠಿಣ ಬಾಧೆಗಳಿಂದ ಕ್ರಿಸ್ತನ ಸಭೆ ನೆಟ್ಟಗಾಗದೆ ಹೋದದರಿಂದ, ಇನ್ನೂ ಅಧಿಕ ಭಯಂಕರವಾದ ಬಾಧೆಗಳು ಬರುವವೆಂದು ಪರಲೋಕದ ದೂತನು ಹದ್ದಿನ ಹಾಗೆ ಹಾರಿ ಎಲ್ಲರಿಗೂ ಸಾರಿ ಹೇಳಿದನು.

4. ಆಕಾಶದಿಂದ ಬಿದ್ದ ಸೈತಾನನ ಹಾಗೆ (ಲೂಕ. ೧೦. ೧೮.) ಆಕಾಶದಿಂದ ಭೂಮಿಯ ಮೇಲೆ ಬಿದ್ದ ನಕ್ಷತ್ರದಿಂದ ಸೂಚಿಸಲ್ಪಟ್ಟ ಅಧಿಪತಿ ಬಹಳ ನಷ್ಟ ಉಂಟು ಮಾಡುವವನಾಗಿದ್ದನು. ಅವನು, ೧೧ನೇ ವಚನದಲ್ಲಿ, ನಾಶ ಮಾಡುವಂಥವನು ಎಂಬ ಅಬದ್ದೋನನೆಂದೂ ಅಪೊಲ್ಲುವೋನನು ಎಂದೂ ಹೇಳಲ್ಪಟ್ಟ ಹೆಸರುಳ್ಳವನಾಗಿರುವನು. ಐದನೇ ದೂತನು ಊದಿದ ತುತೂರಿಯು ಆಪತ್ತುಗಳುಳ್ಳ ತುತೂರಿಗಳಲ್ಲಿ ಮೊದಲನೇದಾಗಿತ್ತು. (೮. ೧೩.)

5. ಅಗಾಧದ ಗುಂಡಿ ಎಂಬುವದು ಕೆಟ್ಟ ಆತ್ಮಗಳು ವಾಸಿಸುವ ಕತ್ತಲಾದ ಸ್ಥಳವು. (೨೦. ೧.)

6. ಹೊಗೆ ದೇವರ ಕೋಪಕ್ಕೆ ಉಪಮಾನವಾಗಿದೆ. (ಕೀರ್ತ. ೧೮. ೮.)

7. ಐಗುಪ್ತ ದೇಶದಲ್ಲಿ ಮಿಡಿತೆಗಳಿಂದ ಉಂಟಾದ ಎಂಟನೇ ಬಾಧೆಯು ಬಹಳ ಕಠಿಣ ಬಾಧೆಯಾಗಿತ್ತು. (ಹೊರ. ೧೦. ೪—೧೫.) ಆದದರಿಂದ ಇದು ವಿಸ್ತಾರವಾಗಿಯೂ ಭಯಂಕರವಾಗಿಯೂ ತಡೆಯ ಕೂಡದ್ದಾಗಿಯೂ ನಡಿಯುವ ದಂಡನೆಗೆ ತಕ್ಕ ಗುರುತಾಗಿತ್ತು. (ಯೋವೇಲ. ೧. ೨—೬; ೨. ೧—೯.) ಈ ಮಿಡಿತೆಗಳಿಗೆ ಸ್ವಾಭಾವಿಕವಾಗಿರುವ ಶಕ್ತಿ ಅಲ್ಲದೆ, ಚೇಳುಗಳಿಗೆ ಇರುವ ಪ್ರಕಾರ ಅವುಗಳಿಗೆ ಕೊಂಡಿಗಳು ಇದ್ದದರಿಂದ ಅವುಗಳಿಂದ ಉಂಟಾದ ಬಾಧೆಯು ಕಠೋರವಾದದ್ದಾಗಿತ್ತು.



ಯಾವ ಮರವನ್ನಾದರೂ, ಕೆಡಿಸದೆ, ತಮ್ಮ ಹಣೆಗಳಲ್ಲಿ ದೇವರ [1]ಮುದ್ರೆ ಇಲ್ಲದ ಮನುಷ್ಯರನ್ನು ಮಾತ್ರ
೫ ಕೆಡಿಸ ಬೇಕೆಂದು, ಅವುಗಳಿಗೆ ಹೇಳಲ್ಪಟ್ಟಿತು. ಮತ್ತು ಇವರನ್ನು ಕೊಲ್ಲುವ ಹಾಗಲ್ಲ, [2]ಐದು ತಿಂಗಳು
ಪೀಡಿಸುವ ಹಾಗೆ ಮಾತ್ರ, ಅವುಗಳಿಗೆ ಕೊಡಲ್ಪಟ್ಟಿತು; ಮತ್ತು ಅವುಗಳ ಪೀಡೆಯು ಮನುಷ್ಯನನ್ನು ಹೊಡೆ
೬ ಯುವ [3]ಚೇಳಿನ ಪೀಡೆಯ ಹಾಗಿತ್ತು. ಆ ದಿನಗಳಲ್ಲಿ ಮನುಷ್ಯರು ಮರಣವನ್ನು ಹುಡುಕಿ, ಅದನ್ನು ಕಾ
ಣದೆ ಇರುವರು. ಸಾಯುವದಕ್ಕೆ ಆಶಿಸುವರು; ಆದರೆ ಮರಣವು ಅವರ ಕಡೆಯಿಂದ ಓಡಿ ಹೋಗುವದು.
೭ ಮತ್ತು ಆ ಮಿಡಿತೆಗಳ ರೂಪಗಳು ಯುದ್ಧಕ್ಕೆ ಸಿದ್ಧವಾದ ಕುದುರೆಗಳಿಗೆ ಸಮಾನವಾಗಿ, ಅವುಗಳ ತಲೆ
ಗಳ ಮೇಲೆ [4]ಚಿನ್ನಕ್ಕೆ ಸಮಾನವಾದ ಕಿರೀಟಗಳ ಹಾಗೆ, ಅವುಗಳ ಮುಖಗಳು ಮನುಷ್ಯರ ಮುಖಗಳ
೮ ಹಾಗೆ, ಅವುಗಳ ಕೂದಲು [5]ಹೆಂಗಸರ ಕೂದಲಿನ ಹಾಗೆ, ಅವುಗಳ ಹಲ್ಲುಗಳು ಸಿಂಹಗಳ ಹಲ್ಲುಗಳ
೯ ಹಾಗೆ, ಇದ್ದವು. ಕಬ್ಬಿಣದ ಕವಚಗಳ ಹಾಗೆ ಅವುಗಳಿಗೆ ಕವಚಗಳಿದ್ದವು; ಅವುಗಳ ರೆಕ್ಕೆಗಳ ಶಬ್ದವು
೧೦ ಯುದ್ಧಕ್ಕೆ ಓಡುವ ಅನೇಕ ಕುದುರೆಗಳಿರುವ ರಥಗಳ ಶಬ್ದದ ಹಾಗಿತ್ತು. ಮತ್ತು ಚೇಳುಗಳಂತೆ ಅವುಗ
ಳಿಗೆ ಬಾಲಗಳೂ, ಅವುಗಳ ಬಾಲಗಳಲ್ಲಿ ಕೊಂಡಿಗಳೂ ಉಂಟು; ಮನುಷ್ಯರನ್ನು ಐದು ತಿಂಗಳು ಪೀಡಿಸು
೧೧ ವದಕ್ಕೆ ಅವುಗಳಿಗೆ ಅಧಿಕಾರವು ಉಂಟು. ಮತ್ತು ಅಗಾಧದ ದೂತನು ಅವುಗಳಿಗೆ [6]ಅರಸನಾಗಿದ್ದಾನೆ;
ಇವನಿಗೆ ಇಬ್ರಿಯ ಮಾತಿನಲ್ಲಿ ಅಬದ್ದೋನನೂ, ಗ್ರೀಕ ಮಾತಿನಲ್ಲಿ ಅಪೊಲ್ಲುವೋನನೂ, ಎಂಬ ಹೆಸರು.
೧೨ [7]ಮೊದಲನೇ ಅಯ್ಯೋ ಆಗಿ ಹೋಯಿತು; ಇಗೋ, ಇನ್ನು ಎರಡು ಅಯ್ಯೋ ಇವುಗಳ ತರುವಾಯ
ಬರುತ್ತವೆ.

ಆರನೇ ತುತೂರಿ ಊದಿದ್ದು; ಎರಡನೇ ಬಾಧೆಯು ಪ್ರಾರಂಭವಾಗಿ ಲೆಖ್ಖವಿಲ್ಲದ ಸಂಹಾರದೂತರು ಹೊರಟದ್ದು.

೧೩ ಆರನೇ ದೂತನು ಊದಲಾಗಿ, ದೇವರ ಮುಂದಿರುವ [8]ಚಿನ್ನದ ಧೂಪಪೀಠದ ನಾಲ್ಕು ಕೊಂಬುಗಳಿಂದ
೧೪ ಒಂದು ಶಬ್ದವನ್ನು ಕೇಳಿದೆನು; ಅದು ತುತೂರಿ ಹಿಡಿದ ಆರನೇ ದೂತನಿಗೆ, ಫ್ರಾತು ಎಂಬ ದೊಡ್ಡ ನದಿ

1. ಇದು ೬. ೨, ೪. ವಚನಗಳಲ್ಲಿ ಹೇಳಿದ ಮುದ್ರೆಯನ್ನು ಕುರಿತದ್ದು. ಮಿಡಿತೆಗಳಿಂದ ಉಂಟಾದ ಬಾಧೆಯು ಪರಿಶುದ್ಧಾತ್ಮನ ಮುದ್ರೆಯನ್ನು ಹೊಂದದ ಭಕ್ತಿಹೀನರ ಮೇಲೆ ದೇವರ ಬಳಿಯಿಂದ ಬರುವ ದಂಡನೆ ಎಂದು ಇದರಿಂದ ತಿಳಿಯ ಬಹುದು.

2. ಐದು ತಿಂಗಳು ಎಂಬುವದು ಮಿಡಿತೆಗಳಿಂದ ಉಂಟಾದ ಬಾಧೆಯು ನಡಿಯುವ ಕಾಲವನ್ನು ಸೂಚಿಸುತ್ತದೆ. (೧೦. ವ.)

3. ಚೇಳು ಕ್ರೂರ ಗುಣವುಳ್ಳ ಮೂರ್ಖರಿಗೆ ಗುರುತಾಗಿದೆ. (ಎಜೇಕಿ. ೨. ೬.)

4. ಮಿಡಿತೆಗಳ ತಲೆಗಳ ಮೇಲಿರುವ ಒಂದು ವಿಧ ಕೊಂಬುಗಳು ಚಿನ್ನದ ಹಾಗೆ ಹಳದಿ ಬಣ್ಣವಾಗಿರುವವು. ಯುದ್ಧಕ್ಕೆ ಹೋಗುವ ಸೈನ್ಯದ ಹಾಗೆ ಈ ಮಿಡಿತೆಗಳ ಸೈನ್ಯವು ಜಯಧ್ವನಿಯಾಗಿಯೂ ತೀವ್ರಗತಿಯಾಗಿಯೂ ಹೋದದರಿಂದ ಅವುಗಳ ತಲೆಯಲ್ಲಿ ಚಿನ್ನದ ಕಿರೀಟವಿದ್ದ ಹಾಗೆ ಉಪಮಾನವಾಗಿ ಹೇಳಿ ಇದೆ. (ಯೋವೇಲ. ೨. ೬—೯.)

5. ಅವುಗಳ ಕೂದಲು ಸ್ತ್ರೀಯರ ಕೂದಲಿನ ಹಾಗೆ ಉದ್ದವಾಗಿಯೂ, ಅವುಗಳ ಹಲ್ಲುಗಳು ಸಿಂಹಗಳ ಹಲ್ಲುಗಳ ಹಾಗೆ ಬಲವಾಗಿಯೂ, ಅವುಗಳ ಎದೆಗಳು ಕಬ್ಬಿಣದ ಕವಚಗಳ ಹಾಗೆ, ಯಾವ ಮುಳ್ಳು ಪೊದೆಯನ್ನಾದರೂ ಹಾದು ಹೋಗ ತಕ್ಕದ್ದಾಗಿ ಮಹಾ ಘಟ್ಟಿಯಾಗಿಯೂ ಇದ್ದವು.

6. ಯುದ್ಧಕ್ಕೆ ಹೋಗುವ ಸೈನ್ಯಕ್ಕೆ ಒಬ್ಬ ಅಧಿಪತಿ ಇರುವ ಪ್ರಕಾರ ಈ ಮಿಡಿತೆಗಳ ಬಲವಾದ ಸೈನ್ಯಕ್ಕೆ ಒಬ್ಬ ಅರಸನು ಇದ್ದಾನೆ. ಇವುಗಳೆಲ್ಲಾ ನಾಶ ಮಾಡುವವನಾದ ಅಪೊಲ್ಲುವೋನನೆಂಬ ಅಧಿಪತಿಯಾದ ಸೈತಾನನ ಕ್ರೂರ ಯೋಚನೆಗಳನ್ನು ಈಡೇರಿಸುವದಕ್ಕೆ ಯುದ್ಧಮುಸ್ತೀಪಿನಿಂದ ಸಾಲ್ಗಟ್ಟಿ ಬರುವ ರಾಣುವೆಯ ಹಾಗಿತ್ತು. (ಯೋವೇಲ. ೨. ೭, ೮.) ಆಕಾಶದಿಂದ ಬಿದ್ದ ನಕ್ಷತ್ರವು ಮಹಮ್ಮದನನ್ನು ಕುರಿತದ್ದೆಂದೂ, ಅವನು ಅಗಾಧದ ಬಾಗಲನ್ನು ತೆರೆಯಲು ಅದರಲ್ಲಿಂದ ಎದ್ದ ಹೊಗೆಯು ಅವನಿಂದುಂಟಾದ ಕತ್ತಲಾದ ಮಾರ್ಗವನ್ನು ಸೂಚಿಸುತ್ತದೆಂದೂ, ಅದರಿಂದ ಹೊರಟ ಮಿಡಿತೆಗಳು ಅವನ ಮಾರ್ಗವನ್ನು ಅನುಸರಿಸಿದ್ದ ಸರಸೇನರ ಸೈನ್ಯಗಳನ್ನು ಕುರಿತದ್ದೆಂದೂ, ಮಿಡಿತೆಗಳಿಂದುಂಟಾದ ನಷ್ಟಗಳು ಸರಸೇನರ ಸೈನ್ಯಗಳಿಂದ ದೇವರ ಮುದ್ರೆ ಹೊಂದದೆ ಇದ್ದ ಅಜ್ಞಾನಿಗಳಿಗೂ ಸುಳ್ಳು ಕ್ರೈಸ್ತರಿಗೂ ಸಂಭವಿಸಿದ ಉಪದ್ರಗಳನ್ನು ಸೂಚಿಸುತ್ತದೆಂದೂ, ಆ ಬಾಧೆ ನಡಿಯುತ್ತಿದ್ದ ಐದು ತಿಂಗಳೆಂಬುವದು, ಸರಸೇನರಿಂದುಂಟಾದ ಉಪದ್ರವು ನಡಿಯ ಬೇಕೆಂದು ದೇವರು ನೇಮಿಸಿದ ಕಾಲವನ್ನು ಕುರಿತದ್ದೆಂದೂ ಅನೇಕ ವಿದ್ವಾಂಸರು ಅಭಿಪ್ರಾಯ ಮಾಡುತ್ತಾರೆ.

7. ಮೊದಲನೇ ಆಪತ್ತಿಗೂ ಎರಡನೇ ಆಪತ್ತಿಗೂ ಮಧ್ಯೆ ಸ್ವಲ್ಪ ಕಾಲ ಗತಿಸಿ ಹೋಯಿತು. ಮಿಡಿತೆಗಳಿಂದುಂಟಾದ ಮೊದಲನೇ ಬಾಧೆಯಿಂದ ಜನರು ಗುಣ ಪಡದೆ ಹೋದದರಿಂದ ಅದಕ್ಕಿಂತ ಕಠಿಣವಾದ ಎರಡನೇ ಬಾಧೆ ಸಂಭವಿಸಿತು.

8. ಈ ದರ್ಶನವು ಸಹ ದೇವಾಲಯದಲ್ಲಿ ನಡೆದ ಹಾಗೆ ಸೂಚಿಸಿದೆ. ಮಹಾ ಪ್ರಧಾನ ಯಾಜಕನಾಗಿಯೂ ತನ್ನ ಜನರಿಗೋಸ್ಕರ ವಹಿಸಿ ಮಾತಾಡುವ ಕಾರ್ಯಕರ್ತನಾದ ಕ್ರಿಸ್ತನ ವಿಜ್ಞಾಪನೆಯ ಪ್ರಕಾರ ಈ ದಂಡನೆ ನಡೆದ ಭಾವನೆಯಾಗಿ ಚಿನ್ನದ ಧೂಪಪೀಠದ ನಾಲ್ಕು ಕೊಂಬುಗಳಿಂದ ಒಂದು ಶಬ್ದ ಉಂಟಾದಂತೆ ಹೇಳಿ ಇದೆ. ಯೆಹೂದ್ಯರಿಗೆ ಆಶ್ರಯಸ್ಥಳದ ಹಾಗಿದ್ದ ಚಿನ್ನದ ಪೀಠದ ಕೊಂಬುಗಳಿಂದ ಮುಯ್ಯಿ ತೀರಿಸ ಬೇಕೆಂಬ ಶಬ್ದ ಹುಟ್ಟಿದ್ದರಿಂದ ಅವರ ಪಾಪವು ಮಹಾ ಕೆಟ್ಟದ್ದೆಂದು ಪ್ರಕಟವಾಗುತ್ತದೆ.

೧೫ ಯಲ್ಲಿ ಕಟ್ಟಿರುವ [1]ನಾಲ್ಕು ದೂತರನ್ನು ಬಿಡಿಸು, ಎಂದು ಹೇಳಿತು. ಆಗ, ಮನುಷ್ಯರ ಮೂರನೇ ಭಾಗ
ವನ್ನು ಕೊಲ್ಲುವ ಹಾಗೆ, [2]ತಾಸು, ದಿನ, ತಿಂಗಳು, ವರುಷಗಳಿಗೂ ಸಿದ್ಧವಾದ ನಾಲ್ಕು ದೂತರು ಬಿಡುಗ
೧೬ ಡೆಯಾದರು; ಮತ್ತು ಕುದುರೆ ಸೈನ್ಯದ ಲೆಖ್ಖವು [3]ಇಪ್ಪತ್ತು ಕೋಟಿಯು; ಅವರ ಲೆಖ್ಖವನ್ನು ಕೇಳಿ
ದೆನು.
೧೭ ಈ ಮೇರೆಗೆ ನೋಟದಲ್ಲಿ ಕುದುರೆಗಳನ್ನೂ, ಅವುಗಳ ಮೇಲೆ ಕೂತು ಕೊಂಡವರನ್ನೂ, ಕಂಡೆನು. ಅವ
ರಿಗೆ ಬೆಂಕಿಯೂ ನೀಲವೂ [4]ಗಂಧಕವೂ ಆಗಿರುವ ಕವಚಗಳಿದ್ದವು; ಕುದುರೆಗಳ ತಲೆಗಳು ಸಿಂಹಗಳ ತಲೆ
ಗಳ ಹಾಗಿದ್ದವು; ಅವುಗಳ ಬಾಯಿಗಳೊಳಗಿಂದ ಬೆಂಕಿಯೂ ಹೊಗೆಯೂ ಗಂಧಕವೂ ಹೊರಡುತ್ತಾ
೧೮ ಇದ್ದವು. ಅವುಗಳ ಬಾಯಿಗಳೊಳಗಿಂದ ಹೊರಡುವ ಬೆಂಕಿ, ಹೊಗೆ, ಗಂಧಕ, [5]ಈ ಮೂರರಿಂದ ಮನು
೧೯ ಷ್ಯರ ಮೂರನೇ ಭಾಗವು ಕೊಲ್ಲಲ್ಪಟ್ಟಿತು. ಯಾಕಂದರೆ ಅವುಗಳ ಅಧಿಕಾರವು ಅವುಗಳ ಬಾಯಿಯಲ್ಲಿಯೂ
ಅವುಗಳ ಬಾಲಗಳಲ್ಲಿಯೂ ಅದೆ. ಯಾಕಂದರೆ ಅವುಗಳ ಬಾಲಗಳು ಸರ್ಪಗಳಿಗೆ ಸಮಾನವಾಗಿದ್ದು,
ತಲೆಯುಳ್ಳವುಗಳಾಗಿವೆ; ಅವುಗಳಿಂದ ಕೆಡಿಸುತ್ತವೆ.
೨೦ ಮತ್ತು ಈ ಬಾಧೆಗಳಿಂದ ಕೊಲ್ಲಲ್ಪಡದೆ ಉಳಿದ ಮನುಷ್ಯರು, ದೆವ್ವಗಳಿಗೂ, ನೋಡಲೂ ಕೇಳಲೂ ನಡೆ
ಯಲೂ ಅರಿಯದ ಚಿನ್ನ, ಬೆಳ್ಳಿ, ಹಿತ್ತಾಳಿ, ಕಲ್ಲು, ಮರಗಳ ಬೊಂಬೆಗಳಿಗೂ, ನಮಸ್ಕರಿಸದ ಹಾಗೆ, ಮಾ
೨೧ ನಸಾಂತರ ಪಡಲಿಲ್ಲ. ಮತ್ತು ತಮ್ಮ ಕೊಲೆಗಳನ್ನೂ, ತಮ್ಮ ತಂತ್ರಗಳನ್ನೂ, ತಮ್ಮ ಜಾರತ್ವಗಳನ್ನೂ
ತಮ್ಮ ಕಳ್ಳತನಗಳನ್ನೂ [6]ಬಿಟ್ಟು ಮಾನಸಾಂತರ ಪಡಲಿಲ್ಲ.

1. ಈ ನಾಲ್ಕು ದೂತರು ದೇವರ ನ್ಯಾಯತೀರ್ವಿಕೆಗಳನ್ನು ಸ್ವಲ್ಪ ಕಾಲ ಸಲ್ಲಿಸದೆ ತಡೆಯಲ್ಪಟ್ಟಿದ್ದರೆಂದು ತೋರುತ್ತದೆ. ನಾಲ್ಕು ಎಂಬ ಲೆಖ್ಖವನ್ನು ಕುರಿತು ೭. ೧. ವಚನದ ವ್ಯಾಖ್ಯಾನ ನೋಡ ಬೇಕು.

2. ಇದು ಸರ್ವ ನಾಶ ಮಾಡುವ ಸೈನ್ಯವು ತನ್ನನ್ನು ನಡಿಸುವಂತೆ ದೇವರು ನಿರ್ಣಯಿಸಿದ ದಿಟ್ಟವಾದ ಕಾಲವನ್ನು ಸೂಚಿಸುತ್ತದೆ.

3. ಇಪ್ಪತ್ತು ಕೋಟಿ ಎಂಬುವದು ಒಂದು ದೊಡ್ಡ ಸಂಖ್ಯೆಯನ್ನು ಸೂಚಿಸುತ್ತದೆ. ನಾಶ ಮಾಡುವ ಹಾಗೆ ಅತಿಶಯವಾದ ಬಲ ಹೊಂದಿದ ದುಷ್ಟ ಮೃಗಗಳಿಗೆ ಸಮಾನವಾದ ರಾಕ್ಷಸಕೂಟವು ಬಲವಾಗಿತ್ತೆಂದು ಇದರಲ್ಲಿ ಸೂಚಿಸುತ್ತದೆ.

4. ಆ ರಾಕ್ಷಸಕೂಟವು ಬಹಳ ಕಾಂತಿಯಾಗಿಯೂ ಭಯಂಕರವಾಗಿಯೂ ಕಾಣಲ್ಪಟ್ಟಿತೆಂದು ತೋರುತ್ತದೆ.

5. ಕುದುರೆಗಳ ಬಾಯಿಗಳಿಂದ ಹೊರಟ ಬೆಂಕಿ ಹೊಗೆ ಗಂಧಕಗಳಿಂದ ಮನುಷ್ಯರಿಗೆ ಅಧಿಕ ನಷ್ಟವು ಸಂಭವಿಸಿತೆಂದು ಹೇಳುವದರಿಂದ ಆ ನಷ್ಟವು ಸವಾರರ ಸೈನ್ಯಗಳಿಂದ ಉಂಟಾಯಿತೆಂದು ತಿಳಿಯ ಬಹುದು.

6. ಐಗುಪ್ತ ದೇಶದಲ್ಲುಂಟಾದ ಭಯಂಕರವಾದ ಬಾಧೆಗಳಿಂದ ಅರಸನೂ ಪ್ರಜೆಗಳೂ ಮಾನಸಾಂತರ ಪಡದೆ ಇದ್ದ ಪ್ರಕಾರ, ಈ ಬಾಧೆಗಳಿಂದಲೂ ಜನರು ಮಾನಸಾಂತರ ಪಡಲಿಲ್ಲ.

ಐದನೇ ತುತೂರಿ ಊದಿದಾಗ ಉಂಟಾದ ಬಾಧೆಯು ಸರಸೇನರಿಂದ ಉಂಟಾದ ಬಾಧೆಯನ್ನು ಸೂಚಿಸುವ ಪ್ರಕಾರ, ಆರನೇ ತುತೂರಿ ಊದಿದಾಗ ಉಂಟಾದ ಬಾಧೆಯು ತುರುಕರಿಂದ ಉಂಟಾದ ಉಪದ್ರವನ್ನು ಸೂಚಿಸುತ್ತದೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಹೇಳುತ್ತಾರೆ. ಫ್ರಾತು ನದಿ ಎಂಬುವದು ಅಷೂರು ರಾಜ್ಯಕ್ಕೆ ಗುರುತಾಗಿಯೂ, (ಯೆಶಾ. ೮. ೭. ಯೆರೆ. ೫೧. ೧೩, ೩೬.) ಯೋಹಾನನ ಕಾಲದಲ್ಲಿ ರೋಮು ರಾಜ್ಯಕ್ಕೆ ಪೂರ್ವ ಮೇರೆಯಾಗಿಯೂ ಇತ್ತು. ಆ ನದಿಯಲ್ಲಿದ್ದ ನಾಲ್ಕು ದೂತರು ಬಿಡಲ್ಪಟ್ಟಾಗ ಉಪದ್ರ ಸಂಭವಿಸಿದ ಪ್ರಕಾರ, ಆ ನದಿಯ ಅಂಚಿನಲ್ಲಿರುವ ದೇಶಗಳಲ್ಲಿ ವಾಸ ಮಾಡಿದ ತುರ್ಕರು ರೋಮು ರಾಜ್ಯದಲ್ಲೆಲ್ಲಾ ಪ್ರವೇಶಿಸಿದಾಗ ನಾಶ ಸಂಭವಿಸಿತು. ಅವರ ಸೈನ್ಯವು ಕುದುರೆರಾಹುತರಿಂದ ತುಂಬಿದ್ದಾಗಿಯೂ, ಅವರ ಎದೆಕವಚಗಳು ಮುಂತಾದ ಯುದ್ಧ ಮುಸ್ತೈದೆಗಳು ಕೆಂಪು, ಊದಾ, ಅರಿಶಿನ ಬಣ್ಣಗಳುಳ್ಳವುಗಳಾಗಿಯೂ ಇದ್ದವು. ಕುದುರೆಗಳ ತಲೆಗಳು ಸಿಂಹಗಳ ತಲೆಗಳ ಹಾಗಿದ್ದವೆಂಬುವದು, ಕುದುರೆರಾಹುತರ ಬಲವನ್ನೂ, ಅವುಗಳ ಬಾಯಿಗಳಿಂದ ಹೊರಟ ಬೆಂಕಿಯೂ, ಹೊಗೆಯೂ, ಗಂಧಕವೂ ಅವರು ಪ್ರಯೋಗಿಸಿದ ಫಿರಂಗಿಗಳನ್ನೂ, ಅವುಗಳಿಗುಂಟಾಗಿದ್ದ ಸರ್ಪಗಳಿಗೆ ಸಮಾನವಾದ ಬಾಲಗಳು ಆತ್ಮಗಳನ್ನು ನಾಶ ಪಡಿಸುವ ಅವರ ಮಾರ್ಗವನ್ನೂ ಕುರಿತದ್ದಾಗಿರ ಬಹುದು. ಅವರಿಂದ ಉಂಟಾದ ಕಠಿಣ ಉಪದ್ರವು ಹೆಚ್ಚುಕಡಿಮೆ ೩೯೬ ವರುಷಗಳು ನಡೆಯಿತು. ೧೪೫೩ನೇ ವರುಷದಲ್ಲಿ ರೋಮಾಯರ ಪೂರ್ವ ದಿಕ್ಕಿನ ರಾಜ್ಯಕ್ಕೆ ಶ್ರೇಷ್ಠ ನಗರವಾಗಿದ್ದ ಕೊನ್‌ಸ್ತಂತಿನೊಪಲ್ ಪಟ್ಟಣವು ತುರ್ಕರ ಕೈವಶವಾದಾಗ ಅವರಿಂದ ಸಂಭವಿಸಿದ ಉಪದ್ರವು ಒಂದಾವರ್ತಿ ಮುಗಿಯಿತೆಂದು ಹೇಳ ಬಹುದು.

ಇಂಥಾ ಉಪದ್ರಗಳು ಸರಸೇನರಿಂದಲೂ ತುರ್ಕರಿಂದಲೂ ಯೂರೋಪದವರಿಗೆ ಸಂಭವಿಸಿದಾಗ್ಯೂ, ಅವರು ಅದರಿಂದ ಗುಣ ಪಡಲಿಲ್ಲ. ಪೂರ್ವ ದಿಕ್ಕಿನ ಸಭೆ ಮೂಢಭಕ್ತಿಯಲ್ಲಿಯೂ, ಪಶ್ಚಿಮ ದಿಕ್ಕಿನ ಸಭೆ ವಿಗ್ರಹಭಕ್ತಿಯಲ್ಲಿಯೂ ಅಧಿಕವಾಗಿ ಮುಣುಗುತ್ತಾ ಬಂದವು. ಹದಿನೈದನೇ ಶತಾಬ್ದ ಮುಗಿದು, ಹದಿನಾರನೇ ಶತಾಬ್ದ ಪ್ರಾರಂಭಿಸುವ ಮಟ್ಟಿಗೂ ಯೂರೋಪ್ ಖಂಡವು ಇಂಥಾ ಅಜ್ಞಾನಾಂಧಕಾರದಲ್ಲಿ ಮುಣುಗಿ ಹೋಗಿತ್ತು.



ಏಳು ಗುಡುಗುಗಳು; ತೆರೆದಿರುವ ಸುರಳಿಯು.

10. ಮತ್ತು ಪರಲೋಕದಿಂದಿಳಿದು ಬರುವ ಬೇರೊಬ್ಬ [1]ಬಲಿಷ್ಠ ದೂತನನ್ನು ಕಂಡೆನು. ಅವನು [2]ಮೇಘವ
ನ್ನು ಸುತ್ತಿ ಕೊಂಡಿದ್ದನು; ಅವನ ತಲೆಯ ಮೇಲೆ ಮಳೆಬಿಲ್ಲು ಇತ್ತು. ಅವನ ಮುಖವು ಸೂರ್ಯನ
೨ ಹಾಗೆ, ಅವನ ಕಾಲುಗಳು ಬೆಂಕಿಯ ಸ್ತಂಭಗಳ ಹಾಗಿದ್ದವು. ಅವನ ಕೈಯಲ್ಲಿ ತೆರೆದಿರುವ ಒಂದು [3]ಸಣ್ಣ
ಸುರಳಿ ಇತ್ತು; ಅವನು [4]ಬಲಗಾಲನ್ನು ಸಮುದ್ರದ ಮೇಲೆಯೂ, ಎಡಗಾಲನ್ನು ಭೂಮಿಯ ಮೇಲೆಯೂ
೩ ಇಟ್ಟು, ಸಿಂಹವು ಗರ್ಜಿಸುವ ಪ್ರಕಾರ ಮಹಾ ಶಬ್ದದಿಂದ ಕೂಗಿದನು. ಕೂಗಿದಾಗ, ಏಳು [5]ಗುಡುಗು
೪ ಗಳು ತಮ್ಮ ಶಬ್ದಗಳನ್ನು ಕೊಟ್ಟವು. ಮತ್ತು ಆ ಏಳು ಗುಡುಗುಗಳು ತಮ್ಮ ಶಬ್ದಗಳನ್ನು ಕೊಟ್ಟಾಗಲೇ
ಬರೆಯ ಬೇಕೆಂದಿದ್ದೆನು. ಆಗ, ಆ ಏಳು ಗುಡುಗುಗಳು ನುಡಿದವುಗಳನ್ನು [6]ಬರೆಯದೆ, ಅವುಗಳಿಗೆ ಮುದ್ರೆ
ಹಾಕು, ಎಂದು ನನಗೆ ಹೇಳುವ ಪರಲೋಕದಿಂದಾದ ಶಬ್ದವನ್ನು ಕೇಳಿದೆನು.
೫ ಮತ್ತು ಸಮುದ್ರದ ಮೇಲೆಯೂ ಭೂಮಿಯ ಮೇಲೆಯೂ ನಿಂತಿರುವಂಥ, ನಾನು ಕಂಡ ದೂತನು ತನ್ನ
೬ ಬಲಗೈಯನ್ನು ಆಕಾಶಕ್ಕೆ ಎತ್ತಿ, ಆಕಾಶವನ್ನೂ, ಅದರಲ್ಲಿ ಇರುವವುಗಳನ್ನೂ, ಭೂಮಿಯನ್ನೂ, ಅದರಲ್ಲಿ
ಇರುವವುಗಳನ್ನೂ, ಸಮುದ್ರವನ್ನೂ, ಆದರಲ್ಲಿ ಇರುವವುಗಳನ್ನೂ, ಸೃಷ್ಟಿಸಿ, ಯುಗಯುಗಾಂತರಗಳ ವರೆಗೂ

1. ಇದಕ್ಕೆ ಮುಂಚಿನ ಮುದ್ರೆಗಳಲ್ಲಿ ಅಡಗಿದ್ದ ಪ್ರವಾದನೆಗಳಲ್ಲಿ ತೋರಿದ ಪ್ರಕಾರ ಈ ಪ್ರವಾದನೆಗಳಲ್ಲಿಯೂ ದುರ್ಮಾರ್ಗರಿಗೆ ಬರುವ ದಂಡನೆಗಳನ್ನು ತೋರಿಸುವ ದರ್ಶನದ ತರುವಾಯ, ದೇವದಾಸರಾದ ಸನ್ಮಾರ್ಗರಿಗೆ ಉಂಟಾಗುವ ಉತ್ಸಾಹವನ್ನು ಕುರಿತ ದರ್ಶನವು ಬರುತ್ತದೆ. ಬಲವೂ ದಯಾಳವೂ ಉಳ್ಳ ಒಬ್ಬ ದೂತನು ಕೂಗುವ ಹಾಗೆಯೂ, ಆ ಶಬ್ದದ ತರುವಾಯ ಏಳು ಗುಡುಗುಗಳು ಶಬ್ದ ಕೊಟ್ಟ ಹಾಗೆಯೂ, ಅವುಗಳನ್ನು ಯೋಹಾನನು ಪ್ರಕಟ ಮಾಡ ಬಾರದೆಂಬ ಆಜ್ಞೆ ಹೊಂದಿದ ಹಾಗೆಯೂ, (೧೦. ೧—೪.) ಅದರ ತರುವಾಯ ಒಂದು ಪ್ರಕಟಣೆ ಉಂಟಾದ ಹಾಗೆಯೂ, ಕಡೇ ನ್ಯಾಯತೀರ್ವಿಕೆ ತೀವ್ರವಾಗಿಯೂ ನಿಶ್ಚಯವಾಗಿಯೂ ನಡಿಯುವದೆಂದು ದೇವದೂತನು ತಿಳಿಸಿದ ಹಾಗೆಯೂ ಹೇಳಿ ಇದೆ. (೫—೭. ವ.) ಯೋಹಾನನು ದೇವದೂತನ ಕೈಯಿಂದ ಸುರಳಿಯನ್ನು ತೆಗೆದು ತಿನ್ನುವಂತೆ ಅವನಿಗುಂಟಾದ ಕಟ್ಟಳೆಯ ಪ್ರಕಾರ, ಅವನು ಆ ಸುರಳಿಯನ್ನು ತಿಂದಾಗ ಮೊದಲು ತೀಯಾಗಿಯೂ ತರುವಾಯ ಕಹಿಯಾದಂತೆಯೂ, ಅದರ ಮೇಲೆ ಅವನು ಅನೇಕ ಜನಗಳನ್ನೂ ಅಧಿಪತಿಗಳನ್ನೂ ಕುರಿತು ಪ್ರವಾದನೆ ಹೇಳ ಬೇಕೆಂಬದಾಗಿಯೂ, (೮—೧೧. ವ.) ಪರಿಶುದ್ಧ ಸ್ಥಳವನ್ನೂ ಬಲಿಪೀಠವನ್ನೂ ಅಳೆದು, ಅದರಲ್ಲಿ ದೇವರಿಗೆ ಆರಾಧನೆ ಮಾಡುವವರನ್ನು ಲೆಖ್ಖಿಸ ಬೇಕೆಂಬದಾಗಿಯೂ, (೧೧. ೧, ೨.) ದೇವರ ಪರಾಮರಿಕೆ ಹೊಂದಿದ ಇಬ್ಬರು ಸಾಕ್ಷಿಗಳು ನಿರ್ಣಯಿಸಿದ ಕಾಲದ ವರಿಗೂ ಪ್ರವಾದಿಸಿ, ತರುವಾಯ ಉಂಟಾದ ಉಪದ್ರದಲ್ಲಿ ಲೋಕರಕ್ಷಕನ ಹಾಗೆ ಸತ್ತು ಜೀವಿಸಿ ಪರಕ್ಕೆ ಹೋಗುವರೆಂಬದಾಗಿಯೂ, ಅವರನ್ನು ಉಪದ್ರ ಪಡಿಸಿದವರಲ್ಲಿ ಕೆಲವರು ಗುಣ ಪಟ್ಟು, ಕೆಲವರು ನಾಶವಾಗುವರೆಂಬದಾಗಿಯೂ, (೩—೧೩. ವ.) ಕಡೇ ವೇದನೆ ಬರುವದೆಂದು ಸಾರಲ್ಪಟ್ಟ ಕೂಡಲೇ ಏಳನೇ ತುತೂರಿಯು ಧ್ವನಿಯಾಯಿತೆಂಬದಾಗಿಯೂ, ದೇವರು ನಿರ್ಣಯಿಸಿದ ನ್ಯಾಯತೀರ್ವಿಕೆಗಳೆಲ್ಲಾ ಪೂರ್ಣವಾಗಿ ಈಡೇರಿದ ಕೂಡಲೇ ಕ್ರಿಸ್ತನ ಸಭೆ ಪರಲೋಕದಲ್ಲಿ ಮಹಿಮೆಯಾಗಿ ಪ್ರಕಾಶಿಸಿ ತೋರಿತೆಂಬದಾಗಿಯೂ, ಅದರ ಶತ್ರುಗಳೆಲ್ಲರೂ ಭಯಂಕರವಾದ ನಾಶ ಹೊಂದಿದರೆಂಬದಾಗಿಯೂ ತೋರಿಸಿ ಇದೆ. (೧೪—೧೯. ವ.)

2. ಮೇಘವು ದೇವರ ಮಹತ್ವಕ್ಕೆ ಗುರುತಾಗಿಯೂ, (ಕೀರ್ತ. ೧೮. ೧೨. ಎಜೇಕಿ. ೧. ೪.) ಮಳೆಬಿಲ್ಲು ದೇವರ ಕೃಪೆಯ ಒಡಂಬಡಿಕೆಗೆ ಗುರುತಾಗಿಯೂ, (ಉತ್ಪ. ೯. ೧೩—೧೫.) ಇದ್ದವು. ಮೇಘವನ್ನು ವಸ್ತ್ರದ ಹಾಗೆ ಧರಿಸಿ, ಮಳೆಬಿಲ್ಲನ್ನು ಕಿರೀಟದ ಹಾಗೆ ಧರಿಸಿ, ಸೂರ್ಯಪ್ರಕಾಶದಂಥಾ ಮುಖವೂ, ಬೆಂಕಿಯ ಸ್ತಂಭಗಳ ಹಾಗಿರುವ ಕಾಲುಗಳೂ ಉಳ್ಳವನಾಗಿ ತೋರಿದ ಬಲಿಷ್ಠ ದೂತನು, ಒಡಂಬಡಿಕೆಯ ದೂತನಾದ ಕ್ರಿಸ್ತನೆಂದು ಕೆಲ ವಿದ್ವಾಂಸರು ಅಭಿಪ್ರಾಯ ಹೇಳುತ್ತಾರೆ. (೧. ೧೫, ೧೬. ಮತ್ತಾ. ೧೭. ೨.)

3. (ಎಜೇಕಿ. ೩. ೧—೪.) ಈ ಸಣ್ಣ ಸುರಳಿಯು ೫. ೧ಲ್ಲಿ ಹೇಳಿದ ಸುರಳಿಗಿಂತ ಸಣ್ಣದು. ಇದರಲ್ಲಿ ಏಳನೇ ತುತೂರಿ ಊದುವ ಮಟ್ಟಿಗೂ ಸಭೆಗೆ ಪ್ರಾಪ್ತಿಸಿದ ಮಿಕ್ಕಾದ ಉಪದ್ರಗಳನ್ನು ಕುರಿತ ಪ್ರವಾದನೆಗಳು ಅಡಗಿ ಇದ್ದವು.

4. ಇದು ನೀರೂ ನೆಲವೂ ಅಡಗಿದ ಭೂಮಿಯ ಮೇಲಿರುವ ಸರ್ವಾಧಿಕಾರವನ್ನು ಸೂಚಿಸುತ್ತದೆ. ಇಂಥಾ ಅಧಿಕಾರವು ಕ್ರಿಸ್ತನಿಗೆ ಮಾತ್ರ ಸ್ವಂತವಾಗಿದೆ.

5. ಏಳು ಎಂಬುವದು ಪೂರ್ಣ ಸಂಖ್ಯೆಯನ್ನು ಕುರಿತದ್ದು. ಗುಡುಗಿನ ಹಾಗೆ ಮಹಾ ಶಬ್ದವಾಗಿಯೂ, ಸಿಂಹದ ಗರ್ಜನೆಯ ಹಾಗೆ ಭಯಂಕರ ಶಬ್ದವಾಗಿಯೂ ಇದ್ದ ಏಳು ಶಬ್ದಗಳು ಉಂಟಾದವು. ಇವು ಗುಡುಗಿನ ಶಬ್ದಕ್ಕೆ ಸಮಾನವಾದ ಪೋಪನ ಶಾಪಗಳನ್ನು ಕುರಿತದ್ದೆಂದು ಕೆಲ ವಿದ್ವಾಂಸರು ನೆನಸುತ್ತಾರೆ.

6. ಆ ಏಳು ಗುಡುಗುಗಳು ಪೋಪನ ಶಾಪಗಳನ್ನು ಸೂಚಿಸಿದರೆ, ಬರೆಯ ಕೂಡದೆಂದು ಯೋಹಾನನು ಕಟ್ಟಳೆ ಹೊಂದಿದರಿಂದ, ಆ ಶಾಪಗಳಿಂದ ಏನೂ ನಷ್ಟವಾಗುವದಿಲ್ಲವೆಂಬದಾಗಿ ತಿಳಿಯ ಬಹುದು.

೭ ಬದುಕುವವನ ಮೇಲೆ [1]ಆಣೆ ಇಟ್ಟು, [2]ಇನ್ನು ಮೇಲೆ ಕಾಲವು ಇರದು; ಆದರೆ ಏಳನೇ ದೂತನ ಶಬ್ದದ
ದಿನಗಳಲ್ಲಿ, ಅವನು ಊದುವದಕ್ಕಿರುವ ಸಮಯದಲ್ಲಿ, ತನ್ನ ದಾಸರಾದ ಪ್ರವಾದಿಗಳಿಗೆ [3]ಸುವಾರ್ತೆಯಾಗಿ
ಹೇಳಿದ ಪ್ರಕಾರ ದೇವರ ಮರ್ಮವು ಸಂಪೂರ್ಣವಾಗುವದು, ಅಂದನು.
೮ ಮತ್ತು ನಾನು ಕೇಳಿದ, ಪರಲೋಕದಿಂದಾದ ಶಬ್ದವು ತಿರಿಗಿ ನನ್ನ ಸಂಗಡ ಮಾತಾಡಿ, ಹೇಳಿದ್ದೇನಂದರೆ,
ಹೋಗಿ, ಸಮುದ್ರದ ಮೇಲೆಯೂ ಭೂಮಿಯ ಮೇಲೆಯೂ ನಿಂತಿರುವ ದೂತನ ಕೈಯಲ್ಲಿ ಇರುವಂಥ ತೆರೆ
೯ ದಿರುವ ಸುರಳಿಯನ್ನು ತೆಗೆದುಕೋ. ಆಗ ದೂತನ ಹತ್ತರ ಹೋಗಿ, ಆ ಸಣ್ಣ ಸುರಳಿಯನ್ನು ನನಗೆ
ಕೊಡು, ಅಂದೆನು. ಅವನು ನನಗೆ, ಅದನ್ನು ತೆಗೆದು ಕೊಂಡು, [4]ತಿಂದು ಬಿಡು; ಅದು ನಿನ್ನ ಹೊಟ್ಟೆ ಕಹಿ
೧೦ ಮಾಡುವದು, ಆದರೆ ನಿನ್ನ ಬಾಯಿಯಲ್ಲಿ ಜೇನಿನಂತೆ ಶೀಯಾಗಿರುವದು, ಅಂದನು. ಆಗ ದೂತನ ಕೈಯಿಂ
ದ ಆ ಸಣ್ಣ ಸುರಳಿಯನ್ನು ತೆಗೆದು ಕೊಂಡು, ತಿಂದು ಬಿಟ್ಟೆನು. ಅದು ನನ್ನ ಬಾಯಿಯಲ್ಲಿ ಜೇನಿನಂತೆ ಶೀ
ಯಾಗಿತ್ತು; ಅದನ್ನು ತಿಂದ ಮೇಲೆ ನನ್ನ ಹೊಟ್ಟೆ ಕಹಿಯಾಯಿತು.
೧೧ ಆಗ, ನೀನು ತಿರಿಗಿ [5]ಅನೇಕ ಪ್ರಜೆಗಳನ್ನೂ, ಜನಾಂಗಗಳನ್ನೂ, ಭಾಷೆಗಳನ್ನೂ, ಅರಸರನ್ನೂ ಕುರಿತು ಪ್ರವಾ
ದಿಸ ಬೇಕೆಂದು, ನನಗೆ ಹೇಳಿದನು.

ದೇವಾಲಯವನ್ನು ಅಳೆದದ್ದು; ಇಬ್ಬರು ಸಾಕ್ಷಿಗಳ ಸೇವೆಯು, ಮರಣವು, ಪುನರುತ್ಥಾನವು, ದಿವಾರೋಹಣವು ಮುಂತಾದವುಗಳನ್ನು ಕುರಿತ ವಿಶೇಷಗಳು. ದೊಡ್ಡ ಭೂಕಂಪವು.[6]

**11.** [7]ಈಗ ನನಗೆ ಕೋಲಿಗೆ ಸಮಾನವಾದ ಬೆತ್ತವು ಕೊಡಲ್ಪಟ್ಟಿತು; ಮತ್ತು ಹೇಳಿದ್ದೇನಂದರೆ, ಎದ್ದು, [8]ದೇವರ
೨ ಮಂದಿರವನ್ನೂ, ಬಲಿಪೀಠವನ್ನೂ, ಅದರಲ್ಲಿ ಆರಾಧಿಸುವವರನ್ನೂ, ಅಳತೆ ಮಾಡು. ಮತ್ತು ಮಂದಿರದ

1. ಕೈಗಳನ್ನು ಆಕಾಶಕ್ಕೆ ಎತ್ತುವದು ಆಣೆ ಇಡುವದಕ್ಕೆ ಗುರುತಾಗಿದೆ. (ಉತ್ಪ. ೧೪. ೨೨. ದ್ವಿತೀಯ ನ್ಯಾ. ೩೨. ೪೦.) ಭೂಮಿಯ ಮೇಲೆಯೂ ಸಮುದ್ರದ ಮೇಲೆಯೂ ನಿಂತ ಈ ಬಲಿಷ್ಠ ದೂತನು ಸರ್ವ ಸೃಷ್ಟಿಕರ್ತನಾದ ದೇವರ ಮೇಲೆ ಆಣೆ ಇಟ್ಟದ್ದನ್ನು ಕಾಣ ಬಹುದು. (ದಾನಿ. ೧೨. ೭.)

2. ಇನ್ನು ಮೇಲೆ ಕಾಲವು ಇರದು ಎಂಬುವದು, ಪ್ರವಾದನೆ ಈಡೇರುವ ಕಾಲವು ತಾಮಸವಾಗಿರದು ಎಂಬ ಅರ್ಥವಾಗುತ್ತದೆ. ಭಕ್ತಿಹೀನರು ಗುಣ ಪಡುವ ಹಾಗೆ ಅನುಗ್ರಹಿಸುವ ಕಾಲವೂ, (೨. ೨೧.) ದೇವಭಕ್ತರು ತಾಳ್ಮೆಯಾಗಿ ಉಪದ್ರವನ್ನು ಅನುಭವಿಸ ಬೇಕಾದ ಕಾಲವೂ (೬. ೧೧.) ದೇವರ ಮರ್ಮವು ಸಂಪೂರ್ಣವಾಗುವ ಕಾಲವೂ ಆದ ಏಳನೇ ತುತೂರಿಯು ಧ್ವನಿಯಾಗುವ ಮಟ್ಟಿಗೂ ಇರುವದೇ ಹೊರ್ತು, ಅದರ ಮೇಲೆ ಕಾಲವು ಇರದು.

3. ತನ್ನ ಸಭೆಗೆ ಇಂಥಾ ಕ್ಷೇಮದ ಕಾಲವು ಬರುವದೆಂದು, ದೇವರು ತನ್ನ ಪ್ರವಾದಿಗಳಿಂದ ಹಳೇ ಒಡಂಬಡಿಕೆಯಲ್ಲಿಯೂ, ಹೊಸ ಒಡಂಬಡಿಕೆಯಲ್ಲಿಯೂ, ಪ್ರಕಟ ಮಾಡಿದ ಮುಖ್ಯ ಸಂಗತಿಯು ಭಕ್ತರೆಲ್ಲರಿಗೂ ಸಂತೋಷ ಕೊಡ ತಕ್ಕ ವಿಷಯವಾಗಿರುವದರಿಂದ ಅದು ಸುವಾರ್ತೆಯಾಗಿ ತಿಳಿಸಲ್ಪಟ್ಟಿತೆಂದು ಹೇಳಿ ಇದೆ. ಕೇಡಿನ ಆಳಿಕೆಯು ನಿಂತು ಹೋಗಿ, ಮೇಲಿನದಾದ ನೀತಿಯ ಆಳಿಕೆ ಪ್ರಾರಂಭಿಸುವದು ದೇವರ ದಾಸರಿಗೆ ಸಂತೋಷದ ಕಾಲವಾಗಿರುತ್ತದೆ. (೧೧. ೧೫.)

4. ಪ್ರವಾದನೆ ಅಡಗಿರುವ ಸುರಳಿಯನ್ನು ತಿನ್ನುವ ಹಾಗೆ ಪ್ರವಾದಿಯಾದ ಎಜೇಕಿಯೇಲನಿಗೆ ಉಂಟಾದ ಕಟ್ಟಳೆಯ ಪ್ರಕಾರ (ಎಜೇಕಿ. ೨. ೮–೧೦; ೩. ೧–೩.) ಯೋಹಾನನಿಗೂ ಕಟ್ಟಳೆಯಾಯಿತು. ಸುರಳಿಯನ್ನು ತಿನ್ನುವದು ಎಂಬುವದು, ಅದರಲ್ಲಿರುವ ಪ್ರವಾದನೆಗಳನ್ನು ಚನ್ನಾಗಿ ಧ್ಯಾನಿಸಿ ಮನಸ್ಸಿನಲ್ಲಿ ಇಟ್ಟುಕೊಳ್ಳುವದನ್ನು ಸೂಚಿಸುತ್ತದೆ. ಅದು ಬಾಯಿಯಲ್ಲಿ ಶೀಯಾಗಿದ್ದು, ಹೊಟ್ಟೆಯಲ್ಲಿ ಕಹಿಯಾಗಿತ್ತೆಂಬುವದು, ಸಭೆಗೆ ಪೂರ್ಣ ಮಹಿಮೆ ಉಂಟಾಗುವದೆಂದು ಕೇಳುವದು ಮಧುರವಾಗಿಯೂ, ಉಪದ್ರಗಳ ಮೂಲಕವಾಗಿ ಅದು ಮಹಿಮೆಗೆ ಶೇರುತ್ತದೆ ಎಂದು ತಿಳಿಯುವದು ಕಹಿಯಾಗಿಯೂ ಇರುತ್ತದೆ.

5. ಇದರ ತರುವಾಯ, ಮುಖ್ಯವಾಗಿ ೧೧ನೇ ಸಂಧಿಯಲ್ಲಿ ಬರುವ ಪ್ರವಾದನೆಯು ಜಾತಿಗಳನ್ನೂ ಭಾಷೆಗಳವರನ್ನೂ ಅರಸುಗಳನ್ನೂ ಕುರಿತದ್ದೆಂದು ನೆನಸ ಬಹುದು.

6. ೧೧ನೇ ಸಂಧಿಯಲ್ಲಿ ಅಡಗಿರುವ ಪ್ರವಾದನೆಗಳು ಯೂರೋಪ ಖಂಡದಲ್ಲಿ ಹದಿನಾರನೇ ಶತಾಬ್ದದಲ್ಲಿ ಲುಥರ್ ಎಂಬವನಿಂದ ನಡೆದ ಸಭೆಯ ತಿದ್ದುಪಾಟನ್ನು ಕುರಿತದ್ದೆಂದು ಕೆಲವು ವಿದ್ವಾಂಸರು ನೆನಸುತ್ತಾರೆ.

7. ಈ ಪ್ರವಾದನೆಯನ್ನು ಎಜೇಕಿಯೇಲನ ಪ್ರವಾದನೆಯ ಸಂಗಡಲೂ ಜೆಕರೀಯನ ಪ್ರವಾದನೆಯ ಸಂಗಡಲೂ ಸರಿ ನೋಡಿದರೆ ಚನ್ನಾಗಿರುವದು. (ಎಜೇಕಿ. ೪೦. ೩–೫, ೧೭–೧೯. ಜೆಕರಿ. ೨. ೧–೩.)

8. ದೇವರ ಮಂದಿರವೆಂಬುವದು, ಜನಾಂಗಗಳು ಆರಾಧಿಸಿದ ಹೊರಗಿನ ಪ್ರಾಕಾರವನ್ನು ವಿನಾಯಿಸಿ, ಒಳಗಿನ ಪ್ರಾಕಾರಗಳುಳ್ಳ ದೇವಾಲಯವನ್ನು ಕುರಿತದ್ದು. ಮಂದಿರದಲ್ಲಿ ಆರಾಧಿಸುವವರನ್ನು ಅಳತೆ ಮಾಡುವದು ಎಂಬುವದು, ಅವರನ್ನು ಎಣಿಸಿ ಲೆಖ್ಖ ಮಾಡುವದನ್ನು ಕುರಿತದ್ದು. ಕ್ರಿಸ್ತನ ಮತಾಭಿಪ್ರಾಯದ ಪ್ರಕಾರ ದೇವಾಲಯವೆಂಬುವದು ಉತ್ತಮ ದೇವಭಕ್ತರ ಕೂಟವನ್ನು ಕುರಿತದ್ದು. (ಎಫೆ. ೨. ೧೯–೨೨.) ದೇವಾಲಯವನ್ನೂ ಅದರಲ್ಲಿ ಆರಾಧಿಸುವವರನ್ನೂ ಅಳೆಯುವ ಕೋಲು ದೇವರ ವಾಕ್ಯವನ್ನು ಕುರಿತದ್ದೆಂದು ತೋರುತ್ತದೆ.



ಹೊರಗಿರುವ ಅಂಗಳವನ್ನು ಅಳತೆ ಮಾಡದೆ, ಬಿಟ್ಟು ಬಿಡು; ಯಾಕಂದರೆ ಅದು [1]ಜನಾಂಗಗಳಿಗೆ ಕೊಡಲ್ಪ
ಟ್ಟದೆ; ಅವರು [2]ನಾಲ್ವತ್ತೆರಡು ತಿಂಗಳು [3]ಪರಿಶುದ್ಧ ಪಟ್ಟವನ್ನು [4]ತುಳಿಯುವರು.
೩ ಆಗ ನನ್ನ ಇಬ್ಬರು ಸಾಕ್ಷಿಗಳಿಗೆ, ಗೋಣಿ ವಸ್ತ್ರಗಳನ್ನು ಹಾಕಿ ಕೊಂಡು, ಸಾವಿರದ ಇನ್ನೂರ ಅರವತ್ತು
೪ ದಿನ ಪ್ರವಾದಿಸ [5]ಕೊಡುವೆನು. ಭೂಮಿಯ ದೇವರ ಮುಂದೆ ನಿಂತಿರುವ [6]ಎರಡು ಇಪ್ಪೇ ಮರಗಳೂ,
೫ ಎರಡು ದೀಪಗಳೂ, ಇವರೇ. ಯಾರಾದರೂ ಅವರಿಗೆ ಕೇಡು ಮಾಡ ಬೇಕೆಂದಿದ್ದರೆ, ಅವರ ಬಾಯಿಯೊ

1. ಕ್ರಿಸ್ತನನ್ನೂ ಆತನು ಅನುಗ್ರಹಿಸಿದ ಸುವಾರ್ತೆಯನ್ನೂ ಅಲಕ್ಷ್ಯ ಮಾಡಿದವರಾದ ಅನ್ಯ ದೇಶಗಳವರು ಅಥವಾ ಹೆಸರು ಕ್ರೈಸ್ತರು ಇದ್ದ ಹೊರಗಿನ ಪ್ರಾಕಾರವನ್ನು ಅಳೆಯುವದಕ್ಕೆ ಅಪ್ಪಣೆ ಇಲ್ಲ. ಅವರು ಒಡಂಬಡಿಕೆಗೆ ಅನ್ಯರಾದದರಿಂದ, ಅವರನ್ನು ದೇವರು ತನ್ನ ಲೆಖ್ಖದಲ್ಲಿ ಶೇರಿಸುವದಿಲ್ಲ.

2. ಒಂದು ತಿಂಗಳಿಗೆ ೩೦ ದಿವಸಗಳ ಪ್ರಕಾರ ೪೨ ತಿಂಗಳಿಗೆ ೧೨೬೦ ದಿವಸಗಳಾಗುವವು. ಒಂದು ದಿವಸವನ್ನು ಒಂದು ವರುಷವಾಗಿ ಲೆಖ್ಖಿಸಿದರೆ, ೧೨೬೦ ವರುಷಗಳಾಗುವವು. ಕೆಲವರು ದಿವಸಗಳನ್ನೂ, ಮಾಸಗಳನ್ನೂ, ವರುಷಗಳನ್ನೂ ಯೆರೆಮೀಯನ ಪ್ರವಾದನೆಯಲ್ಲಿರುವ ಪ್ರಕಾರ ಸಾಧಾರಣವಾಗಿ ಎಣಿಸುವದುಂಟು. (ಯೆರೆ. ೨೫. ೧೨; ೨೯. ೧೦.) ಬೇರೆ ಕೆಲವರು ಪ್ರವಾದನೆಯ ಲೆಖ್ಖದ ಪ್ರಕಾರ ಒಂದು ದಿವಸವನ್ನು ಒಂದು ವರುಷವಾಗಿ ಎಣಿಸುತ್ತಾರೆ. ಕಾನಾನ್ ದೇಶವನ್ನು ಪಾಳತಿ ನೋಡ ಹೋದವರಿಗೆ ಹಿಡಿದ ೪೦ ದಿವಸಗಳಿಗೆ ಸರಿಯಾಗಿ, ಇಸ್ರಯೇಲ್ಯರು ೪೦ ವರುಷ ಅರಣ್ಯದಲ್ಲಿ ಪ್ರಯಾಣ ಮಾಡಿದರು. (ಅಂಕೆ. ೧೪. ೩೩, ೩೪.) ಮೆಸ್ಸೀಯನಾದ ಲೋಕರಕ್ಷಕನು ಬಂದು ಸಂಹರಿಸಲ್ಪಡುವದಕ್ಕೆ ದಾನಿಯೇಲನ ಪ್ರವಾದನೆಯಲ್ಲಿ ಹೇಳಿದ ೭೦ ವಾರಗಳೂ, ಒಂದು ದಿವಸ ಒಂದು ವರುಷವಾಗಿ ೪೯೦ ವರುಷಗಳಾಗಿ ಎಣಿಸಲ್ಪಡುತ್ತವೆ. (ದಾನಿ. ೯. ೨೪–೨೭.) ನಾನು ಈ ಹೊತ್ತು ನಾಳೆ ದೆವ್ವಗಳನ್ನು ಹೊರಡಿಸಿ, ಸ್ವಸ್ಥ ಮಾಡುವದನ್ನು ತೀರಿಸುತ್ತೇನೆ; ಮೂರನೇ ದಿವಸದಲ್ಲಿ ತೀರಿ ಇರುವೆನು ಎಂದು ಕ್ರಿಸ್ತನು ಹೇಳಿದ್ದು, ಆತನು ಸುವಾರ್ತೆಯನ್ನು ಪ್ರಸಂಗಿಸಿ, ಅದ್ಭುತಗಳನ್ನು ಮಾಡಿದ ಮೂರು ವರುಷಗಳನ್ನು ಸೂಚಿಸುತ್ತದೆ ಎಂದು ಕೆಲವರು ನೆನಸುತ್ತಾರೆ. (ಲೂಕ. ೧೩. ೩೧–೩೩.) ಹಾಗೆಯೇ ಎಜೇಕಿ. ೪. ೪–೯. ವಚನಗಳಲ್ಲಿ ಒಂದು ದಿವಸವನ್ನು ಒಂದು ವರುಷವಾಗಿ ಗೊತ್ತು ಮಾಡಿ ಇದೆ. ಈ ಲೆಖ್ಖದ ಪ್ರಕಾರ ೪೨ ತಿಂಗಳಿಗೂ ೧೨೬೦ ವರುಷಗಳು ಆಗುತ್ತವೆ.

3. ಪರಿಶುದ್ಧ ಪಟ್ಟ ಎಂಬುವದು, ಯೆರೂಸಲೇಮು ಪಟ್ಟವನ್ನು ಕುರಿತದ್ದು. ಇದು ಬಹಿರಂಗವಾದ ಸಭೆಯನ್ನು ಸೂಚಿಸುತ್ತದೆಂದು ತೋರುತ್ತದೆ.

4. ತುಳಿಯುವರು ಎಂಬುವದು, ಬಹಳ ಹೀನವಾಗಿ ಎಣಿಸಿ ನಡಿಸುವರೆಂಬ ಅರ್ಥವಾಗುತ್ತದೆ. (ಲೂಕ. ೨೧. ೨೪.) ಜನಾಂಗಗಳು ಯೆರೂಸಲೇಮನ್ನು ೪೨ ತಿಂಗಳು ತುಳಿಯುವ ಪ್ರಕಾರ, ಹೆಸರುಕ್ರೈಸ್ತರು ಪರಮ ಯೆರೂಸಲೇಮೆಂಬ ದೇವರ ಸಭೆಯನ್ನು ತುಳಿದು ಉಪದ್ರ ಪಡಿಸುವರು.

5. ಪ್ರವಾದಿಸ ಕೊಡುವೆನು ಎಂಬುವದು, ಅವರ ಕೆಲಸಕ್ಕೆ ಅವರನ್ನು ತಕ್ಕವರಾಗ ಮಾಡಿ ನೇಮಿಸುವೆನೆಂಬುವದು ಅದರ ತಾತ್ಪರ್ಯವು. ಪೂರ್ವ ಕಾಲದ ಯೆಹೂದ್ಯರ ಪ್ರವಾದಿಗಳು ಸಾಧಾರಣವಾಗಿ ಗೋಣಿಯನ್ನು ಉಟ್ಟು ಕೊಳ್ಳುವ ಪದ್ಧತಿಯುಂಟು. (೨ ಅರ. ೧. ೮. ಜೆಕ. ೧೩. ೪. ಮತ್ತಾ. ೩. ೪.) ಈ ಇಬ್ಬರು ಸಾಕ್ಷಿಗಳೂ ಜೆಕರೀಯನ ಪ್ರವಾದನೆಯಲ್ಲಿ ಹೇಳಿದ ಎರಡು ಇಪ್ಪೇ ಮರಗಳಿಗೆ ಸಮಾನವಾಗಿದ್ಧಾರೆಂದು ತೋರಿಸಿ ಇದೆ. (೪. ವ. ಜೆಕ. ೪. ೧–೧೪.) ದೇವರ ಮಂದಿರವು, ಕ್ರಿಸ್ತನನ್ನು ವಿರೋಧಿಸುವ ಭಕ್ತಿಹೀನರ ಲೋಕದಲ್ಲಿರುವಂತೆ, ದೇವರು ನೇಮಿಸಿದ ಕಾಲದ ವರಿಗೂ, ಈ ಇಬ್ಬರು ಸಾಕ್ಷಿಗಳೂ, ಬಡತನಕ್ಕೂ ವ್ಯಸನಕ್ಕೂ ಗುರುತಾಗಿರುವ ವಸ್ತ್ರವನ್ನು ಧರಿಸಿ ಕೊಂಡು, ಸತ್ಯಕ್ಕೆ ಸಾಕ್ಷಿ ಕೊಡುವವರಾಗಿರುವರು. (೧–೩. ವ.) ದೇವರಿಗೆ ವಿಹಿತವಾದ ದಾಸರಾದ ಇವರಿಗೆ ಆತನ ಪರಾಮರಿಕೆ ಪೂರ್ಣವಾಗಿರುವದರಿಂದ ಇವರನ್ನು ಮುಟ್ಟುವವರಿಗೆ ಕೇಡು ಬಾರದೆ ಇರದು. ಇವರು ಬಲಹೀನರಾಗಿದ್ದಾಗ್ಯೂ, ಆಕಾಶ, ಭೂಮಿ, ಸಮುದ್ರ ಸಹ ಇವರ ಸೇವೆಗೆ ಒಳಪಟ್ಟವುಗಳಾಗಿರುವವು. (೪–೬. ವ.) ಭೂಲೋಕದಲ್ಲಿ ಇವರು ಮಾಡ ತಕ್ಕ ಸೇವೆ ಮುಗಿದ ತರುವಾಯ ಇವರು ತಮ್ಮ ಕರ್ತನಾದ ಕ್ರಿಸ್ತನ ಹಾಗೆ ಕೆಲವು ಕಾಲ ಶತ್ರುಗಳ ಕೈಗೆ ಶಿಕ್ಕಿ ಸಂಹರಿಸಲ್ಪಟ್ಟು, ಅವರ ನಿಂದೆಗೂ ಹಾಸ್ಯಕ್ಕೂ ಗುರಿಯಾಗಿರುವರು. (೭–೧೦. ವ.) ಆದಾಗ್ಯೂ ಕ್ರಿಸ್ತನ ಹಾಗೆ ಆತನ ಸಾಕ್ಷಿಗಳಾದ ಇವರು ಸಹ ಸತ್ತವರೊಳಗಿಂದ ಎದ್ದು ಮೇಘಮಾರ್ಗವಾಗಿ ಆಕಾಶಕ್ಕೆ ಹೋಗುವರು. (೧೧, ೧೨. ವ.) ಆ ಮೇಲೆ ಇವರನ್ನು ಉಪದ್ರ ಪಡಿಸಿದವರಲ್ಲಿ ಕೆಲವರು ಗುಣ ಪಟ್ಟು, ಕೆಲವರು ನಾಶ ಹೊಂದುವರು. (೧೩. ವ.)

6. ಕರ್ತನ ಇಬ್ಬರು ಸಾಕ್ಷಿಗಳನ್ನು ಎರಡು ಇಪ್ಪೇ ಮರಗಳಿಗೂ, ಎರಡು ದೀಪಸ್ತಂಭಗಳಿಗೂ ಉಪಮಾನಿಸಿ ಹೇಳಿ ಇದೆ. ಯಾವ ವಿಷಯವನ್ನಾದರೂ ಸ್ಥಾಪಿಸುವದಕ್ಕೆ ಇಬ್ಬರು ಸಾಕ್ಷಿಗಳು ಸಾಕೆಂದು ನ್ಯಾಯಪ್ರಮಾಣದಲ್ಲಿಯೂ, ಸುವಾರ್ತೆಯ ಪ್ರಮಾಣದಲ್ಲಿಯೂ, ಹೇಳಿ ಇದೆ. (ದ್ವಿತೀಯ ನ್ಯಾ. ೧೯. ೧೫. ಮತ್ತಾ. ೧೮. ೧೬.) ಮತ್ತು ಒಂದೊಂದು ಯುಗದಲ್ಲಿಯೂ ಸತ್ಯಕ್ಕೆ ಸಾಕ್ಷಿಗಳಾಗಿ ಇಬ್ಬರು ಕೂಡಿದ್ದದ್ದನ್ನು ವೇದದಲ್ಲಿ ಕಾಣ ಬಹುದು. ಹಾಗೆಯೇ ಐಗುಪ್ತದಲ್ಲಿ ಮೋಶೆ ಆರೋನನೆಂಬವರೂ, ಕೆಟ್ಟು ಹೋದ ಹತ್ತು ಕುಲಗಳವರಲ್ಲಿ ಎಲೀಯನು ಎಲೀಷನು ಎಂಬವರೂ, ಶೆರೆಯ ಕಾಲದ ತರುವಾಯ ಜೆರುಬಾಬೆಲನು ಯೆಶೂವನು ಎಂಬವರೂ, ಸತ್ಯಸಾಕ್ಷಿಗಳಾಗಿದ್ದರು. ಅದೇ ಪ್ರಕಾರ ಕ್ರಿಸ್ತನು ಸಹ ತನ್ನ ಸುವಾರ್ತೆಯ ಸತ್ಯವನ್ನು ಸಾರುವದಕ್ಕೆ ಶಿಷ್ಯರನ್ನು ಇಬ್ಬರಿಬ್ಬರಾಗಿ ಕಳುಹಿಸಿದನು. (ಲೂಕ. ೧೦. ೧.) ತರುವಾಯ ವಾಲ್ಡೆನ್‌ಸರು ಆಲ್ಬಿಗೆನ್‌ಸರು ಎಂಬವರೂ, ಜಾನ್ ಹುಸ್ಸನು, ಜೆರೋಮ್ ಎಂಬವರೂ, ಲುಥರ್, ಕಲ್ವೀನ್ ಎಂಬವರೂ, ಕ್ರಾನ್‌ಮರ್, ರಿಡ್ಲಿ ಎಂಬವರೂ, ಅಜ್ಞಾನಾಂಧಕಾರ ಕವಿದಿದ್ದ ಕಾಲದಲ್ಲಿ ಸತ್ಯಕ್ಕೆ ಸಾಕ್ಷಿಗಳಾಗಿ ಪ್ರಕಾಶಿಸಿದರು. ಹೀಗೆ ಎಲ್ಲಾ ಯುಗಗಳಲ್ಲಿಯೂ ಸತ್ಯ ಸಾಕ್ಷಿಗಳು ಇದ್ದದ್ದನ್ನು ಕಾಣ ಬಹುದು. ತಿರುಸಭೆಯ ಚರಿತ್ರವೆಲ್ಲಾ ಈ ಸತ್ಯವನ್ನು ಸ್ಥಾಪಿಸುವ ದೃಷ್ಟಾಂತವಾಗಿದೆ.

ಳಗಿಂದ ಬೆಂಕಿಯು ಹೊರಟು, ಅವರ ಶತ್ರುಗಳನ್ನು ತಿಂದು ಬಿಡುವದು. ಯಾರಾದರೂ ಅವರಿಗೆ ಕೇಡು
೬ ಮಾಡ ಬೇಕೆಂದಿದ್ದರೆ, ಅವನು [1]ಹೀಗೆಯೇ ಕೊಲ್ಲಲ್ಪಡ ಬೇಕು. ಇವರಿಗೆ, ತಮ್ಮ ಪ್ರವಾದನೆಯ ದಿವಸಗ
ಳಲ್ಲಿ ಮಳೆ ಸುರಿಯದ ಹಾಗೆ, ಆಕಾಶವನ್ನು ಮುಚ್ಚುವದಕ್ಕೆ ಅಧಿಕಾರ ಉಂಟು; ನೀರುಗಳನ್ನು ರಕ್ತ ಮಾ
ಡುವದಕ್ಕೂ, ಅವರಿಗೆ ಮನಸ್ಸು ಬಂದಷ್ಟು ಸಾರಿ ಭೂಮಿಯನ್ನು ಸಕಲ ಬಾಧೆಗಳಿಂದ ಬಡಿಯುವದಕ್ಕೂ,
[2]ಅಧಿಕಾರ ಉಂಟು.
೭ ಮತ್ತು ತಮ್ಮ ಸಾಕ್ಷಿಯನ್ನು [3]ಮುಗಿಸಿದಾಗ, ಅಗಾಧದೊಳಗಿಂದ ಏರಿ ಬರುವ [4]ಮೃಗವು ಅವರ ಸಂಗಡ
೮ ಯುದ್ಧ ಮಾಡಿ, ಅವರನ್ನು ಜಯಿಸಿ, ಅವರನ್ನು ಕೊಲ್ಲುವದು. ಮತ್ತು ಅವರ ಹೆಣಗಳು ಆತ್ಮಾರ್ಥವಾಗಿ
ಸೊದೋಮೂ, [5]ಐಗುಪ್ತವೂ ಎಂದು ಕರೆಯಲ್ಪಟ್ಟ ಮಹಾ ಪಟ್ಟಣದ ಬೀದಿಯಲ್ಲಿ, [6]ನಮ್ಮ ಕರ್ತನು ಶಿಲುಬೆಗೆ
೯ ಹಾಕಲ್ಪಟ್ಟಲ್ಲಿಯೇ, ಇರುವವು. ಮತ್ತು ಪ್ರಜೆ, ಕುಲ, ಭಾಷೆ, ಜನಾಂಗಗಳಲ್ಲಿ ಇರುವವರು ಅವರ ಹೆಣ
ಗಳನ್ನು ಮೂರುವರೆ ದಿವಸ ನೋಡುವರು; ಮತ್ತು ಅವರ ಹೆಣಗಳನ್ನು [7]ಸಮಾಧಿಯಲ್ಲಿ ಇಡಗೊಡಿಸರು.

---

1. ಈ ಇಬ್ಬರು ಸತ್ಯ ಸಾಕ್ಷಿಗಳಿಗೆ ಕೊಡಲ್ಪಟ್ಟ ಅದ್ಭುತವರವು ಮೋಶೆ ಎಲೀಯ ಎಂಬವರಿಗೆ ಕೊಡಲ್ಪಟ್ಟ ಅದ್ಭುತವರಕ್ಕೆ ಸಮಾನವಾಗಿತ್ತು. (೫, ೬. ವ.) ಅವರ ಬಾಯಿಂದ ಹೊರಟು ಅವರ ಶತ್ರುಗಳನ್ನು ಭಕ್ಷಿಸುವ ಅಗ್ನಿ ಎಂಬುವದು, ಅವರ ಬಾಯಿಯಿಂದ ಹೊರಡುವ ಶಾಪದಿಂದ ಅವರ ಶತ್ರುಗಳಿಗೆ ಸಂಭವಿಸುವ ಭಯಂಕರವಾದ ಆಜ್ಞೆಯನ್ನು ಕುರಿತದ್ದು. ಅವರ ಶತ್ರುಗಳು ಹಾಗೆಯೇ ಕೊಲ್ಲಲ್ಪಡ ಬೇಕೆಂಬುವದು, ಎಲೀಯನ ಶತ್ರುಗಳು ಅಗ್ನಿಯಿಂದ ನಾಶವಾದ ಪ್ರಕಾರ ಈ ಇಬ್ಬರು ಸಾಕ್ಷಿಗಳ ಶತ್ರುಗಳು ಸಹ ಅಗ್ನಿಯಿಂದ ನಾಶವಾಗುವರೆಂಬ ಅರ್ಥವಾಗುತ್ತದೆ. (೨ ಅರ. ೧. ೧೦.)

2. ಮಳೆ ಸುರಿಯದಂತೆ ಎಲೀಯನು ಆಕಾಶವನ್ನು ಮುಚ್ಚಿದ ಪ್ರಕಾರವೂ, ಮೋಶೆಯು ನೀರನ್ನು ರಕ್ತವಾಗ ಮಾಡಿದ ಪ್ರಕಾರವೂ, ಅವರಿಂದ ಭೂಮಿಯಲ್ಲಿ ಇನ್ನೂ ನಾನಾ ಬಾಧೆಗಳು ಸಂಭವಿಸಿದ ಪ್ರಕಾರವೂ, ಈ ಇಬ್ಬರು ಸಾಕ್ಷಿಗಳಿಂದಲೂ ನಾನಾ ಬಾಧೆಗಳು ಬರ ಮಾಡ ತಕ್ಕ ಅಧಿಕಾರವು ಅವರಿಗೆ ಕೊಡಲ್ಪಟ್ಟಿತು. (೧ ಅರ. ೧೭. ೧. ಹೊರ. ೭. ೧೭—೧೯.) ಸತ್ಯಸಾಕ್ಷಿಗಳಿಗೆ ಕ್ಷೇಮವೂ, ಸತ್ಯವಿರೋಧಿಗಳಿಗೆ ನಾಶವೂ ಉಂಟಾಗುವಂತೆ ದೇವರು ತನ್ನ ಅಧಿಕಾರ ಕೊಟ್ಟನು.

3. ಇದು ೩ನೇ ವಚನದಲ್ಲಿ ಹೇಳಿದ ೧೨೬೦ ದಿವಸ ಅಥವಾ ೧೨೬೦ ವರುಷಗಳ ಅಂತ್ಯವನ್ನು ಕುರಿತದ್ದು. ಈ ಕಾಲವು ಜುಸ್ಟಿನಿಯನ್ ಎಂಬ ಅರಸನು ಪೋಪನಿಗೆ ವೈದಿಕ ಅಧಿಕಾರವನ್ನು ಕೊಟ್ಟ ೫೩೩ನೇ ವರುಷದಲ್ಲಿ ಪ್ರಾರಂಭಿಸುತ್ತದೆಂದೂ, ಪೊಕ್ಕಾಸ್ ಅರಸನು ಪೋಪನಿಗೆ ಸರ್ವ ಶ್ರೇಷ್ಠಾಧ್ಯಕ್ಷ ಪಟ್ಟವನ್ನು ಕೊಟ್ಟ ೬೦೬ನೇ ವರುಷದಲ್ಲಿ ಪ್ರಾರಂಭಿಸುತ್ತದೆಂದೂ, ವಿಟ್ಟಲಿಯನ್ ಎಂಬ ಪೋಪನು ದೇವಾರಾಧನೆ ಎಲ್ಲಾ ಲಥೀನ್ ಭಾಷೆಯಲ್ಲಿ ನಡಿಸ ಬೇಕೆಂಬ ಕಟ್ಟಳೆ ಕೊಟ್ಟ ೬೬೬ನೇ ವರುಷದಲ್ಲಿ ಪ್ರಾರಂಭಿಸುತ್ತದೆಂದೂ, ವೇದಶಾಸ್ತ್ರಿಗಳಲ್ಲಿ ಹಲವರು ಹಲವು ತಾತ್ಪರ್ಯ ಹೇಳುತ್ತಾರೆ.

4. ಮೃಗವು ಎಂಬುವದು, ೯. ೧೧ಲ್ಲಿ ಹೇಳಿದ ಅಗಾಧದ ಸಂಹಾರದೂತನನ್ನು ಕುರಿತದ್ದೆಂದು ಕೆಲವರು ನೆನಸುತ್ತಾರೆ. ಬೇರೆ ಕೆಲವರು ದಾನಿಯೇಲನ ಪ್ರವಾದನೆಯಲ್ಲಿ ಸೂಚಿಸಿದ್ದೂ, ಪ್ರಕಟ. ೧೩, ೧೭ನೇ ಸಂಧಿಗಳಲ್ಲಿ ವಿವರಿಸಿರುವದೂ ಆದ ಪೋಪನ ರಾಜ್ಯವನ್ನು ಕುರಿತದ್ದೆಂದು ತಾತ್ಪರ್ಯ ಹೇಳುತ್ತಾರೆ. (ದಾನಿ. ೭. ೧೯—೨೧. ಪ್ರಕಟ. ೧೩. ೧—೧೦; ೧೭. ೮.) ಮೇಲೆ ಹೇಳಿದ ಇಬ್ಬರು ಸಾಕ್ಷಿಗಳು ಪೋಪನ ಮಾರ್ಗದಿಂದುಂಟಾದ ಕೇಡುಗಳನ್ನು ವಿರೋಧಿಸುವವರಾಗಿ ಹೇಳುತ್ತಾ ಬಂದ ಸಾಕ್ಷಿ ಮುಗಿಯುವ ಕಾಲದಲ್ಲಿ ಯೂರೋಪ್ ಖಂಡವೆಲ್ಲಾ ಅವರಿಗೆ ವಿರೋಧವಾಗಿ ಎದ್ದು, ೧೧೭೯ನೇ ವರುಷದಲ್ಲಿ ಕೂಡಿದ ಮೂರನೇ ಲತ್ತಿರಾನ್ ಸಂಘದಲ್ಲಿ ಈ ಸತ್ಯಸಾಕ್ಷಿಗಳನ್ನು ನಾಶ ಮಾಡಿ ಬಿಡ ಬೇಕೆಂದು ತೀರ್ಪು ಮಾಡಿದರು. ಆದಾಗ್ಯೂ ಮೂರು ಶತಾಬ್ದಗಳು ಅವರು ಉಪದ್ರವನ್ನೂ ಕಷ್ಟವನ್ನೂ ನಷ್ಟವನ್ನೂ ನೋಡದೆ, ಸತ್ಯಕ್ಕೆ ಸಾಕ್ಷಿ ಕೊಡುತ್ತಾ ಬಂದರು. ಹದಿನೈದನೇ ಶತಾಬ್ದದಲ್ಲಿ ವಾಲ್ಡೆನ್ಸರು ಹುಸ್ಸರು ಮುಂತಾದ ಸತ್ಯ ಸಾಕ್ಷಿಗಳಿಗೆ ವಿರೋಧವಾಗಿ, ರೋಮು ರಾಜ್ಯವಾದ ಅಗಾಧದ ಮೃಗವು ಎದ್ದು, ಅವರ ಸಂಗಡ ಯುದ್ಧ ಮಾಡಿ, ಅವರನ್ನು ಜಯಿಸಿ, ಅವರನ್ನು ಕೊಂದು ಹಾಕಿತು. ಅವರು ಭಕ್ತಿಹೀನರಾದ ಲೋಕದವರ ದೃಷ್ಟಿಯಲ್ಲಿ ಸತ್ತವರ ಹಾಗಿದ್ದರು.

5. ಈ ಇಬ್ಬರು ಸಾಕ್ಷಿಗಳ ಶರೀರಗಳು, ಅಕ್ರಮಕ್ಕೆ ಸೊದೋಮಿನ ಹಾಗೆಯೂ, (ಯೆಶಾ. ೧. ೧೦.) ಭಕ್ತರು ಹೊಂದಿದ ಉಪದ್ರ ಕಷ್ಟಗಳಿಗೆ ಐಗುಪ್ತದ ಹಾಗೆಯೂ, ಕ್ರಿಸ್ತನನ್ನು ಕೊಂದು, ಆತನ ದಾಸರನ್ನು ಹಗೆ ಮಾಡಿದ ಕ್ರೂರತ್ವಕ್ಕೆ ಯೆರೂಸಲೇಮಿನ ಹಾಗೆಯೂ, ಇದ್ದ, ಮಹಾ ಪಟ್ಟಣದ ವಿಶಾಲವಾದ ಬೀದಿಯಲ್ಲಿ ಬಿದ್ದಿರುವವು. ಈ ಮಹಾ ಪಟ್ಟಣವು ರೋಮುಪುರಿಯನ್ನು ಕುರಿತದ್ದೆಂದು ಅನೇಕರು ಅಭಿಪ್ರಾಯ ಮಾಡುತ್ತಾರೆ. (೧೭. ೯, ೧೮.)

6. ನಮ್ಮ ಕರ್ತನೆಂಬುವದಕ್ಕೆ ಕೆಲ ಮುಖ್ಯ ಕೈಬರಹದ ಪ್ರತಿಗಳಲ್ಲಿ ಅವರ ಕರ್ತನೆಂಬದಾಗಿ ಉಂಟು. ಈ ಇಬ್ಬರು ಸಾಕ್ಷಿಗಳು ಜೀವದಲ್ಲಿ ಮಾತ್ರವಲ್ಲ, ಮರಣದಲ್ಲಿಯೂ ತಮ್ಮ ಕರ್ತನ ಹಾಗಿದ್ದರು.

7. ಹೆಣಗಳನ್ನು ಸಮಾಧಿಗಳಲ್ಲಿ ಇಡಗೊಡಿಸದೆ ಅವಮಾನ ಪಡಿಸುವದು ತೀರದ ಹಗೆಗೂ ಕ್ರೂರತ್ವಕ್ಕೂ ಗುರುತಾಗಿತ್ತು. ಪ್ರಜೆಗಳು ಹೆಣಗಳನ್ನು ಸಮಾಧಿಯಲ್ಲಿ ಹೂಣಿಡದೆ ಬೀದಿಗಳಲ್ಲಿ ಹಾಕಿ ವೇಡಿಕೆ ನೋಡಿದ ಮೂರುವರೆ ದಿವಸ ಮೂರುವರೆ ವರುಷವಾಗಿರುವದು. ೧೫೧೨ನೇ ವರುಷದಿಂದ ೧೫೧೭ನೇ ವರುಷದ ವರೆಗೂ ರೋಮುಪುರಿಯಲ್ಲಿ ನಡೆದ ಲತ್ತಿರಾನ್ ಸಂಘದಲ್ಲಿ ಸತ್ಯಸಾಕ್ಷಿಗಳಾದ ಪತಿತರನ್ನು ನಾಶ ಮಾಡ ಬೇಕೆಂದೂ, ಅವರಲ್ಲಿ ಸತ್ತು ಹೋದವರನ್ನು ಹೂಣಿಡಗೊಡಿಸ ಬಾರದೆಂದೂ ಪೋಪನು ಮುಂತಾದವರು ಕೂಡಿದ್ದ ಸಂಘದವರಿಂದ ಹುಟ್ಟಿದ ತೀರ್ಪು ಈ ಪ್ರವಾದನೆಯನ್ನು ಒಂದು ಪ್ರಕಾರ ಈಡೇರಿಸಿದ ಹಾಗಿದೆ ಎಂದು ಕೆಲವರು ನೆನಸುತ್ತಾರೆ.



೧೦ ಈ ಇಬ್ಬರು ಪ್ರವಾದಿಗಳು ಭೂಮಿಯ ಮೇಲೆ ವಾಸ ಮಾಡುವವರನ್ನು [1]ಪೀಡಿಸಿದ್ದರಿಂದ, ಭೂಮಿಯ
ಮೇಲೆ ವಾಸ ಮಾಡುವವರು ಅವರ ಮೇಲೆ ಸಂತೋಷಿಸಿ, ಆನಂದ ಪಟ್ಟು, ಒಬ್ಬರಿಗೊಬ್ಬರು [2]ಉಡುಗೆರೆಗ
ಳನ್ನು ಕಳುಹಿಸುವರು.
೧೧ ಮತ್ತು ಆ [3]ಮೂರುವರೆ ದಿವಸಗಳ ತರುವಾಯ ದೇವರಿಂದ ಜೀವದ ಆತ್ಮವು ಅವರೊಳಗೆ ಬಂತು; ಮತ್ತು
೧೨ ಅವರು ಕಾಲೂರಿ ನಿಂತರು. ಆಗ ಅವರನ್ನು ನೋಡುವವರ ಮೇಲೆ ಮಹಾ ಭಯವು ಬಿತ್ತು. ಮತ್ತು,
ಇಲ್ಲಿಗೆ ಏರಿ ಬನ್ನಿರಿ, ಎಂದು ತಮಗೆ ಹೇಳುವ, ಪರಲೋಕದಿಂದಾದ, ಮಹಾ ಶಬ್ದವನ್ನು ಕೇಳಿ, ಮೇಘದಲ್ಲಿ
ಪರಲೋಕಕ್ಕೆ ಏರಿ ಹೋದರು. ಮತ್ತು ಅವರ ಶತ್ರುಗಳು ಅವರನ್ನು ನೋಡಿದರು.
೧೩ ಅದೇ ತಾಸಿನಲ್ಲಿ [4]ಮಹಾ ಭೂಕಂಪ ಉಂಟಾಗಿ, ಪಟ್ಟಣದ ಹತ್ತನೇ ಪಾಲು ಬಿದ್ದು, ಭೂಕಂಪದಿಂದ ಏಳು
ಸಾವಿರ ಮಂದಿ ಕೊಲ್ಲಲ್ಪಟ್ಟರು. ಮಿಕ್ಕಾದವರು ಭಯಸ್ಥರಾಗಿ, ಪರಲೋಕದ ದೇವರಿಗೆ [5]ಮಹಿಮೆಯನ್ನು
ಕೊಟ್ಟರು.
೧೪ ಎರಡನೇ ಅಯ್ಯೋ ಆಗಿ ಹೋಯಿತು; ಇಗೋ, [6]ಮೂರನೇ ಅಯ್ಯೋ ಬೇಗ ಬರುತ್ತದೆ.

ಏಳನೇ ತುತೂರಿ ಊದಲಾಗಿ ಮೂರನೇ ಬಾಧೆ ಸಂಭವಿಸಿದ್ದು; ಸ್ತೋತ್ರದ ಕೀರ್ತನೆ ಹಾಡಿದ್ದು.
ಪರಲೋಕದಲ್ಲಿ ದೇವಾಲಯವು ತೆರೆಯಲ್ಪಟ್ಟದ್ದು.

೧೫ [7]ಏಳನೇ ದೂತನು ಊದಲಾಗಿ, ಪರಲೋಕದಲ್ಲಿ ಮಹಾ ಶಬ್ದಗಳು ಉಂಟಾಗಿ ಹೇಳಿದ್ದೇನಂದರೆ, ಲೋ

---

1. ಭೂನಿವಾಸಿಗಳಾದ ಭಕ್ತಿಹೀನರನ್ನು ಅವರ ಅವಿಶ್ವಾಸಕ್ಕಾಗಿಯೂ, ಕಲಹಗುಣಕ್ಕಾಗಿಯೂ, ಇಬ್ಬರು ಪ್ರವಾದಿಗಳಾದ ಸತ್ಯಸಾಕ್ಷಿಗಳು ಗದರಿಸಿ ಖಂಡಿಸಿದ್ದು ಅವರನ್ನು ಪೀಡಿಸಿದ ಹಾಗಿತ್ತು.

2. ಮುಖ್ಯ ಉತ್ಸವದಿವಸಗಳಲ್ಲಿಯೂ ಸಂತೋಷದ ದಿವಸಗಳಲ್ಲಿಯೂ ಬಹುಮಾನಗಳನ್ನು ಕಳುಹಿಸಿ ಸಂತೋಷ ಪಡುವ ಪ್ರಕಾರ ಈ ಭಕ್ತಿಹೀನರು ಸಂತೋಷ ಪಟ್ಟರು. (ನೆಹೆ. ೮. ೧೦. ಎಸ್ತೇರ. ೯. ೧೯, ೨೨.)

3. ಕೆಲವರು ಇದು ಲುಥರನಿಂದ ಉಂಟಾದ ಮಾರ್ಗದ ತಿದ್ದುಪಾಟನ್ನು ಸೂಚಿಸುತ್ತದೆಂದು ನೆನಸುತ್ತಾರೆ. ೧೫೧೪ನೇ ವರುಷದ ಮೇ ತಿಂಗಳ ೫ನೇ ತಾರೀಕಿನಲ್ಲಿ ಪತಿತರೆಲ್ಲರು ನಾಶವಾದರೆಂದು ರೋಮುಪುರಿಯಲ್ಲಿ ಜಯೋತ್ಸವ ಮಾಡಿದರು. ಇದಕ್ಕೆ ಸರಿಯಾಗಿ ಮೂರುವರೆ ವರುಷದ ತರುವಾಯ ೧೫೧೭ನೇ ವರುಷ ಅಕ್ಟೋಬರ್ ತಿಂಗಳು ೩೧ನೇ ತಾರೀಕಿನಲ್ಲಿ ಲುಥರ್ ಎಂಬವನು ವಿರ್ಟೆಂಬರ್ಗ್ ಪಟ್ಟಣದಲ್ಲಿ ರೋಮನ್ ಸಭೆಯ ತಪ್ಪುಗಳನ್ನು ಖಂಡಿಸುವ ನ್ಯಾಯಗಳನ್ನು ಪ್ರಸಿದ್ಧ ಮಾಡಿ, ಸಭೆಯ ತಿದ್ದುಪಾಟನ್ನು ಪ್ರಾರಂಭಿಸಿದನು. ಹೀಗೆ ಸತ್ತ ಹಾಗಿದ್ದ ಸತ್ಯಸಭೆಯು ತಿರಿಗಿ ಜೀವ ಹೊಂದಿ ಕಾಲೂರಿ ನಿಂತ ಹಾಗಿತ್ತು. ಸಾಕ್ಷಿಗಳು ಮೇಘದಲ್ಲಿ ಏರಿ ಪರಲೋಕಕ್ಕೆ ಹೋದರು ಎಂಬುವದು ತಿದ್ದುಪಾಟಾದ ಸಭೆಯವರಿಗೆ ಧೊರೆತನದ ವಿಷಯದಲ್ಲಿ ಉಂಟಾದ ಮಾನ್ಯಗಳನ್ನು ಕುರಿತದ್ದೆಂದು ಕೆಲವರು ನೆನಸುತ್ತಾರೆ. ೧೫೫೨ನೇ ವರುಷದಲ್ಲಿ ಪಾಸಾ ಪಟ್ಟಣದಲ್ಲಿ ಕೂಡಿದ ಸಂಘದಲ್ಲಿ ಸೌವಾರ್ತಿಕ ಕ್ರೈಸ್ತರಿಗೂ ಪೋಪನ ಮತಸ್ಥರಿಗೆ ಇರುವ ಪ್ರಕಾರ ಸಕಲ ವಿಷಯಗಳಲ್ಲಿ ಸ್ವಾಧೀನವೂ ಶ್ಲಾಘ್ಯವೂ ಸಲ್ಲುವದು ಎಂದು ಒಪ್ಪಂದವಾಯಿತು. ಇದನ್ನೆಲ್ಲಾ ಅವರ ಶತ್ರುಗಳು ನೋಡಿ ಭಯಪಟ್ಟರು.

4. ಇದು ಯೂರೋಪ್ ಖಂಡದಲ್ಲಿ ಮಾರ್ಗವಿಷಯವನ್ನೂ ಧೊರೆತನದ ವಿಷಯವನ್ನೂ ಕುರಿತು ನಡೆದ ಯುದ್ಧಗಳನ್ನೂ ಅವುಗಳಿಂದ ಉಂಟಾದ ಮಾರ್ಪಡುವಿಕೆಗಳನ್ನೂ ಸೂಚಿಸುತ್ತದೆಂದು ಕೆಲವರು ನೆನಸುತ್ತಾರೆ. ಭೂಕಂಪವಾದಾಗ ಆ ಪಟ್ಟಣದಲ್ಲಿ ಹತ್ತನೇ ಪಾಲು ಬಿತ್ತೆಂದೂ, ಮನುಷ್ಯರಲ್ಲಿ ಏಳು ಸಾವಿರ ಮಂದಿ ನಾಶವಾದರೆಂದೂ ಇಲ್ಲಿ ಹೇಳಿ ಇದೆ. ರೋಮು ರಾಜ್ಯವು ಹತ್ತು ರಾಜ್ಯಗಳಾಗಿ ವಿಭಾಗವಾಗಿತ್ತು. ಅವುಗಳಲ್ಲಿ ಒಂದು ರಾಜ್ಯವಾದ ಇಂಗ್ಲಾಂಡ್ ದೇಶವು ಪೋಪನ ಮಾರ್ಗವನ್ನು ಬಿಟ್ಟು ಪ್ರತ್ಯೇಕವಾಯಿತು. ಸಕ್ಸೊನಿ, ಪ್ರುಷ್ಯ, ಸ್ವೀಡೆನ್, ಡೆನ್ಮಾರ್ಕ್, ಎಂಬ ದೇಶಗಳಲ್ಲಿಯೂ ಸೌವಾರ್ತಿಕ ಮಾರ್ಗವು ಪ್ರಬಲವಾದದರಿಂದ, ಪೋಪನ ಮಾರ್ಗವು ನೆಲೆ ತಪ್ಪಿತು. ಆದಾಗ್ಯೂ ಈ ದೇಶಗಳು ರೋಮು ರಾಜ್ಯದ ಉತ್ತರ ಮೇರೆಯಾದ ಡಾನ್ಯೂಬ್ ನದಿಗೆ ಉತ್ತರದಲ್ಲಿರುವದರಿಂದ ಅವುಗಳನ್ನು ಈ ಪ್ರವಾದನೆಯಲ್ಲಿ ಸೂಚಿಸುವದಿಲ್ಲವೆಂದು ಕೆಲವರು ನೆನಸುತ್ತಾರೆ. "ಏಳು ಸಾವಿರ ಮಂದಿ ಕೊಲ್ಲಲ್ಪಟ್ಟರು" ಎಂಬುವದು, ಬೆಲ್ಜಿಯಮ್ ಹೊಲ್ಲಾಂಡ್ ಎಂಬ ದೇಶಗಳನ್ನು ಕಟ್ಟಿ ಕೊಳ್ಳುವದಕ್ಕೆ ಸ್ಪಾನ್ಯರು ಮಾಡಿದ ಯುದ್ಧದಲ್ಲಿ ಮಡಿದ ಜನಗಳನ್ನು ಸೂಚಿಸುತ್ತದಂತೆ. ಅದರಲ್ಲಿ ಬೆಲ್ಜಿಯಮ್, ಹೊಲ್ಲಾಂಡ್ ದೇಶಗಳವರು ಸ್ಪಾನ್ಯರಿಗೆ ಒಳಬೀಳದೆ, ಸ್ವಾಧೀನವುಳ್ಳವರಾಗಿ, ಶುದ್ಧ ಸೌವಾರ್ತಿಕ ಮಾರ್ಗವನ್ನನುಸರಿಸಿದರು. ಇವೆಲ್ಲಾ ಕೆಲ ವಿದ್ವಾಂಸರ ತಾತ್ಪರ್ಯಗಳಾಗಿರುವದರಿಂದ ಯಾವದನ್ನಾದರೂ ದೃಢ ಪಡಿಸಿ ಹೇಳ ಕೂಡದು.

5. ಪರಲೋಕದ ದೇವರಾದ ಯೆಹೋವನ ಮಹಿಮೆಯನ್ನೂ ಬಲವನ್ನೂ ಅವರು ಕಂಡು ಆತನನ್ನು ಕೊಂಡಾಡಿದರು. (೧೪. ೭; ೧೬. ೯.)

6. ಏಳನೇ ತುತೂರಿ ಊದಿದಾಗ ಉಂಟಾದ ಮೂರನೇ ಆಪತ್ತು ಕಡೇ ಜಯಕ್ಕೆ ಮುಂಚೆ ನಡೆದದ್ದಾಗಿತ್ತು. ಏಳನೇ ಮುದ್ರೆಯನ್ನು ಒಡೆದಾಗ ಉಂಟಾದ ದರ್ಶನದ ಪ್ರಕಾರ (೮. ೧.) ಈ ಪ್ರವಾದನೆ ಸಹ ಪರಲೋಕದಲ್ಲಿ ಸಂಭವಿಸಿತು. ಆದರೆ ಅದರಲ್ಲಿ ಮೌನವೂ ಇದರಲ್ಲಿ ಸಂತೋಷವೂ ಉಂಟಾಗಿತ್ತು.

7. ಏಳನೇ ದೂತನು ಊದಿದ ತುತೂರಿಯೇ ಮೂರನೇ ಬಾಧೆಯ ಕಡೇ ತುತೂರಿಯು. ಏಳನೇ ಮುದ್ರೆಯಲ್ಲಿ ಏಳು ತುತೂ

ಕದ ರಾಜ್ಯಗಳು ನಮ್ಮ ಕರ್ತನಿಗೂ ಅವನ ಕ್ರಿಸ್ತನಿಗೂ ಉಂಟಾದವು; ಅವನು ಯುಗಯುಗಾಂತರಗಳ
ವರಿಗೂ ಆಳುವನು.
೧೬ ಆಗ ದೇವರ ಮುಂದೆ ತಮ್ಮ ಸಿಂಹಾಸನಗಳ ಮೇಲೆ ಕೂತು ಕೊಂಡಿರುವ ಇಪ್ಪತ್ತನಾಲ್ಕು ಹಿರಿಯರು
೧೭ ಅಡ್ಡ ಬಿದ್ದು, ದೇವರಿಗೆ ನಮಸ್ಕರಿಸಿ, ಹೇಳಿದ್ದೇನಂದರೆ, ಇದ್ದವನೂ ಇರುವವನೂ ಬರುವವನೂ ಆಗಿರುವ
ಸರ್ವಶಕ್ತನಾದ ದೇವರಾಗಿರುವ ಕರ್ತನೇ, ನಿನಗೆ ಸ್ತೋತ್ರ ಮಾಡುತ್ತೇವೆ; ಯಾಕಂದರೆ ನೀನು ನಿನ್ನ ಮಹಾ
೧೮ ಬಲವನ್ನು ತೆಗೆದು ಕೊಂಡು, [1]ಆಳಿ ಕೊಂಡಿದ್ದೀ. ಜನಾಂಗಗಳು ಕೋಪಿಸಿ ಕೊಂಡವು; ಮತ್ತು ನಿನ್ನ
ಕೋಪವೂ,—[2]ಸತ್ತವರಿಗೆ ನ್ಯಾಯ ತೀರಿಸುವದಕ್ಕೂ, ನಿನ್ನ ದಾಸರಾದ ಪ್ರವಾದಿಗಳಿಗೂ ಪರಿಶುದ್ಧರಿಗೂ
ನಿನ್ನ ಹೆಸರಿಗೆ ಭಯ ಪಡುವ ಹಿರಿ ಕಿರಿಯರಿಗೂ ಪ್ರತಿಫಲವನ್ನು ಕೊಡುವದಕ್ಕೂ, ಭೂಮಿ ಕೆಡಿಸುವವ
ರನ್ನು ಕೆಡಿಸುವದಕ್ಕೂ, ಸಮಯವೂ—ಬಂದವೆ.
೧೯ ಮತ್ತು ಪರಲೋಕದಲ್ಲಿ ದೇವರ ಮಂದಿರವು ತೆರೆಯಲ್ಪಟ್ಟು, ಅವನ [3]ಒಡಂಬಡಿಕೆಯ ಪೆಟ್ಟಿಗೆಯು ಅವನ
ಮಂದಿರದಲ್ಲಿ ಕಾಣಿಸಿತು. ಮತ್ತು ಮಿಂಚುಗಳೂ, ಶಬ್ದಗಳೂ, ಗುಡುಗುಗಳೂ, ಭೂಕಂಪವೂ, [4]ದೊಡ್ಡ
ಕಲ್ಮಳೆಯೂ, ಉಂಟಾದವು.

ಒಬ್ಬ ಸ್ತ್ರೀಯು ಗಡಸರ್ಪದಿಂದ ಹಿಂಸಿಸಲ್ಪಟ್ಟದ್ದನ್ನು ಕುರಿತ ದರ್ಶನವು.

12. [5]ಆಗ ಪರಲೋಕದಲ್ಲಿ ದೊಡ್ಡ ಗುರುತು ಕಾಣಿಸಿತು; ಏನಂದರೆ—[6]ಸೂರ್ಯನನ್ನು ಹೊದ್ದು ಕೊಂಡಿರುವ
ಸ್ತ್ರೀಯು. ಅವಳ ಪಾದಗಳ ಕೆಳಗೆ ಚಂದ್ರನು; ಅವಳ ತಲೆಯ ಮೇಲೆ ಹನ್ನೆರಡು ನಕ್ಷತ್ರಗಳ ಕಿರೀಟವು.
೨ ಅವಳು ಗರ್ಭಿಣಿಯಾಗಿ, ವೇದನೆ ಪಟ್ಟು, ಹೆರುವ ನೋವಿನಲ್ಲಿ ಇರುವವಳಾಗಿ, ಕೂಗಿದಳು.
೩ ಮತ್ತು ಬೇರೆ ಗುರುತು ಪರಲೋಕದಲ್ಲಿ ಕಾಣಿಸಿತು. ಇಗೋ, ಏಳು ತಲೆಗಳೂ, ಹತ್ತು ಕೊಂಬುಗಳೂ,
೪ ಅದರ ತಲೆಗಳ ಮೇಲೆ ಏಳು ಕಿರೀಟಗಳೂ, ಉಳ್ಳ ಕೆಂಪಾದ ದೊಡ್ಡ [1]ಗಡಸರ್ಪವು; ಅದರ ಬಾಲವು ಆಕಾ
ಶದ ನಕ್ಷತ್ರಗಳಲ್ಲಿ [2]ಮೂರನೇ ಭಾಗವನ್ನು ಎಳಕೊಂಡು, ಭೂಮಿಗೆ ಹಾಕಿತು. ಆ ಗಡಸರ್ಪವು, ಹೆರುವ
ದಕ್ಕೆ ಇರುವ ಸ್ತ್ರೀಯ ಮುಂದೆ, ಹೆತ್ತಾಗಲೇ [3]ಅವಳ ಕೂಸನ್ನು ತಿಂದು ಬಿಡ ಬೇಕೆಂದು, ನಿಂತು ಕೊಂ

ರಿಗಳು ಅಡಗಿದ್ದ ಪ್ರಕಾರ, ಏಳನೇ ತುತೂರಿಯಲ್ಲಿ ದೇವರ ಕೋಪಾಗ್ನಿಗಳು ತುಂಬಿದ ಏಳು ಪಾತ್ರೆಗಳು ಅಡಗಿದ್ದವು. ಇವು ಬಾಬೆಲು ಪಟ್ಣವು ಬಿದ್ದದರಲ್ಲಿಯೂ ರಕ್ಷಕನಾದ ಕ್ರಿಸ್ತನು ಮಹಿಮೆಯಿಂದ ಪ್ರಸನ್ನನಾದದರಲ್ಲಿಯೂ ಮುಗಿದವು. ಏಳು ದಿವಸಗಳಲ್ಲಿ ಏಳು ತುತೂರಿಗಳೂ, ಏಳನೇ ದಿವಸದಲ್ಲಿ ಏಳು ತುತೂರಿಗಳೂ ಊದಲಾಗಿ ಯೆರಿಕೋ ಪಟ್ಣವು ಬಿದ್ದ ಪ್ರಕಾರ, ಈ ಏಳನೇ ತುತೂರಿ ಊದಲಾಗಿ, ಅಕ್ರಮಕ್ಕೆ ಆಶ್ರಯಸ್ಥಳವಾದ ಬಾಬೆಲು ಬಿತ್ತು. ಪರಮ ರಾಜನಾದ ಕ್ರಿಸ್ತನ ಮಹಿಮೆಯಾದ ರಾಜ್ಯವು ಪರಮ ಸಭೆಯ ಗಂಭೀರ ಧ್ವನಿಯಿಂದ ಸ್ಥಾಪನೆಯಾಯಿತು.

1. ಪರಮ ಸೈನ್ಯಗಳೊಡನೆ ಇಪ್ಪತ್ತನಾಲ್ಕು ಹಿರಿಯರೂ (೪. ೪.) ಅಡ್ಡ ಬಿದ್ದು, ನಿತ್ಯನೂ ನಿರ್ಮಲನೂ ಸರ್ವಶಕ್ತನೂ ಆದ ಯೆಹೋವನನ್ನು ಮಹಾ ಭಯಭಕ್ತಿಯಿಂದ ಸ್ತುತಿಸುತ್ತಾರೆ. ಆತನು ಲೋಕದ ಸಮಸ್ತ ಸಂಗತಿಗಳನ್ನೂ ಕ್ರಿಸ್ತನ ಸರ್ವಾಧಿಕಾರಕ್ಕೆ ಅನುಕೂಲವಾಗುವಂತೆ ಮಾಡಿದ ಅತಿಶಯವಾದ ಕ್ರಿಯೆಗೋಸ್ಕರ ಆತನನ್ನು ಕೊಂಡಾಡಿದರು. ಈ ಪರಮ ಅರಸನ ಸರ್ವಶಕ್ತಿಯುಳ್ಳ ಆಳಿಕೆಗೆ ಎಲ್ಲವೂ ಸಾಧ್ಯವಾಗುವದು.

2. ಸತ್ತವರು ಎಂಬುವದು, ರಕ್ತಸಾಕ್ಷಿಗಳಾಗಿ ಸತ್ತವರನ್ನು ಸೂಚಿಸುತ್ತದೆ. ಆಗ ಉಳಿದ ಭಕ್ತರೆಲ್ಲರಿಗೂ ಪೂರ್ಣ ನ್ಯಾಯ ದೊರಕುವದು. ದುರ್ಮಾರ್ಗರೆಲ್ಲರಿಗೆ ಆಜ್ಞೆಯಾಗುವದು.

3. ಭೂಮಿಯ ಮಂದಿರದಲ್ಲಿ ಒಡಂಬಡಿಕೆಯ ಪೆಟ್ಟಿಗೆಯು ಮಹಾ ಪರಿಶುದ್ಧ ಸ್ಥಳದಲ್ಲಿತ್ತು. ಅದರ ಮೇಲೆ ದೇವರ ಪ್ರಸನ್ನತೆಗೆ ಗುರುತಾದ ಷೆಕೀನಾ ಎಂಬ ಪ್ರಕಾಶವುಳ್ಳ ಮೇಘವು ಇತ್ತು. ಯೆಹೂದ್ಯಮಾರ್ಗವು ನಿಂತು ಹೋದದ್ದಕ್ಕೆ ಗುರುತಾಗಿ ದೇವಾಲಯದ ತೆರೆಯು ಎರಡಾಗಿ ಹರಿದು ಹೋದ ಪ್ರಕಾರ, (ಮತ್ತಾ. ೨೭. ೫೧.) ಭೂಸಮ್ಮಂಧವಾದ ವೇದಮಾರ್ಗವು ನಿಂತು ಹೋಯಿತೆಂಬುವದಕ್ಕೆ ಗುರುತಾಗಿ, ಒಡಂಬಡಿಕೆಯ ಪೆಟ್ಟಿಗೆ ಕಾಣಿಸುವಂತೆ ಪರಲೋಕದಲ್ಲಿ ದೇವರ ಮಂದಿರವು ತೆರೆಯಲ್ಪಟ್ಟಿತೆಂದು ಹೇಳ ಬಹುದು. ಇದನ್ನು ೧೫. ೫ಲ್ಲಿ ತಿರಿಗಿ ಸ್ಪಷ್ಟವಾಗಿ ಹೇಳಿ ಇದೆ.

4. ಮಿಂಚು, ಶಬ್ದ, ಗುಡುಗು, ಭೂಕಂಪ, ದೊಡ್ಡ ಕಲ್ಮಳೆ, ಇವುಗಳೆಲ್ಲಾ ಸರ್ವಶಕ್ತನಾದ ದೇವರ ಪ್ರಸನ್ನತೆಗೆ ಗುರುತಾಗಿಯೂ, ಆತನು ಶತ್ರುಗಳನ್ನು ಜಯಿಸುವದಕ್ಕೆ ಸಲ್ಲಿಸಿದ ನ್ಯಾಯತೀರ್ವಿಕೆಗಳಿಗೆ ಗುರುತಾಗಿಯೂ ಇದ್ದವು.

5. ಈ ಸಂಧಿಯಲ್ಲಿ ಹಿಂದಿನ ದರ್ಶನಗಳಿಗೆ ಸಮಾನವಾದ ಹೊಸ ದರ್ಶನಗಳು ಪ್ರಾರಂಭಿಸುತ್ತವೆ. ಮೊದಲು ಮಹಿಮೆಯನ್ನು ಧರಿಸಿ ಕೊಂಡ ಒಬ್ಬ ಸ್ತ್ರೀಯು ತನ್ನ ಪ್ರಸವಕಾಲದ ಚಿಂತೆಯುಳ್ಳವಳಾಗಿದ್ದಾಳೆ. (೧೨. ೧, ೨.) ಅನೇಕ ತಲೆಗಳೂ ಕೊಂಬುಗಳೂ ಕಿರೀಟಗಳೂ ಉಳ್ಳದ್ದಾಗಿಯೂ, ನಕ್ಷತ್ರಗಳ ಮೂರನೇ ಭಾಗವನ್ನು ಭೂಮಿಗೆ ಎಳೆದು ಹಾಕಿದ್ದಾಗಿಯೂ, ಇದ್ದ ಒಂದು ಗಡಸರ್ಪವು ಅವಳು ಹೆರುವ ಮಗುವನ್ನು ನುಂಗುವದಕ್ಕೆ ಕಾದು ಕೊಂಡಿರುತ್ತದೆ. ಆದಾಗ್ಯೂ ಅವಳ ಕೂಸು ಸಮಸ್ತ ಜನಾಂಗಗಳಿಗೆ ಅಧಿಪತಿಯಾಗಿ ಗಡಸರ್ಪಕ್ಕೆ ಶಿಕ್ಕದೆ, ದೇವರ ಸಿಂಹಾಸನದ ಬಳಿಗೆ ಎತ್ತಲ್ಪಡುತ್ತದೆ. ಅದನ್ನು ಹೆತ್ತ ಸ್ತ್ರೀಯು ಅರಣ್ಯಕ್ಕೆ ಓಡಿ, ಗೊತ್ತಾದ ಕಾಲದ ಮಟ್ಟಿಗೂ ಸುರಕ್ಷಿತವಾಗಿರುತ್ತಾಳೆ. (೩—೬. ವ.) ಪರಲೋಕದಲ್ಲಿ ಗಡಸರ್ಪಕ್ಕೂ ಮಿಕಯೇಲನು ಮುಂತಾದ ದೂತರಿಗೂ ಉಂಟಾದ ಯುದ್ಧದಲ್ಲಿ ಗಡಸರ್ಪವೂ ಅದಕ್ಕೆ ಸಮ್ಮಂಧ ಪಟ್ಟ ಪಿಶಾಚರೂ ಹೊರಡಿಸಲ್ಪಟ್ಟರು. (೭—೯. ವ.) ಅವರು ಹೊರಡಿಸಲ್ಪಟ್ಟದ್ದರಿಂದ ಆನಂದ ಧ್ವನಿಯೂ, ಆ ಸಂತೋಷ ಶಬ್ದದ ಸಂಗಡ ಭೂಮಿಯಲ್ಲಿ ಆಗುವ ಉಪದ್ರವನ್ನು ಕುರಿತ ಪ್ರವಾದನೆಯೂ ಕೂಡಿರುತ್ತದೆ. (೧೦—೧೨. ವ.) ಗಡಸರ್ಪವು ಮೇಲೆ ಹೇಳಿದ ಸ್ತ್ರೀಯನ್ನು ಭೂಮಿಯಲ್ಲಿ ಹಿಂದಟ್ಟಿ ಹಿಡಿಯ ಹೋದದರಲ್ಲಿ, ಅವಳು ಅದರ ಕೈಗೆ ತಪ್ಪಿಸಿ ಕೊಂಡದ್ದರಿಂದ, ಅವಳ ಸಂತತಿಯವರಾದ ಕ್ರೈಸ್ತರನ್ನು ನಾಶ ಮಾಡುವದಕ್ಕೆ ಪ್ರಯಾಸ ಪಡುತ್ತಾನೆ. (೧೩—೧೭. ವ.)

6. ವೇದದಲ್ಲಿ ಸ್ತ್ರೀಯನ್ನು ಪಟ್ಣಕ್ಕೂ ರಾಜ್ಯಕ್ಕೂ ಉಪಮಾನವಾಗಿ ಹೇಳಿ ಇದೆ. ಯೆರೂಸಲೇಮು ಸನ್ಮಾರ್ಗದಲ್ಲಿ ನೆಲೆಯಾಗಿದ್ದಾಗ ಅದು ದೇವರಿಗೆ ಆತ್ಮಭಾವದ ಮದಲಗಿತ್ತಿಯಾಗಿತ್ತೆಂದೂ, ಅದು ವಿಗ್ರಹಾರಾಧನೆ ಮುಂತಾದ ಪಾಪ ಮಾಡಿದಾಗ ಜಾರೆಯಾಯಿತೆಂದೂ ಹೇಳಿ ಇದೆ. (ಯೆಶಾ. ೫೪. ೧, ೫; ೬೬. ೧—೧೪. ಯೆರೆ. ೩೧. ೪.) ಸೊಲೊಮೋನನ ಗೀತದಲ್ಲಿ ಕ್ರಿಸ್ತನನ್ನು ಮದಲಿಂಗನಾಗಿಯೂ, ಸಭೆಯನ್ನು ಮದಲಗಿತ್ತಿಯಾಗಿಯೂ ಉಪಮಾನವಾಗಿ ಹೇಳಿ ಇದೆ. ಈ ವಚನದಲ್ಲಿ ಸ್ತ್ರೀ ಎಂಬುವದು ಭೂಮಿಲ್ಲಿರುವ ಸತ್ಯ ಸಭೆಯನ್ನು ಸೂಚಿಸುತ್ತದೆ. (ಯೆಶಾ. ೫೪. ೧, ೫, ೬. ಮೀಕ. ೪. ೧೦. ಗಲಾ. ೪. ೨೬.) ಸೂರ್ಯನನ್ನು ಹೊದ್ದು ಕೊಂಡಿದ್ದಳೆಂಬುವದು, ತಿರುಸಭೆಯು ನೀತಿಸೂರ್ಯನಾದ ಕ್ರಿಸ್ತನ ಮಹಿಮೆ ಹೊಂದಿರುವದನ್ನು ಸೂಚಿಸುತ್ತದೆ. ಅವಳ ಪಾದಗಳ ಕೆಳಗೆ ಚಂದ್ರನು ಎಂಬುವದು, ಚಂದ್ರನ ಬೆಳಕಿನ ಹಾಗೆ ಮಂದವಾದ ಪ್ರಕಾಶವುಳ್ಳದ್ದಾಗಿದ್ದ ಯೆಹೂದ್ಯಮಾರ್ಗವು ತಗ್ಗಿಸಲ್ಪಟ್ಟದ್ದನ್ನು ಸೂಚಿಸುತ್ತದೆ. ಅವಳ ತಲೆಯ ಮೇಲೆ ಹನ್ನೆರಡು ನಕ್ಷತ್ರಗಳುಳ್ಳ ಕಿರೀಟವು ಎಂಬುವದು, ಹನ್ನೆರಡು ಅಪೊಸ್ತಲರ ಉಪದೇಶವಾದ ಜ್ಯೋತಿಯನ್ನು ಹೊಂದಿದ್ದನ್ನು ಸೂಚಿಸುತ್ತದೆ. ಹೆರುವ ನೋವಿನಲ್ಲಿ ಕೂಗಿದಳೆಂಬುವದು, ಸಭೆಗೆ ಕ್ಷೇಮಕಾಲ ಬರುವದಕ್ಕಿಂತ ಮುಂಚೆ ಅದಕ್ಕುಂಟಾಗಿದ್ದ ಉಪದ್ರವನ್ನೂ, ಪರಲೋಕದಲ್ಲಿ ಒಂದು ದೊಡ್ಡ ಗುರುತು ಕಾಣಿಸಿತೆಂಬುವದು, ಸ್ತ್ರೀ ಎಂಬ ಸಭೆಯನ್ನು ಕುರಿತು ರೋಮ ರಾಜ್ಯದಲ್ಲಿ ಉಂಟಾದ ಅತಿಶಯವನ್ನೂ ಸೂಚಿಸುತ್ತವೆಂದು ತೋರುತ್ತದೆ. ದಿಯೊಕ್ಲೇಷನ್ ಎಂಬ ಅರಸನ ಕಾಲದಲ್ಲಿ ಕ್ರೈಸ್ತಸಭೆಯು ಉಪದ್ರವೆಂಬ ಪುಠದಲ್ಲಿ ಇದ್ದದರಿಂದ ಅದು ಅಪರಂಜಿಯ ಹಾಗೆ ಶುದ್ಧವಾಗಿ, ಚಂದ್ರನ ಹಾಗೆ ಸುಂದರವೂ ಸೂರ್ಯನ ಹಾಗೆ ಪ್ರಕಾಶವೂ, ಧ್ವಜಗಳಿರುವ ದಂಡಿನ ಹಾಗೆ ಭಯಂಕರವೂ ಉಳ್ಳದ್ದಾಗಿ, ಅರುಣೋದಯದ ಹಾಗೆ ಉದಯಿಸುವ ಸೌಂದರ್ಯ ಉಳ್ಳ ಸ್ತ್ರೀಯ ಹಾಗೆ ತೋರಿತೆಂದೂ, (ಸೊಲೊ. ಗೀತ. ೬. ೧೦.) ೩೧೩ನೇ ವರುಷದಲ್ಲಿ ಮಹಾ ಕೊನ್ಸ್ತಂತೀನ್ ಅರಸನಿಂದ ಪೂರ್ಣ ಶ್ಲಾಘ್ಯವೂ ಸ್ವಾಧೀನವೂ ಉಂಟಾಯಿತೆಂದೂ ತಾತ್ಪರ್ಯ ಹೇಳುತ್ತಾರೆ.

1. ಗಡಸರ್ಪವೆಂಬುವದು ಈ ಲೋಕಾಧಿಪತಿಯಾದ ಸೈತಾನನನ್ನು ಕುರಿತದ್ದು. (೯. ವ.) ಕೆಂಪಾದ ದೊಡ್ಡ ಗಡಸರ್ಪವೆಂಬುವದು, ಸೈತಾನನ ಮೂರ್ಖತ್ವವನ್ನೂ ಕ್ರೂರತ್ವವನ್ನೂ ಸೂಚಿಸುತ್ತದೆ. ದೇವರಿಗೂ ತಿರುಸಭೆಗೂ ಶತ್ರುವಾಗಿದ್ದ ಐಗುಪ್ತ ರಾಜ್ಯವನ್ನು ಗಡಸರ್ಪಕ್ಕೆ ಉಪಮಾನಿಸಿ ಇದೆ. (ಯೆಶಾ. ೨೭. ೧; ೫೧. ೯. ಎಜೇಕಿ. ೨೯. ೩.) ಈ ವಚನದಲ್ಲಿ ಗಡಸರ್ಪವೆಂಬುವದು ಪಿಶಾಚನ ಬಲಕ್ಕೆ ಅಧೀನವಾಗಿದ್ದ ಅಜ್ಞಾನ ರೋಮ ರಾಜ್ಯವನ್ನು ಕುರಿತದ್ದೆಂದು ತೋರುತ್ತದೆ. "ಏಳು ತಲೆಗಳು" ಎಂಬುವದು ಏಳು ಬೆಟ್ಟಗಳ ಮೇಲೆ ಕಟ್ಟಲ್ಪಟ್ಟ ರೋಮಪುರಿಯನ್ನೂ, ಅದರಲ್ಲಿ ವರಿಶೆಯಾಗಿ ಬಂದ ಏಳು ವಿಧವಾದ ರಾಜ್ಯಭಾರಗಳನ್ನೂ ಸೂಚಿಸುತ್ತದೆ. (೧೭. ೯—೧೮. ವಚನಗಳ ವ್ಯಾಖ್ಯಾನ ನೋಡ ಬೇಕು.) ಅಥವಾ ಏಳು ಪೂರ್ಣ ಸಂಖ್ಯೆಯಾಗಿರುವ ಪ್ರಕಾರ, ಇದು ಲೋಕದ ಮೇಲೆ ರೋಮಾಯರಿಗೆ ಉಂಟಾಗಿದ್ದ ಪೂರ್ಣ ಅಧಿಕಾರವನ್ನು ಸೂಚಿಸುತ್ತದೆ. ಹತ್ತು ಕೊಂಬುಗಳೆಂಬುವದು, ಪಶ್ಚಿಮ ರೋಮ ರಾಜ್ಯದಲ್ಲಿ ಇದ್ದ ಹತ್ತು ಧೊರೆತನಗಳನ್ನು ಕುರಿತದ್ದು. (ದಾನಿ. ೭. ೨೩—೨೪.) ಕಿರೀಟಗಳು ಗಡಸರ್ಪದ ಕೊಂಬುಗಳಲ್ಲಿ ಅಲ್ಲ, ತಲೆಗಳಲ್ಲಿ ಇದ್ದ ಪ್ರಕಾರ ರಾಜ್ಯಾಧಿಕಾರವೆಲ್ಲಾ ಮುಂದಿನ ಕಾಲದಲ್ಲಿ ಇದ್ದ ಪ್ರಕಾರ ಹತ್ತು ಧೊರೆತನಗಳಿಗೆ ಸ್ವಂತವಾಗಿರದೆ, ರೋಮಾ ಚಕ್ರವರ್ತಿಗೂ ಅದರ ಮಂತ್ರಾಲೋಚನೆಸಭೆಗೂ ಸ್ವಂತವಾಗಿತ್ತು. ಮತ್ತು ಕಿರೀಟವೆಂಬುವದು ಸೈನ್ಯಾಧಿಪತಿಗಳು ಧರಿಸುವ ಹೂವುಗಳಿಂದ ಅಥವಾ ಎಲೆಗಳಿಂದ ಮಾಡಲ್ಪಟ್ಟ ಕಿರೀಟವಲ್ಲ, ಆಸ್ಯ ಖಂಡದ ಅರಸರ ಹಾಗೆ ಮೂರನೇ ಶತಾಬ್ದದಲ್ಲಿ ರೋಮಾ ಚಕ್ರವರ್ತಿಗಳು ಧರಿಸಿದ್ದ ಡೈಯಡಮ್ ಎಂಬ ನವರತ್ನಖಚಿತವಾದ ಕಿರೀಟವನ್ನು ಸೂಚಿಸುತ್ತದೆ. ಮತ್ತು ಅದೇ ಶತಾಬ್ದದಲ್ಲಿ ಹದ್ದಿನ ಧ್ವಜದ ಪ್ರಕಾರ ಗಡಸರ್ಪದ ಧ್ವಜವು ಸಹ ರೋಮಾಯರ ಬಿರುದಾಗಿತ್ತು. ಇತ್ಯಾದಿ ವಿಷಯಗಳನ್ನು ಯೋಚಿಸುವಾಗ ಈ ಪ್ರವಾದನೆಯು ತರುವಾಯ ಬರುವ ಅಂತಿಕ್ರಿಸ್ತನ ಬಲವನ್ನು ಕುರಿತದ್ದಾಗಿರದೆ, ರೋಮಾಯ ಅರಸುಗಳ ಅಧಿಕಾರವನ್ನು ಕುರಿತದ್ದೆಂದು ತೋರುತ್ತದೆ.

2. ಗಡಸರ್ಪವಾದ ರೋಮ ರಾಜ್ಯಕ್ಕೆ ಆ ರಾಜ್ಯದಲ್ಲಿ ಮೂರನೇ ಭಾಗದ ಮೇಲೆ ಅಧಿಕಾರವಿತ್ತು. ಕ್ರಿಸ್ತನ ಸಭೆಗೆ ಉಳಿದ ಎರಡು ಭಾಗಗಳ ಮೇಲೆ ಅಧಿಕಾರವಿತ್ತೆಂದು ತೋರುತ್ತದೆ. ಹಾಗೆಯೇ ೩೧೩ನೇ ವರುಷದಲ್ಲಿ ಕೊನ್ಸ್ತಂತೀನ್ ಲೈಸೆನ್ಷಿಯಸ್ ಎಂಬ ಅರಸರು ಆಳುತ್ತಿದ್ದ ಯೂರೋಪ್ ಖಂಡಕ್ಕೂ ಅಫ್ರಿಕಾ ಖಂಡಕ್ಕೂ ಶೇರಿದ ಭಾಗಗಳಲ್ಲಿ ಕ್ರೈಸ್ತರಿಗೆ ಸ್ವಾಧೀನವೂ, ಮಕ್ಸಿಮಿನ್ ಅರಸನು ಆಳುತ್ತಿದ್ದ ಆಸ್ಯ ಖಂಡದ ಭಾಗದಲ್ಲಿ ಕ್ರೈಸ್ತರಿಗೆ ಉಪದ್ರವೂ ಉಂಟಾಗಿತ್ತೆಂದು ಚರಿತ್ರೆಯಿಂದ ತಿಳಿಯ ಬರುತ್ತದೆ.

3. ಈ ಕೂಸು, ಪರಿಶುದ್ಧ ಮಗುವಾದ ಕ್ರಿಸ್ತನನ್ನು ಕುರಿತದ್ದೆಂದು ಕೆಲವರು ನೆನಸುತ್ತಾರೆ. ಬೇರೆ ಕೆಲವರು, ಪ್ರಸವವೇದನೆಯ ಹಾಗೆ ಮಹಾ ಉಪದ್ರದಲ್ಲಿ ಶಿಕ್ಕಿ ಇದ್ದ ಕ್ರಿಸ್ತನ ಸಭೆಗುಂಟಾದ ಪೂರ್ಣ ಸ್ವಾಧೀನವನ್ನು ಕುರಿತದ್ದೆಂದು ನೆನಸುತ್ತಾರೆ. ಫರೋನನು ಇಸ್ರಯೇಲ್ಯರ ಗಂಡು ಕೂಸುಗಳನ್ನು ಕೊಲ್ಲ ಪ್ರಯಾಸ ಪಟ್ಟ ಪ್ರಕಾರವೂ, ಹೆರೋದನು ಕೂಸಾದ ಕ್ರಿಸ್ತನನ್ನು ಕೊಲ್ಲುವದಕ್ಕೆ ಪ್ರಯಾಸ ಪಟ್ಟ ಪ್ರಕಾರವೂ, ಗಡಸರ್ಪವು ಕ್ರಿಸ್ತನ ಸಭೆ ಎಂಬ ಕೂಸನ್ನು ನುಂಗುವದಕ್ಕೆ ನೋಡಿತು. ಆದಾಗ್ಯೂ ಸಭೆಯ ಕೂಸು ಎಂದು ಹೇಳಲ್ಪಟ್ಟ ಮಹಾ ಕೊನ್ಸ್ತಂತೀನನು ಕ್ರಿಸ್ತನ ಮಾರ್ಗದಲ್ಲಿ ಶೇರಿ ರಾಜ್ಯಭಾರ ಮಾಡುವದಕ್ಕೆ ಆರಂಭಿಸಿದಾಗ ಮಹಾ ಉಪದ್ರದಲ್ಲಿದ್ದ ಕ್ರಿಸ್ತನ ಸಭೆಗೆ ಪೂರ್ಣ ಸ್ವಾಧೀನವೂ ಸೌಖ್ಯವೂ ಉಂಟಾಯಿತು.

೫ ಡಿತು. ಆಗ ಅವಳು ಜನಾಂಗಗಳನ್ನೆಲ್ಲಾ ಕಬ್ಬಿಣದ ಕೋಲಿನಿಂದ ಆಳುವದಕ್ಕಿರುವ ಗಂಡು ಮಗುವನ್ನು
ಹೆತ್ತಳು; ಮತ್ತು ಅವಳ ಕೂಸು ದೇವರ ಬಳಿಗೂ ಅವನ [1]ಸಿಂಹಾಸನದ ಬಳಿಗೂ ಫಕ್ಕನೆ ಎತ್ತಲ್ಪಟ್ಟಿತು.
೬ ಮತ್ತು ಆ ಸ್ತ್ರೀಯು [2]ಅರಣ್ಯಕ್ಕೆ ಓಡಿ ಹೋದಳು. ಅಲ್ಲಿ ಅವರು ಅವಳನ್ನು [3]ಸಾವಿರದ ಇನ್ನೂರ ಅರವತ್ತು
ದಿವಸ ಪೋಷಿಸುವ ಹಾಗೆ, ದೇವರಿಂದ ಸಿದ್ಧ ಮಾಡಲ್ಪಟ್ಟ ಸ್ಥಳವು ಅವಳಿಗೆ ಉಂಟು.
೭ ಮತ್ತು ಪರಲೋಕದಲ್ಲಿ ಯುದ್ಧ ಉಂಟಾಗಿ, [4]ಮಿಕಯೇಲನೂ ಅವನ ದೂತರೂ ಗಡಸರ್ಪದ ಸಂಗಡ
೮ ಯುದ್ಧ ಮಾಡಿದರು. ಮತ್ತು ಗಡಸರ್ಪವೂ ಅದರ ದೂತರೂ ಯುದ್ಧ ಮಾಡಿ, ಗೆಲ್ಲಲಿಲ್ಲ. ಮತ್ತು ಪರ
೯ ಲೋಕದಲ್ಲಿ ಇನ್ನು ಅವರಿಗೆ ಸ್ಥಳ ಶಿಕ್ಕದೆ ಹೋಯಿತು. ಆಗ ಸಮಸ್ತ ಜಗತ್ತನ್ನು ಮೋಸಗೊಳಿಸುವ ಪಿಶಾ
ಚನೂ [5]ಸೈತಾನನೂ ಎಂಬ ಹೆಸರುಳ್ಳ, ಹಳೇ ಹಾವು ಆಗಿರುವ ದೊಡ್ಡ ಗಡಸರ್ಪವು ಹೊರಡಿಸಲ್ಪಟ್ಟು, ಭೂ
ಮಿಗೆ ಹಾಕಲ್ಪಟ್ಟಿತು. ಮತ್ತು ಅವನ ದೂತರು ಅವನ ಸಂಗಡ ಹಾಕಲ್ಪಟ್ಟರು.
೧೦ ಮತ್ತು ಪರಲೋಕದಲ್ಲಿ ದೊಡ್ಡ ಶಬ್ದವನ್ನು ಕೇಳಿದೆನು; ಏನಂದರೆ—ಈಗ [6]ರಕ್ಷಣೆಯೂ, ಬಲವೂ, ನಮ್ಮ
ದೇವರ ರಾಜ್ಯವೂ, ಅವನ ಕ್ರಿಸ್ತನ ಅಧಿಕಾರವೂ, ಉಂಟಾದವು; ಯಾಕಂದರೆ ನಮ್ಮ ಸಹೋದರರ ಮೇಲೆ
ದೇವರ ಮುಂದೆ ರಾತ್ರಿ ಹಗಲು ಚಾಡಿ ಹೇಳುವಂಥ ನಮ್ಮ ಸಹೋದರರ [7]ಚಾಡಿಗಾರನು [8]ಕೆಳಗೆ ಹಾಕಲ್ಪ

1. ಮಹಾ ಕೊನ್‌ಸ್ತಂತೀನನು ಕ್ರಿಸ್ತನಿಗೆ ಪ್ರತಿಯಾದವನಾಗಿ ಏಕ ಚಕ್ರವರ್ತಿಯಾಗಿ ಸಿಂಹಾಸನದ ಮೇಲೆ ಕುಳಿತಿದ್ದು, ರೋಮ ರಾಜ್ಯವನ್ನು ಆಳಿ ಕೊಂಡು, ಕ್ರಿಸ್ತನ ಮಾರ್ಗದಲ್ಲಿ ಶೇರದ ಜನಾಂಗಗಳನ್ನು ಕಬ್ಬಿಣದ ಕೋಲಿನಿಂದ ಆಳುವ ಪ್ರಕಾರ ಕಠಿಣವಾಗಿ ನಡಿಸುತ್ತಾ ಬಂದನು.

2. ಪ್ರವಾದಿಯಾದ ಎಲೀಯನು ಅರಣ್ಯಕ್ಕೆ ಓಡಿ ಹೋದ ಪ್ರಕಾರ, (೧ ಅರ. ೧೭. ೧—೬.) ಸತ್ಯ ಸಭೆಯು ಅರಣ್ಯದಲ್ಲಿ ಮರೆಯಾಗಿರುವಂತೆಯೂ, ಉಪದ್ರವನ್ನು ಸಹಿಸುವದಾಗಿಯೂ, ದೇವರಿಂದ ಪರಿಪಾಲಿಸಲ್ಪಡುವದಾಗಿಯೂ ಇತ್ತು. ಸ್ತ್ರೀಯು ಅರಣ್ಯಕ್ಕೆ ಓಡಿ ಹೋದ ಸಂಗತಿ ತರುವಾಯ ನಡಿಯುವ ಸಂಗತಿಯಾಗಿದ್ದಾಗ್ಯೂ, ಚರಿತ್ರೆಯ ಕ್ರಮ ಪ್ರಕಾರ ಮುಂಚೆ ನಡೆದಂತೆ ತೋರಿಸಿ ಇದೆ.

3. ಸಾವಿರದ ಇನ್ನೂರ ಅರವತ್ತು ದಿವಸ ಮೂರುವರೆ ವರುಷವಾಗುತ್ತದೆ. (೧೧. ೩.) ಇದು ೧೪ನೇ ವಚನದಲ್ಲಿ ಹೇಳಿದ ಸಮಯವೂ, ಸಮಯಗಳೂ, ಅರ್ಧ ಸಮಯವೂ ಎಂಬುವದನ್ನು ಕುರಿತದ್ದೆಂದು ಅನೇಕರು ನೆನಸುತ್ತಾರೆ. (ದಾನಿ. ೭. ೨೫.) ಎಲೀಯನು ಅರಸನಾದ ಅಹಾಬನಿಗೆ ಭಯ ಪಟ್ಟು, ಮೂರುವರೆ ವರುಷ ಒಂದು ಸ್ಥಳದಲ್ಲಿ ಬಚ್ಚಿಟ್ಟು ಕೊಂಡಿದ್ದನು. (ಲೂಕ. ೪. ೨೫. ೧ ಅರ. ೧೭. ೧; ೧೮. ೧.) ಪ್ರವಾದನೆಯ ಲೆಖ್ಖದ ಪ್ರಕಾರ ಒಂದು ದಿವಸವನ್ನು ಒಂದು ವರುಷವಾಗಿ ಎಣಿಸಿದರೆ, ಇದು ೧೨೬೦ ವರುಷಗಳಾಗುವದು.

4. ಮಿಕಯೇಲನೆಂಬ ದೂತನು ಯೆಹೂದ್ಯಜಾತಿಯನ್ನೂ ಸಭೆಯನ್ನೂ ಕಾದು ಕೊಂಡವನೆಂದು ಯೆಹೂದ್ಯರು ಎಣಿಸಿದ್ದರು. ಇವನು ದೇವಭಕ್ತರಿಗೆ ಯಾವ ವಿಘ್ನವೂ ಬಾರದಂತೆ ಕಾಯುವ ದೂತನೆಂದು ಹೇಳ ಬಹುದು. (ದಾನಿ. ೧೦. ೧೩.) ಮಿಕಯೇಲನಿಗೂ ಅವನ ದೂತರಿಗೂ, ಗಡಸರ್ಪಕ್ಕೂ ಅವನ ದೂತರಿಗೂ ಪರಲೋಕದಲ್ಲಿ ಸಂಭವಿಸಿದ ಯುದ್ಧವು, ರೋಮ ರಾಜ್ಯದಲ್ಲಿ ಕ್ರಿಸ್ತನ ಮಾರ್ಗಕ್ಕೂ ಅಜ್ಞಾನಮಾರ್ಗಕ್ಕೂ ಉಂಟಾಗಿದ್ದ ಯುದವನ್ನು ಕುರಿತದ್ದೆಂದು ಕೆಲವು ವಿದ್ವಾಂಸರ ತಾತ್ಪರ್ಯವು. ೩೧೧ನೇ ವರುಷ ಅರಸನಾದ ಕೊನ್‌ಸ್ತಂತೀನನು ಕ್ರಿಸ್ತನ ಮಾರ್ಗಕ್ಕೆ ಶೇರಿದ್ದು ಮೊದಲುಗೊಂಡು, ೩೬೩ನೇ ವರುಷ ಜೂಲಿಯನ್ ಅರಸನು ಸಾಯುವ ಮಟ್ಟಿಗೂ ಇಂಥಾ ಯುದ್ಧವು ರೋಮ ರಾಜ್ಯದಲ್ಲಿ ಕ್ರೈಸ್ತರಾದ ಅರಸರಿಗೂ, ಅಜ್ಞಾನರಾದ ಅರಸರಿಗೂ ನಡಿಯುತ್ತಾ ಇತ್ತು. ಅದರಲ್ಲಿ ದೇವದೂತರು ಕ್ರೈಸ್ತರ ಪಾರ್ಶ್ವವಾಗಿಯೂ, ಪಿಶಾಚರು ಅಜ್ಞಾನರ ಪಾರ್ಶ್ವವಾಗಿಯೂ ಅಂತರಂಗವಾಗಿದ್ದು ಯುದ್ಧ ಮಾಡಿರುವರು. (೨ ಅರ. ೬. ೧೭. ಎಫೆ. ೬. ೧೨.) ಹೀಗೆ ನಡೆದ ಯುದ್ಧದಲ್ಲಿ ಅಜ್ಞಾನಮಾರ್ಗವು ಕುಗ್ಗಿ ಕ್ರಿಸ್ತನ ಮಾರ್ಗವು ಬೆಳೆಯಿತು. ಕೊನ್‌ಸ್ತಂತೀನನು ಘಾಯ ಪಟ್ಟ ಒಂದು ಸರ್ಪವನ್ನು ಕಾಲಿನಿಂದ ತುಳಿದು ಕೊಂಡಿರುವ ಭಾವನೆಯಾಗಿ ಮಾಡಿದ ಒಂದು ಪ್ರತಿಮೆಯನ್ನು, ಆ ಅರಸನ ಅರಮನೆಯ ಬಾಗಲಲ್ಲಿ ನಿಲ್ಲಿಸಿದ್ದದ್ದನ್ನು ಯೋಚಿಸುವಾಗ, ಈ ಪ್ರವಾದನೆ ಆ ಕಾಲದಲ್ಲಿ ಈಡೇರಿತೆಂದು ಕ್ರೈಸ್ತರು ನಿಶ್ಚಯಿಸಿ ಕೊಂಡರೆಂದು ತೋರುತ್ತದೆ.

5. (೩ನೇ ವಚನದ ವ್ಯಾಖ್ಯಾನ ನೋಡ ಬೇಕು.) ಸೈತಾನನಿಗೆ ಇಲ್ಲಿ ಹೇಳಿರುವ ನಾನಾ ಹೆಸರುಗಳಿಂದ ಅವನ ದುಷ್ಟ ಗುಣಗಳೆಲ್ಲಾ ಚನ್ನಾಗಿ ತೋರುತ್ತವೆ. ಆ ಕಾಲದಲ್ಲಿ ಅವನ ಬಲವು ಕುಗ್ಗಿ ತಗ್ಗಿ ಹೋದ ಪ್ರಕಾರ, ಕಡೇ ಕಾಲದಲ್ಲಿ ಅವನ ಆಳಿಕೆ ಎಲ್ಲಾ ಸಮೂಲವಾಗಿ ನಾಶವಾಗುವದು.

6. ಭಕ್ತರಿಗೆ ಉಂಟಾದ ರಕ್ಷಣೆಯೂ ಜಯವೂ ಕುರಿಮರಿಯಾದ ಕ್ರಿಸ್ತನ ಪವಿತ್ರ ರಕ್ತದ ಪುಣ್ಯದಿಂದ ಬಂದದ್ದರಿಂದ, ಜಯ ಹೊಂದಿದ ಸಭೆಯು ಆತನನ್ನು ಹೊಗಳಿ ಕೊಂಡಾಡುವದನ್ನು ನೋಡ ಬಹುದು.

7. ಸೈತಾನನೆಂಬುವದಕ್ಕೂ ಪಿಶಾಚನೆಂಬುವದಕ್ಕೂ ಚಾಡಿಗಾರನೆಂಬರ್ಥವು. (ಯೋಬ. ೧. ೯—೧೧. ೧ ಪೇತ್ರ. ೫. ೮.)

8. ಭಕ್ತರಾದ ಸಹೋದರರ ಮೇಲೆ ಎಡೆ ಬಿಡದೆ ತಪ್ಪು ಹೊರಿಸುವವನಾದ ಸೈತಾನನೇ ದೊಡ್ಡ ಅಪರಾಧಿಯಾಗಿ ತಗ್ಗಿಸಲ್ಪಟ್ಟು ತಳ್ಳಲ್ಪಟ್ಟು ಹೋಗುವನೆಂಬುವದನ್ನು ನೆನಸಿ ಸಂತೋಷ ಪಡುವ. (ಲೂಕ. ೧೦. ೧೮. ವಚನದ ವ್ಯಾಖ್ಯಾನ ನೋಡ ಬೇಕು.)



೧೧ ಟ್ಟಿದ್ದಾನೆ. ಮತ್ತು ಅವರು [1]ಮರಣದ ಪರ್ಯಂತರಕ್ಕೂ ತಮ್ಮ ಪ್ರಾಣವನ್ನು ಪ್ರೀತಿ ಮಾಡದೆ, ಕುರಿಮ
ರಿಯ ರಕ್ತದಿಂದಲೂ ತಮ್ಮ ಸಾಕ್ಷಿಯ ವಾಕ್ಯದಿಂದಲೂ [2]ಅವನನ್ನು ಜಯಿಸಿದರು.
೧೨ ಆದದರಿಂದ, ಪರಲೋಕಗಳೇ, ಅವುಗಳಲ್ಲಿ ವಾಸವಾಗಿರುವವರೇ, ಆನಂದ ಪಡಿರಿ! ಭೂಮಿಯಲ್ಲಿಯೂ
ಸಮುದ್ರದಲ್ಲಿಯೂ ವಾಸ ಮಾಡುವವರಿಗೆ ಅಯ್ಯೋ; ಯಾಕಂದರೆ ಪಿಶಾಚನು, ತನಗೆ [3]ಸಮಯವು ಸ್ವಲ್ಪ
ವೇ ಎಂದು ತಿಳಿದು, ಮಹಾ ಉಗ್ರವುಳ್ಳವನಾಗಿ, ನಿಮ್ಮ ಬಳಿಗೆ ಇಳಿದು ಬಂದಿದ್ದಾನೆ.
೧೩ ಮತ್ತು ಗಡಸರ್ಪವು ತಾನು ಭೂಮಿಗೆ ಹಾಕಲ್ಪಟ್ಟಿರುವದನ್ನು ಕಂಡಾಗ, ಆ ಗಂಡು ಕೂಸು ಹೆತ್ತ [4]ಸ್ತ್ರೀ
೧೪ ಯನ್ನು ಹಿಂದಟ್ಟಿತು. ಆಗ, ಸಮಯವೂ, ಸಮಯಗಳೂ, ಅರ್ಧ ಸಮಯವೂ, ಇವುಗಳ ಪರ್ಯಂತರ
ಹಾವಿನ ಮುಖಕ್ಕೆ ದೂರವಾಗಿ ಪೋಷಿಸಲ್ಪಡ ತಕ್ಕ, ಅರಣ್ಯದಲ್ಲಿರುವ, ಅವಳ ಸ್ಥಳಕ್ಕೆ ಹಾರುವ ಹಾಗೆ,
೧೫ [5]ದೊಡ್ಡ ಹದ್ದಿನ ಎರಡು ರೆಕ್ಕೆಗಳು ಸ್ತ್ರೀಗೆ ಕೊಡಲ್ಪಟ್ಟವು. ಮತ್ತು ಹಾವು, ಇವಳನ್ನು [6]ಬಡುಕೊಂಡು
೧೬ ಹೋಗ ಮಾಡುವದಕ್ಕೆ, ತನ್ನ ಬಾಯಿಯಿಂದ ನದಿಯಂತೆ ನೀರನ್ನು ಸ್ತ್ರೀಯ ಹಿಂದೆ ಕಾರಿತು. ಮತ್ತು
ಭೂಮಿಯು ಸ್ತ್ರೀಗೆ ಸಹಾಯ ಮಾಡಿತು; ಮತ್ತು ಭೂಮಿಯು ತನ್ನ ಬಾಯಿಯನ್ನು ತೆರೆದು, ಗಡಸರ್ಪವು
೧೭ ತನ್ನ ಬಾಯಿಯೊಳಗಿಂದ ಕಾರಿದ ನದಿಯನ್ನು ಕುಡಿದು ಬಿಟ್ಟಿತು. ಮತ್ತು ಗಡಸರ್ಪವು ಸ್ತ್ರೀಯ ಮೇಲೆ
ಕೋಪ ಮಾಡಿ, ದೇವರ ಕಟ್ಟಳೆಗಳನ್ನು ಕೈಕೊಂಡು, ಯೇಸು ಕ್ರಿಸ್ತನ ಸಾಕ್ಷಿ ಉಂಟಾದವರಾದ ಅವಳ
[7]ಬೀಜದಲ್ಲಿ ಉಳಿದವರ ಸಂಗಡ ಯುದ್ಧ ಮಾಡುವದಕ್ಕೆ ಹೊರಟಿತು.

1. ದೇವಭಕ್ತರು ತಮ್ಮನ್ನು ಆಳಿ ಕೊಂಡ ಕರ್ತನನ್ನು ತಮ್ಮ ಪ್ರಾಣಕ್ಕಿಂತ ಹೆಚ್ಚಾಗಿ ಸ್ನೇಹಿಸುವರು.

2. ತಮ್ಮ ಮೇಲೆ ಅಪರಾಧ ಹೊರಿಸಿದ ಸೈತಾನನನ್ನು ಸಹೋದರರು ಕುರಿಮರಿಯ ರಕ್ತದಿಂದಲೂ (೭. ೧೪.) ತಮ್ಮ ಸಾಕ್ಷಿಯ ವಾಕ್ಯದಿಂದಲೂ ಜಯಿಸಿದರು. ಕುರಿಮರಿಯ ರಕ್ತದಿಂದ ಹೃದಯಶುದ್ಧಿಯೂ ಸಾಕ್ಷಿಯ ವಾಕ್ಯದಿಂದ ಸಕಲ ಹಂಗುಗಳನ್ನು ಈಡೇರಿಸ ತಕ್ಕ ಶಕ್ತಿಯೂ ಉಂಟಾಗಿರುವಾಗ ಶತ್ರುವಾದ ಪಿಶಾಚನನ್ನು ಜಯಿಸುವದು ಸುಲಭವೇ.

3. ಇನ್ನು ಸ್ವಲ್ಪ ಕಾಲ ಮಾತ್ರವೇ ತರುವಾಯ ಸೈತಾನನು ನಾಶ ಹೊಂದುವನು. ಅವನ ಆರ್ಭಟವೂ, ಅವನಿಂದ ಬರುವ ಉಪದ್ರವೂ ಸಲ್ಲುವ ಕಾಲ ಕ್ಲುಪ್ತವೇ ಹೊರ್ತು ದೀರ್ಘವಾದದ್ದಲ್ಲ. ಭಕ್ತರಿಗುಂಟಾಗುವ ಮಹದಾನಂದಕ್ಕೆ ತಕ್ಕ ನಿತ್ಯ ಕಾಲದೊಂದಿಗೆ ಈ ಕಾಲವನ್ನು ಸರಿ ನೋಡಿದರೆ, ಬಹಳ ಅಲ್ಪ ಕಾಲವೇ ಸರಿ.

4. ರೋಮ ರಾಜ್ಯದಲ್ಲಿ ಅಜ್ಞಾನಮಾರ್ಗದ ಬಲ ಕುಗ್ಗಿ ಹೋದಾಗ್ಯೂ, ಅದರಿಂದ ಕ್ರಿಸ್ತನ ಸಭೆಗೆ ಉಪದ್ರ ಪೂರ್ಣವಾಗಿ ನಿವರ್ತಿಯಾಗಲಿಲ್ಲ. ಹೊರಗಿನ ಶತ್ರುಗಳಾದ ಅಜ್ಞಾನ ಅರಸರಿಂದ ಉಪದ್ರವೂ, ಒಳಗಿನ ಶತ್ರುಗಳಾದ ವೇದಭ್ರಷ್ಟರಿಂದ ನಾನಾ ವಿಘ್ನಗಳೂ ಸಂಭವಿಸಿದವು.

5. ಹದ್ದಿನ ಎರಡು ರೆಕ್ಕೆಗಳು ಎಂಬುವದು, ಬಲವನ್ನೂ ವೇಗವನ್ನೂ ಕುರಿತದ್ದು. ಯೆಹೂದ್ಯ ಸಭೆಯು ಐಗುಪ್ತದ ಅರಸನಾದ ಫರೋನನಿಗೆ ತಪ್ಪಿಸಿ ಕೊಂಡಾಗ, ದೇವರು ಅದನ್ನು ಹದ್ದಿನ ರೆಕ್ಕೆಗಳ ಮೇಲೆ ಹೊತ್ತು ಕೊಂಡು ಹೋದಂತೆ ಹೇಳಿ ಇದೆ. (ಹೊರ. ೧೯. ೪. ದ್ವಿತೀಯ ನ್ಯಾ. ೩೨. ೧೧, ೧೨.) ಉಪದ್ರದಲ್ಲಿದ್ದ ಸಭೆಯನ್ನು ಕ್ರಿಸ್ತನು ಹದ್ದಿನ ರೆಕ್ಕೆಗಳ ಮೇಲೆ ಹೊರುವ ಪ್ರಕಾರ, ಬಲವಾಗಿಯೂ ವೇಗವಾಗಿಯೂ ಹೊತ್ತು ಕೊಂಡು ಹೋಗಿ ಅರಣ್ಯದಲ್ಲಿ ಶೇರಿಸಿ, ಅದಕ್ಕೆ ವಿಘ್ನವೇನೂ ಬಾರದಂತೆ ಕಾಪಾಡಿದನು. ಅಜ್ಞಾನರಾದ ಅರಸರಿಂದಲೂ ವೇದಭ್ರಷ್ಟರಿಂದಲೂ ಅದಕ್ಕೆ ವಿಘ್ನವು ಸಂಭವಿಸಿದಾಗ್ಯೂ, ಮಹಾ ತಿಯೊಡೋಷಿಯಸ್ ಮುಂತಾದ ಕ್ರೈಸ್ತರಾದ ಅರಸುಗಳಿಂದ ಅದಕ್ಕೆ ಪೂರ್ಣ ಶ್ಲಾಘ್ಯವೂ ಸ್ವಾಧೀನವೂ ಉಂಟಾಗಿತ್ತು.

6. ಪ್ರವಾಹವನ್ನೂ ನದಿಯನ್ನೂ ವೇದದಲ್ಲಿ ಶತ್ರುಗಳ ಸೈನ್ಯಕ್ಕೆ ಉಪಮಾನವಾಗಿ ಹೇಳಿ ಇದೆ. (ಕೀರ್ತ. ೧೨೪. ೨—೬. ಯೆಶಾ. ೮. ೭; ೫೯. ೧೯.) ಅದೇ ಪ್ರಕಾರ ನಾಲ್ಕನೇ ಐದನೇ ಶತಾಬ್ದಗಳಲ್ಲಿ ಗಾತ್ಸ್, ಹನ್‌ಸ್, ವಾಂಡಲ್‌ಸ್ ಮುಂತಾದ ಉತ್ತರ ದಿಕ್ಕಿನ ಮ್ಲೇಚ್ಛ ಜಾತಿಯವರು ರೋಮ ರಾಜ್ಯದಲ್ಲಿ ಪ್ರವಾಹದಂತೆ ಹರಿದು ಬಂದು, ಅದನ್ನು ಸ್ವತಂತ್ರಿಸಿ ಕೊಂಡರು. ಅವರಲ್ಲಿ ಕೆಲವರು ವೇದಭ್ರಷ್ಟರಾಗಿಯೂ, ಹಲವರು ಅಜ್ಞಾನರಾಗಿಯೂ ಇದ್ದರು. ಹೀಗೆ ವೇದಭ್ರಷ್ಟರ ದುರ್ಬೋಧನೆ ಅಜ್ಞಾನರ ದುರ್ಬೋಧನೆಗಳೆಂಬ ದೊಡ್ಡ ಪ್ರವಾಹದಲ್ಲಿ ಪಿಶಾಚನು ಸಭೆಯನ್ನು ಮುಣುಗಿಸ ಪ್ರಯಾಸ ಪಟ್ಟನು. ಆದಾಗ್ಯೂ ರೋಮ ರಾಜ್ಯವೆಂಬ ಭೂಮಿಯಿಂದ ಸಭೆಗೆ ಸಹಾಯವಾಯಿತು. ಮೇಲೆ ಹೇಳಿದ ಮ್ಲೇಚ್ಛ ಜಾತಿಯವರಲ್ಲಿ ಅನೇಕರು ಕ್ರಿಸ್ತನ ಮಾರ್ಗವನ್ನು ಅಂಗೀಕರಿಸಿದ್ದರಿಂದ ಸಭೆಗೆ ಅನುಕೂಲವಾಯಿತು.

7. ಗಡಸರ್ಪವು ಸ್ತ್ರೀಯ ಮೇಲೆ ಕೋಪ ಮಾಡಿ ಅವಳ ಸಂತತಿಯ ಸಂಗಡ ಯುದ್ಧ ಮಾಡಿತು. ಅನೇಕ ಯುದ್ಧಗಳಲ್ಲಿ ಅಪಜಯ ಪಟ್ಟಾಗ್ಯೂ, ಅವನು ದಣಿದು ಹೋಗದೆ, ಇನ್ನೂ ಯುದ್ಧ ಮಾಡ ಹೋದನು. ಅದನ್ನು ಕುರಿತು ಮುಂದಿನ ಸಂಧಿಯಲ್ಲಿ ವಿವರವಾಗಿ ಹೇಳಿ ಇದೆ. ಸೂರ್ಯನನ್ನು ಹೊದ್ದು ಕೊಂಡು ಕೂಸನ್ನು ಹೆತ್ತ ಸ್ತ್ರೀ ಎಂಬುವದು ಸುಖ ಸ್ಥಿತಿಯಲ್ಲಿದ್ದ ಸಭೆಯನ್ನು ಸೂಚಿಸುವ ಪ್ರಕಾರ, ಅರಣ್ಯದಲ್ಲಿ ತಾನೂ ತನ್ನ ಸಂತತಿಯೂ ಬಚ್ಚಿಟ್ಟು ಕೊಂಡಿದ್ದ ಸ್ತ್ರೀ ಎಂಬುವದು ಕಷ್ಟವಾದ ಸ್ಥಿತಿಯಲ್ಲಿದ್ದ ಸಭೆಯನ್ನು ಸೂಚಿಸುತ್ತದೆ. ಸ್ತ್ರೀಯ ಸಂಗಡ ಯುದ್ಧ ಮಾಡಿ ಸೋತು ಹೋದ ಗಡಸರ್ಪವು, ಉಳಿದ ಅವಳ ಸಂತತಿಯ ಸಂಗಡ ಯುದ್ಧ ಮಾಡ ಹೋಯಿತು. ಅವರು ಸಹ ದೇವರ ಕಟ್ಟಳೆಗಳನ್ನು ಕೈಕೊಳ್ಳುವವರೂ, ಯೇಸು ಕ್ರಿಸ್ತನನ್ನು

### ಗಡಸರ್ಪಕ್ಕೆ ಶೇರಿದ ಎರಡು ಮೃಗಗಳನ್ನು ಕುರಿತ ದರ್ಶನವು.

**13.** [1]ಆಗ ಸಮುದ್ರದ ಮರಳಿನ ಮೇಲೆ [2]ನಿಂತು, ಏಳು ತಲೆಗಳೂ, ಹತ್ತು ಕೊಂಬುಗಳೂ, ತನ್ನ ಕೊಂಬು
ಗಳ ಮೇಲೆ ಹತ್ತು ಕಿರೀಟಗಳೂ, ತನ್ನ ತಲೆಗಳ ಮೇಲೆ [3]ದೂಷಣೆಯ ಹೆಸರೂ ಉಳ್ಳ [4]ಮೃಗವು ಸಮುದ್ರ
೨ ದೊಳಗಿಂದ ಏರಿ ಬರುವದನ್ನು ಕಂಡೆನು. ನಾನು ಕಂಡ ಮೃಗವು [5]ಚಿರತೆಗೆ ಸಮಾನವಾಗಿತ್ತು. ಅದರ
ಕಾಲುಗಳು ಕರಡಿಯ ಕಾಲುಗಳ ಹಾಗೆಯೂ, ಅದರ ಬಾಯಿ ಸಿಂಹದ ಬಾಯಿಯ ಹಾಗೆಯೂ, ಇದ್ದ
ವು; ಅದಕ್ಕೆ ಗಡಸರ್ಪವು ತನ್ನ ಬಲವನ್ನೂ, ಸಿಂಹಾಸನವನ್ನೂ, ಮಹಾ ಅಧಿಕಾರವನ್ನೂ, ಕೊಟ್ಟಿತು.
೩ ಮತ್ತು [6]ಮರಣಘಾಯವಾದ ಹಾಗೆ, ಅದರ ತಲೆಗಳಲ್ಲಿ ಒಂದನ್ನು ಕಂಡೆನು. ಮತ್ತು ಮರಣಕರವಾದ
ಆದರ ಘಾಯವು ವಾಶಿಯಾಯಿತು. ಆಗ ಸಮಸ್ತ ಭೂಮಿಯು ಆ [7]ಮೃಗದ ಹಿಂದೆ ಆಶ್ಚರ್ಯ ಪಟ್ಟಿತು.

ಕುರಿತ ಸಾಕ್ಷಿ ಉಂಟಾದವರೂ ಆದ ಉತ್ತಮ ಭಕ್ತರೇ. ಸರ್ವ ತ್ರಾಣಿಯಾದ ದೇವರನ್ನು ಹೊಂದಿ ಕೊಂಡಿರುವ ಆತನ ದಾಸರ ಸಂಗಡ ಯುದ್ಧ ಮಾಡುವವರು ನಾಶ ಹೊಂದುವರೇ ಹೊರ್ತು ಜಯಿಸಲಾರರು.

1. ೧೨ನೇ ಸಂಧಿಯ ಕಡೇ ವಚನದಲ್ಲಿ ಗಡಸರ್ಪವಾದ ಪಿಶಾಚನು ಕ್ರೈಸ್ತವ ಭಕ್ತರ ಸಂಗಡ ಯುದ್ಧ ಮಾಡ ಹೋದ ನೆಂದು ಹೇಳಿ ಇದೆ. ಆ ತೀರ್ಮಾನವನ್ನು ಪೂರೈಸುವದಕ್ಕಾಗಿ ಅವನು ಮಾಡಿದ ಪ್ರಯತ್ನಗಳನ್ನು ಈ ಸಂಧಿಯಲ್ಲಿ ಹೇಳಿ ಇದೆ. ಅಧಿಕಾರಚಿನ್ಹೆಗಳನ್ನೂ ದೇವದೂಷಣೆಗೆ ಹೇತುವೆಯಾದ ಅಹಂ ಕಾರವಾದ ಹೆಸರುಗಳನ್ನೂ ಧರಿಸಿದ್ದ ಒಂದು ಮೃಗವು ಸಮುದ್ರ ದಿಂದ ಏರಿ ಬಂತು. (೧೩. ೧.) ಮೂರ್ಖ ಗುಣವುಳ್ಳ ಆ ಮೃಗವು ಮರಣಕ್ಕೆ ಹೇತುವೆಯಾದ ಘಾಯ ಹೊಂದಿದ್ದಾಗ್ಯೂ, ಆ ಘಾಯ ವಾಶಿಯಾದ ತರುವಾಯ, ಗಡಸರ್ಪದಿಂದ ಅದಕ್ಕೆ ಕೊಡಲ್ಪಟ್ಟ ಬಲದಿಂದ ವಿಸ್ತಾರವಾದ ಒಂದು ರಾಜ್ಯವನ್ನು ತನಗೆ ಸಂಪಾದಿಸಿ ಕೊಂಡಿತು. (೨—೪. ವ.) ಅದರ ಆರ್ಭಟವೂ ಅಹಂಕಾರವೂ ನಡೆಯುತ್ತಿದ್ದ ಕಾಲದಲ್ಲಿ ಅದು ದೇವದಾಸರನ್ನು ತಗ್ಗಿಸಿ, ಕ್ರಿಸ್ತನ ಉತ್ತಮ ದಾಸರ ಹೊರ್ತು ಉಳಿದ ಜಾತಿಗಳವರನ್ನೆಲ್ಲಾ ತನ್ನ ಅಧಿಕಾರಕ್ಕೊಳಪಡಿಸಿತು. (೫—೮. ವ.) ಕ್ರಿಸ್ತನ ಭಕ್ತರು ಮೃ ಗದ ಅಹಂಕಾರಕ್ಕೆ ಅಂತ್ಯವೂ ದಂಡನೆಯೂ ಬರುವದೆಂಬ ದೃಢ ನಂಬಿಕೆಯಿಂದ, ತಾಳ್ಮೆಯೂ ನಂಬಿಕೆಯೂ ಉಳ್ಳವರಾಗಿದ್ದರು. (೯, ೧೦. ವ.) ಅದರ ತರುವಾಯ ಇನ್ನೊಂದು ಶತ್ರುವಾದ ಮೃ ಗವು ಭೂಮಿಯೊಳಗಿಂದ ಏರಿ ಬಂದು, ಕ್ರೂರ ಹಗೆಯನ್ನು ಮನ ಸ್ಸಿನಲ್ಲಿಟ್ಟು ಕೊಂಡು, ಮಹಾ ಶಾಂತವುಳ್ಳ ಜೀವಿಯ ಹಾಗೆ ತೋ ರಿಸಿತು. (೧೧. ವ.) ಅದು ಮೊದಲನೇ ಮೃಗಕ್ಕೆ ಒಳಪಟ್ಟದ್ದಾಗಿ ಅದನ್ನು ನಿಲ್ಲಿಸುವದಕ್ಕಾಗಿ ಸುಳ್ಳಾದ ಅದ್ಭುತಗಳನ್ನು ಮಾಡಿ, ಅದು ಸಹ ಮತ್ತೊಬ್ಬರ ಮೇಲೆ ಅಧಿಕಾರ ಸಲ್ಲಿಸುವದಾಗಿತ್ತು. (೧೨—೧೮. ವ.) ಮುಂಚಿನ ದರ್ಶನದಲ್ಲಿದ್ದ ಪ್ರಕಾರ ಈ ದರ್ಶ ನದಲ್ಲಿಯೂ ವಿವೇಕದಿಂದಲೂ ಜ್ಞಾನದಿಂದಲೂ ನಡಿಯ ತಕ್ಕ ಬುದ್ಧಿಬೋಧನೆಗಳುಂಟು. (೧೮. ವ.) ಇದರ ತರುವಾಯ ೧೪ನೇ ಸಂಧಿಯಲ್ಲಿರುವ ಪ್ರಕಾರ ಆದರಣೆಯೂ ಆನಂದವೂ ಆದ ಒಂದು ದರ್ಶನವಾಗುತ್ತದೆ. ಅದರಲ್ಲಿ ಕ್ರಿಸ್ತನ ಭಕ್ತರಾದ ಲಕ್ಷಾ ನಾಲ್ವತ್ತು ನಾಲ್ಕು ಸಾವಿರ ಮಂದಿ ತಮ್ಮ ಕರ್ತನ ಸಂಗಡ ಮಹದಾನಂದ ವನ್ನು ಅನುಭವಿಸುತ್ತಾ, ಯಾರೂ ಹಾಡಲಾರದ ಕುರಿಮರಿಯ ಹೊಸ ಹಾಡನ್ನು ಹಾಡುವವರಾಗಿ ಕಾಣಿಸುತ್ತಾರೆ. (೧೪. ೧—೫.)

2. ನಿಂತು ಎಂಬುವದಕ್ಕೆ ಕೆಲ ಪೂರ್ವ ಕೈಬರಹದ ಪ್ರತಿಗಳಲ್ಲಿ ನಿಂತಿತು ಎಂಬದಾಗಿ ಉಂಟು. ಹಾಗಿದ್ದರೆ, ಗಡಸರ್ಪವು ನಿಂತಿತು ಎಂಬ ಅರ್ಥವಾಗುತ್ತದೆ. ಕೇಡನ್ನು ಪ್ರೀತಿ ಮಾಡುವ ಗಡಸರ್ಪವು ತನ್ನಂತೆ ಕೇಡಿಗರು ಯಾವಾಗ ಬರುವರೋ ಎಂದು ಆಶೆಯಿಂದ ನೋಡುತ್ತಿದ್ದ ಹಾಗೆ ಕಾಣುತ್ತದೆ.

3. ಆ ಕೆಟ್ಟ ಮೃಗಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಅಲ್ಲದೆ, ಆ ಕೊಂಬುಗಳ ಮೇಲೆ ಹತ್ತು ಕಿರೀಟಗಳೂ, ಅದರ ತಲೆಯ ಮೇಲೆ ದೂಷಣೆಯ ಹೆಸರೂ, ಇದ್ದವು. ದೂಷಣೆಯ ಹೆಸರು ಅಂದರೆ, ದೇವರ ಮಹತ್ವವೂ ಮಹಿಮೆಯೂ ತನಗೆ ಸ್ವಂ ತವೆಂದು ಹೆಚ್ಚಳ ಪಡುವ ಮಿತಿ ಮಿಾರಿದ ಗರ್ವವನ್ನು ಸೂಚಿಸು ತ್ತದೆ. (೬. ವ.)

4. ಇದು ಕಾಡುಮೃಗವನ್ನು ಕುರಿತದ್ದು. ದಾನಿಯೇಲನು ಒಂದು ದರ್ಶನದಲ್ಲಿ ಕಂಡ ಮೂರು ಮೃಗಗಳು ಒಂದೇ ಮೃಗ ವಾಗಿ, ಮಹಾ ವೇಗವೂ ಮೂರ್ಖವೂ ಕ್ರೂರವೂ ಉಳ್ಳ ಒಂದು ಕೆಟ್ಟ ಮೃಗದ ಹಾಗೆ ಕಾಣಲ್ಪಟ್ಟಿತು. (ದಾನಿ. ೭. ೨—೮.)

5. ದಾನಿಯೇಲನು ಕಂಡ ನಾಲ್ಕನೇ ಮೃಗದ ಹಾಗೆ ಈ ಕ್ರೂರ ಮೃಗಕ್ಕೂ ಹೆಸರಿಲ್ಲ. ಆದಾಗ್ಯೂ ಅವನು ಕಂಡ ಮೂರು ಮೃ ಗಗಳ ಗುಣಗಳು ಇದಕ್ಕೆ ಇದ್ದವು. ಗ್ರೇಕ ರಾಜ್ಯಕ್ಕೆ ಗುರುತಾ ಗಿದ್ದ ಮೂರನೇ ಮೃಗವಾದ ಚಿರತೆಯ ಶರೀರವೂ, ಪಾರ್ಸ್ಯ ರಾ ಜ್ಯಕ್ಕೆ ಗುರುತಾಗಿದ್ದ ಎರಡನೇ ಮೃಗವಾದ ಕರಡಿಯ ಕಾಲು ಗಳೂ, ಬಾಬೆಲ್ ರಾಜ್ಯಕ್ಕೆ ಗುರುತಾಗಿದ್ದ ಮೊದಲನೇ ಮೃಗವಾದ ಸಿಂಹದ ಬಾಯಿಯೂ, ಇದಕ್ಕುಂಟಾಗಿದ್ದದರಿಂದ, ಇದು ರೋಮು ರಾಜ್ಯಕ್ಕೆ ಗುರುತಾಗಿದ್ದ ನಾಲ್ಕನೇ ಮೃಗವಾದ ಭಯಂಕರವಾದ ಮೃಗಕ್ಕೆ ಸಮಾನವಾದದ್ದೆಂದು ತೀರ್ಮಾನಿಸ ಬಹುದು. ಗಡ ಸರ್ಪವಾದ ಪಿಶಾಚನು, ಬಾಬೆಲು, ಪಾರ್ಸ್ಯ, ಗ್ರೇಕ ರಾಜ್ಯಗಳ ಸಹಾಯದಿಂದ ದೇವರ ಸಭೆಯನ್ನು ಉಪದ್ರ ಪಡಿಸಿದ ಪ್ರಕಾರ, ರೋಮು ರಾಜ್ಯದಿಂದಲೂ ಅದನ್ನು ಉಪದ್ರ ಪಡಿಸಿತು.

6. ಈ ಘಾಯವು ಮಹಾ ಕೊನ್‌ಸ್ತಂತೀನ್ ಅರಸನಿಂದ ಉಂ ಟಾಯಿತು. ಅವನು ಕ್ರಿಸ್ತನ ಸಭೆಯನ್ನು ಹಿಂಸಿಸಿದ ಅಜ್ಞಾನ ಅರಸರನ್ನು ಜಯಿಸಿ, ಸತ್ಯ ಮಾರ್ಗವನ್ನು ಅಭಿವೃದ್ಧಿ ಮಾಡಿದ್ದ ರಿಂದ ಮೃಗದ ತಲೆಗಳಲ್ಲಿ ಒಂದಕ್ಕೆ ಮರಣಕರವಾದ ಘಾಯ ವಾದ ಹಾಗಾಯಿತು. ಆದಾಗ್ಯೂ ಆ ಘಾಯವು ವಾಶಿಯಾದ ಹಾಗೆ, ತನ್ನ ಮಹಿಮೆಯನ್ನೆಲ್ಲಾ ಕಳಕೊಂಡಿದ್ದ ರೋಮು ರಾಜ್ಯಕ್ಕೆ ಪೋಪನ ಮಾರ್ಗದಿಂದ ತಿರಿಗಿ ಮಹಿಮೆ ಉಂಟಾಯಿತೆಂದು ಹೇಳ ಬಹುದು.

7. ಮುಂಚಿನ ದರ್ಶನಗಳಲ್ಲಿ ಭಕ್ತರ ಮೇಲೆ ಶತ್ರುಗಳಿಗುಂ ಟಾದ ಜಯವು ಸ್ವಲ್ಪ ಕಾಲ ಮಾತ್ರವಿತ್ತೆಂದು ಕಾಣುತ್ತದೆ. ಈ



೪ ಮತ್ತು ಮೃಗಕ್ಕೆ ಅಧಿಕಾರವನ್ನು ಕೊಟ್ಟ ಗಡಸರ್ಪಕ್ಕೆ ನಮಸ್ಕರಿಸಿದರು; ಮತ್ತು ಮೃಗಕ್ಕೆ ಸಹ ನಮಸ್ಕ
ರಿಸಿ—ಮೃಗಕ್ಕೆ ಸಮಾನವಾದವನು ಯಾರು? [1]ಅದರ ಸಂಗಡ ಯುದ್ಧ ಮಾಡ ಶಕ್ತನು ಯಾರು? ಅಂದರು.
೫ ಮತ್ತು ದೊಡ್ಡ ಮಾತುಗಳನ್ನೂ [2]ದೂಷಣೆಗಳನ್ನೂ ಆಡುವ ಬಾಯಿ ಅದಕ್ಕೆ ಕೊಡಲ್ಪಟ್ಟಿತು; ಮತ್ತು
೬ [3]ನಾಲ್ವತ್ತೆರಡು ತಿಂಗಳು ನಡಿಸುವ ಅಧಿಕಾರವು ಅದಕ್ಕೆ ಕೊಡಲ್ಪಟ್ಟಿತು. ಆಗ ಅದು, ದೇವರ ಹೆಸರನ್ನೂ
ಅವನ ಗುಡಾರವನ್ನೂ, ಪರಲೋಕದಲ್ಲಿ ವಾಸವಾಗಿರುವವರನ್ನೂ, ದೂಷಿಸುವದಕ್ಕೆ, ದೇವರಿಗೆ ವಿರೋಧ
೭ ವಾದ ದೂಷಣೆಗೆ ತನ್ನ ಬಾಯಿಯನ್ನು ತೆರೆಯಿತು. ಮತ್ತು ಪರಿಶುದ್ಧರ ಸಂಗಡ ಯುದ್ಧ ಮಾಡುವ
ದಕ್ಕೂ, ಅವರನ್ನು ಜಯಿಸುವದಕ್ಕೂ, [4]ಅದಕ್ಕೆ ಕೊಡಲ್ಪಟ್ಟಿತು; ಮತ್ತು ಸಕಲ ಕುಲ, ಭಾಷೆ, ಜನಾಂಗಗಳ
೮ ಮೇಲೆ ಅಧಿಕಾರವು ಅದಕ್ಕೆ ಕೊಡಲ್ಪಟ್ಟಿತು. ಮತ್ತು [5]ಜಗದುತ್ಪತ್ತಿ ಮೊದಲುಗೊಂಡು ಕೊಲ್ಲಲ್ಪಟ್ಟ ಕುರಿ
ಮರಿಯ ಜೀವದ ಪುಸ್ತಕದಲ್ಲಿ [6]ಹೆಸರಾಗಿ ಬರೆಯಲ್ಪಡದ ಭೂನಿವಾಸಿಗಳೆಲ್ಲರು ಅದಕ್ಕೆ ನಮಸ್ಕರಿಸುವರು.
೯,೧೦ [7]ಕಿವಿಯುಳ್ಳವನು ಯಾವನೋ, ಅವನು ಕೇಳಲಿ. ಯಾವನಾದರೂ ಶೆರೆ ಹಿಡಿದರೆ, ಶೆರೆಯಲ್ಲಿ ಬೀ
ಳುವನು; ಯಾವನಾದರೂ ಕತ್ತಿಯಿಂದ ಕೊಂದರೆ, ಅವನು ಕತ್ತಿಯಿಂದ ಕೊಲ್ಲಲ್ಪಡ ಬೇಕು; (ಯೆರೆ. ೧೫.
೨.) [8]ಇದರಲ್ಲಿ ಪರಿಶುದ್ಧರ ತಾಳ್ಮೆಯೂ ವಿಶ್ವಾಸವೂ ಉಂಟು.
೧೧ ಆಗ ಭೂಮಿಯೊಳಗಿಂದ ಏರಿ ಬರುವ [9]ಬೇರೆ ಮೃಗವನ್ನು ಕಂಡೆನು. ಅದಕ್ಕೆ ಟಗರಿಗೆ ಸಮಾನವಾದ

ದರ್ಶನದಲ್ಲಿ ಅವರ ಜಯವು ಲೋಕದಲ್ಲೆಲ್ಲಾ ಹಬ್ಬಿತೆಂದು ಹೇಳಿ ಇದೆ. (೪, ೮. ವ.) ಮನಸ್ಸಾರ ಶತ್ರುಗಳ ಅಧಿಕಾರಕ್ಕೊಳ ಪಟ್ಟವರು ತಮಗೆ ತಾವೇ ನಾಶನವನ್ನು ಬರ ಮಾಡಿ ಕೊಳ್ಳು ತ್ತಾರೆ.

1. ಗಡಸರ್ಪಕ್ಕೂ ಮೃಗಕ್ಕೂ ಯಾರೂ ಎದುರಿಸ ಕೂಡದ ಬಲವುಂಟೆಂದು ನೆನಸಿ, ಎಲ್ಲರೂ ಅವುಗಳನ್ನು ನಮಸ್ಕರಿಸಿದರು. ಅಜ್ಞಾನರ ದೇವತೆಗಳಿಗೆ ಮಾಡಿದ ಆರಾಧನೆಯನ್ನು ಸತ್ತು ಹೋದ ಮನುಷ್ಯರಿಗೆ ಮಾಡಿದರು. ೬೦೮ನೇ ವರುಷದಲ್ಲಿ ಕನ್ಯಮರಿ ಯಳು ಮುಂತಾದ ಅರ್ಚಶಿಷ್ಟರನ್ನು ಆರಾಧಿಸ ಬಹುದೆಂಬ ಅಭಿ ಪ್ರಾಯವನ್ನು ಪ್ರಸಿದ್ಧ ಮಾಡಿದರು. ಹೀಗೆ ಗಡಸರ್ಪವನ್ನೂ ಮೃಗವನ್ನೂ ಎಲ್ಲರೂ ಆರಾಧಿಸಿದರೆಂದು ಹೇಳ ಬಹುದು.

2. ದೇವರಿಗೂ ಪರಲೋಕಕ್ಕೂ ಪರಲೋಕವಾಸಿಗಳಿಗೂ ವಿರೋಧವಾಗಿ ಮಾತಾಡಿದ್ದೇ ಈ ದೂಷಣೆಗಳು. (೬. ವ.) ರೋ ಮಾ ಸಭೆಯು ಬೇರೆ ಎಲ್ಲಾ ಸಭೆಗಳಿಗಿಂತ ಶ್ರೇಷ್ಠ ಸಭೆ ಎಂದೂ, ಮಾತು ತಪ್ಪದ ಸತ್ಯ ಸಭೆ ಎಂದೂ, ಲೋಕದ ಅರಸರನ್ನು ತಳ್ಳ ಲೂ ನೇಮಿಸಲೂ ತಕ್ಕ ಅಧಿಕಾರವುಳ್ಳ ಸಭೆ ಎಂದೂ, ಹೆಚ್ಚಳ ಪಡುವದು ಸಮಸ್ತರಿಗೂ ತಿಳಿದ ಸಂಗತಿಯಾಗಿದೆ.

3. ೧೨. ೬. ವಚನದ ವ್ಯಾಖ್ಯಾನ ನೋಡ ಬೇಕು.

4. ಇದು ದೇವರ ಚಿತ್ತದ ಪ್ರಕಾರ ಮೃಗಕ್ಕೆ ಉಂಟಾದ ಅಧಿ ಕಾರವನ್ನು ಕುರಿತದ್ದು. (ರೋಮಾ. ೧. ೨೪. ೨ ಥೆಸ್ಸ. ೨. ೧೨.) ಈ ಮೃಗವನ್ನು ಕುರಿತೂ, ದಾನಿಯೇಲನ ಪ್ರವಾದನೆಯಲ್ಲಿರುವ ಸಣ್ಣ ಕೊಂಬನ್ನು ಕುರಿತೂ ಹೇಳಿದ ಗುರುತುಗಳು ಒಂದೇ ಪ್ರ ಕಾರವಾಗಿವೆ. ಆ ಕೊಂಬಿಗೆ ದೊಡ್ಡವುಗಳನ್ನು ಮಾತಾಡ ತಕ್ಕ ಬಾಯಿಯೂ, ಪರಿಶುದ್ಧರ ಸಂಗಡ ಕಾಲವೂ, ಕಾಲಗಳೂ, ಅರ್ಧ ಕಾಲವೂ ಯುದ್ಧ ಮಾಡಿ ಜಯಿಸ ತಕ್ಕ ಅಧಿಕಾರವೂ ಇದ್ದಂತೆ (ದಾನಿ. ೭. ೨೧, ೨೫.) ಈ ಮೃಗಕ್ಕೂ ಇತ್ತೆಂದು ಕಾಣುತ್ತದೆ. ಆದದರಿಂದ ಈ ಎರಡೂ ಒಂದೇ ವಿಷಯವನ್ನು ಕುರಿತದ್ದೆಂದು ಪ್ರತ್ಯಕ್ಷವಾಗಿ ತೋರುತ್ತದೆ.

5. ೧೭. ೮ಲ್ಲಿ, ಜೀವದ ಪುಸ್ತಕದಲ್ಲಿ ಜಗದುತ್ಪತ್ತಿ ಮೊದಲು ಗೊಂಡು ಹೆಸರು ಬರೆಯಲ್ಪಡದವರೆಂದು ಹೇಳಿ ಇದೆ. ಜಗದು ತ್ಪತ್ತಿಯಿಂದ ದೇವರ ಅನಾದಿ ಆಲೋಚನೆಯ ಪ್ರಕಾರ ಹೊಡೆಯ ಲ್ಪಟ್ಟ ಕುರಿಮರಿಯಾದ (೧ ಪೇತ್ರ. ೧. ೨೦.) ಕ್ರಿಸ್ತನ ರಕ್ತದ ಪುಣ್ಯವನ್ನು ನಂಬದವರು ಆತನ ಜೀವದ ಪುಸ್ತಕದಲ್ಲಿ ಹೆಸರು ಬರೆಯಲ್ಪಡದವರಾಗಿದ್ಧಾರೆ.

6. ತಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿದ ಕ್ರಿಸ್ತನ ಪುಣ್ಯ ವನ್ನು ಅನುಸರಿಸಿ ಆತನ ಅನ್ಯೋನ್ಯದಲ್ಲಿರುವ ಉತ್ತಮ ಭಕ್ತರೇ ಹೊರ್ತು, ಮಿಕ್ಕಾದವರು ಆ ಮೃಗದ ಮೋಸಕ್ಕೆ ತಪ್ಪಿಸಿ ಕೊಳ್ಳ ಲಾರರು.

7. (೨. ೭. ಮತ್ತಾ. ೧೧. ೧೫. ವಚನಗಳ ವ್ಯಾಖ್ಯಾನ ನೋಡ ಬೇಕು.) ಮೃಗದ ಕ್ರೂರ ವಂಚನೆಗೆ ತೊಲಗಿರ ಬೇಕೆಂದು ಹೇಳಿದ ಎಚ್ಚರಿಕೆಯನ್ನು ಕಿವಿಯಾರ ಕೇಳಿ ಮನಸ್ಸಿನಲ್ಲಿ ಒಪ್ಪಿ ಕೊಳ್ಳದವರು ವಿಘ್ನಕ್ಕೆ ತಪ್ಪುವದಿಲ್ಲ.

8. ಮೃಗದ ಅಧಿಕಾರವು ನಡೆಯುವ ಕಾಲದಲ್ಲಿ ಪರಿಶುದ್ಧ ವಂತರಾದ ಭಕ್ತರ ವಿಶ್ವಾಸವೂ ತಾಳ್ಮೆಯೂ ಬಹಳವಾಗಿ ಶೋಧಿ ಸಲ್ಪಡುವವು. ಆದಾಗ್ಯೂ ಅವರು ಆ ಶೋಧನೆಗಳನ್ನು ಕಡೇ ಮಟ್ಟಿಗೂ ತಾಳಿ ಕೊಂಡು ತಮ್ಮ ವಿಶ್ವಾಸ ತಾಳ್ಮೆಗಳನ್ನು ಕಾದು ಕೊಳ್ಳುವದರಿಂದ ಬಹಳ ಫಲವನ್ನು ಹೊಂದುವರು. ಮತ್ತೊಬ್ಬ ರನ್ನು ತಮ್ಮ ವಂಚನೆಗಳಿಂದ ಶೆರೆ ಹಿಡಿದು ಕತ್ತಿಯಿಂದ ಕೊಲ್ಲು ವವರು ಕಡೆಯಲ್ಲಿ ದೇವರ ಬಲದಿಂದ ಶೆರೆಯಾಗಿ, ಕೊಲ್ಲಲ್ಪಟ್ಟು, ನಾಶವಾಗಿ ಹೋಗುವರು.

9. ಮೊದಲನೇ ಮೃಗವು ಸಮುದ್ರದೊಳಗಿಂದ ಏರಿ ಬಂತು. ಈ ಎರಡನೇ ಮೃಗವು ಭೂಮಿಯೊಳಗಿಂದ ಏರಿ ಬಂತು. ಮೊದ ಲನೇ ಮೃಗವು ಕಲಹಗಳೂ ಯುದ್ಧಗಳೂ ತುಂಬಿದ ರೋಮು ರಾಜ್ಯದಲ್ಲಿ ಉಂಟಾದ ಅಜ್ಞಾನ ಧೊರೆತನಕ್ಕೆ ಉಪಮಾನವಾಗಿ ಯೂ, ಎರಡನೇ ಮೃಗವು ಶಾಂತವಾದ ಕಾಲದಲ್ಲಿ ರೋಮು ರಾ ಜ್ಯದಲ್ಲಿ ಮೊಳೆತ ವೈದಿಕ ಅಧಿಕಾರಕ್ಕೆ ಉಪಮಾನವಾಗಿಯೂ ಅವೆ.

೧೨ [1]ಎರಡು ಕೊಂಬುಗಳು ಇದ್ದವು; ಗಡಸರ್ಪದ ಹಾಗೆ ಮಾತಾಡಿತು. ಅದು ಮೊದಲನೇ ಮೃಗದ ಸಮಸ್ತ
ಅಧಿಕಾರವನ್ನು ಅದರ ಸನ್ನಿಧಿಯಲ್ಲಿ ನಡಿಸಿ, ಭೂಮಿಯೂ [2]ಅದರ ನಿವಾಸಿಗಳೂ ಆ ಮರಣದ ಘಾಯ
೧೩ ವಾಶಿಯಾದ ಮೊದಲನೇ ಮೃಗಕ್ಕೆ ನಮಸ್ಕರಿಸುವ ಹಾಗೆ ಮಾಡುತ್ತದೆ. ಅದು [3]ದೊಡ್ಡ ಗುರುತುಗಳನ್ನು
೧೪ ನಡಿಸಿ, ಬೆಂಕಿಯನ್ನು ಮನುಷ್ಯರ ಮುಂದೆ ಆಕಾಶದಿಂದ ಇಳಿಯ ಮಾಡುತ್ತದೆ. ಮತ್ತು ಮೊದಲನೇ
ಮೃಗದ ಸನ್ನಿಧಿಯಲ್ಲಿ ನಡಿಸುವದಕ್ಕೆ ತನಗೆ ಕೊಡಲ್ಪಟ್ಟ ಗುರುತುಗಳಿಂದ ಭೂನಿವಾಸಿಗಳನ್ನು ಮೋಸಗೊ
ಳಿಸಿ, ಕತ್ತಿಯಿಂದ ಘಾಯವಾಗಿ ಬದುಕಿದ ಮೃಗಕ್ಕೆ [4]ವಿಗ್ರಹವನ್ನು ಮಾಡ ಬೇಕೆಂದು, ಭೂನಿವಾಸಿಗಳಿಗೆ
೧೫ ಹೇಳುತ್ತದೆ. ಮತ್ತು ಮೃಗದ ವಿಗ್ರಹವು ಮಾತಾಡುವ ಹಾಗೆಯೂ, ಮೃಗದ ವಿಗ್ರಹಕ್ಕೆ ನಮಸ್ಕರಿಸದ
ವರನ್ನಷ್ಟು ಕೊಲ್ಲಿಸುವ ಹಾಗೆಯೂ, ಮೃಗದ ವಿಗ್ರಹಕ್ಕೆ [5]ಆತ್ಮವನ್ನು ಕೊಡುವದಕ್ಕೆ ಅದಕ್ಕೆ ಕೊಡಲ್ಪಟ್ಟಿತು.
೧೬ ಮತ್ತು ಹಿರಿ ಕಿರಿಯರೂ, ಐಶ್ವರ್ಯವಂತರೂ, ಬಡವರೂ, ಸ್ವತಂತ್ರರೂ, ದಾಸರೂ, ಎಲ್ಲರು ತಮ್ಮ ಬಲ
ಗೈಯ ಮೇಲಾಗಲಿ, ತಮ್ಮ ಹಣೆಗಳ ಮೇಲಾಗಲಿ, [6]ಮುದ್ರೆಯನ್ನು ಮಾಡಿಸಿ ಕೊಳ್ಳುವ ಹಾಗೆಯೂ,

1. ಮೊದಲನೇ ಮೃಗಕ್ಕೆ ಹತ್ತು ಕೊಂಬುಗಳಿದ್ದವು. ಈ ಮೃಗಕ್ಕೆ ಎರಡು ಕೊಂಬುಗಳಿದ್ದವು. ಈ ಮೃಗವು ಕುರಿಮರಿಗೆ ಸಮಾನವಾಗಿ ಮಹಾ ಶಾಂತವುಳ್ಳದ್ದರ ಹಾಗೆ ತೋರಿಸಿ, ಗಡಸರ್ಪದ ಹಾಗೆ ವಂಚನೆಯಾಗಿಯೂ ತಂತ್ರವಾಗಿಯೂ ಮಾತಾಡಿತು. ಈ ಗ್ರಂಥದಲ್ಲಿ ಕ್ರಿಸ್ತನನ್ನು ಕುರಿಮರಿಗೆ ಉಪಮಾನಿಸಿ ತೋರಿಸಿ ಇದೆ. ಈ ಮೃಗಕ್ಕೆ ಕುರಿಮರಿಗೆ ಸಮಾನವಾಗಿ ಎರಡು ಕೊಂಬುಗಳಿದ್ದವೆಂದು ಹೇಳಿರುವದರಿಂದ ಇದಕ್ಕುಂಟಾಗಿದ್ದ ಅಧಿಕಾರವು ಕ್ರಿಸ್ತನ ಸಭೆಯಿಂದ ಉಂಟಾದ ಅಧಿಕಾರವೆಂದು ತೋರುತ್ತದೆ. ಇದಕ್ಕೆ ಎರಡು ಕೊಂಬುಗಳಿದ್ದವೆಂದು ಹೇಳಿರುವದರಿಂದ ಇದರ ಅಧಿಕಾರವು ಎರಡು ಬಗೆಯಾಗಿತ್ತೆಂದು ಹೇಳ ಬಹುದು. ಹಾಗೆಯೇ ರೋಮು ಸಭೆಗೆ ಲೌಕಿಕ ವಿಷಯಗಳಲ್ಲಿಯೂ ವೈದಿಕ ವಿಷಯಗಳಲ್ಲಿಯೂ ಅಧಿಕಾರ ಉಂಟು. ಅದರ ಗುರುಗಳು ಲೌಕಿಕ ಗುರುಗಳೆಂದೂ, ವೈದಿಕ ಗುರುಗಳೆಂದೂ ಎರಡು ಬಗೆಯಾಗಿದ್ದಾರೆ. ಈ ಮೃಗಕ್ಕೆ ಸುಳ್ಳು ಪ್ರವಾದಿ ಎಂದು ಮುಂದಿನ ಸಂಧಿಗಳಲ್ಲಿ ಹೇಳಿರುವದರಿಂದ (೧೬. ೧೩; ೧೯. ೨೦.) ಇದು ಕ್ರಿಸ್ತನ ಸಭೆಗೆ ಶೇರಿದ ಸುಳ್ಳು ಬೋಧಕರನ್ನು ಕುರಿತದ್ದೆಂದು ನಿಶ್ಚಯಿಸ ಬಹುದು.

2. ಮೊದಲನೇ ಮೃಗದ ಅತಿಶಯವಾದ ಬಲವೂ ಜೀವವೂ ಈ ಮೃಗದ ಬಳಿಯಲ್ಲಿ ಪೂರ್ಣವಾಗಿ ತೋರಿತು. (೩. ವ.) ವಾಶಿಯಾದ ಮೃಗವಾದ ರೋಮು ರಾಜ್ಯದ ಮಹಿಮೆಯು ತಿರಿಗಿ ರೋಮು ಸಭೆಯಿಂದ ಪೂರ್ಣವಾಗಿ ತೋರಿತು. ಅದರ ಬಲವು ರೋಮು ರಾಜ್ಯದಲ್ಲಿಯೂ ಅದಕ್ಕಾಚೆಯೂ ಸಲ್ಲುತ್ತಿತ್ತು.

3. ದೊಡ್ಡ ಗುರುತುಗಳು ಅಂದರೆ ಅದ್ಭುತಗಳ ಹಾಗೆ ತೋರುವ ಸುಳ್ಳು ಅದ್ಭುತಗಳೇ. (ಹೊರ. ೭. ೮—೧೩. ಮತ್ತಾ. ೨೪. ೨೪. ಅಪೊ. ಕ್ರಿ. ೮. ೯, ೧೧; ೧೩. ೬.) ಸುಳ್ಳು ಪ್ರವಾದಿಗಳ ಹಾಗೆಯೇ ಈ ಮೃಗದಿಂದ ಸೂಚಿಸಲ್ಪಟ್ಟ ಸುಳ್ಳು ಬೋಧಕರು ಸಹ ಸುಳ್ಳು ಅದ್ಭುತಗಳನ್ನು ಮಾಡಿದರು. ಎಲೀಯನು ಮಾಡಿದ ಪ್ರಕಾರ ಇವರು ಸಹ ಆಕಾಶದಿಂದ ಬೆಂಕಿಯನ್ನು ತರಿಸಿದ ಪ್ರಕಾರ ತೋರಿಸಿದರು. ಇಂಥಾ ಅದ್ಭುತಗಳಿಂದ ಅನೇಕರನ್ನು ಮೋಸ ಮಾಡಿ ವಂಚಿಸಿದರು. (೧೪. ವ.) ಹಾಗೆಯೇ ರೋಮು ಸಭೆಯು ಸಹ ಸುಳ್ಳು ಅದ್ಭುತಗಳಿಂದಲೂ ಆಶ್ಚರ್ಯಗಳಿಂದಲೂ ಅನೇಕರನ್ನು ವಂಚಿಸಿದ್ದು ಸರ್ವರಿಗೂ ತಿಳಿದದೆ. ಇಂಥಾ ದೊಡ್ಡ ಅದ್ಭುತಗಳನ್ನು ಮಾಡಿದರೆಂದು ಹೇಳಲ್ಪಡುವ ಅರ್ಚಶಿಷ್ಟರಿಗೆ ಲೆಖ್ಖವಿಲ್ಲ.

4. ಇದು ಮೊದಲನೇ ಮೃಗದ ವಿಗ್ರಹವೆಂದು ಮುಂದಿನ ವಚನಗಳಲ್ಲಿ ಹೇಳಿ ಇದೆ. ಮೊದಲನೇ ಮೃಗವು ರೋಮು ಸಭೆಯನ್ನೂ, ಅದರ ವಿಗ್ರಹವು ರೋಮು ಸಭೆಯ ತಲೆಯಾದ ಪೋಪನನ್ನೂ ಕುರಿತದ್ದೆಂದು ಕೆಲವು ವಿದ್ವಾಂಸರು ಹೇಳುತ್ತಾರೆ. ರೋಮು ಸಭೆಯು ಬೋಧಕರಲ್ಲಿ ಒಬ್ಬನನ್ನು ಆದು ಕೊಂಡು, ಅವನಿಗೆ ರಕ್ತಾಂಬರ ವಸ್ತ್ರಗಳನ್ನು ಧರಿಸಿ, ತಲೆಯಲ್ಲಿ ಕಿರೀಟವಿಟ್ಟು, ಪೇತ್ರನ ಆಸನದಲ್ಲಿ ಕುಳ್ಳಿರಿಸಿ, ಅವನ ಪಾದಗಳಿಗೆ ಮುದ್ದಿಟ್ಟು, ಅವನನ್ನು ಆರಾಧಿಸುತ್ತಾರೆ. ಅದೇ ಪ್ರಕಾರ ಹತ್ತನೇ ಇನ್ನೋಸೆಂಟ್ ಎಂಬ ಪೋಪನು ಪಟ್ಟಾಭಿಷೇಕ ಹೊಂದಿದ ದಿವಸದಲ್ಲಿ ಎಲ್ಲಾ ಗುರುಗಳೂ ಭಯಭಕ್ತಿಯಿಂದ ನಿಂತಿರಲು, ಅವರಲ್ಲಿ ಒಬ್ಬನು ಪೋಪನನ್ನು ನೋಡಿ, ಮಹಾ ಪರಿಶುದ್ಧವೂ ಮಹಿಮೆಯೂ ತುಂಬಿದ ತಂದೆಯೇ! ಸಭಾನಾಯಕನೇ! ಲೋಕಾಧಿಪತಿಯೇ! ಪರಮ ರಾಜ್ಯದ ಬೀಗದ ಕೈಯುಳ್ಳವನೇ! ಪರಮ ಸಭೆಯಾದ ಸಮ್ಮನಸರು ವಂದಿಸುವ ಮಹಾತ್ಮನೇ! ನರಕಲೋಕವು ನಡುಗುವ ಹಾಗೆ ಮಾಡುವ ಕರ್ತನೇ! ಭೂಲೋಕವೆಲ್ಲಾ ವಂದಿಸುವ ಭೂಪಾಲನೇ! ನಿನ್ನನ್ನು ಅತ್ಯಂತ ಭಯಭಕ್ತಿಯಿಂದ ವಂದಿಸುತ್ತೇವೆ. ನಮ್ಮನ್ನೂ ನಮ್ಮದೆಲ್ಲವನ್ನೂ ನಿನ್ನ ಕೈಗೂ, ದಿವ್ಯ ಚಿತ್ತಕ್ಕೂ, ಶ್ರೇಷ್ಠವಾದ ನಿನ್ನ ಕ್ರಿಯೆಗೂ ಒಪ್ಪಿಸುತ್ತೇವೆ ಎಂಥೇಳಿ, ಸ್ತುತಿಸಿ ಹೊಗಳಿದರಂತೆ.

5. ಎರಡನೇ ಮೃಗವು ಆತ್ಮವನ್ನು ಕೊಡಲು, ಆ ವಿಗ್ರಹವು ಮಾತಾಡಿದ ಪ್ರಕಾರ ರೋಮು ಸಭೆಯ ಗುರುಗಳು ಲತ್ತಿರಾನ್ ಎಂಬ ಸ್ಥಳದಲ್ಲಿ ಸಂಘವಾಗಿ ಕೂಡಿ ಆಲೋಚಿಸಿದ ಪ್ರಕಾರ ಪೋಪರು ನಡಿಯುವದು ವಾಡಿಕೆಯಾಗಿದೆ. ರೋಮು ಸಭೆಯ ವಿಪರೀತ ಕಟ್ಟಳೆಗಳೆಲ್ಲಾ ಈ ಗುರುಗಳ ಸಂಘದಲ್ಲಿ ಮಾಡಿದ ನಿರ್ಣಯಗಳೇ. ಅವುಗಳ ಹಾಗೆ ನಡಿಯದವರನ್ನು ದೇವವಿರೋಧಿಗಳಾದ ಪತಿತರೆಂದು ಅವರನ್ನು ಹಿಂಸೆ ಪಡಿಸುವದೂ ಕೊಲ್ಲುವದೂ ವಾಡಿಕೆಯಾಗಿದೆ.

6. ಪೂರ್ವಿಕರಲ್ಲಿ ದಾಸರು ಯಜಮಾನರ ಮುದ್ರೆಯನ್ನೂ, ರಾಣುವೆಯವರು ತಮ್ಮ ದಳಕರ್ತರ ಮುದ್ರೆಯನ್ನೂ, ನಾನಾ ಮತಸ್ಥರು ತಮ್ಮ ಕುಲದೇವರುಗಳ ಮುದ್ರೆಯನ್ನೂ ಧರಿಸಿ ಕೊಳ್ಳುವ ಪದ್ಧತಿಯುಂಟು. ಅದೇ ಪ್ರಕಾರ ಎರಡನೇ ಮೃಗವು ಎಲ್ಲಾ ಮನುಷ್ಯರೂ ತಮ್ಮ ಬಲಗೈಗಳ ಮೇಲಾಗಲಿ, ಹಣೆಗಳ ಮೇಲಾಗಲಿ ಮುದ್ರೆ ಹೊಂದುವ ಹಾಗೆ ಮಾಡಿತು. ಬಲಗೈ ಕೆಲಸ ಮಾಡುವದಕ್ಕೆ ಗುರುತಾಗಿಯೂ, ಹಣೆಯು ವಿಶ್ವಾಸದ



೧೭ ಮುದ್ರೆಯಾಗಲಿ, ಮೃಗದ ಹೆಸರಾಗಲಿ, ಅದರ ಹೆಸರಿನ ಲೆಖ್ಖವಾಗಲಿ, ಉಂಟಾದವನು ಹೊರ್ತು, ಮ
ತ್ತ್ಯಾರೂ ಕ್ರಯ ವಿಕ್ರಯ ಮಾಡದ ಹಾಗೆಯೂ, ಮಾಡುತ್ತದೆ.
೧೮ ಇಲ್ಲಿ [1]ಜ್ಞಾನ ಉಂಟು. ಬುದ್ಧಿ ಉಂಟಾದವನು ಮೃಗದ ಲೆಖ್ಖವನ್ನು ಎಣಿಸಲಿ; ಯಾಕಂದರೆ ಅದು ಮನು
ಷ್ಯನ ಲೆಖ್ಖವಾಗಿದೆ; ಅದರ ಲೆಖ್ಖವು [2]ಆರು ನೂರ ಅರವತ್ತಾರು.

ಕುರಿಮರಿಯೂ ಅದರ ದಾಸರೂ ಪರಮ ಪ್ರಕಾಶ ಹೊಂದಿದವರಾಗಿ ತೋರಿದ ದರ್ಶನವು.

14. ಮತ್ತು ನೋಡಲಾಗಿ, ಇಗೋ, ಚಿಯೋನ್ ಪರ್ವತದ ಮೇಲೆ ನಿಂತು ಕೊಂಡ [3]ಕುರಿಮರಿಯೂ,
ಅವನ ಸಂಗಡ ಅವನ [4]ತಂದೆಯ ಹೆಸರು ತಮ್ಮ ಹಣೆಗಳ ಮೇಲೆ ಬರೆದಿರುವ [5]ನೂರ ನಾಲ್ವತ್ತನಾಲ್ಕು
ಸಾವಿರ ಮಂದಿಯೂ.
೨ ಮತ್ತು ಅನೇಕ ನೀರುಗಳ ಶಬ್ದದ ಹಾಗೆಯೂ, ದೊಡ್ಡ ಗುಡುಗಿನ ಶಬ್ದದ ಹಾಗೆಯೂ, ಪರಲೋಕದಿಂ
ದಾದ ಶಬ್ದವನ್ನು ಕೇಳಿದೆನು; ಮತ್ತು ತಮ್ಮ ವೀಣೆಗಳನ್ನು ನುಡಿಸುವ ವೀಣೆಗಾರರ ಶಬ್ದವನ್ನು ಕೇಳಿದೆನು.
೩ ಅವರು ಸಿಂಹಾಸನದ ಮುಂದೆಯೂ, ನಾಲ್ಕು ಜೀವಿಗಳ ಹಿರಿಯರ ಮುಂದೆಯೂ, [6]ಹೊಸ ರಾಗದಂತೆ
ಹಾಡುತ್ತಾರೆ. ಆ ರಾಗವನ್ನು, ಭೂಮಿಯಿಂದ ಕೊಂಡು ಕೊಳ್ಳಲ್ಪಟ್ಟವರಾದ ನೂರ ನಾಲ್ವತ್ತನಾಲ್ಕು
ಸಾವಿರ ಮಂದಿ ಹೊರ್ತಾಗಿ, ಯಾರೂ ಕಲಿಯಲಾರರು.
೪ ಸ್ತ್ರೀಯರ ಸಂಗಡ ಕಳಂಕವಾಗದವರು ಇವರೇ; ಯಾಕಂದರೆ [7]ಕನ್ಯಾಭಾವವಾಗಿದ್ದಾರೆ. ಕುರಿಮರಿ

ಅರಿಕೆಗೆ ಗುರುತಾಗಿಯೂ ಇರುತ್ತದೆ. ಆದದರಿಂದ ಹಣೆಯಲ್ಲಿ ಮುದ್ರೆ ಹೊಂದಿದವರು ಮೃಗದ ಕಟ್ಟಳೆ ಅಂಗೀಕರಿಸುವವರಾಗಿಯೂ, ಬಲಗೈಯಲ್ಲಿ ಮುದ್ರೆ ಹೊಂದಿದವರು ಆ ಕಟ್ಟಳೆಯ ಪ್ರಕಾರ ನಡಿಯುವವರಾಗಿಯೂ ಇದ್ದಾರೆ. ಹಾಗೆಯೇ ರೋಮು ಸಭೆಯವರು ಪೋಪನಿಗೂ, ತ್ರೆಂತ್ ಸಂಘದ ತೀರ್ಪುಗಳಿಗೂ ಒಳಪಟ್ಟು, ಅವರ ಕಟ್ಟಳೆಗಳ ಪ್ರಕಾರ ನಡಿಯುತ್ತೇವೆಂದು ಪ್ರಮಾಣ ಮಾಡುತ್ತಾರೆ. ತ್ರೆಂತ್ ಸಂಘದ ವಿಶ್ವಾಸಪ್ರಮಾಣವನ್ನು ಕೈಕೊಳ್ಳದವರು ಕ್ರಿಸ್ತನ ಶರೀರವಾದ ತಿರುಸಭೆಗೆ ಹೊರಗಾದವರೆಂದು ನಿರ್ಣಯಿಸುತ್ತಾರೆ. ಅದಕ್ಕೆ ವಿಧೇಯವಾಗದವರನ್ನು ಪತಿತರೆಂದು ಹೇಳಿ, ಕೊಂಡು ಕೊಳ್ಳುವದು ಮಾರುವದು ಮುಂತಾದ ಪ್ರಜಾಸಮ್ಮಂಧವಾದ ಶ್ಲಾಘ್ಯಗಳಿಗೆ ಅವರನ್ನು ದೂರ ಮಾಡಿ, ಸಭೆಯ ಸಮ್ಮಂಧವಾದ ವೈದಿಕ ಕರ್ಮಗಳಿಗೆ ಅವರನ್ನು ಬಹಿಷ್ಕರಿಸುತ್ತಾರೆ.

1. ಈ ಲೆಖ್ಖದ ಮರ್ಮವನ್ನು ತಿಳಿಯುವದಕ್ಕೆ ಜ್ಞಾನವು ಬೇಕಾಗಿದೆ. ಇದಕ್ಕೆ ವಿದ್ವಾಂಸರು ನಾನಾ ತಾತ್ಪರ್ಯ ಹೇಳುವರು. ನಾವು ಒಂದನ್ನಾದರೂ ನಿಶ್ಚಯಿಸ ಕೂಡದಿದ್ದಾಗ್ಯೂ, ಅವರು ಹೇಳುವ ಒಂದು ತಾತ್ಪರ್ಯವನ್ನು ಹೇಳುವದು ತಕ್ಕದ್ದಾಗಿದೆ.

2. ಪೊಲಿಕಾರ್ಪನ ಶಿಷ್ಯನಾದ ಐರೇನಿಯಸ್ ಎಂಬವನು ಈ ಲೆಖ್ಖವು ಗ್ರೀಕ ಅಕ್ಷರದಲ್ಲಿ ಬರೆಯಲ್ಪಡುವ ಲಾಟಿನಸ್ ಎಂಬ ಶಬ್ದಕ್ಕೆ ಸರಿಯಾಗಿದೆ ಎಂದು ಹೇಳುತ್ತಾನೆ. ಹ್ಯಾಗಂದರೆ, ಲ ಎಂಬದು ೩೦, ಅ ಎಂಬದು ೧, ಟ ಎಂಬದು ೩೦೦, ಇ ಎಂಬದು ೫, ಐ ಎಂಬದು ೧೦, ನ ಎಂಬದು ೫೦, ಓ ಎಂಬದು ೭೦, ಸ ಎಂಬದು ೨೦೦. ಅಂತು ೬೬೬. ಆದದರಿಂದ ಈ ಲೆಖ್ಖವು ಲಥೀನ ಭಾಷೆಯನ್ನು ಮಾತಾಡುವ ರೋಮು ಸಭೆಯನ್ನು ಕುರಿತದ್ದೆಂದು ಅನೇಕರು ನೆನಸುತ್ತಾರೆ.

3. ಕುರಿಮರಿಗೆ ಮೂಲ ಭಾಷೆಯಲ್ಲಿ ಆ ಕುರಿಮರಿ ಎಂದು ಕ್ರಿಸ್ತನನ್ನು ತೋರಿಸುತ್ತದೆ. ಮುಂಚಿನ ಸಂಧಿಗಳಲ್ಲಿ ಭೂಮಿಯಲ್ಲಿರುವ ಕ್ರಿಸ್ತನ ಸಭೆಗೆ ಸತ್ಯ ವಿರೋಧಿಗಳಿಂದ ಉಪದ್ರವೂ ಇಕ್ಕಟ್ಟೂ ಉಂಟಾಗುತ್ತದೆಂದು ಹೇಳಿದ ಸಂಗತಿಗಳನ್ನು ಕ್ರಿಸ್ತನ ಭಕ್ತರು ಕೇಳಿ ದೃಢತ್ವ ತಪ್ಪುವದಕ್ಕೆ ಹೇತುವೆಯಾಗಿರುವದರಿಂದ, ಭೂಮಿಯಲ್ಲಿ ನಡೆದ ದರ್ಶನವು ಮಾರ್ಪಟ್ಟು ಪರದಲ್ಲಿ ಉಂಟಾದ ದರ್ಶನವು ಕಾಣುತ್ತದೆ. ಮೃಗದಿಂದ ಉಪದ್ರ ಪಡಿಸಲ್ಪಟ್ಟ ಸಭೆಯು ಪರದಲ್ಲಿ ದೇವರ ಕುರಿಮರಿಯ ಮುಂದೆ ನಿತ್ಯಾನಂದವುಳ್ಳವರಾಗಿ ಕಾಣಿಸುತ್ತಾರೆ. ಸತ್ಯಕ್ಕೆ ಶತ್ರುಗಳು ನಾಶವಾಗಲು ಸತ್ಯ ಸಭೆಯು ನಿತ್ಯ ಸುಖ ಹೊಂದಿ ಪ್ರಕಾಶಿಸುವದು.

4. ಇದಕ್ಕೆ ಅವನ ಹೆಸರೂ ತಂದೆಯ ಹೆಸರೂ ಎಂದು ಕೆಲ ಮುಖ್ಯ ಕೈಬರಹದ ಪ್ರತಿಗಳಲ್ಲಿ ಉಂಟು. (೭. ೩.) ಮೃಗದ ಆರಾಧಕರು ಅದರ ಮುದ್ರೆ ಧರಿಸಿ ಕೊಂಡ ಪ್ರಕಾರ, ಕ್ರಿಸ್ತನ ಭಕ್ತರು ತಮ್ಮ ರಕ್ಷಕನ ಹೆಸರನ್ನೂ ಆತನ ತಂದೆಯ ಹೆಸರನ್ನೂ ಹಣೆಗಳಲ್ಲಿ ಧರಿಸಿ ಕೊಂಡಿದ್ದರು.

5. ಈ ವಚನದಲ್ಲಿ ಚಿಯೋನ್ ಪರ್ವತವನ್ನು ಕುರಿತು ಹೇಳಿರುವದರಿಂದ ಈ ಲಕ್ಷಾ ನಾಲ್ವತ್ತನಾಲ್ಕು ಸಾವಿರ ಮಂದಿ, (೭. ೪.) ಮುದ್ರೆ ಹೊಂದಿದ ಇಸ್ರಯೇಲ್ಯರೆಂದು ತೋರುತ್ತದೆ.

6. ಪರಮ ಸಭೆಯವರು ವೀಣೆಗಳನ್ನು ಹಿಡಿದು ಕೊಂಡು, ಏಕೀಭವಿಸಿ ಹಾಡಿದ ಹೊಸ ರಾಗವು ಮಹಾ ಪ್ರವಾಹಘೋಷದ ಹಾಗೆಯೂ, ದೊಡ್ಡ ಗುಡುಗಿನ ಶಬ್ದದ ಹಾಗೆಯೂ ಕೇಳಿಸಿತು. (೫. ೯. ವಚನದ ವ್ಯಾಖ್ಯಾನ ನೋಡ ಬೇಕು.) ಕ್ರಿಸ್ತನ ಸ್ತುತಿಯಾದ ಈ ರಾಗದ ಸೊಂಪು ಆತನಿಂದ ವಿಮೋಚಿಸಲ್ಪಟ್ಟವರಿಗೆ ಮಾತ್ರ ತಿಳಿಯುವದು, ಮತ್ತ್ಯಾರಿಗೂ ತಿಳಿಯದು.

7. ಈ ಭಕ್ತರು ಜಾರತ್ವವೆಂಬ ವಿಗ್ರಹಾರಾಧನೆಗೆ ತೊಲಗಿ, ದೇವರ ಕೃಪೆಯಿಂದ ತಮ್ಮ ಆತ್ಮಗಳನ್ನು ಪಾಪದಿಂದ ಕಳಂಕ ಮಾಡಿಕೊಳ್ಳದೆ ಕಾದು ಕೊಂಡರು. ಉಪದ್ರ ಹೊಂದಲೂ, ಮರಣ ಹೊಂದಲೂ, ಸೇವೆ ಮಾಡಲೂ, ಮಹಿಮೆ ಹೊಂದಲೂ, ತಮ್ಮ ಕರ್ತನು ಎಲ್ಲಿಗೆ ಹೋದರೂ ಆತನನ್ನು ಹಿಂಬಾಲಿಸುವವರು

ಯನ್ನು, ಎಲ್ಲಿ ಹೋದಾಗ್ಯೂ, ಹಿಂಬಾಲಿಸುವವರು ಇವರೇ. ಇವರು ದೇವರಿಗೂ ಕುರಿಮರಿಗೂ ಪ್ರಥಮ
೫ ಫಲವಾಗಿ, ಮನುಷ್ಯರಿಂದ ಕೊಂಡು ಕೊಳ್ಳಲ್ಪಟ್ಟರು. ಅವರ ಬಾಯಿಯಲ್ಲಿ ಮೋಸವು ಶಿಕ್ಕಲಿಲ್ಲ; ಹ್ಯಾ
ಗಂದರೆ ಅವರು ದೇವರ ಸಿಂಹಾಸನದ ಮುಂದೆ ನಿಷ್ಕಳಂಕರಾಗಿದ್ಧಾರೆ.

ಮೂವರು ದೂತರು ಮಾತಾಡಿದ್ದು; ಸತ್ತು ಹೋದ ಕ್ರಿಸ್ತನ ದಾಸರ ಮಹಾನಂದವನ್ನು ಒಂದು ಶಬ್ದವು ತಿಳಿಯ ಮಾಡಿದ್ದು.

೬ [1]ಮತ್ತು ಆಕಾಶಮಧ್ಯದಲ್ಲಿ ಹಾರುವ ಬೇರೊಬ್ಬ ದೂತನನ್ನು ಕಂಡೆನು. ಭೂನಿವಾಸಿಗಳಲ್ಲಿಯೂ, ಸಕ
ಲ ಜನಾಂಗ, ಕುಲ, ಭಾಷೆ, ಪ್ರಜೆಗಳಲ್ಲಿಯೂ, ಪ್ರಸಂಗಿಸುವದಕ್ಕೆ [2]ನಿತ್ಯವಾದ ಸುವಾರ್ತೆಯು ಅವನಿಗೆ
೭ ಇತ್ತು. ಅವನು ಮಹಾ ಶಬ್ದದಿಂದ—ದೇವರಿಗೆ ಭಯ ಪಡಿರಿ, ಅವನಿಗೆ ಮಹಿಮೆಯನ್ನು ಕೊಡಿರಿ; ಯಾ
ಕಂದರೆ ಅವನ ನ್ಯಾಯತೀರ್ವಿಕೆಯ ಘಳಿಗೆ ಬಂತು. ಆಕಾಶವನ್ನೂ, ಭೂಮಿಯನ್ನೂ, ಸಮುದ್ರವನ್ನೂ,
ನೀರುಗಳ ಬುಗ್ಗೆಗಳನ್ನೂ ಮಾಡಿ ನಿರ್ಮಿಸಿದವನಿಗೆ [3]ನಮಸ್ಕರಿಸಿರಿ, ಅಂದನು.
೮ ಬೇರೊಬ್ಬ ದೂತನು ಅವನನ್ನು ಹಿಂಬಾಲಿಸಿ—[4]ಬಿತ್ತು, ಬಿತ್ತು, ಮಹಾ ಪಟ್ಟಣವಾದ ಬಾಬೆಲು; (ಯೆಶಾ.

ಇವರೇ. ವಿಮೋಚಿಸಲ್ಪಟ್ಟವರಲ್ಲಿ ಪ್ರಥಮ ಫಲವಾದ ಶ್ರೇಷ್ಟರು ಇವರೇ. ತಮ್ಮ ಕರ್ತನಂತೆ ಇವರ ಬಾಯಿಯಲ್ಲಿ ಕಪಟವಿಲ್ಲ. ದೇವರ ಸಮುಖದಲ್ಲಿ ಇವರು ನಿಷ್ಕಳಂಕರಾಗಿದ್ಧಾರೆ. ಹೀಗೆ ಇವರನ್ನು ಸಿದ್ಧ ಮಾಡಿದ ಕೃಪೆಯು ಮಹಾ ದೊಡ್ಡದು.

1. ಏಳು ತುತೂರಿಗಳ ಹಾಗೆ (೮. ಸಂಧಿ.) ಏಳು ಬಾಧೆಗಳುಳ್ಳ ಏಳು ಪಾತ್ರೆಗಳನ್ನು ಕುರಿತ ದರ್ಶನಗಳಿಗೆ ಹಿಂದೆಯೂ ಮುಂದೆಯೂ ಬಾಬೆಲನ್ನು ಕುರಿತ ವರ್ತಮಾನಗಳುಳ್ಳ ಮೂರು ದರ್ಶನಗಳು ಬರುತ್ತವೆ. ಮೂವರು ದೂತರು ಬಲವಾದ ಶಬ್ದದಿಂದ ಕೆಲವು ವರ್ತಮಾನಗಳನ್ನು ಸಾರುತ್ತಾರೆ. ಅವರಲ್ಲಿ ಮೊದಲನೇ ದೂತನು ಸತ್ಯ ಸುವಾರ್ತೆಯ ಸಂತೋಷಕರವಾದ ವರ್ತಮಾನವನ್ನು ಸರ್ವರಿಗೂ ತಿಳಿಸಿ, ನ್ಯಾಯ ತೀರಿಸ ಸಿದ್ಧವಾಗಿರುವ ಸರ್ವ ಸೃಷ್ಟಿಕರ್ತನಾದ ದೇವರನ್ನು ಕೊಂಡಾಡಿ ಸ್ತುತಿಸ ಬೇಕೆಂದು ಹೇಳುತ್ತಾನೆ. (೬, ೭. ವ.) ಎರಡನೇ ದೂತನು ಬಾಬೆಲಿನ ನಾಶನವನ್ನೂ ಆಜ್ಞೆಯನ್ನೂ ಸಾರುತ್ತಾನೆ. ಮೂರನೇ ದೂತನು, ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕರಿಸಿದವರು ದೇವರ ಕೋಪವಾದ ಅಗ್ನಿ ಗಂಧಕಗಳಿಂದ ನಾಶವಾಗುವರೆಂದು ಹೇಳುತ್ತಾನೆ. (೯—೧೧. ವ.) ಕ್ರಿಸ್ತನ ಭಕ್ತರು ಶೋಧನೆಗಳನ್ನು ತಾಳ್ಮೆಯಾಗಿ ಸಹಿಸಲೂ, ಪ್ರಯಾಸವನ್ನು ಮುಗಿಸಿ, ಪೂರ್ಣ ಭಾಗ್ಯ ಹೊಂದಿದವರನ್ನು ನೆನಸಿ ದೃಢ ಪಡಲೂ ತಿರಿಗಿ ಬೋಧಿಸಲ್ಪಡುತ್ತಾರೆ. (೧೨, ೧೩. ವ.) ಮನುಷ್ಯರೂಪವನ್ನೂ ರಾಜಮಹಿಮೆಯನ್ನೂ ಧರಿಸಿ, ಪ್ರಕಾಶವುಳ್ಳ ಮೇಘದ ಮಧ್ಯದಲ್ಲಿ ಕಾಣಿಸಿದ ಒಬ್ಬನು ಚನ್ನಾಗಿ ಬೆಳೆದಿದ್ದ ಬೆಳೆಯನ್ನು ಕೊಯ್ಯುವದಕ್ಕೆ ಬರುತ್ತಾನೆ. (೧೪—೧೬.ವ.) ಕೆಳಗಿನ ಅಂತಸ್ತುಳ್ಳ ಮತ್ತೊಬ್ಬನು ದೇವರ ಉಗ್ರದ ದ್ರಾಕ್ಷೇ ತೊಟ್ಟಿಯಲ್ಲಿ ತುಳಿಯಲ್ಪಡುವದಕ್ಕೆ ದ್ರಾಕ್ಷೇ ಗೊಂಚಲುಗಳನ್ನು ಕೊಯ್ಯುವದಕ್ಕೆ ನೇಮಿಸಲ್ಪಡುತ್ತಾನೆ. (೧೭—೨೦. ವ.) ತರುವಾಯ ದೇವರ ಉಗ್ರದ ಕಡೇ ಬಾಧೆಗಳನ್ನು ಸಲ್ಲಿಸುವ ಏಳು ದೂತರು ಕಾಣಲ್ಪಡುತ್ತಾರೆ. (೧೫. ೧.) ಇವರು ತಮ್ಮ ಸಂಹಾರದ ಕ್ರಿಯೆಯನ್ನು ಪ್ರಾರಂಭಿಸುವದಕ್ಕಿಂತ ಮುಂಚೆ ಕ್ರಿಸ್ತನ ಭಕ್ತರು ದೇವರ ಸಮುಖದಲ್ಲಿ ಜಯಶಾಲಿಗಳಾಗಿ ಮಹಿಮೆಯಲ್ಲಿ ಕಾಣಲ್ಪಡುತ್ತಾರೆ. (೨—೪. ವ.) ಇದರ ತರುವಾಯ ದೇವರ ಆಜ್ಞೆಯನ್ನು ಸಲ್ಲಿಸುವ ಏಳು ದೂತರು ಆಚರಣೆಯ ಗುಡಾರದಿಂದ ಯಾಜಕವಸ್ತ್ರಗಳನ್ನು ಧರಿಸಿದವರಾಗಿ ಹೊರಟು, ನಾಲ್ಕು ಜೀವಿಗಳಲ್ಲಿ ಒಂದು ಜೀವಿಯಿಂದ ದೇವರ ಉಗ್ರದಿಂದ ತುಂಬಿರುವ ಪಾತ್ರೆಗಳನ್ನು ಹೊಂದಿದಾಗ ದೇವಾಲಯವು ಹೊಗೆಯಿಂದ ತುಂಬಿತು. ಆ ಬಾಧೆಗಳು ತೀರುವ ಪರ್ಯಂತರ ಅದರಲ್ಲಿ ಯಾರೂ ಪ್ರವೇಶಿಸ ಕೂಡದೆ ಇತ್ತು. (೫—೮. ವ.)

2. ಈ ಸುವಾರ್ತೆ ಅಥವಾ ಸಂತೋಷದ ವರ್ತಮಾನವು, ಮೃಗದ ಬೋಧನೆಯ ಹಾಗೆ ಅನಿತ್ಯವಾದದ್ದಾಗಿರದೆ, ಇಂದೂ ಎಂದೂ ಒಂದೇ ಪ್ರಕಾರವಿರುವದು, ಯೇಸು ಕರ್ತನ ಹಾಗೆ ನಿತ್ಯವುಳ್ಳದ್ದು. ಮನುಷ್ಯಜ್ಞಾನವೂ ಮಹಿಮೆಯೂ ಅಸ್ಥಿರವಾದದ್ದು. ಕೃಪೆಯ ಸುವಾರ್ತೆಯು ಅದನ್ನು ಕೊಟ್ಟ ಕರ್ತನಂತೆ ನಿತ್ಯವಾದದ್ದಾಗಿದೆ. ಅದು ಮನುಷ್ಯನ ಆಪತ್ತು ತಪ್ಪಿಸುವದನ್ನೂ, ಅವನಿಗುಂಟಾಗುವ ಮಹಿಮೆಯನ್ನೂ ಯೋಚಿಸಿದರೆ, ಅದು ನಿತ್ಯವಾದದ್ದೆಂದು ಹೇಳ ಬೇಕು.

3. ಮೃಗವನ್ನೂ ಅದರ ವಿಗ್ರಹವನ್ನೂ ಅಲ್ಲ, ಆಕಾಶವನ್ನೂ ಭೂಮಿಯನ್ನೂ ಸಮಸ್ತವನ್ನೂ ಉಂಟು ಮಾಡಿದ ಸೃಷ್ಟಿಕರ್ತನಾದ ದೇವರನ್ನು ಸಮಸ್ತ ಜನರೂ ನಮಸ್ಕರಿಸ ಬೇಕೆಂದು ಸಾರಿದನು. ಇದು ಯೂರೋಪ್ ಖಂಡದಲ್ಲಿ ಸಭೆ ತಿದ್ದುಪಾಟಾದ ಕಾಲದಲ್ಲಿಯೂ, ಅದರ ತರುವಾಯ ಸತ್ಯವೇದವು ನಾನಾ ಭಾಷೆಗಳಲ್ಲಿ ಭಾಷಾಂತರ ಮಾಡಲ್ಪಟ್ಟದ್ದರಿಂದಲೂ, ಛಾಪಿಸಲ್ಪಟ್ಟದ್ದರಿಂದಲೂ, ಸುವಾರ್ತಾಬೋಧಕರು ಮಾಡಿದ ದೊಡ್ಡ ಕೆಲಸಗಳಿಂದಲೂ, ಲೋಕದಲ್ಲಿ ಅಜ್ಞಾನಾಂಧಕಾರ ಕವಿದಿದ್ದ ದೇಶಗಳಲ್ಲಿ ಸುವಾರ್ತೆಯ ಬೆಳಕು ಪಸರಿಸಿದ್ದನ್ನು ಸೂಚಿಸುತ್ತದೆಂದು ಕೆಲ ವಿದ್ವಾಂಸರು ನೆನಸುತ್ತಾರೆ.

4. ಬಾಬೆಲು ಎಂಬುವದು, ವಿಗ್ರಹಾರಾಧನೆಯಿಂದ ಮಹಾ ಜಾರೆಯ ಹಾಗೆಯೂ, ಭೂಪ್ರಜೆಗಳನ್ನು ಭಕ್ತಿಮಾರ್ಗ ತಪ್ಪಿಸಿ, ಮರುಳು ಮಾಡಿ ಕೆಡಿಸಿದ್ದಾಗಿಯೂ ಇರುವ ರೋಮ ಸಭೆಯನ್ನು ಕುರಿತದ್ದೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಮಾಡುತ್ತಾರೆ. ಇದನ್ನು ಕುರಿತು ೧೮ನೇ ಸಂಧಿಯಲ್ಲಿ ವಿವರವಾಗಿ ಹೇಳಿ ಇದೆ. ಮೊದಲನೇ ದೂತನು ಸೃಷ್ಟಿಕರ್ತನನ್ನು ನಮಸ್ಕರಿಸ ಬೇಕೆಂದು ಹೇಳಿದ ಒಳ್ಳೇ ಆಲೋಚನೆಯನ್ನು ಮೃಗಕ್ಕೆ ಶೇರಿದ ರಾಜ್ಯದವರು ಕೇಳದೆ ಹೋದದರಿಂದ, ಮಹಾ ಪಟ್ಟಣವಾದ ಬಾಬೆಲು ಬಿತ್ತು ಎಂದು ಎರಡನೇ ದೂತನು ಸಾರಿದನು. ಇನ್ನು



೨೧. ೯.) ಯಾಕಂದರೆ ತನ್ನ ಜಾರತ್ವದ ಉಗ್ರದ ದ್ರಾಕ್ಷೇ ರಸವನ್ನು ಜನಾಂಗಗಳಿಗೆಲ್ಲಾ ಕುಡಿಸಿತು,
ಅಂದನು.

೯ [1]ಮೂರನೇ ದೂತನು ಅವರನ್ನು ಹಿಂಬಾಲಿಸಿ, ಮಹಾ ಶಬ್ದದಿಂದ ಹೇಳಿದ್ದು, ಯಾವನಾದರೂ ಮೃಗಕ್ಕೂ
ಅದರ ವಿಗ್ರಹಕ್ಕೂ ನಮಸ್ಕರಿಸಿ, ತನ್ನ ಹಣೆಯ ಮೇಲಾದರೂ, ತನ್ನ ಕೈಯ ಮೇಲಾದರೂ, ಮುದ್ರೆ ಹೊಂ
೧೦ ದಿದರೆ, ಅವನು ದೇವರ ಉಗ್ರದ ಪಾತ್ರೆಯಲ್ಲಿ ಬೆರಿಕೆ ಇಲ್ಲದೆ ಹೊಯಿದ ದೇವರ ಉಗ್ರದ ದ್ರಾಕ್ಷೇ ರಸ
ವನ್ನು ಕುಡಿದು, ಪರಿಶುದ್ಧ ದೂತರ ಮುಂದೆಯೂ, ಕುರಿಮರಿಯ ಮುಂದೆಯೂ, ಬೆಂಕಿ [2]ಗಂಧಕಗಳಿಂದ
೧೧ ಪೀಡಿಸಲ್ಪಡುವನು. ಮತ್ತು ಅವರ ಪೀಡೆಯ ಹೊಗೆಯು ಎಂದೆಂದಿಗೂ ಏರುವದು; ಮೃಗಕ್ಕೂ ಅದರ
ವಿಗ್ರಹಕ್ಕೂ ನಮಸ್ಕರಿಸುವವರಿಗೂ, ಅದರ ಹೆಸರಿನ ಮುದ್ರೆಯನ್ನು ಹೊಂದುವವರಿಗೂ, ರಾತ್ರಿ ಹಗಲು
ಉಪಶಮನವಾಗದು.
೧೨ [3]ಇಲ್ಲಿ ಪರಿಶುದ್ಧರ ತಾಳ್ಮೆ ಉಂಟು; ಇಲ್ಲಿ ದೇವರ ಕಟ್ಟಳೆಗಳನ್ನೂ, ಯೇಸುವಿನ ವಿಶ್ವಾಸವನ್ನೂ, ಕೈಕೊ
ಳ್ಳುವವರು ಇದ್ಧಾರೆ.
೧೩ ಮತ್ತು ಪರಲೋಕದಿಂದಾದ ಶಬ್ದವನ್ನು ಕೇಳಿದೆನು. ಅದು ನನಗೆ ಹೇಳಿದ್ದೇನಂದರೆ, ಬರೆ—[4]ಇನ್ನು ಮೇಲೆ
ಕರ್ತನಲ್ಲಿ ಸಾಯುವ ಮರಣಸ್ಥರು ಭಾಗ್ಯವಂತರು; ಹೌದು, ಅವರು ತಮ್ಮ ಕಷ್ಟಗಳಿಂದ ವಿಶ್ರಾಂತಿಯಾಗು
ವರೆಂದು, ಆತ್ಮವು ಹೇಳುತ್ತದೆ; ಮತ್ತು ಅವರ ಕ್ರಿಯೆಗಳು [5]ಅವರನ್ನು ಹಿಂಬಾಲಿಸುವವು.

ಕಿರೀಟ ಧರಿಸಿದ ಒಬ್ಬ ಮಹಾ ಪುರುಷನು ಬೆಳೆಯನ್ನು ಕೊಯಿದದ್ದು; ದೇವರ ಉಗ್ರವೆಂಬ ತೊಟ್ಟಿಯು.

೧೪ ಮತ್ತು ನೋಡಲಾಗಿ, ಇಗೋ, ಬಿಳೀ ಮೇಘವು; ಮತ್ತು ಮೇಘದ ಮೇಲೆ [6]ಮನುಷ್ಯನ ಮಗನಿಗೆ

ಮೇಲೆ ನಡಿಯುವ ಕಾರ್ಯವು ಆಗಲೇ ನಡೆದಂತೆ ದೇವರ ನಿರ್ಣಯದಲ್ಲಿ ಪ್ರತ್ಯಕ್ಷವಾಗಿರುವದರಿಂದ, ಇನ್ನು ಮೇಲೆ ಬೀಳಲಿಕ್ಕಿರುವ ಬಾಬೆಲನ್ನು ಕುರಿತು ಅದು ಬಿತ್ತೆಂದು ನಿಶ್ಚಯವಾಗಿ ಹೇಳಿ ಇದೆ. ಈಗಲದು ಬೀಳುವದಕ್ಕೆ ಆರಂಭವಾಗಿದೆ. ಇನ್ನು ಮೇಲೆ ಪೂರ್ಣವಾಗಿ ಬಿದ್ದು ಹೋಗುವದೆಂಬುವದೇ ಇದರ ತಾತ್ಪರ್ಯವು.

1. ಬಾಬೆಲೆಂಬ ಜಾರೆಯ ಸಂಗಡ ಸಮ್ಮಂಧ ಪಟ್ಟು, ಅದರ ಜಾರತ್ವದ ಉಗ್ರದ ದ್ರಾಕ್ಷೇ ರಸವನ್ನು ಕುಡಿದು, ಮೃಗವನ್ನೂ ಅದರ ವಿಗ್ರಹವನ್ನೂ ನಮಸ್ಕರಿಸಿ, ಅದರ ಮುದ್ರೆಯನ್ನು ಧರಿಸಿಕೊಂಡ ಭಕ್ತಿಹೀನರು ದೇವರ ಕೋಪಾಜ್ಞೆಯಾದ ಪಾತ್ರೆಯಲ್ಲಿ ಕಲಬೆರಿಕೆ ಇಲ್ಲದೆ ಹೊಯ್ಯಲ್ಪಟ್ಟ ಆತನ ಉಗ್ರದ ದ್ರಾಕ್ಷೇ ರಸವನ್ನು ಕುಡಿಯ ಬೇಕೆಂದು, ಮೂರನೇ ದೂತನು ಘಟ್ಟಿಯಾಗಿ ಕೂಗಿದನು. ಅವರು ಕುಡಿಯುವ ಪಾತ್ರೆಯಲ್ಲಿ ಅವರ ಶರೀರವನ್ನೂ ಆತ್ಮವನ್ನೂ ಕೊಲ್ಲ ತಕ್ಕ ದೇವರ ಕೋಪವೆಂಬ ವಿಷವು ತುಂಬಿರುವದೇ ಹೊರ್ತು, ಅದರ ಸಂಗಡ ಬೇರೆ ಏನೂ ಬೆರಿಕೆಯಾಗಿರುವದಿಲ್ಲ. ಎಲ್ಲಾ ನೀತಿಯಾಗಿರುವದೇ ಹೊರ್ತು, ಕರುಣೆ ಏನೂ ಇರದು. ಮೋಕ್ಷವಾಸಿಗಳಲ್ಲಿ ದೇವರ ಕೃಪೆಯೂ, ನರಕವಾಸಿಗಳಲ್ಲಿ ಆತನ ನೀತಿಯೂ ಪ್ರಕಟವಾಗುವದು.

2. ಸೊದೋಮು ಗಮೋರ ಪಟ್ಟಣಗಳವರಿಗೆ ಆದ ಹಾಗೆ ಭಕ್ತಿಹೀನರೆಲ್ಲರಿಗೂ ನಾಶ ಸಂಭವಿಸುವದು. ಪರಿಶುದ್ಧ ದೂತರ ಮುಂದೆಯೂ, ಕುರಿಮರಿಯ ಮುಂದೆಯೂ ಅಪಭಕ್ತರು ಬೆಂಕಿ ಗಂಧಕಗಳಿಂದುರಿಯುವ ಸಮುದ್ರದಲ್ಲಿ ಎಂದೆಂದಿಗೂ ಪೀಡಿಸಲ್ಪಡುವರು. (ಮತ್ತಾ. ೨೫. ೪೬.)

3. ಭಕ್ತರಾದ ಪರಿಶುದ್ಧವಂತರ ತಾಳ್ಮೆಯು, ಮೃಗಕ್ಕೆ ನಮಸ್ಕರಿಸುವದಿಲ್ಲವೆಂದು ಸಾಧಿಸಿದ್ದರಲ್ಲಿಯೂ, ಅವರ ಫಲವು, ಅವರು ನಿತ್ಯಾಜ್ಞೆಗೆ ತಪ್ಪಿದ್ದರಲ್ಲಿಯೂ ತೋರುತ್ತದೆ. (೧೩. ೧೦. ವಚನದ ವ್ಯಾಖ್ಯಾನ ನೋಡ ಬೇಕು.)

4. ಮೃಗಕ್ಕೆ ನಮಸ್ಕರಿಸಿದ ಅಪಭಕ್ತರಿಗೆ ನಿತ್ಯ ನಾಶ ಬರುವದೆಂದು ದೂತರು ಸಾರಿದ ತರುವಾಯ, ಅದಕ್ಕೆ ನಮಸ್ಕರಿಸದೆ ಭಕ್ತಿಯಾಗಿ ನಡೆದು ಶತ್ರುಗಳಿಂದ ಕ್ರೂರ ಮರಣವನ್ನಾದರೂ, ಸ್ವಾಭಾವಿಕ ಮರಣವನ್ನಾದರೂ ಹೊಂದಿದ ಭಕ್ತರಿಗೆ ನಿತ್ಯ ಸುಖ ಉಂಟಾಗುವದೆಂದು ಪರಲೋಕದಿಂದ ದೇವರ ಸಿಂಹಾಸನದಿಂದ ಆತ್ಮನಿಂದ ಒಂದು ಶಬ್ದವು ಹುಟ್ಟಿತು. ಹೀಗೆ ಕರ್ತನಲ್ಲಿ ಸಾಯುವವರು ತಾವು ಸತ್ತ ಮಾತ್ರದಲ್ಲಿ ಪರಮ ಪದವಿ ಹೊಂದುವರೆಂದು ತೋರಿಸುವದಕ್ಕೆ, ಇನ್ನು ಮೇಲೆ ಕರ್ತನಲ್ಲಿ ಸಾಯುವವರು ಭಾಗ್ಯವಂತರೆಂದು ಬರೆ ಎಂದು ಹೇಳಿ ಇದೆ. (೨ ಕೊರಿ. ೫. ೮. ಫಿಲಿ. ೧. ೨೩.)

5. ಕ್ರಿಸ್ತನ ಮಹಿಮೆಗಾಗಿ ಮಾಡಿದ ಕ್ರಿಯೆಗಳು, ಅಥವಾ ಪರಿಶುದ್ಧ ಸೇವೆಗಳು ಎಡೆಬಿಡದ ಸ್ನೇಹಿತರ ಹಾಗೆ ದೇವರ ಸಮುಖಕ್ಕೆ ಭಕ್ತರ ಸಂಗಡಲೇ ಹೋಗುವವು. ಭಕ್ತರು ತಮ್ಮ ಕರ್ತನ ವಿಶ್ರಾಂತಿಯಲ್ಲಿ ಪ್ರವೇಶಿಸುವಾಗ, ಅವರು ತಮ್ಮ ಕಷ್ಟಗಳಿಂದ ಬಿಡುಗಡೆಯಾಗಿ ನಿತ್ಯ ವಿಶ್ರಾಂತಿ ಹೊಂದುವರು. (ಇಬ್ರಿ. ೪. ೧೦.) ಅವರ ಕ್ರಿಯೆಗಳು ಪರದೈಸಿನಲ್ಲಿರುವ ಸುಗಂಧ ವಸ್ತುಗಳ ಹಾಗೆ ಪರಿಮಳಿಸುವವು.

6. ಪ್ರಕಾಶವುಳ್ಳ ಬಿಳೀ ಮೇಘದ ಮೇಲೆ ಆಸೀನನಾಗಿ, ಚಿನ್ನದ ಕಿರೀಟವನ್ನು ಧರಿಸಿ, ಕೈಯಲ್ಲಿ ಹದವಾದ ಕುಡುಗೋಲುಳ್ಳವನಾಗಿ ಕಾಣಿಸಲ್ಪಟ್ಟ ಮನುಷ್ಯನ ಮಗನು, ಮನುಷ್ಯರನ್ನು ರಕ್ಷಿಸುವದಕ್ಕಾಗಿ ಮನುಷ್ಯಾವತಾರ ಧರಿಸಿದ ಪುರುಷೋತ್ತಮನಾದ

ಸಮಾನನಾಗಿ, ತನ್ನ ತಲೆಯ ಮೇಲೆ ಚಿನ್ನದ ಕಿರೀಟವೂ, ತನ್ನ ಕೈಯಲ್ಲಿ ಹದವಾದ ಕುಡುಗೋಲೂ, ಉಳ್ಳವ
೧೫ ನಾಗಿ ಕೂತು ಕೊಂಡವನು. ಮತ್ತು ಬೇರೆ ದೂತನು ಮಂದಿರದೊಳಗಿಂದ ಹೊರಟು ಬಂದು, ಮೇಘದ
ಮೇಲೆ ಕೂತು ಕೊಂಡವನಿಗೆ ಮಹಾ ಶಬ್ದದಿಂದ ಕೂಗಿ—ನಿನ್ನ ಕುಡುಗೋಲನ್ನು ಹಾಕಿ, ಕೊಯ್ಯಿ; ಯಾ
೧೬ ಕಂದರೆ ಕೊಯ್ಯುವದಕ್ಕೆ ಕಾಲ ನಿನಗೆ ಬಂತು; ಭೂಮಿಯ ಬೆಳೆ [1]ಬೆಳೆದು ಒಣಗಿದೆ, ಅಂದನು. ಆಗ
ಮೇಘದ ಮೇಲೆ ಕೂತು ಕೊಂಡವನು ತನ್ನ ಕುಡುಗೋಲನ್ನು ಭೂಮಿಯ ಮೇಲೆ ಹಾಕಿದನು. ಮತ್ತು
ಭೂಮಿಯ ಬೆಳೆ ಕೊಯ್ಯಲ್ಪಟ್ಟಿತು.
೧೭ ಮತ್ತೊಬ್ಬ ದೂತನು ಪರಲೋಕದಲ್ಲಿರುವ ಮಂದಿರದೊಳಗಿಂದ ಹೊರಟು ಬಂದನು. ಅವನಿಗೂ ಹದ
೧೮ ವಾದ ಕುಡುಗೋಲು ಇತ್ತು. ಮತ್ತು [2]ಬೆಂಕಿಯ ಮೇಲೆ ಅಧಿಕಾರ ಉಂಟಾದ ಇನ್ನೊಬ್ಬ ದೂತನು
[3]ಬಲಿಪೀಠದಿಂದ ಹೊರಟು ಬಂದು, ದೊಡ್ಡ ಧ್ವನಿಯಿಂದ ಕೂಗಿ, ಆ ಹದವಾದ ಕುಡುಗೋಲುಂಟಾದವ
ನಿಗೆ—ನಿನ್ನ ಹದವಾದ ಕುಡುಗೋಲನ್ನು ಹಾಕಿ, ಭೂಮಿಯ ದ್ರಾಕ್ಷೇ ಗೊಂಚಲುಗಳನ್ನು ಕೊಯ್ಯಿ; ಯಾ
೧೯ ಕಂದರೆ ಅದರ ಫಲಗಳು ಮಾಗಿವೆ, ಅಂದನು. ಆಗ ದೂತನು ತನ್ನ ಕುಡುಗೋಲನ್ನು ಭೂಮಿಗೆ ಹಾಕಿ,
ಭೂಮಿಯ ದ್ರಾಕ್ಷೇ ಬಳ್ಳಿಯನ್ನು ಕೊಯಿದು, ದೇವರ ಉಗ್ರದ [4]ದೊಡ್ಡ ದ್ರಾಕ್ಷೇ ತೊಟ್ಟಿಯಲ್ಲಿ ಹಾಕಿ
೨೦ ದನು. ಆ ದ್ರಾಕ್ಷೇ ತೊಟ್ಟಿ ಪಟ್ಣದ ಹೊರಗೆ ತುಳಿಯಲ್ಪಟ್ಟಿತು. ಮತ್ತು [5]ಸಾವಿರದ ಆರು ನೂರು ಸ್ತಾದ್ಯ
ಗಳಷ್ಟು ದೂರದಲ್ಲಿ ಕುದುರೇ ಕಡಿವಾಣಗಳ ಮಟ್ಟಿಗೂ ದ್ರಾಕ್ಷೇ ತೊಟ್ಟಿಯಿಂದ ರಕ್ತವು ಹೊರಟಿತು.

ಕಡೇ ಬಾಧೆಗಳುಳ್ಳ ಏಳು ಪಾತ್ರೆಗಳು; ಮೃಗವನ್ನು ಜಯಿಸಿದ ಭಕ್ತರ ಸ್ತೋತ್ರಗೀತವು.
ಸಿದ್ಧವಾಗುವಿಕೆಯ ಸಂಪೂರ್ಣವು.

**15.** ಇದಲ್ಲದೆ ಪರಲೋಕದಲ್ಲಿ ದೊಡ್ಡ ಆಶ್ಚರ್ಯವಾದ ಮತ್ತೊಂದು ಗುರುತನ್ನು ಕಂಡೆನು; ಏನಂದರೆ, ದೇ
೨ ವರ ಉಗ್ರವನ್ನು ತೀರಿಸುವಂಥ [6]ಏಳು ಕಡೇ ಬಾಧೆಗಳನ್ನು ಇಟ್ಟು ಕೊಂಡ ಏಳು ದೂತರು. ಮತ್ತು

ಕ್ರಿಸ್ತನೆಂದು ತೋರುತ್ತದೆ. (೧. ೧೩. ದಾನಿ. ೭. ೧೩.) ಬಿಳೀ ಮೇಘವು ಆತನ ಮಹಿಮೆಗೂ, ಚಿನ್ನದ ಕಿರೀಟವು ಆತನ ರಾಜ ಮಹಿಮೆಗೂ, ಹದವಾದ ಕುಡುಗೋಲು ಆತನ ನ್ಯಾಯತೀರ್ವಿಕೆಗೂ ಗುರುತುಗಳಾಗಿವೆ.

1. ವೇದದಲ್ಲಿ ನ್ಯಾಯತೀರ್ವಿಕೆಯನ್ನು ಕೊಯ್ಯುವಿಕೆಗೆ ಉಪಮಾನಿಸಿ ಹೇಳಿ ಇದೆ. ಭಕ್ತರು ಧಾನ್ಯಕ್ಕೂ, ಭಕ್ತಿಹೀನರು ದ್ರಾಕ್ಷೇ ಹಣ್ಣಿಗೂ ಸಮಾನವಾಗಿದ್ದಾರೆ. (ಮತ್ತಾ. ೧೩. ೩೮. ಯೋವೇಲ. ೩. ೧೩.) ಮಂದಿರದಿಂದ ಬಂದು ಭೂಮಿಯ ಬೆಳೆ ಒಣಗಿ ಇದೆ, ನಿನ್ನ ಕುಡುಗೋಲನ್ನು ಹಾಕಿ ಕೊಯ್ಯಿ ಎಂದು ಹೇಳಿದ ದೂತನು, ಕಡೇ ದಿವಸ ಶಬ್ದ ಮಾಡುವನೆಂದು ಹೇಳಿರುವ ಪ್ರಧಾನ ದೂತನಾಗಿರ ಬಹುದು. (೧ ಥೆಸ್ಸ. ೪. ೧೬.) ಸರ್ವಲೋಕದ ನ್ಯಾಯಾಧಿಪತಿಯಾಗಿರುವ ಕ್ರಿಸ್ತನು ದೂತರಿಂದ ಲೋಕದವರನ್ನು ಒಂದಾಗಿ ಕೂಡಿಸಿ ನ್ಯಾಯ ತೀರಿಸುವದಾಗಿ ಇರುವದು. (ಮತ್ತಾ. ೧೩. ೩೦.) ಆತನ ಕೈಯಲ್ಲಿ ಆತನ ಮೊರವದೆ, ಆತನು ತನ್ನ ಕಣವನ್ನು ಶುಚಿ ಮಾಡುವನೆಂಬ ವಚನವನ್ನು ಗ್ರಹಿಸಿ ನಡಿಯ ತಕ್ಕದ್ದು. (ಮತ್ತಾ. ೩. ೧೨.)

2. ಪಂಚಭೂತಗಳಲ್ಲಿ ಒಂದೊಂದನ್ನು ಒಬ್ಬೊಬ್ಬ ದೂತನು ಆಳುತ್ತಾನೆಂದು ಹೇಳಿ ಇದೆ. (೭. ೧; ೧೬. ೫; ೧೯. ೧೭.) ಬೆಂಕಿಯ ಮೇಲೆ ಅಧಿಕಾರವುಳ್ಳ ಇನ್ನೊಬ್ಬ ದೂತನು ಎಂಬುವದು ಪಾಪಿಗಳನ್ನು ಭಕ್ಷಿಸುವ ಬೆಂಕಿಯಾದ ದೇವರ ಆಜ್ಞೆಯನ್ನು ಸಲ್ಲಿಸುವ ದೂತನನ್ನು ಕುರಿತಿರ ಬಹುದು.

3. ಇದು ತಮ್ಮ ಶತ್ರುಗಳಿಗೆ ಮುಯ್ಯಿ ತೀರಿಸುವದಕ್ಕಾಗಿ ಭಕ್ತರು ಮಾಡಿದ ಪ್ರಾರ್ಥನೆಗೆ ತಕ್ಕದ್ದಾಗಿ ಹೀಗೆ ನಡೆದಿರುವದು. (೬. ೯, ೧೦; ೮. ೩.)

4. ದೊಡ್ಡ ದ್ರಾಕ್ಷೇ ತೊಟ್ಟಿಗಳು ಪಟ್ಣದ ಹೊರಗೆ ಇರುವವು. ತೊಟ್ಟಿ ತುಳಿಯಲ್ಪಟ್ಟಿತೆಂಬುವದು ಅಪಭಕ್ತರಿಗೆ ಸಂಭವಿಸುವ ಸರ್ವ ನಾಶನವನ್ನು ಸೂಚಿಸುತ್ತದೆ. (ಯೆಶಾ. ೬೩. ೩.) ಈ ನಾಶನವು ಪರಿಶುದ್ಧ ಪಟ್ಣದ ಹೊರಗೆ ಆದದರಿಂದ ಪಟ್ಣದೊಳಗಿದ್ದ ಭಕ್ತರಿಗೆ ಯಾವ ನಾಶನವೂ ಸಂಭವಿಸಲಿಲ್ಲವೆಂಬುವದು ನಿಶ್ಚಯವಾಗಿದೆ.

5. ಸಾವಿರದ ಆರು ನೂರು ಸ್ತಾದ್ಯಗಳು ೧೫೦ ಮೈಲುಗಳಾಗುತ್ತವೆ. ಪಾಲೆಸ್ತೀನ್ ದೇಶವು ಉತ್ತರ ದಕ್ಷಿಣವಾಗಿ ೧೫೦ ಮೈಲುಗಳ ದೂರವಿರುವದು. ಆದದರಿಂದ ಇದು ಕಾನಾನ್ ದೇಶವನ್ನು ಕುರಿತದ್ದೆಂದು ಕೆಲವರು ನೆನಸುತ್ತಾರೆ. ಬೇರೆ ಕೆಲವರು ಪೇತ್ರನ ಮಾನ್ಯವೆಂದು ಕರೆಯಲ್ಪಡುವ ರೋಮು ಸಭೆಯ ಮಾನ್ಯದ ಭೂಮಿಯನ್ನು ಕುರಿತದ್ದೆಂದೂ, ಅದು ಸರಿಯಾಗಿ ೧೬೦೦ ಸ್ತಾದ್ಯಗಳ ಅಳತೆಯುಳ್ಳ ಭೂಮಿ ಎಂದೂ, ಹೇಳುತ್ತಾರೆ. ಬೇರೆ ಕೆಲವರು, ಎರಡು ೪೦ ಚದರಗಳ ವಿಸ್ತಾರವನ್ನು ಕುರಿತದ್ದೆಂದು ಹೇಳುತ್ತಾರೆ. ಯಾವ ಪ್ರಕಾರ ನೋಡಿದರೂ, ಕ್ರಿಸ್ತನ ಶತ್ರುಗಳಾಗಿರುವ ಅಪಭಕ್ತರ ನಾಶನವು ವಿಸ್ತಾರವಾಗಿಯೂ ಭಯಂಕರವಾಗಿಯೂ ಇರುತ್ತದೆಂದು ಇದರಿಂದ ತಿಳಿಯ ಬಹುದು.

6. ಮೃಗದ ರಾಜ್ಯಕ್ಕೆ ಶೇರಿದ ಅಪಭಕ್ತರ ಮೇಲೆ ಬರುವ ದೇವರ ಕೋಪಾಜ್ಞೆಯು, ಮುಂಚಿನ ಸಂಧಿಯಲ್ಲಿ ಬೆಳೆ ಕೊಯ್ಯುವಿಕೆಗೂ ದ್ರಾಕ್ಷೇ ಆಲೆಗೂ ಉಪಮಾನಿಸಿ ಹೇಳಿ ಇತ್ತು. ಈಗ



ಬೆಂಕಿ ಕಲತ [1]ಗಾಜಿನ ಸಮುದ್ರವನ್ನೂ, ಮೃಗವು, ಅದರ ವಿಗ್ರಹವು, ಅದರ ಮುದ್ರೆಯು, ಅದರ ಹೆಸರಿನ
ಲೆಖ್ಖವು, ಇವುಗಳನ್ನು ಜಯಿಸಿದವರು ದೇವರ ವೀಣೆಗಳನ್ನು ಹಿಡುಕೊಂಡು, ಆ ಗಾಜಿನ ಸಮುದ್ರದ ಮೇಲೆ
೩ ನಿಂತಿರುವದನ್ನೂ, ಕಂಡೆನು. ಅವರು ದೇವರ ದಾಸನಾದ [2]ಮೋಶೆಯ ಹಾಡನ್ನೂ, ಕುರಿಮರಿಯ ಹಾ
ಡನ್ನೂ ಹಾಡಿ,
ಹೇಳುವದೇನಂದರೆ, ಸರ್ವಶಕ್ತನಾದ ಕರ್ತನಾಗಿರುವ ದೇವರೇ, ನಿನ್ನ ಕ್ರಿಯೆಗಳು ದೊಡ್ಡವುಗಳೂ ಆಶ್ಚ
ರ್ಯವಾದವುಗಳೂ ಆಗಿವೆ. [3]ಪರಿಶುದ್ಧರ ಅರಸನೇ, ನಿನ್ನ ಮಾರ್ಗಗಳು ನೀತಿಯೂ ಸತ್ಯವೂ ಆದವುಗಳೇ.
೪ ಕರ್ತನೇ, ನಿನಗೆ ಭಯ ಪಡದೆ, ನಿನ್ನ ಹೆಸರನ್ನು ಮಹಿಮೆ ಪಡಿಸದೆ ಇರುವವನ್ಯಾರು? ಯಾಕಂದರೆ ನೀ
ನೊಬ್ಬನೇ ಪರಿಶುದ್ಧನು. ನಿನ್ನ ನ್ಯಾಯಗಳು ಪ್ರಕಟವಾದದರಿಂದ, ಜನಾಂಗಗಳೆಲ್ಲಾ [4]ಬಂದು, ನಿನ್ನ ಮುಂ
ದೆ ನಮಸ್ಕರಿಸುವರು.

ಬಾಧೆಗಳುಳ್ಳ ಏಳು ಪಾತ್ರೆಗಳನ್ನು ಹೊಯಿದದ್ದು; ಗಡಸರ್ಪವೂ ಮೃಗವೂ ಸುಳ್ಳು ಪ್ರವಾದಿಯೂ
ದೇವರ ಸಂಗಡ ಯುದ್ಧ ಮಾಡುವದಕ್ಕೆ ಅರಸರನ್ನು ಪ್ರೇರೇಪಿಸಿದ್ದು; ದೇವರ ನ್ಯಾಯತೀರ್ವಿಕೆಗಳು ಸಂಪೂರ್ಣವಾದದ್ದು.

೫ ಇವುಗಳ ತರುವಾಯ ನಾನು ನೋಡಲಾಗಿ, ಇಗೋ, ಪರಲೋಕದಲ್ಲಿ [5]ಸಾಕ್ಷಿಯ ಗುಡಾರದ [6]ಮಂದಿ
೬ ರವು ತೆರೆಯಲ್ಪಟ್ಟಿತು. ಮತ್ತು ಏಳು ಬಾಧೆಗಳನ್ನು ಹಿಡುಕೊಂಡ ಏಳು ದೂತರು, ಪವಿತ್ರವಾದ ಮಿಂ

ಅದನ್ನು ಏಳು ಬಾಧೆಗಳಿಗೆ ಉಪಮಾನಿಸಿ ಇದೆ. ಏಳು ತುತೂರಿಗಳ ದರ್ಶನವು ಏಳನೇ ಮುದ್ರೆಯಲ್ಲಿ ಅಡಗಿದ್ದ ಪ್ರಕಾರ, ಏಳು ಬಾಧೆಗಳ ದರ್ಶನವು ಏಳನೇ ತುತೂರಿಯ ದರ್ಶನದಲ್ಲಿ ಅಡಕವಾಗಿದೆ. (೮. ೧, ೨.) ಈ ಬಾಧೆಗಳು ರೋಮು ರಾಜ್ಯದಲ್ಲಿ ಉಂಟಾದವು. ಏಳನೇ ಬಾಧೆಯು ಸಂಭವಿಸಿದಾಗ ಮಹಾ ಬಾಬೆಲು ಬಿತ್ತು. ಅರಸುಗಳ ಅರಸನಾದ ಕರ್ತನು ಪರಮ ಸೈನ್ಯಗಳೊಡನೆ ನ್ಯಾಯ ತೀರಿಸುವದಕ್ಕೆ ಪ್ರಸನ್ನನಾದನು.

1. ದೇವರ ಉಗ್ರ ತುಂಬಿದ ಪಾತ್ರೆಗಳನ್ನು ಹಿಡಿದಿದ್ದ ದೂತರ ಮುಂದೆ ಯೋಹಾನನು ಮುಂತಾದ ಭಕ್ತರು ಲೋಕದಲ್ಲಿ ನಡಿಯುವ ನ್ಯಾಯನಿರ್ಣಯಗಳನ್ನು ಕಂಡು ಹಿಂಜರಿಯದೆ, ಅವರ ವಿಶ್ವಾಸ ದೃಢ ಪಡುವ ಹಾಗೆ, ಜಯಶೀಲರಾದ ಸಭೆಯ ಸ್ಥಿತಿಯನ್ನು ಕುರಿತ ಒಂದು ದರ್ಶನವು ದೇವಾಲಯದಲ್ಲಿ ಕಾಣಲ್ಪಟ್ಟಿತು. ಬೆಂಕಿ ಕಲತ ಗಾಜಿನ ಸಮುದ್ರವಿದ್ದಂತೆಯೂ, ಅದನ್ನು ದಾಟಿ ಆಚೇ ಥಡಕ್ಕೆ ಶೇರಿದ ಭಕ್ತರು ತಮ್ಮ ಶತ್ರುಗಳು ಅದರಲ್ಲಿ ಮುಣುಗಿ ಹೋದದ್ದನ್ನು ಕಂಡು, ತಮಗೆ ಜಯವನ್ನು ಕೊಟ್ಟ ದೇವರನ್ನು ಸ್ತುತಿಸಿದಂತೆಯೂ, ತೋರಿಸಿ ಇದೆ. (ಗಾಜಿನ ಸಮುದ್ರವನ್ನು ಕುರಿತು ೪. ೬. ವಚನದ ವ್ಯಾಖ್ಯಾನ ನೋಡ ಬೇಕು.) ಅಗ್ನಿಸ್ತಂಭದಲ್ಲಿ ಕಾಣಿಸಿದ ದೇವರ ಅನುಗ್ರಹದಿಂದ ಇಸ್ರಯೇಲ್ಯರು ಕೆಂಪು ಸಮುದ್ರವನ್ನು ದಾಟಿ ಆಚೇ ಥಡಕ್ಕೆ ಶೇರಿ, ತಮ್ಮ ಶತ್ರುಗಳಾದ ಐಗುಪ್ತ್ಯರು ಆ ಸಮುದ್ರದಲ್ಲಿ ನಾಶವಾದದ್ದನ್ನು ಕಂಡು, ತಮ್ಮನ್ನು ರಕ್ಷಿಸಿದ ದೇವರನ್ನು ಸ್ತುತಿಸಿದ ಪ್ರಕಾರ, ಕಡೆಯಲ್ಲಿ ಕ್ರಿಸ್ತನ ಶರಣಾಗತರಾದ ಭಕ್ತರೆಲ್ಲರೂ ಸ್ತುತಿಸುವರು. ಬೆಂಕಿ ಕಲತ ಗಾಜಿನ ಸಮುದ್ರವೆಂಬುವದು, ಭಕ್ತರ ವಿಷಯದಲ್ಲಿ ದೇವರ ಪ್ರೀತಿಯೂ, ಅಪಭಕ್ತರ ವಿಷಯದಲ್ಲಿ ಆತನ ಕೋಪವೂ, ಲೋಕದಲ್ಲಿ ಪ್ರಕಟವಾಗುವದನ್ನು ಕುರಿತು ಹೇಳ ಬಹುದು. ಆತನ ಅದ್ಭುತ ಕ್ರಿಯೆಗಳೆಲ್ಲಾ ಸದ್ಯಕ್ಕೆ ಮಂದವಾಗಿ ಕಾಣಿಸಿದರೂ, ಕಡೆಯಲ್ಲಿ ಪ್ರಕಾಶವಾಗಿ ತೋರುವವು.

2. ಕೆಂಪು ಸಮುದ್ರವನ್ನು ದಾಟಿ ಆಚೇ ಥಡ ಶೇರಿದ ಇಸ್ರಯೇಲ್ಯರು ಮೋಶೆಯಿಂದ ರಚಿಸಲ್ಪಟ್ಟ ಜಯಗೀತವನ್ನು ಉತ್ಸಾಹದಿಂದ ಹಾಡಿದರು. (ಹೊರ. ೧೫. ೧—೨೧.) ಅದೇ ಪ್ರಕಾರ, ಮೃಗಕ್ಕೂ, ಅದರ ವಿಗ್ರಹಕ್ಕೂ, ಅದರ ಮುದ್ರೆಗೂ, ಅದರ ಹೆಸರಿನ ಲೆಖ್ಖಕ್ಕೂ ಒಳಗಾಗದೆ, ಅದನ್ನು ಜಯಿಸಿದವರಾದ ಸತ್ಯಸಾಕ್ಷಿಗಳೂ, ಸ್ತ್ರೀಬೀಜದವರೂ, ಆಯಲ್ಪಟ್ಟವರೂ, ಪರಿಶುದ್ಧರೂ ಎಂದು, ಈ ಗ್ರಂಥದಲ್ಲಿ ಹೇಳಲ್ಪಟ್ಟ ಭಕ್ತರೆಲ್ಲರೂ, ಲೋಕವೆಂಬ ಸಮುದ್ರವನ್ನು ದಾಟಿ ಆ ಥಡಕ್ಕೆ ಶೇರಿದಾಗ, ದೇವರ ಮಹಿಮೆಯನ್ನು ಇಂಪಾಗಿ ನುಡಿಯುವ ದೇವರ ವೀಣೆಗಳನ್ನು ಹಿಡುಕೊಂಡು, ಮೋಶೆಯ ಹಾಡನ್ನು ಮಾತ್ರವಲ್ಲ, ಮುಖ್ಯ ಜಯವನ್ನೂ ರಕ್ಷಣೆಯನ್ನೂ ಉಂಟು ಮಾಡಿದ ಕುರಿಮರಿಯ ಹಾಡನ್ನೂ ಉತ್ಸಾಹದಿಂದ ಹಾಡುವರು. "ಯೆಹೋವನೇ! ದೇವರುಗಳಲ್ಲಿ ನಿನ್ನ ಹಾಗೆ ಯಾರು? ನಿನ್ನ ಹಾಗೆ ಪರಿಶುದ್ಧತ್ವದಲ್ಲಿ ಘನವುಳ್ಳವನೂ, ಸ್ತೋತ್ರಗಳಲ್ಲಿ ಭಯಂಕರನೂ, ಅದ್ಭುತ ಮಾಡುವವನೂ ಯಾರು?" ಎಂಬುವದು ಆ ಕೀರ್ತನೆಯ ಸಾರವಾಗಿರುವದು. (ಹೊರ. ೧೫. ೧೧.) "ಯೆಹೋವನು ಯುಗಯುಗಾಂತರಗಳಿಗೂ ಆಳುವನು" ಎಂಬುವದು ಅದರ ಅಲಂಕೃತವಾಗಿರುವದು. (ಹೊರ. ೧೫. ೧೮.)

3. ಪರಿಶುದ್ಧರ ಅರಸನೇ ಎಂಬುವದಕ್ಕೆ ಕೆಲ ಮುಖ್ಯ ಕೈಬರಹದ ಪ್ರತಿಗಳಲ್ಲಿ, ಜನಾಂಗಗಳ ಅರಸನೇ ಎಂಬದಾಗಿ ಉಂಟು. (ಯೆರೆ. ೧೦. ೭.) ಲೋಕದ ಸಮಸ್ತ ಜನಾಂಗಗಳಿಗೂ ಯೆಹೋವನೇ ದೊಡ್ಡ ಅರಸನು.

4. ದೇವರ ನ್ಯಾಯತೀರ್ವಿಕೆಗಳನ್ನು ಕಾಣುವ ಎಲ್ಲಾ ಜನಾಂಗಗಳೂ ಬಂದು ಆತನಿಗೆ ನಮಸ್ಕರಿಸುವರು. (ಕೀರ್ತ. ೮೬. ೯. ಯೆಶಾ. ೨೬. ೯.)

5. ಇಬ್ರೀಯ ಭಾಷೆಯಲ್ಲಿ ಸಭೆಯ ಗುಡಾರವೆಂಬುವದಕ್ಕೆ ಸೆಪ್ತುವಜಿಂತ್ ಭಾಷಾಂತರದಲ್ಲಿ ಸಾಕ್ಷಿಯ ಗುಡಾರವೆಂಬದಾಗಿದೆ. (ಅಂಕೆ. ೧೪. ೧೦.)

6. ೧೧. ೧. ವಚನದ ವ್ಯಾಖ್ಯಾನ ನೋಡ ಬೇಕು.

ಚುವ ನಾರುವಸ್ತ್ರಗಳನ್ನುಟ್ಟು ಕೊಂಡು, [1]ಹೊಂದಟ್ಟಿಗಳನ್ನು ಎದೆಗಳಿಗೆ ಕಟ್ಟಿ ಕೊಂಡು, ಮಂದಿರದೊಳ
೭ ಗಿಂದ ಹೊರಟು ಬಂದರು. ಮತ್ತು ನಾಲ್ಕು ಜೀವಿಗಳಲ್ಲಿ ಒಂದು, ಯುಗಯುಗಾಂತರಗಳ ವರಿಗೂ ಬದು
೮ ಕುವ ದೇವರ ಉಗ್ರದಿಂದ ತುಂಬಿರುವ [2]ಏಳು ಚಿನ್ನದ ಪಾತ್ರೆಗಳನ್ನು ಏಳು ದೂತರಿಗೆ ಕೊಟ್ಟಿತು. ಆಗ
ದೇವರ ಮಹಿಮೆಯಿಂದಲೂ, ಅವನ ಬಲದಿಂದಲೂ, ಮಂದಿರವು [3]ಹೊಗೆ ತುಂಬಿತು; ಮತ್ತು ಏಳು
ದೂತರ ಏಳು ಬಾಧೆಗಳು ತೀರುವ ಪರ್ಯಂತರ ಯಾರೂ ಮಂದಿರದಲ್ಲಿ ಪ್ರವೇಶಿಸ ಕೂಡದೆ ಇತ್ತು.

**16.** [4]ಮತ್ತು ಆ ಏಳು ದೂತರಿಗೆ, ನೀವು ಹೋಗಿ, ದೇವರ ಉಗ್ರದ ಪಾತ್ರೆಗಳನ್ನು ಭೂಮಿಯ ಮೇಲೆ
ಹೊಯ್ಯಿರಿ, ಎಂದು ಹೇಳುವಂಥ, [5]ಮಂದಿರದಿಂದಾದ, ಮಹಾ ಶಬ್ದವನ್ನು ಕೇಳಿದೆನು.
೨ ಆಗ ಮೊದಲನೆಯವನು ಹೊರಟು ಹೋಗಿ, ತನ್ನ ಪಾತ್ರೆಯನ್ನು [6]ಭೂಮಿಯ ಮೇಲೆ ಹೊಯಿದನು.
ಆಗ ಮೃಗದ ಮುದ್ರೆ ಹೊಂದಿದವರಾಗಿ, ಅದರ ವಿಗ್ರಹಕ್ಕೆ ನಮಸ್ಕರಿಸುವ ಮನುಷ್ಯರಿಗೆ [7]ಕೆಟ್ಟ ಕೊಳತ
ಹುಣ್ಣು ಉಂಟಾಯಿತು.

1. ಏಳು ಬಾಧೆಗಳನ್ನು ಹಿಡುಕೊಂಡ ದೂತರು ಯಾಜಕರ ಹಾಗೆ ಧರಿಸಿ ಕೊಂಡು ಮಂದಿರವಾದ ದೇವರ ಸಮುಖದಿಂದ ಹೊರಟರು. (ಹೊರ. ೨೮. ೨೭—೨೯, ೩೯, ೪೦. ಲೇವಿ. ೧೬. ೪. ದಾನಿ. ೧೦. ೫.)

2. ಇವು ದೇವಾಲಯದಲ್ಲಿ ಬಳಸಿದ ಚಿನ್ನದ ಪಾತ್ರೆಗಳಿಗೆ ಸಮಾನವಾಗಿದ್ದವು. (೨ ದಿನಚ. ೪. ೮.)

3. ಆಚರಣೆಯ ಗುಡಾರವು ಮೋಶೆಯಿಂದ ಪ್ರತಿಷ್ಠೆ ಮಾಡಲ್ಪಟ್ಟಾಗಲೂ, ಸೊಲೊಮೋನನಿಂದ ದೇವಾಲಯವು ಪ್ರತಿಷ್ಠೆ ಮಾಡಲ್ಪಟ್ಟಾಗಲೂ, ಒಂದು ವಿಧವಾದ ಹೊಗೆಯೂ ಮೇಘವೂ ಕಾಣಲ್ಪಟ್ಟ ಪ್ರಕಾರ, ಈ ಮಂದಿರದಲ್ಲಿಯೂ ಕಾಣಲ್ಪಟ್ಟಿತು. (ಹೊರ. ೪೦. ೩೪. ೧ ಅರ. ೮. ೧೦. ಕೀರ್ತ. ೧೮. ೮. ಯೆಶಾ. ೬. ೪. ಇಬ್ರಿ. ೧೨. ೨೯.) ಇದು ಒಬ್ಬರೂ ಶೇರ ಕೂಡದ ದೇವರ ಸಮುಖಕ್ಕೆ ಗುರುತಾಗಿತ್ತು; ಮತ್ತು ಆತನ ಕೋಪಕ್ಕೂ ಗುರುತಾಗಿತ್ತು. ಧೂಪವನ್ನಿಟ್ಟು ಪ್ರಾರ್ಥಿಸುವದಕ್ಕೆ ಬಳಸಿದ ಚಿನ್ನದ ಧೂಪಕಲಶಗಳು ದೇವರ ಕೋಪವುಳ್ಳ ಕಲಶಗಳಾಗಿ ಹೋದದರಿಂದ ದೇವರ ದಯಕ್ಕೆ ಸ್ಥಳವಿಲ್ಲದೆ ಇತ್ತು. ಇಸ್ರಯೇಲ್ಯರನ್ನು ಅರಣ್ಯದಲ್ಲಿ ನಡಿಸಿದ ಅಗ್ನಿಸ್ತಂಭವು ದಾಸರ ಮೇಲಿದ್ದ ದೇವರ ಅನುಗ್ರಹಕ್ಕೆ ಗುರುತಾಗಿಯೂ, ಮೇಘಸ್ತಂಭವು ಅಪಭಕ್ತರ ಮೇಲಿದ್ದ ಕೋಪಕ್ಕೆ ಗುರುತಾಗಿಯೂ ಇದ್ದ ಪ್ರಕಾರ ಈ ದರ್ಶನದಲ್ಲಿ ಕಾಣಲ್ಪಟ್ಟಿತು. (ಹೊರ. ೧೪. ೨೦.)

4. ಎಲ್ಲಾ ಸಿದ್ಧವಾದ ತರುವಾಯ ಬಾಧೆಗಳುಳ್ಳ ದೇವರ ಉಗ್ರದ ಪಾತ್ರೆಗಳು ಹೊಯ್ಯಲ್ಪಟ್ಟವು. ಮೊದಲನೇ ನಾಲ್ಕು ಪಾತ್ರೆಗಳು ಭೂಮಿಯ ಮೇಲೆಯೂ, ಸಮುದ್ರದ ಮೇಲೆಯೂ, ನದಿಗಳ ಮೇಲೆಯೂ, ಸೂರ್ಯನ ಮೇಲೆಯೂ ಹೊಯ್ಯಲ್ಪಟ್ಟಾಗ ದೊಡ್ಡ ಉಪದ್ರವು ಸಂಭವಿಸಿತು. ಆದಾಗ್ಯೂ ಜನರಲ್ಲಿ ಮನಸ್ಸು ಮಾರ್ಪಡುವಿಕೆಯೂ ಗುಣ ಪಡುವಿಕೆಯೂ ಉಂಟಾಗಲಿಲ್ಲ. (೧೬. ೧—೯.) ಐದನೇ ಪಾತ್ರೆಯು ಮೃಗದ ಸಿಂಹಾಸನದ ಮೇಲೆ ಹೊಯ್ಯಲ್ಪಟ್ಟಿತು. ಅದರಿಂದ ಅವನ ರಾಜ್ಯದಲ್ಲಿ ಕತ್ತಲೆಯೂ ವೇದನೆಯೂ ಉಂಟಾಯಿತು. ಆದರೆ ಆ ಉಪದ್ರಪಟ್ಟ ಜನರು ಗುಣ ಪಡಲಿಲ್ಲ. (೧೦, ೧೧. ವ.) ಆರನೇ ಪಾತ್ರೆಯು ಫ್ರಾತು ನದಿಯ ಮೇಲೆ ಹೊಯ್ಯಲ್ಪಟ್ಟಿತು. ಆಗ ಅದರ ನೀರು ಬತ್ತಿ ಹೋಗಿ, ಸಂಹಾರದೂತರು ಧಾರಾಳವಾಗಿ ಬರುವಂತೆ ಮಾರ್ಗವಾಯಿತು. (೧೨. ವ.) ತರುವಾಯ ಗಡಸರ್ಪವೂ, ಮೃಗವೂ, ಸುಳ್ಳುಪ್ರವಾದಿಯೂ ಮೂರು ಅಶುದ್ಧಾತ್ಮಗಳನ್ನು ಕಳುಹಿಸಿ, ಲೋಕದ ಅರಸರನ್ನು ಕೂಡಿಸಿ, ಕರ್ತನು ಪ್ರಸನ್ನನಾಗುವಾಗ ಆತನ ಸಂಗಡ ಯುದ್ಧ ಮಾಡುವಂತೆ ಪ್ರೇರೇಪಿಸಿದವು. ಅದಕ್ಕೆ ಆತನ ದಾಸರು ಜಾಗ್ರತೆಯಾಗಿರುವಂತೆ ಎಚ್ಚರಿಸಲ್ಪಟ್ಟರು. (೧೩—೧೬. ವ.) ಏಳನೇ ದೂತನು ತನ್ನ ಪಾತ್ರೆಯನ್ನು ಆಕಾಶದಲ್ಲಿ ಹೊಯಿದನು. ಆಗ ಮಿಂಚುಗಳೂ ಗುಡುಗುಗಳೂ ಮಹಾ ಭೂಕಂಪವೂ ಉಂಟಾಗಿ, ಲೋಕದಲ್ಲಿರುವ ಪಟ್ಣಗಳನ್ನು, ವಿಶೇಷವಾಗಿ ಬಾಬೆಲನ್ನು ಮುಗುಚಿ ಬಿಟ್ಟವು. (೧೭—೧೯. ವ.) ದ್ವೀಪಗಳೂ ಪರ್ವತಗಳೂ ಇದ್ದ ಸ್ಥಳವು ತಿಳಿಯದಂತೆ ಕಾಣದೆ ಹೋದವು. ಇನ್ನೂ ಗುಣ ಪಡದೆ ಇದ್ದವರು ಬಲವಾದ ಕಲ್ಮಳೆಯಿಂದ ನಾಶವಾದರು. (೨೦, ೨೧. ವ.)

5. ಬಾಧೆಗಳುಳ್ಳ ಏಳು ಪಾತ್ರೆಯನ್ನು ಹೊಯ್ಯ ಬೇಕೆಂಬ ಕಟ್ಟಳೆ ಮಂದಿರದಿಂದ ದೇವರ ಬಳಿಯಿಂದ ಉಂಟಾಯಿತು. (೯. ೧೩; ೧೮. ೪; ೧೯. ೫.)

6. ಮೊದಲನೇ ದೂತನು ದೇವರ ಉಗ್ರದ ಪಾತ್ರೆಯನ್ನು ಸಮುದ್ರದ ಮೇಲೆ ಅಲ್ಲ, ಭೂಮಿಯ ಮೇಲೆ ಹೊಯಿದನು. ನಾಲ್ಕು ಪಾತ್ರೆಗಳನ್ನು ಕುರಿತ ದರ್ಶನಗಳೂ, ಇದಕ್ಕೆ ಮುಂಚಿನ ನಾಲ್ಕು ತುತೂರಿಗಳನ್ನು ಕುರಿತ ದರ್ಶನಗಳೂ ಒಂದು ಪ್ರಕಾರ ಸಮಾನವಾಗಿವೆ. ಎರಡು ದರ್ಶನಗಳಲ್ಲಿಯೂ, ಭೂಮಿಯೂ ಸಮುದ್ರವೂ ನದಿಗಳೂ ಸೂರ್ಯನೂ ಒಂದೇ ಕ್ರಮವಾಗಿ ಬರುತ್ತವೆ. ಆದಾಗ್ಯೂ ಈ ಪ್ರವಾದನೆಯಲ್ಲಿ ಉಂಟಾದ ಬಾಧೆಗಳು, ಮುಂಚಿನ ಬಾಧೆಗಳಿಗಿಂತ ಅಧಿಕ ವಿಸ್ತಾರವೂ ಭಯಂಕರವೂ ಆದವುಗಳು. (೩, ೪, ೮ನೇ ವಚನಗಳನ್ನೂ, ೮. ೮—೧೨. ವರೆಗಿರುವ ವಚನಗಳನ್ನೂ ಸರಿ ನೋಡ ಬೇಕು.) ಇವು ಬಹುಶಾ ಐಗುಪ್ತದ ಬಾಧೆಗಳಿಗೆ ಸಮಾನವಾಗಿವೆ. (ಹೊರ. ೯. ೮—೧೧; ೭. ೨೦, ೨೧; ೧೦. ೨೨; ೯. ೧೮—೨೯.) ಆ ಬಾಧೆಗಳ ಹಾಗೆ ಈ ಬಾಧೆಗಳಲ್ಲಿಯೂ, ದೇವರ ನೀತಿಯೂ ಬಲವೂ ತೋರುವದರಿಂದಲಾದರೂ ಜನರು ಗುಣ ಪಡಲಿಲ್ಲವೆಂಬುವದನ್ನು ಆಲೋಚಿಸ ತಕ್ಕದ್ದು.

7. ಮೊದಲನೇ ದೂತನು ತುತೂರಿ ಊದಲಾಗಿ, ರಕ್ತ ಕಲತ ಕಲ್ಮಳೆಯು ಭೂಮಿಯಲ್ಲಿ ಹೊಯ್ಯಲ್ಪಟ್ಟ ಪ್ರಕಾರ (೮. ೭.)



೩ ಮತ್ತು ಎರಡನೇ ದೂತನು ತನ್ನ ಪಾತ್ರೆಯನ್ನು ಸಮುದ್ರದಲ್ಲಿ ಹೊಯಿದನು. ಅದು [1]ಸತ್ತವನ ರಕ್ತದಂತೆ
ರಕ್ತವಾಯಿತು; ಮತ್ತು ಸಮುದ್ರದಲ್ಲಿ ಬದುಕುವ ಪ್ರಾಣಿಗಳೆಲ್ಲಾ ಸತ್ತು ಹೋದವು.
೪ ಮತ್ತು ಮೂರನೇ ದೂತನು ತನ್ನ ಪಾತ್ರೆಯನ್ನು [2]ನದಿಗಳಲ್ಲಿಯೂ ನೀರುಬುಗ್ಗೆಗಳಲ್ಲಿಯೂ ಹೊಯಿದನು.
೫ ಅವು ರಕ್ತವಾದವು. ಮತ್ತು [3]ನೀರುಗಳ ದೂತನು—ಇರುವವನೂ ಇದ್ದವನೂ ಪರಿಶುದ್ಧನೂ ಆಗಿರುವ
೬ ಕರ್ತನೇ, ನೀನು ಈ ನ್ಯಾಯಗಳನ್ನು ತೀರಿಸಿದ್ದರಿಂದ ನೀತಿವಂತನಾಗಿದ್ದೀ; ಯಾಕಂದರೆ ಪರಿಶುದ್ಧರ ರಕ್ತ
ವನ್ನು ಚೆಲ್ಲಿದ್ದಾರೆ; ಮತ್ತು ರಕ್ತವನ್ನು ಅವರಿಗೆ ಕುಡಿಯ ಕೊಟ್ಟದ್ದೀ; ಅದಕ್ಕೆ ಪಾತ್ರರಾಗಿದ್ದಾರೆ, ಎಂದು
೭ ಹೇಳುವದನ್ನು ಕೇಳಿದೆನು. ಮತ್ತೊಬ್ಬನು ಬಲಿಪೀಠದೊಳಗಿಂದ, ಹೌದು, ಸರ್ವಶಕ್ತನಾಗಿರುವ ಕರ್ತ
ನಾದ ದೇವರೇ, ನಿನ್ನ ನ್ಯಾಯತೀರ್ವಿಕೆಗಳು ಸತ್ಯವೂ ನೀತಿಯೂ ಆದವುಗಳೇ, ಎಂದು ಹೇಳುವದನ್ನು
ಕೇಳಿದೆನು.
೮ ನಾಲ್ಕನೇ ದೂತನು ತನ್ನ ಪಾತ್ರೆಯನ್ನು [4]ಸೂರ್ಯನ ಮೇಲೆ ಹೊಯಿದನು. ಮತ್ತು ಬೆಂಕಿಯಿಂದ
೯ ಮನುಷ್ಯರನ್ನು ಸುಡ ಅವನಿಗೆ ಕೊಡಲ್ಪಟ್ಟಿತು. ಆಗ ಮನುಷ್ಯರು ದೊಡ್ಡ ಕಾವಿನಿಂದ ಸುಡಲ್ಪಟ್ಟು, ಈ
ಬಾಧೆಗಳ ಮೇಲೆ ಅಧಿಕಾರ ಉಂಟಾದ ದೇವರ ಹೆಸರನ್ನು ದೂಷಿಸಿ, ಅವನಿಗೆ ಮಹಿಮೆ ಕೊಡುವದಕ್ಕೆ
ಮಾನಸಾಂತರ ಪಡಲಿಲ್ಲ.
೧೦ ಐದನೇ ದೂತನು ತನ್ನ ಪಾತ್ರೆಯನ್ನು [5]ಮೃಗದ ಸಿಂಹಾಸನದ ಮೇಲೆ ಹೊಯಿದನು. ಆಗ ಅದರ ರಾಜ್ಯ
೧೧ ವು ಕತ್ತಲಾಯಿತು; ಮತ್ತು ಅವರು ಕಷ್ಟದ ನಿಮಿತ್ತ ತಮ್ಮ ನಾಲಿಗೆಗಳನ್ನು ಕಚ್ಚಿ ಕೊಂಡು, ತಮ್ಮ ಕಷ್ಟ
ಗಳ ನಿಮಿತ್ತವೂ, ತಮ್ಮ ಹುಣ್ಣುಗಳ ನಿಮಿತ್ತವೂ, ಪರಲೋಕದ ದೇವರನ್ನು ದೂಷಿಸಿ, ತಮ್ಮ ಕ್ರಿಯೆಗ
ಳನ್ನು ಬಿಟ್ಟು ಮಾನಸಾಂತರ ಪಡಲಿಲ್ಲ.

ಬಾಧೆಯುಳ್ಳ ಮೊದಲನೇ ಪಾತ್ರೆಯು ಭೂಮಿಯಲ್ಲಿ ಹೊಯ್ಯಲ್ಪಟ್ಟಾಗ, ಕೆಟ್ಟ ಹುಣ್ಣು ಉಂಟಾಯಿತು. ಇದು ಐಗುಪ್ತದಲ್ಲಾದ ಆರನೇ ಬಾಧೆಗೆ ಸರಿಯಾಗಿತ್ತು. (ಹೊರ. ೯. ೧೦.) ಆ ಬಾಧೆ ಐಗುಪ್ತದ ಮಂತ್ರಗಾರರಿಗೂ ಫರೋನನ ಸೇವಕರಿಗೂ ಉಂಟಾದ ಪ್ರಕಾರ, ಈ ಬಾಧೆ ಮೃಗದ ಮುದ್ರೆಯುಳ್ಳವರಿಗೂ ಅದರ ವಿಗ್ರಹಕ್ಕೆ ನಮಸ್ಕರಿಸಿದ ಅಪಭಕ್ತರೆಲ್ಲರಿಗೂ ಸಂಭವಿಸಿತು. ಈ ಬಾಧೆ ರೋಮ ರಾಜ್ಯದಲ್ಲಿಯೂ ಫ್ರಾನ್ಸ್ ದೇಶದಲ್ಲಿಯೂ ಉಂಟಾದ ಕೆಟ್ಟ ನಾಸ್ತಿಕ ಮತವನ್ನು ಕುರಿತದ್ದೆಂದು ಕೆಲ ವಿದ್ವಾಂಸರು ಹೇಳುತ್ತಾರೆ.

1. ಎರಡನೇ ದೂತನು ತನ್ನ ಪಾತ್ರೆಯನ್ನು ಸಮುದ್ರದ ಮೇಲೆ ಹೊಯಿದಾಗ ಸತ್ತವನ ರಕ್ತದ ಹಾಗೆ ಸಮುದ್ರದ ನೀರು ಘಟ್ಟಿಯಾದದರಿಂದ ಅದರಲ್ಲಿದ್ದ ಪ್ರಾಣಿಗಳೆಲ್ಲಾ ನಾಶವಾದವು. ಐಗುಪ್ತದಲ್ಲಿ ಮೊದಲನೇ ಬಾಧೆಯಲ್ಲಿ ನದಿಯ ನೀರು ರಕ್ತವಾದ ಪ್ರಕಾರ ಈ ಬಾಧೆಯಲ್ಲಿಯೂ ಆಯಿತು. ಇದು ರೋಮ ರಾಜ್ಯದಲ್ಲಿ ನಡೆದ ರಕ್ತಪ್ರವಾಹವಾದ ಯುದ್ಧಗಳನ್ನೂ ಕಲಹಗಳನ್ನೂ ಕುರಿತದ್ದೆಂದು ತೋರುತ್ತದೆ. ವಿಶೇಷವಾಗಿ ಫ್ರಾನ್ಸ್ ದೇಶದಲ್ಲಿ "ಭಯಂಕರ ಆಳಿಕೆ" ಎಂದು ಹೆಸರ್ಗೊಂಡ ಆಳಿಕೆ ನಡಿಯುವ ಕಾಲದಲ್ಲಿ ಬೀದಿಗಳಲ್ಲೆಲ್ಲಾ ರಕ್ತಪ್ರವಾಹ ಹರಿಯುವಂತೆ, ನಾನಾ ಕಕ್ಷಿಗಳವರಲ್ಲಿ ಕಠಿಣ ಯುದ್ಧಗಳೂ ಕೊಲೆಗಳೂ ನಡೆದವು. ಅನೇಕ ಮಂದಿ ನಾಶವಾದರು.

2. ಮೂರನೇ ದೂತನು ತನ್ನ ಪಾತ್ರೆಯನ್ನು ನದಿಗಳಲ್ಲಿಯೂ ನೀರುಬುಗ್ಗೆಗಳಲ್ಲಿಯೂ ಹೊಯಿದಾಗ, ಅವು ರಕ್ತವಾಗಿ ಮಾರ್ಪಟ್ಟವು. ಆ ಕಾಲದಲ್ಲಿ ನೀರಿನ ಬುಗ್ಗೆಗಳು ಹುಟ್ಟುವ ಸ್ಥಾನವಾದ ಬೆಟ್ಟಗಳುಳ್ಳ ಶೀಮೆಗಳ ಮೇಲೆ ಯುದ್ಧಗಳಿಂದ ಬಹಳ ನಾಶ ಬರುವದೆಂದು ತೋರುತ್ತದೆ.

3. "ನೀರುಗಳ ದೂತನು" ಜಾರಿ ಹೋಗದ ದೇವರ ನೀತಿಗಾಗಿ ಆತನನ್ನು ಹೊಗಳಿ ಸ್ತುತಿಸುತ್ತಾನೆ. ಪರಿಶುದ್ಧರಾದ ಭಕ್ತರ ರಕ್ತವನ್ನು ಚೆಲ್ಲಿದ ರೋಮ ಸಭೆಯು ರಕ್ತವನ್ನೇ ಕುಡಿಯ ಬೇಕಾಯಿತು. ಅದು ದೇವರ ಸರಿಯಾದ ನೀತಿಗೆ ದೃಷ್ಟಾಂತವಾಗಿದೆ. ಕೇಡನ್ನು ಬಿತ್ತಿದವನು ಕೇಡನ್ನೇ ಕೊಯ್ಯುವನು. ರೋಮ ರಾಜ್ಯದ ಪ್ರಜೆಗಳಲ್ಲಿ ಅನೇಕರು ಪಾಪು ಮಾರ್ಗದ ಗುರುಗಳನ್ನೂ ಮತಸ್ಥರನ್ನೂ ಹಗೆ ಮಾಡಿ, ಅವರನ್ನು ಕೊಂದು, ಅವರ ರಕ್ತವನ್ನು ಚೆಲ್ಲಿದರೆಂದು ಚರಿತ್ರೆಯಲ್ಲಿ ಹೇಳಿ ಇದೆ.

4. ನಾಲ್ಕನೇ ತುತೂರಿಯಲ್ಲಿ ಸೂರ್ಯನಲ್ಲಿ ಕತ್ತಲೆಯಾದ ಪ್ರಕಾರ, ನಾಲ್ಕನೇ ಪಾತ್ರೆಯು ಸೂರ್ಯನಲ್ಲಿ ಅಧಿಕ ಕಾಂಕೆಯನ್ನುಂಟು ಮಾಡಿತು. ಇದು ರೋಮ ರಾಜ್ಯದಲ್ಲಿ ಉಂಟಾದ ಬರವನ್ನು ಕುರಿತದ್ದೋ, ಅಥವಾ ನೆಪೋಲಿಯೋನ್ ಮುಂತಾದ ಕ್ರೂರ ಅರಸರಿಂದುಂಟಾದ ಮಹಾ ಉಪದ್ರವನ್ನು ಕುರಿತದ್ದೋ ನಿಶ್ಚಯವಾಗಿ ಹೇಳಲಾಗದು. ಆದರೂ ಈ ಬಾಧೆಯಿಂದ ಜನರು ದೇವರನ್ನು ಅಧಿಕವಾಗಿ ದೂಷಿಸಿದರೇ ಹೊರ್ತು ತಮ್ಮ ಪಾಪಗಳನ್ನು ಬಿಟ್ಟು ಮಾನಸಾಂತರ ಪಡಲಿಲ್ಲ.

5. ಇದು ಮೃಗದ ಸಿಂಹಾಸನವಾದ ರೋಮಪುರಿಯನ್ನು ಕುರಿತದ್ದು. ೧೮೦೯ನೇ ವರುಷದಲ್ಲಿ ಫ್ರಾನ್ಸ್ ದೇಶದ ಚಕ್ರವರ್ತಿಯಾದ ನೆಪೋಲಿಯೋನನು ಪೋಪನ ಲೌಕಿಕಾಧಿಕಾರವನ್ನು ತೆಗೆದು ಹಾಕಿ, ರೋಮಪುರಿಯನ್ನು ಎರಡನೇ ಪಟ್ಣವಾಗುವಂತೆ ತಗ್ಗಿಸಿದನು. ಕೆಲವು ಕಾಲ ಪೋಪರು ಫ್ರಾನ್ಸ್ ದೇಶದ ಅವಿಜ್ಞೊನ್ ಪಟ್ಣದಲ್ಲಿ ವಾಸಿಸುತ್ತಾ ಬಂದರು. ಲೋಕವನ್ನು ನಡುಗಮಾಡಿದ ನೆಪೋಲಿಯೋನನು ಒಂದು ಯುದ್ಧದಲ್ಲಿ ಸೋತು ಹೋದನು. ಅಂದಿನಿಂದ ಅವನ ರಾಜ್ಯವು ಅಂಧಕಾರ ಪಟ್ಟು ಹೋಯಿತು. ಆದಾಗ್ಯೂ ಜನರು ಗುಣ ಪಡದೆ, ಪಾಪು ಮಾರ್ಗದ ಭಾರವಾದ ನೊಗಕ್ಕೆ ಒಳಪಟ್ಟರು.

೧೨ ಆರನೇ ದೂತನು ತನ್ನ ಪಾತ್ರೆಯನ್ನು [1]ಫ್ರಾತು ಎಂಬ ಮಹಾ ನದಿಯ ಮೇಲೆ ಹೊಯಿದನು. ಆಗ
ಸೂರ್ಯೋದಯದಿಂದ ಬರುವ ಅರಸರ ಮಾರ್ಗವು ಸಿದ್ಧವಾಗುವ ಹಾಗೆ, ಅದರ ನೀರು ಬತ್ತಿ ಹೋಯಿತು.
೧೩ ಆಗ ಘಟಸರ್ಪದ ಬಾಯಿಯೊಳಗಿಂದಲೂ, ಮೃಗದ ಬಾಯಿಯೊಳಗಿಂದಲೂ, [2]ಸುಳ್ಳು ಪ್ರವಾದಿಯ ಬಾಯಿ
೧೪ ಯೊಳಗಿಂದಲೂ, [3]ಕಪ್ಪೆಗಳಿಗೆ ಸಮಾನವಾಗಿರುವ ಮೂರು ಅಶುದ್ಧವಾದ ಆತ್ಮಗಳನ್ನು ಕಂಡೆನು. ಇವು
[4]ಅದ್ಭುತಗಳನ್ನು ಮಾಡುವ [5]ದೆವ್ವಗಳ ಆತ್ಮಗಳೇ. ಇವು, ಸರ್ವಶಕ್ತನಾದ ದೇವರ ಮಹಾ ದಿನದ ಯುದ್ಧಕ್ಕೆ
ಅವರನ್ನು ಕೂಡಿಸುವದಕ್ಕೋಸ್ಕರ, ಸಮಸ್ತ ಭೂಲೋಕದ ಅರಸುಗಳ ಬಳಿಗೆ ಹೊರಡುತ್ತವೆ.
೧೫ ಇಗೋ, [6]ಕಳ್ಳನಂತೆ ಬರುತ್ತೇನೆ. ಎಚ್ಚರವಾಗಿದ್ದು, ಅವನು ಬೆತ್ತಲೆಯಾಗಿ ಸಂಚರಿಸದ ಹಾಗೆಯೂ, ಅವ
ನ ನಾಚಿಕೆಯನ್ನು ಅವರು ಕಾಣದ ಹಾಗೆಯೂ, ತನ್ನ ವಸ್ತ್ರಗಳನ್ನು ಕಾಪಾಡಿ ಕೊಳ್ಳುವವನು ಭಾಗ್ಯ
ವಂತನು.
೧೬ ಆಗ ಅವನು ಅವರನ್ನು ಇಬ್ರೀಯ ಮಾತಿನಲ್ಲಿ [7]ಅರ್ಮಗೆದ್ದೋನೆಂದು ಕರೆಯಲ್ಪಟ್ಟ ಸ್ಥಳಕ್ಕೆ [8]ಕೂಡ
ಕರೆದನು.
೧೭ ಏಳನೇ ದೂತನು ತನ್ನ ಪಾತ್ರೆಯನ್ನು [9]ಆಕಾಶದಲ್ಲಿ ಹೊಯಿದನು. ಮತ್ತು ಪರಲೋಕದ ಮಂದಿರದೊಳ

1. ಆರನೇ ಪಾತ್ರೆಯು ಫ್ರಾತು ಎಂಬ ಮಹಾ ನದಿಯ ಮೇಲೆ ಹೊಯ್ಯಲ್ಪಟ್ಟು, ಅದು ಬತ್ತಿ ಹೋಯಿತು. (೯. ೧೪. ವಚನದ ವ್ಯಾಖ್ಯಾನ ನೋಡ ಬೇಕು.) ಫ್ರಾತು ನದಿ ತುರ್ಕರ ರಾಜ್ಯಕ್ಕೆ ಗುರುತಾಗಿಯೂ, ಅದು ಬತ್ತಿ ಹೋದದ್ದು, ತುರ್ಕರ ರಾಜ್ಯವು ಜೀರ್ಣವಾಗುವದಕ್ಕೆ ಗುರುತಾಗಿಯೂ ಇದೆ ಎಂದು ಕೆಲ ವಿದ್ವಾಂಸರು ಹೇಳುತ್ತಾರೆ. ಫ್ರಾತು ನದಿಯು ಪೂರ್ವ ಬಾಬೆಲ್ ಪಟ್ಣಕ್ಕೆ ಬಲಸ್ಥಾನವಾಗಿತ್ತು. ಪೂರ್ವ ದಿಕ್ಕಿನಿಂದ ಬಂದ ಪಾರ್ಸ್ಯದ ಅರಸನಾದ ಕೋರೇಷನು ಫ್ರಾತು ನದಿಯನ್ನು ಬೇರೆ ಮಾರ್ಗವಾಗಿ ತಿರುಗಿಸಿ ಬಿಟ್ಟಾಗ ಬಾಬೆಲು ಬಿತ್ತು. ಆಗ ಅವನೂ ಅವನ ಕೆಳಗಿನ ಅರಸರೂ ಬಾಬೆಲು ರಾಜ್ಯವನ್ನು ಕಟ್ಟಿ ಕೊಂಡರು. ಅದೇ ಪ್ರಕಾರ ಜ್ಞಾನಾರ್ಥದ ನದಿಯಾದ ತುರ್ಕರ ರಾಜ್ಯವು ನಾಶವಾಗುವಾಗ, ಜ್ಞಾನಾರ್ಥದ ಬಾಬೆಲೆಂಬ ರೋಮ ಸಭೆಯು ಬಿದ್ದು ಹೋಗುವದು. ಆಗ ಸೂರ್ಯೋದಯದಿಂದ ಬರುವ ಅರಸರು, ಸಮಾಧಾನದ ಪ್ರಭುವಾದ ಕ್ರಿಸ್ತನನ್ನು ದರ್ಶಿಸುವದಕ್ಕೆ ಬರುವರು. ಈ ಪ್ರವಾದನೆಯಲ್ಲಿ ಸೂಚಿಸಿದ ಫ್ರಾತು ನದಿಯು ದಿನ ದಿನಕ್ಕೆ ಬತ್ತಿ ಹೋಗುವ ಪ್ರಕಾರ ತುರ್ಕರ ರಾಜ್ಯವು ಹೆಚ್ಚೆಚ್ಚಾಗಿ ಕ್ಷೀಣವಾಗುವದನ್ನು ನೋಡ ಬಹುದು.

2. ಎಲ್ಲರಿಗೂ ಬಹಳ ತಿಳುವಳಿಕೆಯುಳ್ಳವನ ಹಾಗೆ ಕಾಣಲ್ಪಡುವ ಈ ಸುಳ್ಳು ಪ್ರವಾದಿಯು ಎರಡನೇ ಮೃಗದಿಂದ ಗೊತ್ತು ಮಾಡಲ್ಪಟ್ಟವನೆಂದು ತೋರುತ್ತದೆ. (೧೩. ೧೧—೧೫.)

3. ಕಪ್ಪೆಗಳು ಅಶುದ್ಧ ಜಂತುಗಳು. ಅನೇಕ ಪೂರ್ವ ಗ್ರಂಥಗಳಲ್ಲಿ ಅವುಗಳನ್ನು ಅಶುದ್ಧಕ್ಕೂ, ಸ್ವಂತ ದೊಡ್ಡಸ್ತಿಕೆಗೂ, ವಂಚನೆಗೂ, ಗರ್ವಕ್ಕೂ ಸಾಮ್ಯ ಮಾಡಿ ಇದೆ. ಕಪ್ಪೆಗೆ ಸಮಾನವಾದ ಮೂರು ಅಶುದ್ಧಾತ್ಮಗಳೂ, ಅಜ್ಞಾನಮಾರ್ಗದ ಅಪಭಕ್ತಿಯನ್ನೂ ಪಾಪು ಮತಸ್ಥರ ಮೂಢ ಭಕ್ತಿಯನ್ನೂ, ಪಾಪು ಮತ ಗುರುಗಳ ಗರ್ವವನ್ನೂ ವಂಚನೆಯನ್ನೂ ಕುರಿತದ್ದೆಂದು ತೋರುತ್ತದೆ.

4. ಪೂರ್ವಕಾಲದಲ್ಲಿ ಐಗುಪ್ತದ ಮಂತ್ರಗಾರರು ಸುಳ್ಳಾದ ಅದ್ಭುತಗಳನ್ನು ಮಾಡಿದ ಪ್ರಕಾರ ಇವರು ಸಹ ಮಾಡುವರು.

5. ಸತ್ಯವನ್ನು ತಪ್ಪಿಸುವದಕ್ಕೆ ಸುಳ್ಳಾದ ಅದ್ಭುತಗಳನ್ನು ಮಾಡುವವರು ದೆವ್ವಗಳ ಆತ್ಮಗಳೇ. (೯. ೨೦.) ಕ್ರಿಸ್ತನಿಗೂ ಆತನ ಸತ್ಯ ಸಭೆಗೂ ವಿರೋಧವಾಗಿ ಯುದ್ಧ ಮಾಡುವದಕ್ಕೆ ಲೋಕದಲ್ಲಿರುವ ಸಮಸ್ತ ಜನರನ್ನೂ ಒಂದು ದೊಡ್ಡ ಕೂಟವಾಗಿ ಎಬ್ಬಿಸುವದೇ ಈ ದೆವ್ವಗಳ ಆತ್ಮಗಳ ಮುಖ್ಯ ಕೆಲಸವಾಗಿದೆ.

6. (ಮತ್ತಾ. ೨೪. ೪೨—೪೪. ವಚನಗಳ ವ್ಯಾಖ್ಯಾನ ನೋಡ ಬೇಕು.) ಇದು ನಮ್ಮ ಕರ್ತನು ಪ್ರವಾದನೆಯಾಗಿ ಹೇಳಿದ ದೊಡ್ಡ ವಿಘ್ನ ಸಂಭವಿಸುವ ಕಾಲವೆಂದು ತೋರುತ್ತದೆ. ಇದರಲ್ಲಿ ಆಯಲ್ಪಟ್ಟವರು ಸಹ ಮೋಸ ಹೋಗ ತಕ್ಕ ಶೋಧನೆಗಳು ಸಂಭವಿಸುವವು. ಆದದರಿಂದ ಅವರಿಗೆ ತಕ್ಕ ಎಚ್ಚರಿಕೆಗಳೂ ಬೋಧನೆಗಳೂ ಇಲ್ಲಿ ಹೇಳಲ್ಪಟ್ಟವೆ. ಆ ಶೋಧನೆಯ ಬಲವನ್ನೂ, ಅದಕ್ಕೆ ಎಚ್ಚರಿಕೆಯಾಗಿದ್ದು ನೀತಿವಸ್ತ್ರವನ್ನು ಧರಿಸಿ ಕೊಂಡು ಸಿದ್ಧವಾಗಿರುವ ಭಕ್ತರ ಭಾಗ್ಯವನ್ನೂ ಇದರಲ್ಲಿ ನೋಡ ಬಹುದು.

7. ಅರ್ಮಗೆದ್ದೋನ್ ಅಥವಾ ಮೆಗಿದ್ದೋನಿನ ಪರ್ವತವೆಂಬುವದು ಮೆಗಿದ್ದೋ ಎಂಬ ಊರಿನ ಸ್ಥಾನವಾದ ಒಂದು ಮೇಡನ್ನು ಕುರಿತದ್ದು. ಇದು ಪೂರ್ವಕಾಲದಲ್ಲಿಯೂ, ಕ್ರೂಜೆಯುದ್ಧದ ಕಾಲದಲ್ಲಿಯೂ, ಅನೇಕ ಘೋರ ಯುದ್ಧಗಳು ನಡೆದ ಸ್ಥಳವು. (ನ್ಯಾಯಾಧಿ. ೫. ೧೯. ೨ ಅರ. ೯. ೨೭.) ಆದದರಿಂದ ಇದಕ್ಕೆ ಪಾಲೆಸ್ತೀನದ ರಣಾಂಗಣವೆಂದು ಒಂದು ಹೆಸರುಂಟಾಯಿತು. ಇದು, ಜೆಕರೀಯನ ಪ್ರವಾದನೆಯಲ್ಲಿ ಹೇಳಿದ ಪ್ರಕಾರ, ಜನಾಂಗಗಳು ಯುದ್ಧಕ್ಕೆ ಕೂಡಿ ಬಂದ ಸ್ಥಳವಾಗಿತ್ತು. ಈ ದೊಡ್ಡ ಯುದ್ಧವನ್ನು ಕುರಿತು ೨೦ನೇ ಸಂಧಿಯಲ್ಲಿ ನೋಡ ಬಹುದು.

8. ಇದು ೧೬ನೇ ವಚನದಲ್ಲಿ ಹೇಳಿದ ಅಶುದ್ಧಾತ್ಮಗಳ ಪ್ರಯತ್ನವು.

9. ಏಳನೇ ದೂತನು ತನ್ನ ಪಾತ್ರೆಯನ್ನು ಆಕಾಶದಲ್ಲಿ ಹೊಯಿದನು. ಆಕಾಶವೆಂಬದು ಪಿಶಾಚನು ಧೊರೆತನ ಮಾಡುವ ಸ್ಥಳವು. (ಎಫೆ. ೨. ೨.) ಆದದರಿಂದ ಇದು ಕ್ರಿಸ್ತನಿಗೂ, ಶತ್ರುವಾದ ಪಿಶಾಚನಿಗೂ ನಡಿಯುವ ಕಡೇ ಯುದ್ಧವೆಂದು ತೋರುತ್ತದೆ. "ಆಯಿತು" ಎಂದು ಹೇಳಿದ ದೊಡ್ಡ ಶಬ್ದವು ಹೊರಟಿತೆಂದು ಹೇಳಿ ಇದೆ.



೧೮ ಗಿಂದ, ಸಿಂಹಾಸನದ ಕಡೆಯಿಂದ, ಆಯಿತು ಎಂದು, ಒಂದು ಶಬ್ದವು ಹೊರಟಿತು. ಮತ್ತು ಶಬ್ದಗಳೂ
ಗುಡುಗುಗಳೂ ಮಿಂಚುಗಳೂ ಉಂಟಾದವು. ಮತ್ತು ದೊಡ್ಡ ಭೂಕಂಪ ಉಂಟಾಯಿತು. ಅಷ್ಟು [1]ದೊಡ್ಡ
೧೯ ಭೂಕಂಪವು ಮನುಷ್ಯರು ಭೂಮಿಯ ಮೇಲೆ ಇದ್ದಾರಭ್ಯ ಉಂಟಾಗಲಿಲ್ಲ. [2]ಮಹಾ ಪಟ್ಣವು [3]ಮೂರು
ಭಾಗವಾಯಿತು. ಮತ್ತು ಜನಾಂಗಗಳ ಪಟ್ಣಗಳು ಬಿದ್ದವು. ಮತ್ತು, ಅದಕ್ಕೆ ದೇವರ ಉಗ್ರ ಕೋಪವೆಂಬ
ದ್ರಾಕ್ಷೇ ರಸದ ಪಾತ್ರೆಯನ್ನು ಕೊಡ ಬೇಕೆಂದು, ದೊಡ್ಡ ಬಾಬೆಲು ದೇವರ ಮುಂದೆ ಜ್ಞಾಪಕವಾಯಿತು.
೨೦, ೨೧ ಆಗ ದ್ವೀಪಗಳೆಲ್ಲಾ [4]ಓಡಿ ಹೋಗಿ, ಪರ್ವತಗಳು ಕಾಣದೆ ಹೋದವು. ಮತ್ತು ಹೆಚ್ಚು ಕಡಿಮೆ ತಲಾಂ
ತ ಭಾರವಾದ [5]ದೊಡ್ಡ ಕಲ್ಮಳೆಯು ಆಕಾಶದಿಂದ ಮನುಷ್ಯರ ಮೇಲೆ ಬಿತ್ತು. ಈ ಕಲ್ಮಳೆಯ ಬಾಧೆಗೋ
ಸ್ಕರ, ಅದರ ಬಾಧೆ ಮಹಾ ದೊಡ್ಡದಾಗಿರುವದರಿಂದ, ಮನುಷ್ಯರು ದೇವರನ್ನು ದೂಷಿಸಿದರು.

*ಬಾಬೆಲಿನ ನಾಶನವು; ಮೃಗದ ಮೇಲೆ ಕುಳಿತು ಕೊಂಡ ಜಾರೆಯ ವಿಷಯವಾದ ದರ್ಶನ.

17. [6]ಆಗ ಏಳು ಪಾತ್ರೆಗಳನ್ನು ಹಿಡಿದು ಕೊಂಡ ಏಳು ದೂತರಲ್ಲಿ ಒಬ್ಬನು ಬಂದು, [7]ನನ್ನ ಸಂಗಡ ಮಾತಾ
ಡಿ, ಇಲ್ಲಿ ಬಾ, [8]ಅನೇಕ ನೀರುಗಳ ಮೇಲೆ ಕೂತು ಕೊಂಡ ದೊಡ್ಡ ಜಾರೆಯ ನ್ಯಾಯತೀರ್ವಿಕೆಯನ್ನು
೨ ನಿನಗೆ ತೋರಿಸುವೆನು, ಎಂದು ನನಗೆ ಹೇಳಿದನು. ಅವಳ ಸಂಗಡ ಭೂರಾಜರು ಜಾರತ್ವ ಮಾಡಿ, ಅವಳ
ಜಾರತ್ವದ [9]ದ್ರಾಕ್ಷೇ ರಸದಿಂದ ಭೂನಿವಾಸಿಗಳು ಮತ್ತರಾದರು.

1. ಈ ಬಾಧೆಯಿಂದ ಭೂಮಿಯಲ್ಲಿ ಉಂಟಾದ ಭಯಂಕರದ ಹಾಗೆ ಲೋಕಾರಂಭದಿಂದ ಉಂಟಾಗಲಿಲ್ಲವೆಂದು ಹೇಳ ಬಹುದು. (೬. ೧೨. ವಚನದ ವ್ಯಾಖ್ಯಾನ ನೋಡ ಬೇಕು.)

2. ಈ ಮಹಾ ಪಟ್ಣದ ನಾಶನವನ್ನು ೧೮ನೇ ಸಂಧಿಯಲ್ಲಿ ನೋಡ ಬೇಕು.

3. ಭೂಕಂಪದಿಂದ ಮೂರಾಗಿ ಶೀಳಿದ ಭೂಮಿ ಮಹಾ ಪಟ್ಣವನ್ನು ನುಂಗಿ ಬಿಟ್ಟ ಹಾಗೆ ಕಾಣಿಸಿತು. ಅದು ಮಾತ್ರವಲ್ಲ, ಅದರ ಕೈಕೆಳಗಿದ್ದ ಜನಾಂಗಗಳ ಪಟ್ಣಗಳು ಸಹ ಬಿದ್ದವು.

4. ಮನುಷ್ಯರು ಕಟ್ಟಿದವುಗಳು ಮಾತ್ರವಲ್ಲ, ದೈವಸೃಷ್ಟಿಯಾದ ದ್ವೀಪಗಳೂ ಪರ್ವತಗಳೂ ಸ್ಥಳ ತಪ್ಪಿ, ಎಲ್ಲಾ ಸಮೂಲ ನಾಶವಾದವು.

5. (೧೧. ೧೯. ಹೊರ. ೯. ೧೮—೨೯.) ಒಂದು ತಲಾಂತ ತೂಕ ೧೦೦ ಪೌಂಡಿಗೆ ಹೆಚ್ಚಾಗಿರುವದು. ದೊಡ್ಡ ಕಲ್ಮಳೆ ಎಂಬುವದು ದೇವರ ದೊಡ್ಡ ನ್ಯಾಯತೀರ್ವಿಕೆಯನ್ನೂ, ತಲಾಂತ ಭಾರವಾದ ದೊಡ್ಡ ಕಲ್ಮಳೆ ಎಂಬುವದು, ಆ ನ್ಯಾಯತೀರ್ವಿಕೆಯ ಅಘೋರ ಭಯಂಕರವನ್ನೂ ಸೂಚಿಸುತ್ತದೆ. ಆದರೂ ಜನರು ಇನ್ನೂ ದೂಷಿಸಿದರೇ ಹೊರ್ತು ಗುಣ ಪಡಲಿಲ್ಲ. ಮುಂಚಿನ ಮೂರು ದರ್ಶನಗಳ ಹಾಗೆ ಈ ಮೂರು ದರ್ಶನಗಳಲ್ಲಿಯೂ ದೇವರ ಶಿಕ್ಷೆಗಳಿಂದ ಗುಣ ಪಡದವರ ಮೇಲೆ ಬಂದ ಉಪದ್ರಗಳು ಹೆಚ್ಚೆಚ್ಚಾಗಿ ಅಘೋರವಾದವೆಂಬುವದನ್ನೂ, ಅವರು ಅಡಗಿ ಕೊಂಡರೂ ಸರ್ವಶಕ್ತನ ಕೋಪಕ್ಕೆ ತಪ್ಪಿಸಿ ಕೊಳ್ಳಲಾರದೆ ಇದ್ದರೆಂಬುವದನ್ನೂ, ಈ ನ್ಯಾಯತೀರ್ವಿಕೆಗಳಿಂದ ಅವರು ಗುಣ ಪಡದೆ ಹೆಚ್ಚೆಚ್ಚಾಗಿ ಕೆಟ್ಟು ಹೋದರೆಂಬುವದನ್ನೂ ತಿಳಿದು ಕೊಳ್ಳ ಬಹುದು.

6. ೧೭—೨೦ನೇ ಸಂಧಿಯ ವರೆಗೆ ಇರುವ ಮೂರು ದರ್ಶನಗಳ ಸಂಗಡ ಈ ದರ್ಶನವು ಮುಗಿಯುತ್ತದೆ. ಮೊದಲನೇ ದರ್ಶನದಲ್ಲಿ ಒಬ್ಬ ಸಂಹಾರದೂತನು ಮುಂಚಿನ ದರ್ಶನಗಳಲ್ಲಿ ಸೂಚಿಸಲ್ಪಟ್ಟ ಮಹಾ ಬಾಬೆಲು ಅಲಂಕಾರವಸ್ತ್ರ ಧರಿಸಿ ಅಶುದ್ಧ ಮದ್ಯವು ತುಂಬಿದ ಪಾತ್ರೆಯನ್ನು ಹಿಡಿದು, ಅಕ್ರಮ ಕೆಟ್ಟತನಗಳು ಹಣೆಯಲ್ಲಿ ಕಾಣ ತಕ್ಕದ್ದಾಗಿ ಒಂದು ಮೃಗದ ಮೇಲೆ ಕುಳಿತಿದ್ದ ಸ್ತ್ರೀಗೆ ಸಮಾನವಾಗಿದ್ದದ್ದನ್ನು ಯೋಹಾನನಿಗೆ ತೋರಿಸಿ, (೧೭. ೧—೬.) ಆ ಮೃಗವು ನಾನಾ ರೂಪವಾಗಿ ತೋರುವ ಲೌಕಿಕಾಧಿಕಾರಕ್ಕೆ ಗುರುತಾಗಿತ್ತೆಂದೂ, ಕರ್ತನ ರಾಜ್ಯವನ್ನು ಹಗೆ ಮಾಡುವದಾಗಿತ್ತೆಂದೂ, ತಾನು ಕಾಪಾಡುತ್ತಾ ಬಂದ ಕೆಟ್ಟ ಏರ್ಪಾಡನ್ನು ನಾಶ ಮಾಡ ನೋಡುತ್ತದೆಂದೂ, ಕಡೆಯಲ್ಲಿ ಅದು ಬುಡ ನಾಶನವಾಗುವದೆಂದೂ, ಇವೆಲ್ಲವುಗಳಲ್ಲಿ ದೇವರ ನಿರ್ಣಯವೂ ಈಡೇರುತ್ತದೆಂದೂ, ದರ್ಶನದ ತಾತ್ಪರ್ಯಗಳನ್ನು ಹೇಳಿದನು. (೭—೧೮ ವ.)

7. ದೇವದೂತನು ಪ್ರಾರಂಭಿಸಿದ ಕ್ರಿಯೆ ತೀರಿಸಿ, ತರುವಾಯ ದೇವರ ನ್ಯಾಯತೀರ್ವಿಕೆಗಳ ಮುಖ್ಯ ತಾತ್ಪರ್ಯವನ್ನು ಯೋಹಾನನಿಗೆ ತಿಳಿಸುತ್ತಾನೆ.

8. ಫ್ರಾತು ನದಿಯ ಧಡದಲ್ಲಿ ಕಟ್ಟಲ್ಪಟ್ಟಿದ್ದ ಬಾಬೆಲು ಪಟ್ಣವನ್ನು ಅನೇಕ ನೀರುಗಳ ಮೇಲೆ ಕೂತು ಕೊಂಡ ಮಹಾ ಜಾರೆಗೆ ಉಪಮಾನಿಸಿ ಹೇಳಿ ಇದೆ. (ಯೆರೆ. ೫೧. ೧೩.) ಅನೇಕ ನೀರುಗಳೆಂಬುವದು, ಅನೇಕ ಜಾತಿಗಳನ್ನೂ ಜನರನ್ನೂ ಕುರಿತದ್ದು. (೧೫. ಸ.) ಅನೇಕ ಜಾತಿಗಳೂ ರಾಜ್ಯಗಳೂ ಈ ಜಾರೆಯ ಅಧೀನವಾಗಿದ್ದವು.

9. ವಿಗ್ರಹಭಕ್ತಿಯು ವೇದದ ಅನೇಕ ಸ್ಥಳಗಳಲ್ಲಿ ಜಾರತ್ವಕ್ಕೆ ಸಮಾನ ಮಾಡಿ ಹೇಳಲ್ಪಟ್ಟದೆ. ರೋಮಪುರಿಯಲ್ಲಿ ಅಪೊಸ್ತಲರು ಮುಂತಾದ ದೇವಭಕ್ತರಿಂದ ಉಂಟಾದ ಸತ್ಯ ಸಭೆಯು ತರುವಾಯ ಕೆಟ್ಟು ಹೋಗಿ, ವಿಗ್ರಹಾರಾಧನೆ ಮುಂತಾದ ಅಪಭಕ್ತಿಗೆ ಸ್ಥಳ ಕೊಟ್ಟದ್ದರಿಂದ ಅದನ್ನು ದೊಡ್ಡ ಜಾರೆಗೆ ಉಪಮಾನ ಮಾಡಿ ಇದೆ. ಅದರ ಆತ್ಮಿಕ ಜಾರತ್ವದ ದ್ರಾಕ್ಷೇ ರಸದಿಂದ ಭೂಮಿಯ ಅರಸರು ಮಾತ್ರವಲ್ಲ, ಅದರ ಪ್ರಜೆಗಳು ಸಹ ಮತ್ತರಾಗಿ, ಅದರ ಅನಾಚಾರಗಳನ್ನು ಅನುಸರಿಸಿದರು. ಲೋಕದ ಅನೇಕ ರಾಜ್ಯಗಳೂ ಜಾತಿಗಳೂ ಜನರೂ ಪೋಪು ಮಾರ್ಗವನ್ನು ಅನುಸರಿಸಿ ನಡಿಯುವದೇ ಇದಕ್ಕೆ

೩ ಆಗ ಅವನು ಆತ್ಮದಲ್ಲಿ ನನ್ನನ್ನು ಅರಣ್ಯಕ್ಕೆ ಕರಕೊಂಡು ಹೋದನು. ಆಗ, ದೂಷಣೆಯ ಹೆಸರುಗಳಿಂದ
ತುಂಬಿ, ಏಳು ತಲೆಗಳೂ ಹತ್ತು ಕೊಂಬುಗಳೂ ಉಂಟಾದ, ಲಾಖಿಬಣ್ಣದ ಮೃಗದ ಮೇಲೆ [1]ಕೂತು
೪ ಕೊಂಡ ಸ್ತ್ರೀಯನ್ನು ಕಂಡೆನು. ಮತ್ತು ಸ್ತ್ರೀಯು ರಕ್ತಾಂಬರವನ್ನೂ, ಲಾಖಿಬಣ್ಣದ ವಸ್ತ್ರವನ್ನೂ,
ಉಟ್ಟು ಕೊಂಡು, ಚಿನ್ನ ರತ್ನ ಮುತ್ತುಗಳಿಂದ ಅಲಂಕರಿಸಲ್ಪಟ್ಟು, ತನ್ನ ಜಾರತ್ವದ ಅಸಹ್ಯಗಳಿಂದಲೂ, ಅಶು
೫ ದ್ಧತ್ವದಿಂದಲೂ, ತುಂಬಿರುವ ಚಿನ್ನದ ಪಾತ್ರೆಯನ್ನು ಕೈಯಲ್ಲಿ ಹಿಡಿದು ಕೊಂಡಿದ್ದಳು. ಅವಳ ಹಣೆಯ
ಮೇಲೆ, [2]**ಮರ್ಮವೂ, ಜಾರತ್ವಗಳಿಗೂ, ಭೂಮಿಯ ಅಸಹ್ಯಗಳಿಗೂ ತಾಯಿಯಾದ ದೊಡ್ಡ
ಬಾಬೆಲೂ**, ಎಂಬ ಹೆಸರು ಬರೆದಿತ್ತು.
೬ ಮತ್ತು ಆ ಸ್ತ್ರೀಯು ಪರಿಶುದ್ಧರ ರಕ್ತದಿಂದಲೂ ಯೇಸುವಿನ ಸಾಕ್ಷಿಗಳ ರಕ್ತದಿಂದಲೂ ಮತ್ತಳಾಗಿರುವ
೭ ದನ್ನು ಕಂಡೆನು. ಅವಳನ್ನು ಕಂಡು, ಮಹಾ ಆಶ್ಚರ್ಯದಿಂದ [3]ಆಶ್ಚರ್ಯ ಪಟ್ಟೆನು. ಆಗ ದೂತನು ನನಗೆ
ಹೇಳಿದ್ದು, ಯಾಕೆ ಆಶ್ಚರ್ಯ ಪಟ್ಟೆ? ಆ ಸ್ತ್ರೀಯ ಮರ್ಮವನ್ನೂ, ಅವಳನ್ನು ಹೊತ್ತು ಕೊಳ್ಳುವಂಥ ಏಳು
೮ ತಲೆಗಳೂ ಹತ್ತು ಕೊಂಬುಗಳೂ ಉಂಟಾದ ಮೃಗದ ಮರ್ಮವನ್ನೂ, ನಾನು ನಿನಗೆ ಹೇಳುತ್ತೇನೆ. ನೀನು
ಕಂಡ [4]ಮೃಗವು ಇತ್ತು; ಈಗ ಇಲ್ಲ; ಅಗಾಧದೊಳಗಿಂದ ಎದ್ದು ಬಂದು, ನಾಶನಕ್ಕೆ ಹೋಗುವದಕ್ಕೆ ಇರು

1. ಮೃಗದ ಮೇಲೆ ಕೂತಿರುವ ಸ್ತ್ರೀಯು, ರಾಜ್ಯವನ್ನಾಳುವ ಸಭೆಯನ್ನು ಅಥವಾ ಪಟ್ಟಣವನ್ನು ಸೂಚಿಸುತ್ತದೆ. ಅನೇಕ ಚಿತ್ರಗಳಲ್ಲಿಯೂ, ಪ್ರತಿಮೆಗಳಲ್ಲಿಯೂ, ವಿಶೇಷವಾಗಿ ವೇದದ ಪ್ರವಾದನೆಗಳಲ್ಲಿಯೂ ಆಗಾಗ್ಯೆ ಪಟ್ಟಣಗಳನ್ನು ಸ್ತ್ರೀಯರಿಗೆ ಸಾಮ್ಯ ಮಾಡಿ ಹೇಳಿ ಇದೆ. ರೋಮುಪುರಿಯನ್ನು ಒಂದು ಸಿಂಹದ ಮೇಲೆ ಕೂತಿರುವ ಸ್ತ್ರೀಯ ರೂಪದಂತೆ ಪೂರ್ವದ ನಾಣ್ಯಗಳಲ್ಲಿ ತೋರಿಸಿ ಇದೆ. ಕೆಂಪಾದ ಗಡಸರ್ಪದ ಹಾಗೆ (೧೨. ೩.) ಈ ಸ್ತ್ರೀಯು ಕೂತಿದ್ದ ಮೃಗವು ಸಹ ಕೆಂಪು ಬಣ್ಣವಾಗಿತ್ತು. ಇದು ಕ್ರೂರತ್ವಕ್ಕೂ ಕೊಲೆಪಾತಕಕ್ಕೂ ಗುರುತಾಗಿದೆ. ರೋಮಾಯ ಅರಸರೂ ಅಧಿಪತಿಗಳೂ ವಾಡಿಕೆಯಾಗಿ ಕೆಂಪು ವಸ್ತ್ರಗಳನ್ನು ಧರಿಸುವರು. ಮತ್ತು ಈ ಮೃಗವು ಏಳು ತಲೆಗಳೂ ಹತ್ತು ಕೊಂಬುಗಳೂ ಉಳ್ಳದ್ದಾಗಿಯೂ, ದೂಷಣೆಯಾದ ಹೆಸರುಗಳಿಂದ ತುಂಬಿದ್ದಾಗಿಯೂ ಇತ್ತೆಂದು ಹೇಳಿರುವದರಿಂದ ಇದು ೧೩ನೇ ಸಂಧಿಯಲ್ಲಿ ಹೇಳಿದ ಮೃಗವೆಂದು ತೋರುತ್ತದೆ. (೧೩. ೧. ವಚನದ ವ್ಯಾಖ್ಯಾನ ನೋಡ ಬೇಕು.) ಲಾಖಿಬಣ್ಣದ ಮೃಗದ ಮೇಲೆ ಕುಳಿತಿದ್ದ ಸ್ತ್ರೀಯು ರಕ್ತಾಂಬರವನ್ನೂ ಲಾಖಿಬಣ್ಣದ ವಸ್ತ್ರವನ್ನೂ ಧರಿಸಿ, ಚಿನ್ನ ರತ್ನ ಮುತ್ತುಗಳಿಂದ ಅಲಂಕರಿಸಲ್ಪಟ್ಟವಳಾಗಿದ್ದಳು. ರೋಮಾಯ ಅರಸರ ಹಾಗೆಯೇ ರೋಮು ಸಭೆಯ ಪೋಪರೂ ಅಧ್ಯಕ್ಷರೂ ಕೆಂಪು ವಸ್ತ್ರಗಳನ್ನು ಧರಿಸಿ ಕೊಳ್ಳುತ್ತಾರೆ. ಚಿನ್ನ ರತ್ನ ಮುತ್ತುಗಳಿಂದ ಈ ಸ್ತ್ರೀಯು ತನ್ನನ್ನು ಅಲಂಕರಿಸಿ ಕೊಂಡ ಪ್ರಕಾರ ರೋಮು ಸಭೆಯು ಡಂಭವಾದ ವಸ್ತ್ರಗಳಿಂದಲೂ, ಡಂಭಾಟವಾದ ಆರಾಧನೆಗಳಿಂದಲೂ, ತಮಾಷೆಗಳಿಂದಲೂ ತಮ್ಮನ್ನು ಅಲಂಕರಿಸಿ ಕೊಳ್ಳುವದು ಪ್ರತ್ಯಕ್ಷವಾಗಿದೆ. ಮತ್ತು ಈ ಸ್ತ್ರೀಯು ತನ್ನ ಜಾರತ್ವದ ಅಸಹ್ಯಗಳಿಂದ ತುಂಬಿದ ಚಿನ್ನದ ಪಾತ್ರೆ ಕೈಯಲ್ಲಿ ಹಿಡುಕೊಂಡಿರುವ ಪ್ರಕಾರ, ತಾಯಿ ಎಂದೂ ಯಜಮಾನಿ ಎಂದೂ ಹೇಳಲ್ಪಟ್ಟ ರೋಮು ಸಭೆಯು ಭಕ್ತಿಹೀನತ್ವಕ್ಕೂ ಲೋಕಭೋಗಕ್ಕೂ ತಕ್ಕ ತನ್ನ ಪ್ರಾಣಗಳಿಂದ ಅನೇಕರನ್ನು ಮರುಳುಗೊಳಿಸಿ ಮಾಯಬಲೆಯಲ್ಲಿ ಬೀಳಿಸಿ ಕೆಡಿಸುತ್ತದೆ.

2. ಕೆಲವು ಕೆಟ್ಟ ಸ್ತ್ರೀಯರು ತಮ್ಮ ಹೆಸರುಗಳನ್ನು ಬಾಗಲ ನಿಲುವುಗಳ ಮೇಲೆಯೂ, ಕೆಲ ಸಮಯಗಳಲ್ಲಿ ಹಣೆಗಳ ಮೇಲೆಯೂ ಬರೆದು ಧರಿಸಿ ಕೊಳ್ಳುವರು. ಹಾಗೆಯೇ ಜಾರೆಯಾದ ಬಾಬೆಲು, ಮರ್ಮವೆಂಬ ತನ್ನ ಹೆಸರನ್ನು ಹಣೆಯ ಮೇಲೆ ಧರಿಸಿದ್ದಳೆಂದು ಹೇಳಿ ಇದೆ. (ಮತ್ತಾ. ೧೩. ೧. ವಚನದ ವ್ಯಾಖ್ಯಾನ ನೋಡ ಬೇಕು.) ಮರ್ಮವೆಂಬುವದು, ಆ ಸ್ತ್ರೀಯ ಹೆಸರೆಂದೂ, ಅಥವಾ ಆ ಹೆಸರು ಮರ್ಮಾರ್ಥ ಉಳ್ಳದ್ದೆಂದೂ, ಅರ್ಥವಾಗುತ್ತದೆ. ದೇವಭಕ್ತಿಯ ರಹಸ್ಯವೂ, ಮತ್ತು ಎಲ್ಲಾ ಪರಮ ರಹಸ್ಯಗಳೂ ತನಗೆ ತಿಳಿಯುವವೆಂದು ಹೆಚ್ಚಳ ಪಡುವ ಈ ಜಾರೆಗೆ ಮರ್ಮವೆಂಬ ಹೆಸರು ತಕ್ಕದ್ದಾಗಿದೆ. ಪೌಲನು ಹೇಳುವ ಹಾಗೆ ಇದು ಅನೀತಿಯ ಮರ್ಮವೇ ಹೊರ್ತು ಬೇರೆ ಅಲ್ಲಾ. (೨ ಥೆಸ್ಸ. ೨. ೭.) ಜಾರತ್ವಗಳಿಗೂ ಭೂಮಿಯಲ್ಲಿರುವ ಅಸಹ್ಯಗಳಿಗೂ ಸಕಲ ಅಪಭಕ್ತಿಗೂ ತಾಯಿಯಾಗಿರುವವಳಿಗೆ ಈ ಹೆಸರು ತಕ್ಕದ್ದಾಗಿದೆ.

3. ಪೂರ್ವಿಕ ಬಾಬೆಲಿನ ಹಾಗೆ ಈ ಹೊಸ ಬಾಬೆಲು ಇದ್ದು, ಅದಕ್ಕಿಂತ ಇದು ಕ್ರೂರ ಅಕ್ರಮಗಳನ್ನು ನಡಿಸಿ, ಭಕ್ತಿಯ ವೇಷವನ್ನು ಧರಿಸಿ ಕೊಂಡು, ಕೊಲೆಪಾತಕಗಳಿಗೆ ಅಂಜದೆ ನಡೆದದ್ದು ಯೋಹಾನನಿಗೆ ಅತ್ಯಾಶ್ಚರ್ಯ ಉಂಟು ಮಾಡಿತು. ಅದರ ಅಂತ್ಯವನ್ನು ತಿಳಿಯುವದರಿಂದಲೇ ಆ ಆಶ್ಚರ್ಯ ನಿವರ್ತಿಯಾಗ ತಕ್ಕದ್ದಾಗಿದ್ದದರಿಂದ ದೇವದೂತನು ಅದನ್ನು ಮುಂದಿನ ವಚನದಲ್ಲಿ ವಿವರಿಸುತ್ತಾನೆ. (೭. ವ.)

4. ಈ ಮೃಗವು ಮೂರು ವಿಧ ಸ್ಥಿತಿಗೊಳಪಟ್ಟದ್ದೆಂದು ಹೇಳಿ ಇದೆ. ಮೊದಲನೇದು, ಅದು ಇತ್ತು. ಎರಡನೇದು, ಅದು ಇಲ್ಲದೆ ಹೋಯಿತು. ಮೂರನೇದು, ಜೀವ ಹೊಂದಿ ಎದ್ದು ಬಂತು. ಹಾಗೆಯೇ ರೋಮು ರಾಜ್ಯವು ಮೊದಲು ರೋಮಾಯ ಅರಸುಗಳ ಅಧಿಕಾರದಲ್ಲಿ ವಿಗ್ರಹಾರಾಧನೆಯಿಂದ ತುಂಬಿದ ಮೃಗದ ಹಾಗೆಯೂ, ತರುವಾಯ ಕ್ರೈಸ್ತ ಅರಸುಗಳ ಅಧಿಕಾರದಲ್ಲಿ ಅದು ಇಲ್ಲದೆ ಹೋದ ಹಾಗೆಯೂ, ತಿರಿಗಿ ರೋಮು ಸಭೆಯ ಪೋಪರಿಂದ ಅದು ತಿರಿಗಿ ಜೀವ ಹೊಂದಿದ ಹಾಗೆಯೂ ಇತ್ತು. ಆದಾಗ್ಯೂ ಅಗಾಧದೊಳಗಿಂದ ಎದ್ದು ಬಂದು ರೋಮು ರಾಜ್ಯಕ್ಕೆ ಜೀವ ಕೊಟ್ಟ ಈ ಅಕ್ರಮವಾದ ಮಾರ್ಗವು ಪ್ರವಾದನೆಯಲ್ಲಿ ಹೇಳಿರುವ ಪ್ರಕಾರ ೧೨೬೦ ವರುಷಗಳು ತನ್ನ ಆಡಳಿತೆ ನಡಿಸಿದ ತರುವಾಯ ತನ್ನ ಉತ್ಪತ್ತಿಸಳವಾದ ಅಗಾಧದಲ್ಲಿ ಅಧೋಗತಿಯಾಗಿ ಬಿದ್ದು ನಾಶವಾಗುವದು; ತಿರಿಗಿ ತಲೆ ಎತ್ತುವದಿಲ್ಲ.



ತ್ತದೆ. ಮತ್ತು ಇದ್ದಂಥ, ಇದ್ದರೂ ಇಲ್ಲದಂಥ, ಮೃಗವನ್ನು ನೋಡಿ, ಜೀವದ ಪುಸ್ತಕದಲ್ಲಿ ಜಗದುತ್ಪತ್ತಿ
ಮೊದಲುಗೊಂಡು ಹೆಸರು ಬರೆಯಲ್ಪಡದ ಭೂನಿವಾಸಿಗಳು ಆಶ್ಚರ್ಯ ಪಡುವರು.
೯ ಇಲ್ಲಿಯೇ [1]ಜ್ಞಾನವುಳ್ಳ ಬುದ್ಧಿಯು. ಆ ಏಳು ತಲೆಗಳು, ಸ್ತ್ರೀಯು ಕೂತು ಕೊಂಡಿರುವ ಏಳು ಬೆಟ್ಟಗಳಾ
೧೦ ಗಿವೆ. ಮತ್ತು [2]ಏಳು ಅರಸರು ಇದ್ದಾರೆ. ಐದು ಮಂದಿ ಬಿದ್ದರು; ಒಬ್ಬನು ಇದ್ದಾನೆ; ಮತ್ತೊಬ್ಬನು
೧೧ ಇನ್ನು ಬರಲಿಲ್ಲ. ಅವನು ಬಂದಾಗ, ಸ್ವಲ್ಪ ಕಾಲ ಇರ ಬೇಕು. ಮತ್ತು ಇದ್ದಂಥ, ಇಲ್ಲದಂಥ, ಮೃಗವು
ತಾನೇ ಎಂಟನೇದಾಗಿಯೂ, ಆ ಏಳರಲ್ಲಿ ಒಂದಾಗಿಯೂ ಇದ್ದು, ನಾಶನಕ್ಕೆ ಹೋಗುತ್ತದೆ.
೧೨ ಮತ್ತು ನೀನು ಕಂಡ ಹತ್ತು ಕೊಂಬುಗಳು, [3]ಹತ್ತು ಮಂದಿ ಅರಸರು. ಅವರು ರಾಜ್ಯವನ್ನು ಇನ್ನೂ
೧೩ ಹೊಂದಲಿಲ್ಲ, ಆದರೆ [4]ಮೃಗದ ಸಂಗಡ ಒಂದು ತಾಸು ಅರಸರಾಗಿ ಅಧಿಕಾರ ಹೊಂದುತ್ತಾರೆ. ಇವರು
೧೪ ಏಕ ಮನಸ್ಸುಳ್ಳವರಾಗಿದ್ದಾರೆ; ತಮ್ಮ ಬಲವನ್ನೂ ಅಧಿಕಾರವನ್ನೂ ಮೃಗಕ್ಕೆ ಒಪ್ಪಿಸಿ ಕೊಡುವರು. ಇವರು
[5]ಕುರಿಮರಿಯ ಸಂಗಡ ಯುದ್ಧ ಮಾಡುವರು; ಮತ್ತು ಕುರಿಮರಿಯು ಅವರನ್ನು ಜಯಿಸುವದು.
ಯಾಕಂದರೆ ಅವನು ಕರ್ತರ ಕರ್ತನೂ, ಅರಸರ ಅರಸನೂ, ಆಗಿದ್ದಾನೆ. ಮತ್ತು ಅವನ ಸಂಗಡ ಇರುವ
ವರು ಕರೆಯಲ್ಪಟ್ಟವರೂ, ಆಯಲ್ಪಟ್ಟವರೂ, ನಂಬಿಕೆಯುಳ್ಳವರೂ, ಆಗಿದ್ದಾರೆ.
೧೫ ಮತ್ತು ಅವನು ನನಗೆ ಹೇಳಿದ್ದು, ಜಾರೆಯು ಕೂತು ಕೊಂಡಲ್ಲಿ ನೀನು ಕಂಡ ನೀರುಗಳು, ಪ್ರಜೆಗಳೂ,
೧೬ ಸಮೂಹಗಳೂ, ಜನಾಂಗಗಳೂ, ಭಾಷೆಗಳೂ, ಆಗಿವೆ. ಮತ್ತು ಮೃಗದ ಮೇಲೆ ನೀನು ಕಂಡ ಹತ್ತು
ಕೊಂಬುಗಳಾದ ಇವರು, [6]ಜಾರೆಯನ್ನು ಹಗೆ ಮಾಡಿ, ಅವಳನ್ನು ಹಾಳೂ ಬೆತ್ತಲೆಯೂ ಮಾಡಿ, ಅವಳ
೧೭ ಮಾಂಸವನ್ನು ತಿಂದು, ಅವಳನ್ನು ಬೆಂಕಿಯಿಂದ ಸುಟ್ಟು ಬಿಡುವರು. ಯಾಕಂದರೆ ದೇವರ ವಚನಗಳು
ಈಡೇರುವ ಪರ್ಯಂತರ, [7]ಏಕ ಮನಸ್ಸಾಗಿದ್ದು, ತಮ್ಮ ರಾಜ್ಯವನ್ನು ಮೃಗಕ್ಕೆ ಕೊಟ್ಟು, ಅವನ ಆಲೋಚನೆ
೧೮ ಯನ್ನು ನಡಿಸುವ ಹಾಗೆ, ದೇವರು ಅವರ ಹೃದಯಗಳನ್ನು ಪ್ರೇರೇಪಿಸಿದ್ದಾನೆ. ಮತ್ತು ನೀನು ಕಂಡ
ಸ್ತ್ರೀಯು, ಭೂರಾಜರ ಮೇಲೆ ರಾಜತ್ವವನ್ನು ಹೊಂದಿದ [8]ಮಹಾ ಪಟ್ಟಣವಾಗಿದ್ದಾಳೆ.

1. ಈ ಮುಖ್ಯ ವಿಷಯವು ಜ್ಞಾನವೂ ವಿವೇಕವೂ ಉಳ್ಳವರಿಗೆ ವಿಶದವಾಗುವದೇ ಹೊರ್ತು ಬೇರೊಬ್ಬರಿಗೆ ತಿಳಿಯಲಾರದು.

2. ರೋಮುಪುರಿಯು ಏಳು ಬೆಟ್ಟಗಳ ಮೇಲೆ ಕಟ್ಟಲ್ಪಟ್ಟಿತ್ತು. ಮೃಗದ ಏಳು ತಲೆಗಳು ಏಳು ಬೆಟ್ಟಗಳನ್ನು ಕುರಿತದ್ದಲ್ಲದೆ, ಏಳು ಅರಸರನ್ನು ಅಥವಾ ರಾಜವಂಶಗಳನ್ನು ಕುರಿತದ್ದಾಗಿದೆ. ರೋಮುಪುರಿಯಲ್ಲಿ ಆರು ರಾಜವಂಶದವರು ಧೊರೆತನ ಮಾಡುತ್ತಾ ಬಂದರು. ಆರನೇ ಧೊರೆತನವು ಯೋಹಾನನ ಕಾಲದಲ್ಲಿತ್ತು. ತರುವಾಯ ಏಳನೇ ಧೊರೆತನವು ನಡೆಯಿತು. ಈ ಧೊರೆತನವು ಸ್ವಲ್ಪ ಕಾಲ ಮಾತ್ರವಿತ್ತು. ಎಂಟನೇ ಧೊರೆತನವೇ ಪೋಪರ ಧೊರೆತನವು.

3. ರೋಮು ರಾಜ್ಯವು ಪಶ್ಚಿಮ ರಾಜ್ಯವೆಂದೂ, ಪೂರ್ವಕಡೆ ರಾಜ್ಯವೆಂದೂ ಎರಡು ರಾಜ್ಯಗಳಾಗಿ ಭಾಗವಾದಾಗ, ಪಶ್ಚಿಮ ರಾಜ್ಯವು ಹತ್ತು ಸಣ್ಣ ಅರಸರದಾಗಿ ವಿಭಾಗವಾಗಿತ್ತು. ಕೆಲವು ಕಾಲಗಳಲ್ಲಿ ಈ ಸಂಖ್ಯೆ ಸ್ವಲ್ಪ ಅಧಿಕವಾಗಿಯೂ, ಕೆಲವು ಕಾಲ ಕಡಿಮೆಯಾಗಿಯೂ ಇದ್ದಾಗ್ಯೂ, ಸಾಧಾರಣವಾಗಿ ಹತ್ತು ಎಂಥೇಳ ಬಹುದು.

4. ಈ ಹತ್ತು ಧೊರೆತನಗಳು ಪಾಪು ಸಭೆಯುಂಟಾದ ಕಾಲದಲ್ಲಿ ಎದ್ದು, ಸ್ವಲ್ಪ ಕಾಲದಲ್ಲಿ ಗತಿಸಿ ಹೋಗುವವೆಂದು ತೋರುತ್ತದೆ. ಈ ಅರಸರೆಲ್ಲರು ಮೃಗದ ಬಿಂಕವನ್ನು ನೋಡಿ, ಭಯ ಪಟ್ಟು, ಒಂದೇ ಯೋಚನೆಯುಳ್ಳವರಾಗಿ ಅದಕ್ಕೆ ಬಲವನ್ನೂ ಅಧಿಕಾರವನ್ನೂ ಕೊಡುವರು. ಹಾಗೆಯೇ ಯುರೋಪ್ ಖಂಡದ ಅರಸರಲ್ಲಿ ಅನೇಕರು ರೋಮು ಸಭೆಯ ಪೋಪರಿಗೆ ಅಧಿಕಾರವನ್ನೂ ಘನವನ್ನೂ ಕೊಟ್ಟಿದ್ದರೆಂಬುವದು ಸಮಸ್ತರಿಗೂ ಪ್ರತ್ಯಕ್ಷವಾದ ಸಂಗತಿಯಾಗಿದೆ.

5. ಸುಳ್ಳು ಮತವೂ ಲೋಕಾಧಿಕಾರವೂ ಒಂದಾಗಿ ಶೇರಿ, ಕುರಿಮರಿಯಾದ ಸರ್ವಲೋಕದ ಒಡೆಯನ ಸಂಗಡ ಯುದ್ಧ ಮಾಡುವದಕ್ಕೆ ಮನಸ್ಸು ಮಾಡಿತು. ಆದರೆ ಸರ್ವಶಕ್ತನ ಸಂಗಡ ಹೋರಾಡಿ ಜಯಿಸ ತಕ್ಕವನ್ಯಾರು? ಆತನೂ ಆತನ ನಿಜ ದಾಸರೂ ಮಾತ್ರವೇ ಕಡೆಯಲ್ಲಿ ಸಕಲ ಶತ್ರುಗಳನ್ನು ಜಯಿಸಿ, ಜಯಶೀಲರಾಗಿ ಪ್ರಕಾಶಿಸುವರು.

6. ಈ ಜಾರೆಗೆ ಮಹಿಮೆಯನ್ನು ಕೊಟ್ಟ ಅರಸರೇ ಅವಳಿಗೆ ನಾಶನವನ್ನು ಬರ ಮಾಡುವರು. ಯುರೋಪ್ ಖಂಡದ ಕೆಲವು ಅರಸರಿಂದ ರೋಮು ಸಭೆಗೆ ಕೆಲವು ಕಾಲಗಳಲ್ಲಿ ವಿಘ್ನ ಸಂಭವಿಸಿದ್ದುಂಟು.

7. ಈ ಅರಸರು ಮೊದಲು ಮೃಗವನ್ನು ಪರಿಪಾಲಿಸಿದ್ದರಲ್ಲಿಯೂ, ತರುವಾಯ ಅದಕ್ಕೆ ನಾಶನವನ್ನು ಬರ ಮಾಡಿದ್ದರಲ್ಲಿಯೂ, ದೇವರ ನಿರ್ಣಯವು ಈಡೇರಿತು. ಮೊದಲು ಕೇಡು ಹೆಚ್ಚುವದರಲ್ಲಿಯೂ, ಕಡೆಯಲ್ಲಿ ಅದು ನಾಶವಾಗುವದರಲ್ಲಿಯೂ, ದೇವರ ಜ್ಞಾನವುಳ್ಳ ಆಲೋಚನೆ ತೋರುತ್ತದೆ ಎಂಬುವದನ್ನು ಭಕ್ತರು ನಿಶ್ಚಯಿಸಿ ತಾಳ್ಮೆಯಾಗಿರ ಬೇಕು.

8. ಜಾರೆಗೆ ಸಮಾನವಾದ ಸಭೆಯನ್ನು ಕುರಿತು ಏನೂ ಸಂದೇಹವಿಲ್ಲದೆ ಇರುವಂತೆ, ಅದನ್ನು ಕುರಿತು ಇದರಲ್ಲಿ ವಿವರವಾಗಿ ಹೇಳಿ ಇದೆ. ಆ ಕಾಲದಲ್ಲಿ ಭೂಮಿಯ ಅರಸರ ಮೇಲೆ ರಾಜ್ಯಭಾರ ಮಾಡಿದ ಮಹಾ ಪಟ್ಟಣವು ರೋಮುಪುರಿಯೇ ಹೊರ್ತು

ಬಾಬೆಲಿನ ಬೀಳುವಿಕೆ; ಭಕ್ತರು ಅದರ ನಾಶನಕ್ಕೆ ತಪ್ಪುವಂತೆ ಎಚ್ಚರಿಸಲ್ಪಟ್ಟದ್ದು; ಅದರ ಬೀಳುವಿಕೆಯ ವಿಷಯ ಭೂಲೋಕದವರು ಅಳುವದು.

**18.** [1]ಇವುಗಳ ತರುವಾಯ, ಮಹಾ ಅಧಿಕಾರವುಳ್ಳ ಮತ್ತೊಬ್ಬ ದೂತನು ಪರಲೋಕದಿಂದಿಳಿಯುವದನ್ನು
೨ ಕಂಡೆನು; ಮತ್ತು ಅವನ ಮಹಿಮೆಯಿಂದ ಭೂಮಿಯು ಬೆಳಕಾಯಿತು. ಅವನು ಘಟ್ಟಿಯಾಗಿ ಕೂಗಿ,
ಮಹಾ ಶಬ್ದದಿಂದ—[2]ಬಿತ್ತು, ಬಿತ್ತು, ದೊಡ್ಡ ಬಾಬೆಲು; [3]ಅದು ದೆವ್ವಗಳ ನಿವಾಸವು, ಸಕಲ ಅಶುದ್ಧಾತ್ಮಗಳ
೩ ಶೆರೆಯೂ, ಅಶುದ್ಧವೂ ಅಸಹ್ಯವೂ ಆಗಿರುವ ಸಕಲ ಪಕ್ಷಿಗಳ ಶೆರೆಯೂ, ಆಯಿತು. ಯಾಕಂದರೆ ಅವಳ
ಜಾರತ್ವದ ಉಗ್ರದ [4]ದ್ರಾಕ್ಷೇ ರಸದಲ್ಲಿ ಎಲ್ಲಾ ಜನಾಂಗಗಳು ಕುಡಿದವೆ; ಭೂರಾಜರು ಅವಳ ಸಂಗಡ ಜಾ
ರತ್ವ ಮಾಡಿದರು; ಭೂಮಿಯ ವರ್ತಕರು ಅವಳ ವೈಭವದ ಬಲದಿಂದ ಐಶ್ವರ್ಯವಂತರಾದರು, ಅಂದನು.
೪ ಮತ್ತು ಪರಲೋಕದಿಂದಾದ ಮತ್ತೊಂದು ಶಬ್ದವನ್ನು ಕೇಳಿದೆನು; ಏನಂದರೆ, [5]ನನ್ನ ಜನರೇ, ಅವಳ ಪಾ
ಪಗಳಲ್ಲಿ ಪಾಲುಗಾರರಾಗದ ಹಾಗೆಯೂ, ಅವಳ ಬಾಧೆಗಳಲ್ಲಿ ಪಾಲು ಹೊಂದದ ಹಾಗೆಯೂ, ಅವಳೊ
೫ ಳಗಿಂದ ಹೊರಟು ಬನ್ನಿರಿ. ಯಾಕಂದರೆ ಅವಳ ಪಾಪಗಳು [6]ಆಕಾಶದ ಮಟ್ಟಿಗೂ ಮುಟ್ಟಿ ಅವೆ. ಅವಳ
೬ ಅನ್ಯಾಯಗಳನ್ನು ದೇವರು ಜ್ಞಾಪಕ ಮಾಡಿ ಕೊಂಡಿದ್ದಾನೆ. ಅವಳು ನಿಮಗೆ ಕೊಟ್ಟ ಪ್ರಕಾರ [7]ಅವ

ಬೇರೆ ಯಾವದೂ ಅಲ್ಲ. ನಿತ್ಯ ಪಟ್ಟಣವೆಂದು ಹೆಚ್ಚಳ ಪಡುವ ಆ ಪಟ್ಟಣವೇ ಈ ಕಾಲದಲ್ಲಿಯೂ, ಲೌಕಿಕ ಅಧಿಕಾರದಿಂದ ಆಳದೆ ಇದ್ದಾಗ್ಯೂ, ವೈದಿಕ ಅಧಿಕಾರದಿಂದ ಭೂರಾಜರ ಮೇಲೆ ರಾಜ್ಯಭಾರ ಮಾಡುತ್ತದೆ. ಆದದರಿಂದ ನಿಸ್ಸಂದೇಹವಾಗಿ ದೇವರ ಚೀಟು ಶಾಪಕ್ಕೀಡಾದ ವಸ್ತುಗಳನ್ನು ಕದ್ದು ಕೊಂಡ ಆಕಾನನ ಮೇಲೆ ಬಿದ್ದ ಪ್ರಕಾರ, ಸರ್ವಶಕ್ತನಾದ ದೇವರ ಮಹಿಮೆಯನ್ನು ಅಪಹರಿಸಿದ ರೋಮ ಸಭೆಯ ಮೇಲೆ ಬೀಳುವದು.

1. ಮುಂದಿನ ದರ್ಶನಗಳಿಗೆ ಶೇರಿದ ಈ ಎರಡನೇ ದರ್ಶನದಲ್ಲಿ ಒಬ್ಬ ಬಲಿಷ್ಠ ದೂತನು ಬಾಬೆಲಿನ ನಾಶನವನ್ನು ಸಾರುತ್ತಾನೆ. (೧೮. ೧—೩.) ದೇವಭಕ್ತರು ಅದರ ಪಾಪಕ್ಕೂ ಆಜ್ಞೆಗೂ ಒಳಗಾಗದೆ, ಅದನ್ನು ಬಿಟ್ಟು ತೊಲಗಿ ಹೋಗುವ ಹಾಗೆ ಎಚ್ಚರಿಸಲ್ಪಡುತ್ತಾರೆ. ಮೊದಲು ಅದಕ್ಕಿದ್ದ ಮಹಿಮೆಯನ್ನೂ ಕಡೆಯಲ್ಲಿ ಅದಕ್ಕೆ ಬಂದ ನಾಶನವನ್ನೂ, ಭೂರಾಜರೂ ವರ್ತಕರೂ ನಾವಿಕರೂ ಕಂಡು ಶಬ್ದವೆತ್ತಿ ಅಳುತ್ತಾರೆ. (೪—೧೯. ವ.) ಪರಲೋಕವು ಆನಂದದಿಂದ ಸಂತೋಷ ಪಡುತ್ತದೆ. (೨೦. ವ.) ಒಬ್ಬ ಬಲಿಷ್ಠ ದೂತನು ಒಂದು ದೊಡ್ಡ ಬೀಸುವ ಕಲ್ಲನ್ನು ಸಮುದ್ರದಲ್ಲಿ ಹಾಕಿ, ಬಾಬೆಲು ಸಮೂಲವಾಗಿ ಬಿದ್ದು ನಾಶವಾಗುವದೆಂದು ಸಾರುತ್ತಾನೆ. (೨೧—೨೪. ವ.) ದೇವರ ದಾಸರು ದೇವರ ನ್ಯಾಯತೀರ್ಪುಗಳನ್ನೂ, ತಿರುಸಭೆಗೆ ಅತಿ ಶೀಘ್ರವಾಗಿ ಬರುವ ಮಹಿಮೆಯನ್ನೂ ನೆನಸಿ ಜಯಕೀರ್ತನೆ ಹಾಡುತ್ತಾರೆ. (೧೯. ೧—೮.) ಈ ದರ್ಶನಗಳನ್ನು ಬರೆಯುವಂತೆ ಕಟ್ಟಳೆ ಹೊಂದಿದ ಯೋಹಾನನು ತನಗೆ ಅವುಗಳನ್ನು ತಿಳಿಸಿದವನನ್ನು ನಮಸ್ಕರಿಸ ಹೋದಾಗ, ಅವನು ಕರ್ತನ ದಾಸನೆಂದು ಅರಿತದ್ದರಿಂದ ಅವನನ್ನು ತಡೆದನು. (೯, ೧೦. ವ.)

2. ಬಾಬೆಲಿನ ನಾಶನವನ್ನು ಕುರಿತು ಹೇಳಿದ ಈ ವಚನವು, ಪೂರ್ವೀಕ ಬಾಬೆಲಿನ ನಾಶನವನ್ನು ಕುರಿತು ಯೆಶಾಯ ಯೆರೆಮಿಯ ಎಜೇಕಿಯೇಲನು ಎಂಬ ಪ್ರವಾದಿಗಳು ಹೇಳಿದ ಪ್ರವಾದನಾವಾಕ್ಯಗಳಿಗೆ ಸರಿಯಾಗಿದೆ. (ಯೆಶಾ. ೧೩, ೧೪, ೪೭. ಸಂಧಿಗಳು. ಯೆರೆ. ೫೦, ೫೧. ಸಂಧಿಗಳು.) ಬಾಬೆಲು ಬಿತ್ತು, ಬಿತ್ತು, ಎಂದು ಎರಡು ಸಾರಿ ಹೇಳಿರುವದರಿಂದ ಅದು ನಿಶ್ಚಯವಾಗಿಯೂ ಪೂರ್ಣವಾಗಿಯೂ ನಾಶವಾಗುವದು.

3. (ಯೆಶಾ. ೧೩. ೨೧, ೨೨. ಮತ್ತಾ. ೧೨. ೪೩. ವಚನದ ವ್ಯಾಖ್ಯಾನ ನೋಡ ಬೇಕು.) ಗಡಸರ್ಪಕ್ಕೆ ಪೀಠವಾಗಿದ್ದ ಸ್ಥಳವು ದೆವ್ವಗಳ ನಿವಾಸವೂ, ಸಕಲ ಅಶುದ್ಧಾತ್ಮಗಳ ಶೆರೆಯೂ, ಅಶುದ್ಧವೂ ಅಸಹ್ಯವೂ ಆಗಿರುವ ಪಕ್ಷಿಗಳ ಶೆರೆಯೂ ಆಯಿತು.

4. ಅದರ ನಾಶನಕ್ಕೆ ಕಾರಣವು ಇಲ್ಲಿ ಹೇಳಲ್ಪಟ್ಟದೆ. ಅದರ ಆತ್ಮಭಾವದ ಜಾರತ್ವವೇ ಅದರ ನಾಶನಕ್ಕೆ ಕಾರಣವಾಯಿತು. (೧೪. ೮. ವಚನದ ವ್ಯಾಖ್ಯಾನ ನೋಡ ಬೇಕು.)

5. ನನ್ನ ಜನರೇ, ಎಂದು ಹೇಳಿರುವದರಿಂದ ಇದು ದೇವರ ಶಬ್ದವಾಗಿದೆ. ಹಾಗೆಯೇ ಪೂರ್ವೀಕ ಬಾಬೆಲಿನಲ್ಲಿದ್ದ ದೇವರ ದಾಸರು ಅದನ್ನು ಬಿಟ್ಟು ತೊಲಗುವಂತೆ ಪ್ರವಾದಿಗಳಿಂದ ಎಚ್ಚರಿಸಲ್ಪಟ್ಟರು. (ಯೆಶಾ. ೪೮. ೨೦; ೫೨. ೧೧. ಯೆರೆ. ೫೧. ೬, ೪೫.) ಅಕ್ರಮಭರಿತವಾದ ಸೊದೋಮಿನಲ್ಲಿ ಲೋಟನು ಇದ್ದ ಪ್ರಕಾರ, ಜಾರತ್ವಭರಿತವಾದ ಈ ಬಾಬೆಲಿನಲ್ಲಿ "ಕೃಪೆಯ ಉಳುಹು" ಎಂದು ಹೇಳಲ್ಪಟ್ಟ ಕರ್ತನ ಜನರಿದ್ದರು. ಅವರು ಆ ನಾಶನಕ್ಕೆ ತಪ್ಪುವದಕ್ಕಾಗಿ ಅವರು ಅದನ್ನು ಬಿಟ್ಟು ಓಡಿ ಹೋಗ ಬೇಕೆಂದು ದೇವರು ಅವರನ್ನು ಎಚ್ಚರಿಸುತ್ತಾನೆ.

6. ಪೂರ್ವೀಕ ಬಾಬೆಲು ಇದ್ದ ಶೀನಾರ್ ಬೈಲಿನಲ್ಲಿ ಒಂದು ಪಟ್ಟಣವನ್ನೂ, ಆಕಾಶವನ್ನು ಮುಟ್ಟುವ ಒಂದು ಗೋಪುರವನ್ನೂ ಆ ಕಾಲದ ಭಕ್ತಿಹೀನರು ಕಟ್ಟುವದಕ್ಕೆ ಯತ್ನಯಿಸಿದರು. (ಉತ್ಪ. ೧೧. ೩, ೪.) ಹಾಗೆಯೇ ಈ ಬಾಬೆಲಿನ ಪಾಪವು ಸಹ ಆಕಾಶಕ್ಕೆ ಮುಟ್ಟಿ ಪರಮ ಸಿಂಹಾಸನದಲ್ಲಿ ಕುಳಿತಿರುವ ದೇವರನ್ನು ಮುಯ್ಯಿ ತೀರಿಸ ಬೇಕೆಂದು ಕೂಗಿತು. (ಯೆರೆ. ೫೧. ೯.)

7. ಯೆಹೂದ್ಯರ ನ್ಯಾಯಪ್ರಮಾಣದಲ್ಲಿ ಕೆಲವು ಅಪರಾಧ ಮಾಡಿದವರಿಗೆ ಬದಲಿಗೆ ಬದಲು ಮಾಡ ಬೇಕೆಂದು ಹೇಳಿ ಇದೆ. ಹಾಗೆಯೇ ಕದ್ದವರು ತಾವು ಕದ್ದ ವಸ್ತುವಿಗೆ ಎರಡಷ್ಟು ಕೊಡ ಬೇಕೆಂದು ವಿಧಿಸಿರುತ್ತದೆ. ಹಾಗೆಯೇ ಈ ಬಾಬೆಲು ಮಾಡಿದ ಪಾಪಕ್ಕೆ, ದೇವರ ನೀತಿಯ ಪ್ರಕಾರ, ಉತ್ತಮ ಭಕ್ತರಿಂದ ಅದಕ್ಕೆ



ಳಿಗೆ ಕೊಟ್ಟು, ಅವಳ ಕ್ರಿಯೆಗಳ ಪ್ರಕಾರ ಅವಳಿಗೆ ಎರಡಷ್ಟು ಹೆಚ್ಚು ಮಾಡಿರಿ. ಅವಳು ಕಲಿಸಿದ ಪಾತ್ರೆ
೭ ಯಲ್ಲಿ ಅವಳಿಗೆ ಎರಡಷ್ಟು ಕಲಿಸಿ ಕೊಡಿರಿ. ಅವಳು ತನ್ನನ್ನು ಎಷ್ಟು ಮಹಿಮೆ ಪಡಿಸಿ ಕೊಂಡು, ವೈಭವ
ವಾಗಿ ಬದುಕಿದಳೋ, ಅಷ್ಟು ಪೀಡೆಯನ್ನೂ ದುಃಖವನ್ನೂ ಅವಳಿಗೆ ಕೊಡಿರಿ; ಯಾಕಂದರೆ ಅವಳು ತನ್ನ
ಹೃದಯದಲ್ಲಿ—[1]ರಾಣಿಯಾಗಿ ಕೂತು ಕೊಳ್ಳುತ್ತೇನೆ; ನಾನು ವಿಧವೆ ಅಲ್ಲ; ದುಃಖವನ್ನು ಕಾಣುವದಿಲ್ಲ,
೮ ಅಂದು ಕೊಳ್ಳುತ್ತಾಳೆ. ಇದಕ್ಕೋಸ್ಕರ ಅವಳ ಬಾಧೆಗಳಾದ ಮರಣವೂ ದುಃಖವೂ ಬರವೂ ಒಂದೇ
ದಿನದಲ್ಲಿ ಬರುವವು; [2]ಬೆಂಕಿಯಿಂದ ಸುಟ್ಟು ಬಿಡಲ್ಪಡುವಳು. ಯಾಕಂದರೆ ಅವಳಿಗೆ ನ್ಯಾಯ ತೀರಿಸುವ
೯ ದೇವರಾದ ಕರ್ತನು ಶಕ್ತನೇ. ಅವಳ ಸಂಗಡ ಜಾರತ್ವವನ್ನೂ ವೈಭವವನ್ನೂ ನಡಿಸಿದ ಭೂರಾಜರು,
೧೦ ಅವಳ ಸುಡುವಿಕೆಯ ಹೊಗೆಯನ್ನು ನೋಡುವಾಗ, [3]ಅವಳಿಗೋಸ್ಕರ ಗೋಳಾಡಿ, ಬಡುಕೊಂಡು, ಅವಳ
ಪೀಡೆಯ ಭಯದಿಂದ ದೂರದಲ್ಲಿ ನಿಂತು ಕೊಂಡು—ಅಯ್ಯೋ, ಅಯ್ಯೋ, ಮಹಾ ಪಟ್ಟಣವಾದ ಬಾಬೆಲೇ!
ಬಲವಾದ ಪಟ್ಟಣವೇ! ಒಂದು ಘಳಿಗೆಯಲ್ಲಿ ನಿನ್ನ ನ್ಯಾಯತೀರ್ವಿಕೆಯು ಬಂತಲ್ಲ? ಅನ್ನುತ್ತಾರೆ.
೧೧ ಮತ್ತು ಭೂಮಿಯ ವರ್ತಕರು ಅವಳಿಗೋಸ್ಕರ ಅತ್ತು, ಗೋಳಾಡುವರು; ಯಾಕಂದರೆ ಅವರ ಸರಕನ್ನು
೧೨ ಯಾರೂ ಇನ್ನು ಕೊಂಡು ಕೊಳ್ಳುವದಿಲ್ಲ. ಆ ಸರಕು ಏನಂದರೆ, ಚಿನ್ನ, ಬೆಳ್ಳಿ, ರತ್ನಕಲ್ಲು, ಮುತ್ತುಗಳು,
ನಾರುಮಡಿ, ರಕ್ತಾಂಬರಗಳು, ರೇಶಿಮೆ, ಲಾಖಿಬಣ್ಣ, [4]ಸಕಲವಾದ ಅಗರು ಮರವು, ಸಕಲ ವಿಧವಾದ
ಜಂತದ ಸಾಮಗ್ರಿಗಳು, ಬಹು ಬೆಲೆಯುಳ್ಳ ಮರ, ಹಿತ್ತಾಳಿ, ಕಬ್ಬಿಣ, ಬಿಳೀ ಕಲ್ಲುಗಳಿಂದುಂಟಾದ ಸಕಲ
೧೩ ವಿಧವಾದ ಸಾಮಗ್ರಿಗಳು, ಲವಂಗಚಕ್ಕೆ, ಧೂಪಗಳು, ರಕ್ತಬೋಳ, ಸಾಂಬ್ರಾಣಿ, ದ್ರಾಕ್ಷೇ ರಸ, ಎಣ್ಣೆ,
ನಯವಾದ ಹಿಟ್ಟು, ಗೋಧಿ, ದನಗಳು, ಕುರಿಗಳು, ಕುದುರೆಗಳು, ರಥಗಳು, ಮನುಷ್ಯರ [5]ಶರೀರಗಳು,
೧೪ ಪ್ರಾಣಗಳು. ನಿನ್ನ ಪ್ರಾಣವು ಆಶಿಸಿದ ಹಣ್ಣುಗಳು, ನಿನ್ನನ್ನು ಬಿಟ್ಟು ಹೋದವು; ರಮ್ಯವಾಗಿ ಪ್ರಕಾಶ
ವಾಗಿ ಇರುವವುಗಳೆಲ್ಲಾ ನಿನ್ನನ್ನು ಬಿಟ್ಟು ಹೋದವು; ಅವು ನಿನಗೆ [6]ಇನ್ನು ಶಿಕ್ಕುವದಿಲ್ಲ.
೧೫ ಅವಳಿಂದ ಐಶ್ವರ್ಯವಂತರಾದ ಈ ಸರಕುಗಳ ವರ್ತಕರು ಅವಳ ಪೀಡೆಯ ಭಯದಿಂದ ದೂರದಲ್ಲಿ ನಿಂತು
೧೬ ಕೊಂಡು, ಅತ್ತು, ಗೋಳಾಡಿ— ಅಯ್ಯೋ, ಅಯ್ಯೋ, ಮಹಾ ಪಟ್ಟಣವೇ, ನಾರುಮಡಿ, ರಕ್ತಾಂಬರ, ಲಾಖಿ
೧೭ ಬಣ್ಣಗಳನ್ನು ಹಾಕಿ ಕೊಂಡು, ಚಿನ್ನ, ರತ್ನಕಲ್ಲು, ಮುತ್ತುಗಳಿಂದ ಅಲಂಕರಿಸಿ ಕೊಂಡವಳೇ, ಇಷ್ಟು ಐಶ್ವರ್ಯ
ವು [7]ಒಂದೇ ಘಳಿಗೆಯಲ್ಲಿ ಹಾಳಾಯಿತಲ್ಲ? ಅನ್ನುವರು. ಮತ್ತು ಹಡಗದ ಯಜಮಾನರೆಲ್ಲರೂ, ಹಡಗಗ
ಳಲ್ಲಿರುವ ಸಮೂಹಗಳೆಲ್ಲವೂ, ನಾವಿಕರೂ, ಸಮುದ್ರದ ಮೇಲೆ ಕೆಲಸವನ್ನು ನಡಿಸುವವರೆಲ್ಲರೂ, ದೂರದಲ್ಲಿ
೧೮ ನಿಂತು ಕೊಂಡು, ಅವಳ ಸುಡುವಿಕೆಯ ಹೊಗೆಯನ್ನು ನೋಡಿ, ಕೂಗಿ—ಈ ಮಹಾ ಪಟ್ಟಣಕ್ಕೆ ಸಮಾನ

ಎರಡಷ್ಟಾಗಿ ಕೇಡು ಬರುವದೆಂದು ಪ್ರವಾದನೆಯಾಗಿ ಹೇಳಿ ಇದೆ. (ಯೆರೆ. ೫೦. ೧೫, ೨೯.)

1. ಪೂರ್ವದಲ್ಲಿ ನಾಶ ಹೊಂದಿದ ಬಾಬೆಲು ಸಹ ತನ್ನನ್ನು ಕುರಿತು ಹೀಗೆಯೇ ಹೆಚ್ಚಳ ಪಟ್ಟಿತು. (ಯೆಶಾ. ೪೭. ೭—೧೧.)

2. ನಾನು ರಾಣಿಯಾಗಿದ್ದೇನೆ, ದುಃಖವನ್ನು ನೋಡುವದಿಲ್ಲವೆಂದು ಹೆಚ್ಚಳ ಪಟ್ಟವಳು ಬೆಂಕಿಯಿಂದ ಸುಟ್ಟು ಬಿಡಲ್ಪಡುವಳು. ಅವಳು ಸಮೂಲ ನಾಶವಾಗುವದೇ ಹೊರ್ತು, ಸ್ವಲ್ಪವಾದರೂ ಉಳಿಯುವದಿಲ್ಲ. ಅವಳಿಗೆ ಸ್ವಲ್ಪವಾದರೂ ಕರುಣೆ ತೋರಿಸುವದಿಲ್ಲ. ಸರ್ವಶಕ್ತನ ಹಸ್ತವು ಅಕ್ರಮಕಾರರನ್ನು ಹಿಡಿಯುವಾಗ ಅವರು ಹ್ಯಾಗೆ ತಪ್ಪಿಸಿ ಕೊಳ್ಳುವರು?

3. ಈ ಗೋಳಾಟವು ಎಜೇಕಿಯೇಲನ ೨೭ನೇ ಸಂಧಿಯಲ್ಲಿ ತೂರಿನ ನಾಶನವನ್ನು ಕುರಿತು ಗೋಳಾಡಿದ ಗೋಳಾಟದ ಹಾಗಿದೆ. ಅಕ್ರಮಕಾರರ ನಾಶನವನ್ನು ಕಂಡು ಭೂರಾಜರು ಗೋಳಾಡುವದೇ ಹೊರ್ತು, ಬೇರೆ ಯಾವ ಸಹಾಯವೂ ಮಾಡ ಕೂಡದು.

4. ಇದು ಒಂದು ವಿಧ ಸುಗಂಧ ಮರವು. ಇದು ಆಫ್ರಿಕದಿಂದ ತರಲ್ಪಟ್ಟ ಸುಗಂಧ ಮರವಾಗಿರ ಬಹುದು.

5. ಇದು ದಾಸತ್ವದ ವ್ಯಾಪಾರವನ್ನು ಕುರಿತದ್ದೆಂದು ತೋರುತ್ತದೆ. ಪೂರ್ವದಲ್ಲಿ ಮನುಷ್ಯರನ್ನು ಗುಲಾಮರಾಗುವದಕ್ಕೆ ಮಾರುವರು.

6. ಸಕಲ ಸೌಖ್ಯವೂ ಉಲ್ಲಾಸವೂ ಸಮೂಲವಾಗಿ ನಿಂತು ಹೋಗುವದು. ಇನ್ನು ಮೇಲೆ ಅದನ್ನು ಕಾಣುವದಕ್ಕಾಗುವದಿಲ್ಲ. ದೇವರ ಹಸ್ತದಿಂದ ನಾಶ ಹೊಂದಿದ ಅಪಭಕ್ತರಲ್ಲಿ ಉಲ್ಲಾಸವೂ ಸಂತೋಷವೂ ಹ್ಯಾಗೆ ಇರ ಕೂಡುವದು?

7. ಐಶ್ವರ್ಯದಲ್ಲಿಯೂ ವೈಭವದಲ್ಲಿಯೂ ಮುಣುಗಿ ಹೋಗಿದ್ದ ಮಹಾ ಪಟ್ಟಣವು ಒಂದು ಘಳಿಗೆಯಲ್ಲಿ ನಾಶವಾಗಿ ಮಣ್ಣುದಿಬ್ಬೆಯಾದದ್ದನ್ನು, ಅದರಿಂದ ಐಶ್ವರ್ಯವಂತರಾದ ವರ್ತಕರು ಕಂಡು ಗೋಳಾಡಿದ್ದು ಸಹಜವಾಗಿದೆ.

೧೯ ವಾದದ್ದು ಯಾವದು? ಅಂದರು. ಮತ್ತು ತಮ್ಮ ತಲೆಗಳ ಮೇಲೆ [1]ಮಣ್ಣು ಹಾಕಿ ಕೊಂಡು, ಅತ್ತು,
ಗೋಳಾಡಿ, ಕೂಗಿ—ಅಯ್ಯೋ, ಅಯ್ಯೋ, ಸಮುದ್ರದಲ್ಲಿ ಹಡಗಗಳುಂಟಾದವರೆಲ್ಲರಿಗೆ ತನ್ನ ಘನತೆಯಿಂದ
ಐಶ್ವರ್ಯವನ್ನು ಉಂಟು ಮಾಡಿದ ಮಹಾ ಪಟ್ಟಣವು ಒಂದೇ ಘಳಿಗೆಯಲ್ಲಿ ಹಾಳಾಯಿತಲ್ಲ? ಅಂದರು.
೨೦ ಪರಲೋಕವೇ, ಪರಿಶುದ್ಧ ಅಪೊಸ್ತಲರೇ, ಪ್ರವಾದಿಗಳೇ, ಅವಳಿಗೋಸ್ಕರ [2]ಆನಂದ ಪಡಿರಿ, ಯಾಕಂದರೆ
ದೇವರು ನಿಮ್ಮ ನ್ಯಾಯವನ್ನು ಅವಳ ಮೇಲೆ ತೀರಿಸಿದ್ದಾನೆ.
೨೧ ಆಗ ಒಬ್ಬ ಬಲಿಷ್ಠ ದೂತನು ಬೀಸುವ ಕಲ್ಲಿನಂತಿರುವ ದೊಡ್ಡ ಕಲ್ಲನ್ನು ಎತ್ತಿ, [3]ಸಮುದ್ರದಲ್ಲಿ ಹಾಕಿ,
ಹೇಳಿದ್ದು—ಹೀಗೆಯೇ ಮಹಾ ಪಟ್ಟಣವಾದ ಬಾಬೆಲು ಬೀಸಿ ಹಾಕಲ್ಪಟ್ಟು, ಇನ್ನು ಮೇಲೆ ಕಾಣದೆ ಹೋಗು
೨೨ ವದು. ಮತ್ತು ವೀಣೆಗಾರರ ಸಂಗೀತಗಾರರ ಮೇಳಗಾರರ ತುತೂರಿಯವರ ಶಬ್ದವು ಇನ್ನು ಮೇಲೆ
ನಿನ್ನಲ್ಲಿ ಕೇಳಿಸುವದಿಲ್ಲ. ಮತ್ತು ಯಾವ ಶಿಲ್ಪದ ಯಾವ ಶಿಲ್ಪಿಯಾದರೂ ಇನ್ನು ಮೇಲೆ ನಿನ್ನಲ್ಲಿ ಕಾಣಿಸು
೨೩ ವದಿಲ್ಲ. ಬೀಸುವ ಕಲ್ಲಿನ ಶಬ್ದವು ನಿನ್ನಲ್ಲಿ ಇನ್ನು ಕೇಳಿಸುವದಿಲ್ಲ. ದೀಪದ ಬೆಳಕು ನಿನ್ನಲ್ಲಿ ಇನ್ನು ಪ್ರಕಾಶಿ
ಸುವದಿಲ್ಲ. ಮದಲಿಂಗ ಮದಲಗಿತ್ತಿಯರ ಶಬ್ದವು [4]ನಿನ್ನಲ್ಲಿ ಇನ್ನು ಕೇಳಿಸುವದಿಲ್ಲ; ಯಾಕಂದರೆ ನಿನ್ನ ವರ್ತ
ಕರು ಭೂಮಿಯಲ್ಲಿ ಬಹು ದೊಡ್ಡವರಾಗಿದ್ದರು; ನಿನ್ನ ಮಾಟಗಳಿಂದ ಜನಾಂಗಗಳೆಲ್ಲಾ ಮೋಸ ಹೋದವು.
೨೪ ಮತ್ತು ಪ್ರವಾದಿಗಳು, ಪರಿಶುದ್ಧರು, [5]ಭೂಮಿಯ ಮೇಲೆ ಕೊಲ್ಲಲ್ಪಟ್ಟವರೆಲ್ಲರು, ಇವರ ರಕ್ತವು ಅದರಲ್ಲಿ
ಕಾಣಿಸಿತು.

ವಿಮೋಚಿಸಲ್ಪಟ್ಟ ಸಭೆಯ ಮಹಾ ಉಲ್ಲಾಸದ ಜಯಕೀರ್ತನೆಯು.

19. ಇವುಗಳ ತರುವಾಯ ಪರಲೋಕದಲ್ಲಿ [6]ದೊಡ್ಡ ಗುಂಪಿನ ಮಹಾ ಶಬ್ದವನ್ನು ಕೇಳಿದೆನು. ಏನಂದರೆ—
[7]ಹಲ್ಲೆಲೂಯಾ, ನಮ್ಮ ದೇವರಾದ ಕರ್ತನಿಗೆ ರಕ್ಷಣೆಯು, ಮಹಿಮೆಯು, ಘನವು, ಬಲವು ಆಗಲಿ.

1. ತಲೆಗಳ ಮೇಲೆ ಮಣ್ಣು ಹಾಕಿ ಕೊಂಡು ದುಃಖವನ್ನು ತೋರಿಸುವದು ಆಸ್ಯ ಖಂಡದ ಕೆಲವು ದೇಶಗಳವರಲ್ಲಿ ವಾಡಿಕೆಯಾಗಿದೆ. (ಎಜೇಕಿ. ೨೭. ೩೦.)

2. ಪೂರ್ವಿಕ ಬಾಬೆಲು ನಾಶನವಾದಾಗ ಇಂಥಾ ಸಂಭ್ರಮವು ಉಂಟಾಯಿತು. (ಯೆರೆ. ೫೧. ೪೮.) ಭೂಲೋಕದಲ್ಲಿರುವ ಅಪಭಕ್ತರಿಗೆ ಬಹಳ ದುಃಖವನ್ನು ಉಂಟು ಮಾಡುವ ನಾಶನವು, ಪರಲೋಕದ ದೇವಭಕ್ತರಿಗೆ ಬಹಳ ಆನಂದವನ್ನು ಉಂಟು ಮಾಡಿತು. ಈ ಮುಖ್ಯ ಸಂಗತಿಯು ಅವರ ವಿಜ್ಞಾಪನೆಯ ಪ್ರಕಾರ ಆಯಿತೆಂದು ತೋರುತ್ತದೆ. (೬. ೧೦.)

3. ಸಮುದ್ರದಲ್ಲಿ ಬಿಸಾಡಿದ ದೊಡ್ಡ ಬೀಸುವ ಕಲ್ಲು ಇನ್ನು ಮೇಲಕ್ಕೇಳದೆ ತಳದಲ್ಲಿ ಮುಣುಗಿ ಹೋಗುವ ಪ್ರಕಾರ, ಈ ಮಹಾ ಪಟ್ಟಣವು ಇನ್ನು ತಲೆ ಎತ್ತದ ಹಾಗೆ ಬುಡ ನಾಶವಾಗುವದು. (ಯೆರೆ. ೫೧. ೬೩, ೬೪.)

4. ೨೨, ೨೩ನೇ ವಚನಗಳಲ್ಲಿರುವ ವಿಷಯಗಳಿಂದ ಈ ಮಹಾ ಪಟ್ಟಣಕ್ಕೆ ಸಂಭವಿಸಿದ ಪೂರ್ಣ ನಾಶನವು ತೋರುತ್ತದೆ. (ಯೆರೆ. ೨೫. ೧೦.) ಗೀತವಾದ್ಯವು ಮೇಲಾದ ಅಂತಸ್ತುಳ್ಳವರ ಉಲ್ಲಾಸ ಸಭೆಗೆ ತಕ್ಕದ್ದು. ವ್ಯಾಪಾರವು ಮಧ್ಯ ಅಂತಸ್ತಿನವರಿಗೆ ತಕ್ಕದ್ದು. ಬೀಸುವ ಕಲ್ಲಿನಲ್ಲಿ ಕೆಲಸ ಮಾಡುವದು ಕೆಳಗಿನ ಅಂತಸ್ತಿನವರಿಗೆ ತಕ್ಕದ್ದು. ದೀಪವಿಟ್ಟು ಮದಲಿಂಗ ಮದಲಗಿತ್ತಿಯರಿಗೆ ಮದುವೆ ಮಾಡುವದು ಪ್ರಜಾಭಿವೃದ್ಧಿಗೆ ತಕ್ಕ ಯತ್ನವು. ಇಂಥಾ ಕಾರ್ಯಗಳೆಲ್ಲಾ ಆ ಮಹಾ ಪಟ್ಟಣದಲ್ಲಿ ಸಮೂಲವಾಗಿ ಇಲ್ಲದೆ ಹೋಗುವದನ್ನು ಯೋಚಿಸಿದರೆ, ಎಲ್ಲಾ ಅಂತಸ್ತಿನವರೂ ಅದರಲ್ಲಿ ಇಲ್ಲದೆಯೂ, ಪ್ರಜಾಭಿವೃದ್ಧಿಗೆ ಹೇತುವೆ ಇಲ್ಲದೆಯೂ ಹೋಗುವಂತೆ, ಅದಕ್ಕುಂಟಾದ ಸರ್ವ ನಾಶನವು ಪ್ರಕಟವಾಗಿದೆ.

5. (ಮತ್ತಾ. ೨೩. ೩೫.) ಅಕ್ರಮಕ್ಕೆ ತೌರು ಮನೆಯಾದ ಈ ಮಹಾ ಪಟ್ಟಣಕ್ಕೆ ಸಂಭವಿಸಿದ ನಾಶನವು, ಬಾಬೆಲು, ತೂರು, ಯೆರೂಸಲೇಮು ಎಂಬ ಪಟ್ಟಣಗಳಿಗೆ ಪ್ರವಾದನಾವಾಕ್ಯದ ಪ್ರಕಾರ ಸಂಭವಿಸಿದ ನಾಶನಕ್ಕೆ ಸಮಾನವಾಗಿದೆ. ಆ ಪಟ್ಟಣಗಳಲ್ಲಿದ್ದ ಅಕ್ರಮಗಳೆಲ್ಲಾ ಈ ಮಹಾ ಪಟ್ಟಣದಲ್ಲಿ ಒಂದಾಗಿ ಕೂಡಿರುವದರಿಂದ, ಅವುಗಳಿಗೆ ಪ್ರಾಪ್ತಿಸಿದ ನಾಶನವೆಲ್ಲಾ ಇದರ ಮೇಲೆ ಬಂತು. ಆದದರಿಂದ ಇದು ಬುಡನಾಶನವಾಯಿತು. ಅದರ ಎಲ್ಲಾ ಪಾಪಗಳಲ್ಲಿ ಪ್ರವಾದಿಗಳೂ, ಪರಿಶುದ್ಧವಂತರೂ, ರಕ್ತಸಾಕ್ಷಿಗಳೂ ಆದ ಎಲ್ಲಾ ಭಕ್ತರ ರಕ್ತವನ್ನು ಚೆಲ್ಲಿದ್ದೇ ಮಹಾ ದೊಡ್ಡ ಪಾಪವು. ಈ ಅಕ್ರಮದ ಅಳತೆಯು ತುಂಬಿದ ತರುವಾಯ ದೇವರ ಉಗ್ರದ ಪಾತ್ರೆಯು ಇದರ ಮೇಲೆ ಹೊಯ್ಯಲ್ಪಟ್ಟದ್ದರಿಂದ ಇದು ಸುಟ್ಟು ಭಸ್ಮವಾಗಿ ಹೋಯಿತು. ತನ್ನ ಅಕ್ರಮದ ಅಳತೆಯನ್ನು ತುಂಬಿಸುವ ಒಬ್ಬೊಬ್ಬ ಅಪಭಕ್ತನ ಅಂತ್ಯವು ಹೀಗೆಯೇ ಇರುವದು.

6. ಈ ಜಾರೆಯಾದ ಬಾಬೆಲು ದೇವರ ಕೋಪಾಗ್ನಿಯಿಂದ ಭಸ್ಮವಾದ ತರುವಾಯ, ಪರಿಶುದ್ಧವಂತರೂ ದೇವದೂತರೂ ಎಣಿಸ ಕೂಡದ ದೊಡ್ಡ ಸಮೂಹವಾಗಿ ನಿಂತು, ಸಂತೋಷಾನಂದದಿಂದ ಜಯಗೀತ ಹಾಡುತ್ತಾರೆ. (೬. ವ.) ಇದಕ್ಕೆ ಮುಂಚೆ ಸಭೆಗೆ ಯುದ್ಧವೂ ಜಯವೂ ಬದಲಾಗುತ್ತಾ ಇತ್ತು. ಈಗ ಆತ್ಮಿಕ ಜಾರೆಯಾದ ಪಾಪ, ಪಿಶಾಚ ಲೋಕಗಳೆಂಬ ಶತ್ರುಗಳೆಲ್ಲಾ ಸರ್ವ ನಾಶವಾದದರಿಂದ, ಜಯ ಹೊಂದಿದ ಸಭೆಯು, ತನಗೆ ಜಯವನ್ನು ಕೊಟ್ಟ ಕರ್ತನ ಸ್ತೋತ್ರವನ್ನು ಎಡೆ ಬಿಡದೆ ಹಾಡುತ್ತದೆ.

7. ಹಲ್ಲೆಲೂಯಾ ಎಂಬುವದು ಇಬ್ರೀಯ ಭಾಷೆಯ ಶಬ್ದವು. ಕರ್ತನನ್ನು ಸ್ತುತಿಸಿರಿ ಎಂಬುವದು ಅದರ ಅರ್ಥವು. ಈ ಶಬ್ದವು ಅನೇಕ ಕೀರ್ತನೆಗಳ ಆದಿಯಲ್ಲಿಯೂ ಅಂತ್ಯದಲ್ಲಿಯೂ ಬರುತ್ತದೆ. (ಕೀರ್ತ. ೧೦೫. ೪೫; ೧೦೬. ೧.)



೨ ಯಾಕಂದರೆ ಅವನ ನ್ಯಾಯತೀರ್ವಿಕೆಗಳು ಸತ್ಯವೂ ನೀತಿಯೂ ಆಗಿವೆ; ಹ್ಯಾಗಂದರೆ ಭೂಮಿಯನ್ನು
ತನ್ನ ಜಾರತ್ವದಿಂದ ಕೆಡಿಸಿದ ದೊಡ್ಡ ಜಾರೆಗೆ ಅವನು [1]ನ್ಯಾಯ ತೀರಿಸಿ, ತನ್ನ ದಾಸರ ರಕ್ತಕ್ಕೋಸ್ಕರ
೩ ಅವಳಿಗೆ ಮುಯ್ಯಿಗೆ ಮುಯ್ಯಿ ತೀರಿಸಿದ್ದಾನೆ. ಮತ್ತು ಎರಡನೇ ಸಾರಿ, ಹಲ್ಲೆಲೂಯಾ, ಅಂದರು.
ಮತ್ತು ಅವಳ ಹೊಗೆಯು ಎಂದೆಂದಿಗೂ ಏರುತ್ತದೆ.
೪ ಮತ್ತು ಇಪ್ಪತ್ತ ನಾಲ್ಕು ಹಿರಿಯರೂ ನಾಲ್ಕು ಜೀವಿಗಳೂ ಅಡ್ಡ ಬಿದ್ದು, ಸಿಂಹಾಸನದ ಮೇಲೆ ಕೂತು
ಕೊಂಡಿರುವ ದೇವರಿಗೆ, ಆಮೆನ್, ಹಲ್ಲೆಲೂಯಾ, ಎಂದು ನಮಸ್ಕರಿಸಿದರು.
೫ ಮತ್ತು ಸಿಂಹಾಸನದೊಳಗಿಂದ ಹೊರಟ ಶಬ್ದವು, ದೇವರ ದಾಸರೆಲ್ಲರೇ, ಅವನಿಗೆ ಭಯ ಪಡುವವರಾದ
ಹಿರಿ ಕಿರಿಯರೇ, ನಮ್ಮ ದೇವರನ್ನು ಹೊಗಳಿರಿ, ಎಂದು ಹೇಳಿತು.
೬ ಮತ್ತು ದೊಡ್ಡ ಸಮೂಹದ ಶಬ್ದದ ಹಾಗೆಯೂ, [2]ಅನೇಕ ನೀರುಗಳ ಶಬ್ದದ ಹಾಗೆಯೂ, ಬಲವುಳ್ಳ
ಗುಡುಗುಗಳ ಶಬ್ದದ ಹಾಗೆಯೂ,—ಹಲ್ಲೆಲೂಯಾ, ಸರ್ವಶಕ್ತನಾದ ದೇವರಾಗಿರುವ ಕರ್ತನು ಆಳುತ್ತಾನೆ;
೭ ಸಂತೋಷಿಸಿ, ಹರ್ಷಿಸಿ, ಅವನಿಗೆ ಮಹಿಮೆಯನ್ನು ಕೊಡೋಣ; ಯಾಕಂದರೆ [3]ಕುರಿಮರಿಯ ಮದು
ವೆಯು ಬಂತು; ಅವನ ಹೆಂಡತಿಯು ತನ್ನನ್ನು ಸಿದ್ಧ ಮಾಡಿ ಕೊಂಡಿದ್ದಾಳೆ ಎಂದು ಹೇಳುವದನ್ನು ಕೇಳಿದೆನು.
೮ ಮತ್ತು ಪವಿತ್ರವೂ ಪ್ರಕಾಶವೂ ಆದ ನಾರುಮಡಿಯು ಧರಿಸಿ ಕೊಳ್ಳುವದಕ್ಕೆ ಅವಳಿಗೆ ಕೊಡಲ್ಪಟ್ಟಿತು.
ಆ ನಾರುಮಡಿ ಏನಂದರೆ, ಪರಿಶುದ್ಧರ [4]ನೀತಿಗಳು.
೯ ಆಗಲವನು ಕುರಿಮರಿಯ [5]ಮದುವೆಯ ಔತಣಕ್ಕೆ ಕರೆಯಲ್ಪಟ್ಟವರು ಭಾಗ್ಯವಂತರೆಂದು ಬರೆ, ಎಂದು ನನ
ಗೆ ಹೇಳಿ, ಮತ್ತು, ಇವೇ ದೇವರ ಸತ್ಯ ವಾಕ್ಯಗಳಾಗಿವೆ, ಎಂದು ನನಗೆ ಹೇಳಿದನು.
೧೦ ಆಗ ಅವನಿಗೆ ನಮಸ್ಕರಿಸುವದಕ್ಕೆ ಅವನ ಪಾದಗಳ ಮುಂದೆ ಬಿದ್ದೆನು. ಮತ್ತು ಅವನು, ಬೇಡವೇ ಬೇಡ;
ನಿನಗೂ ಯೇಸುವಿನ ಸಾಕ್ಷಿಯನ್ನು ಹೊಂದಿದ ನಿನ್ನ ಸಹೋದರರಿಗೂ, ಜತೆದಾಸನಾಗಿದ್ದೇನೆ. ದೇವ

1. ದೇವರ ಕೋಪವೆಂಬ ಅಗ್ನಿಯಿಂದ ಬೆಂದು ನಾಶವಾದ ಜಾರೆಯಾದ ಪಟ್ಟಣದ ಹೊಗೆಯು ಸೊದೋಮು ಗಮೋರಗಳ ಹೊಗೆಯ ಹಾಗೆ ಯುಗಯುಗಗಳಾಗಿ ಎಂದೆಂದಿಗೂ ಏರುವದನ್ನು ಕಂಡ ಭಕ್ತರು, ತಮ್ಮ ರಕ್ಷಣೆಯ ದೇವರನ್ನು ಆತನ ಸತ್ಯ ನೀತಿಗಳಿಗೋಸ್ಕರ ಸ್ತುತಿಸಿದರು. ಆತ್ಮಾರ್ಥದ ಜಾರೆಯು ನಾಶವಾಗುವಳೆಂದು ಆತನು ಮಾಡಿದ್ದ ವಾಗ್ದತ್ತವು ಈಡೇರಿದ್ದರಲ್ಲಿ ಆತನ ಸತ್ಯವೂ, ಆ ಜಾರೆಯ ಅಕ್ರಮಕ್ಕೆ ತಕ್ಕ ಘೋರ ನಾಶನವು ಅವಳಿಗೆ ಸಂಭವಿಸಿದ್ದರಲ್ಲಿ, ಆತನ ನೀತಿಯೂ ಪ್ರಕಟವಾದಧರಿಂದ ಪರಮ ಸಭೆಯು ಆತನನ್ನು ಸದಾಕಾಲವಾಗಿ ಹೊಗಳಿ ಕೊಂಡಾಡಿತು.

2. ಹಿರಿ ಕಿರಿಯರಾದ ದೇವಭಕ್ತರೆಲ್ಲರೂ, ರಕ್ಷಣೆಯ ಕರ್ತನನ್ನು ಹೊಗಳಿರಿ ಎಂದು ಪರಮ ಸಿಂಹಾಸನದಿಂದ ಉಂಟಾದ ಶಬ್ದವು, ಸರ್ವ ಸೃಷ್ಟಿಯ ಸ್ತುತಿ ಎಂಬ ಸ್ವರಮಂಡಲವನ್ನು ನುಡಿಸಿದ ಹಾಗಿದ್ದದರಿಂದ ಎಲ್ಲರೂ ಏಕವಾಗಿ ಮಹಾ ಪ್ರವಾಹದ ಶಬ್ದದ ಹಾಗೆ ಹಲ್ಲೆಲೂಯಾ ಎಂದು ಆರ್ಭಟಿಸಿದರು.

3. ಮಹಾ ಪ್ರವಾಹದ ಶಬ್ದದ ಹಾಗೆಯೂ, ದೊಡ್ಡ ಗುಡುಗಿನ ಶಬ್ದದ ಹಾಗೆಯೂ, ಹಲ್ಲೆಲೂಯಾ ಎಂದು ಪರಮ ಸಭೆಯು ಹಾಡಿದ ಮನೋರಂಜಿತವಾದ ಉನ್ನತ ಗೀತವು ವಿವಾಹೋತ್ಸವದ ಗೀತವಾಗಿ ಮಾರ್ಪಟ್ಟಿತು. ಕೃಪೆಯುಳ್ಳ ದೇವರು ಅನುಗ್ರಹಿಸುವ ಮೇಲುಗಳನ್ನು ಒಂದು ವಿವಾಹಕ್ಕೆ ಉಪಮಾನಿಸಿ ತೋರಿಸುವದು ಪೂರ್ವ ಪ್ರವಾದಿಗಳಿಗೆ ವಾಡಿಕೆಯಾಗಿತ್ತು. (ಯೆಶಾ. ೬೨. ೫.) ಹೀಗೆಯೇ ಸೊಲೊಮೋನನ ಗೀತದಲ್ಲಿ ಸಭಾನಾಯಕನಾದ ಕ್ರಿಸ್ತನನ್ನು ಮದಲಿಂಗನಿಗೂ, ಆತನ ಸಭೆಯನ್ನು ಮದಲಗಿತ್ತಿಗೂ ಸಮಾನ ಮಾಡಿ ಹೇಳಿ ಇದೆ. ಈ ಉಪಮಾನವು ಹೊಸ ಒಡಂಬಡಿಕೆಯಲ್ಲಿಯೂ, ವಿಶೇಷವಾಗಿ ಈ ಗ್ರಂಥದಲ್ಲಿಯೂ ಅನೇಕ ಸಾರಿ ಹೇಳಿ ಇದೆ. (೨ಕೊರಿ. ೧೧. ೨.) ಕ್ರಿಸ್ತನು ಮೊದಲನೇ ಅದ್ಭುತ ಮಾಡಿ ತನ್ನ ಮಹಿಮೆಯನ್ನು ತೋರಿಸಿದ್ದು ಒಂದು ಮದುವೇ ಮನೆಯಲ್ಲಿಯೇ. ಹಾಗೆಯೇ ಪರಮ ಮದುವೆಯ ಮನೆಯಲ್ಲಿಯೂ ಆತನ ಮಹಿಮೆ ಸಂಪೂರ್ಣವಾಗಿ ತೋರುವದು. ಆಗ ಆತನ ದಾಸರ ಸಂತೋಷವು ಅಪರಿಮಿತವಾಗಿರುವದು. ಸತ್ಯದ ನಿಮಿತ್ತವೂ ನೀತಿಯ ನಿಮಿತ್ತವೂ ಸ್ವಲ್ಪ ಕಾಲ ಶ್ರಮೆ ಪಟ್ಟ ಅವರಿಗೆ ನಿತ್ಯ ಸಂತೋಷಾನಂದ ಉಂಟಾಗುವದು.

4. ಪರಿಶುದ್ಧರ ನೀತಿಗಳು, ಪವಿತ್ರವೂ ಪ್ರಕಾಶವೂ ಆದ ನಾರುಮಡಿಗೆ ಉಪಮಾನ ಮಾಡಲ್ಪಟ್ಟವೆ. ನೀತಿಗಳು ಅಂದರೆ, ನೀತಿಯ ಫಲಗಳು. (ಫಿಲಿ. ೧. ೧೦, ೧೧.) ಈ ಮದಲಗಿತ್ತಿಯಾದ ಸಭೆಯು ನೀತಿಯ ಫಲಗಳಿಂದ ಅಲಂಕೃತಳಾಗಿ ಕಾಣಿಸುವದು.

5. ಮಹಿಮೆಯುಳ್ಳ ಈ ಔತಣದ ಮನೆಯಲ್ಲಿ ಪ್ರವೇಶಿಸಿ, ಅಬ್ರಹಾಮನು ಇಸಾಕನು ಯಾಕೋಬನು ಎಂಬವರ ಸಂಗಡ ಪಙ್ತಿಯಲ್ಲಿ ಕುಳಿತು ಕೊಳ್ಳುವವರ ಭಾಗ್ಯವು ಅತಿ ಶ್ರೇಷ್ಠವಾದದರಿಂದ ಅದನ್ನು ಕುರಿತು ಬರೆಯ ಬೇಕೆಂದು ಅಪ್ಪಣೆಯಾಯಿತು. (ಮತ್ತಾ. ೨೫. ೧—೧೨. ಲೂಕ. ೧೨. ೩೭.)

ರಿಗೆ ನಮಸ್ಕರಿಸು; ಯಾಕಂದರೆ ಯೇಸುವಿನ ಸಾಕ್ಷಿಯು [1]ಪ್ರವಾದನೆಯ ಆತ್ಮವಾಗಿದೆ, ಎಂದು ನನಗೆ
ಹೇಳಿದನು.

ಕರ್ತನು ತನ್ನ ಸೇವಕರ ಸಂಗಡ ಕೂಡ ಜಯ ಹೊಂದುವ ಹಾಗೆ ಪ್ರಸನ್ನನಾಗುವದು. ಮೃಗವೂ ಸುಳ್ಳುಪ್ರವಾದಿಯೂ ಅವರಿಗೆ ಶೇರಿದವರೆಲ್ಲರೂ ಅಪಜಯ ಹೊಂದಿ ಹತವಾದದ್ದು.

೧೧ [2]ಮತ್ತು ಪರಲೋಕವು ತೆರೆದಿರುವದನ್ನು ಕಂಡೆನು. ಇಗೋ, [3]ಬಿಳೀ ಕುದುರೆಯು; ಅದರ ಮೇಲೆ ಕೂತ
ವನಿಗೆ ನಂಬಿಕೆಯುಳ್ಳವನೂ [4]ಸತ್ಯವಂತನೂ ಎಂಬ ಹೆಸರು. ಅವನು ನೀತಿಯಿಂದ ನ್ಯಾಯ ತೀರಿಸಿ, ಯುದ್ಧ
೧೨ ಮಾಡುತ್ತಾನೆ. ಅವನ ಕಣ್ಣುಗಳು ಬೆಂಕಿಯ ಉರಿಯಂತೆಯೂ, ಅವನ ತಲೆಯ ಮೇಲೆ [5]ಅನೇಕ ಕಿರೀಟ
೧೩ ಗಳೂ, ತಾನು ಹೊರ್ತು ಯಾರೂ ಅರಿಯದಂಥ, ಬರೆಯಲ್ಪಟ್ಟ [6]ಹೆಸರು ಅವನಿಗೆ ಉಂಟು. ಅವನು
[7]ರಕ್ತದಲ್ಲಿ ಅದ್ದಿದ ವಸ್ತ್ರವನ್ನು ಧರಿಸಿ ಕೊಂಡಿದ್ದಾನೆ. ಅವನ ಹೆಸರು [8]**ದೇವರ ವಾಕ್ಯವೆಂದು** ಕರೆಯಲ್ಪ

1. ಅಷ್ಟು ದೊಡ್ಡ ಮಹಿಮೆಯುಳ್ಳ ದರ್ಶನಗಳನ್ನು ಕಂಡ ಯೋಹಾನನು ಅವುಗಳನ್ನು ತನಗೆ ತೋರಿಸಿದ ದೂತನಿಗೆ ನಮಸ್ಕರಿಸುವದಕ್ಕೆ ಅಡ್ಡ ಬೀಳಲು, ಸಂಗಡಲೇ ದೂತನು ಹಾಗೆ ಮಾಡ ಬೇಡವೆಂದು ಅವನನ್ನು ತಡೆದು, ಯೇಸುಸ್ವಾಮಿಯನ್ನು ಕುರಿತು ಸಾಕ್ಷಿ ಕೊಟ್ಟ ಸಹೋದರರ ಸಂಗಡ ತಾನು ಜತೆದಾಸನೆಂದು ಹೇಳಿದನು. ಮತ್ತು ಯೇಸುವನ್ನು ಕುರಿತ ಸಾಕ್ಷಿಯು ಪ್ರವಾದನೆಯ ಆತ್ಮವಾಗಿದೆ ಎಂದೂ, ದೇವರಿಗೆ ಮಾತ್ರ ನಮಸ್ಕರಿಸ ಬೇಕೆಂದೂ ಹೇಳಿದನು. ಆದದರಿಂದ ಯೇಸು ಕ್ರಿಸ್ತನನ್ನು ಕುರಿತು ಸಾಕ್ಷಿ ಕೊಡುವ ದೂತರೂ ಮನುಷ್ಯರೂ ಒಂದೇ ಆತ್ಮನಿಂದ ನಡಿಸಲ್ಪಡುವ ಸಹೋದರರೂ ಜತೆದಾಸರೂ ಆಗಿರುವದರಿಂದ, ದೇವದೂತರನ್ನಾದರೂ ಮನುಷ್ಯರನ್ನಾದರೂ ಆರಾಧಿಸುವದು ಸರಿಯಲ್ಲ. ಅಂಥವರು ಸತ್ಯಕ್ಕೆ ವಿರೋಧಿಗಳಾಗಿದ್ದಾರೆ.

2. ಅಕ್ರಮಕ್ಕೆ ಆಶ್ರಯವಾದ ಬಾಬೆಲು ಬಿದ್ದ ಪ್ರಕಾರ, ಮಿಕ್ಕಾದ ಕೇಡುಗಳೆಲ್ಲಾ ನಿಂತು ಹೋಗ ಬೇಕೆಂಬುವದು ಅವಶ್ಯವಾಗಿರುವದರಿಂದ, ವಾಕ್ಯವೆಂಬ ಹೆಸರುಳ್ಳ ರಕ್ಷಣೆಯ ಕರ್ತನಾದ ಯೇಸು ಕ್ರಿಸ್ತನು, ತನ್ನ ಪರಮ ಸೈನ್ಯವಾದ ಪರಿವಾರದ ಸಂಗಡ ಜಯ ಹೊಂದುವದಕ್ಕೆ ಮಹಿಮೆಯಾಗಿ ಹೊರಡುತ್ತಾನೆ. (೧೯. ೧೧—೧೬.) ಹೆಣಗಳನ್ನು ಕಿತ್ತು ತಿನ್ನುವ ಪಕ್ಷಿಗಳು ಯುದ್ಧರಂಗದಲ್ಲಿ ಮಡಿದು ಹೋದ ಎಲ್ಲಾ ಹಿರಿ ಕಿರಿಯರ ಹೆಣಗಳನ್ನು ತಿನ್ನುವದಕ್ಕೆ ಅವುಗಳಿಗೆ ಅಪ್ಪಣೆಯಾಯಿತು. (೧೭, ೧೮. ವ.) ಕ್ರಿಸ್ತನಿಗೂ ಆತನ ಸಭೆಗೂ ಶತ್ರುಗಳಾದವರು ಬಲವಾಗಿ ಯುದ್ಧ ಮಾಡುವದಕ್ಕೆ ಒಂದಾಗಿ ಕೂಡಿ ಕೊಂಡು ಬಂದಾಗ, ಅವರು ಶೆರೆಯಾಗಿ ಹಿಡಿಯಲ್ಪಟ್ಟು, ಬೆಂಕಿ ಗಂಧಕಗಳಿಂದುರಿಯುವ ಕೆರೆಯಲ್ಲಿ ಜೀವಿತರಾಗಿ ತಳ್ಳಲ್ಪಟ್ಟರು. ಅವರಿಗೆ ಶೇರಿದವರು ಸಹ ಕೊಲ್ಲಲ್ಪಟ್ಟರು. (೧೯—೨೧. ವ.) ಸಮಸ್ತ ಕೇಡಿಗೆ ಕಾರಣವಾದ ಸೈತಾನನು ಹಿಡಿಯಲ್ಪಟ್ಟು, ಸಾವಿರ ವರುಷ ಬಂಧಿಸಲ್ಪಡುತ್ತಾನೆ. (೨೦. ೧—೩.) ಪರಿಶುದ್ಧವಂತರಾದ ಕ್ರಿಸ್ತನ ಭಕ್ತರು ಮೊದಲನೇ ಪುನರುತ್ಥಾನ ಹೊಂದಿದಾಗ ಕ್ರಿಸ್ತನ ಸಾವಿರ ವರುಷ ರಾಜ್ಯಭಾರವು ಪ್ರಾರಂಭಿಸುತ್ತದೆ. (೪—೬. ವ.) ಅದರ ತರುವಾಯ ಬಂಧಿಸಲ್ಪಟ್ಟಿದ್ದ ಸೈತಾನನು ಬಿಡಲ್ಪಟ್ಟದ್ದರಿಂದ, ದೇವರ ಪರಿಶುದ್ಧ ಪಟ್ಟಣವನ್ನು ಹಿಡಿಯುವದಕ್ಕೆ ತನ್ನ ಸೈನ್ಯಗಳನ್ನೆಲ್ಲಾ ಕೂಡಿಸಿದಾಗ ಆಕಾಶದಿಂದ ಅಗ್ನಿ ಇಳಿದು ಅವರನ್ನು ಭಕ್ಷಿಸಿ ಬಿಟ್ಟಿತು. ಸೈತಾನನು ಬೆಂಕಿಯ ಕೆರೆಯಲ್ಲಿ ಅಧೋಗತಿಯಾಗಿ ಬಿದ್ದು, ಅವನೂ ಅವನ ವಶವಾದವರೂ ಸರ್ವದಾ ಪೀಡಿಸಲ್ಪಡುವರು. (೭—೧೦. ವ.) ಕಡೆಯಲ್ಲಿ ಮಹಾ ನ್ಯಾಯತೀರ್ವಿಕೆ ಉಂಟಾಗುವದು. (೧೧—೧೫. ವ.)

3. ಈ ದರ್ಶನದಲ್ಲಿ ಏಳು ಮುದ್ರೆಗಳನ್ನೂ, ಏಳು ತುತೂರಿಗಳನ್ನೂ, ಏಳು ಪಾತ್ರೆಗಳನ್ನೂ ಕುರಿತ ದರ್ಶನಗಳೆಲ್ಲಾ ಒಂದಾಗಿ ಶೇರುತ್ತವೆ. ನೀಲ ವರ್ಣವುಳ್ಳ ಆಕಾಶವು ತೆರೆಯಲ್ಪಡಲು, ಒಂದು ಬಿಳೀ ಕುದುರೆ ಕಾಣಲ್ಪಟ್ಟಿತು. ಅದರ ಮೇಲೆ ಕೂತಿದ್ದ ಜಯಶೂರನಾದ ಕ್ರಿಸ್ತನು ಶತ್ರುಗಳನ್ನು ನಾಶ ಮಾಡಿ ತನ್ನ ನಿತ್ಯರಾಜ್ಯವನ್ನು ಸ್ಥಾಪಿಸುವದಕ್ಕೆ ಮಹಾ ಮಹಿಮೆಯಿಂದ ಪ್ರಸನ್ನನಾಗುತ್ತಾನೆ. (೬. ೧—೭. ವಚನಗಳ ವ್ಯಾಖ್ಯಾನ ನೋಡ ಬೇಕು.) ೬೦೦೦ ವರುಷ ಲೋಕವನ್ನು ಮುಚ್ಚಿ ಇದ್ದ ಅಂಧಕಾರವು ನಿವರ್ತಿಯಾಗುತ್ತದೆ. ಸಭೆಯು ಆಶೆಯಿಂದ ಎದುರು ನೋಡುತ್ತಿದ್ದ ಕ್ಷೇಮಕಾಲ ಹುಟ್ಟುತ್ತದೆ. ಸೃಷ್ಟಿಯ ಪ್ರಸವವೇದನೆ ಮುಗಿಯುತ್ತದೆ. ದೇವಪುತ್ರರು ತಮ್ಮ ಕರ್ತನ ಸಂಗಡ ಪ್ರಕಾಶಿಸುತ್ತಾರೆ.

4. ನಂಬಿಕೆಯೂ ಸತ್ಯವೂ ಉಳ್ಳವನೆಂದು ಕರೆಯಲ್ಪಟ್ಟ ಕ್ರಿಸ್ತನು ತನ್ನ ಸಭೆಗೆ ಕೊಟ್ಟ ವಾಗ್ದತ್ತದ ಪ್ರಕಾರ ಶತ್ರುಗಳನ್ನು ಜಯಿಸಿ, ಅದಕ್ಕೆ ಪೂರ್ಣ ಸೌಖ್ಯ ಕೊಡುವದಕ್ಕೆ ಜಯಕ್ಕೆ ಗುರುತಾದ ಬಿಳೀ ಕುದುರೆಯ ಮೇಲೆ ಕೂತು ಜಯಶಾಲಿಯಾಗಿ ಪ್ರಸನ್ನನಾಗುತ್ತಾನೆ.

5. ಆತನ ತಲೆಯ ಮೇಲೆ ಅನೇಕ ಕಿರೀಟಗಳು ಇದ್ದವು. ಆತನು ತ್ರಿಲೋಕಗಳಿಗೂ ಅಧಿಪತಿಯಾಗಿ ತೋರಿದ್ದರಿಂದ ಆತನ ತಲೆಯ ಮೇಲೆ ಅನೇಕ ಕಿರೀಟಗಳಿದ್ದವೆಂಬುವದು, ಭೂಲೋಕದ ರಾಜ್ಯಗಳೆಲ್ಲಾ ಆತನ ರಾಜ್ಯಗಳಾದವೆಂಬರ್ಥವಾಗುತ್ತದೆ.

6. ಪ್ರಧಾನ ಯಾಜಕನ ಹಣೆಯ ಮೇಲೆ ಯೆಹೋವನ ಹೆಸರು ಬರೆದಿದ್ದ ಪ್ರಕಾರ ಕ್ರಿಸ್ತನಿಗೂ ಒಂದು ಹೆಸರು ಇತ್ತು. ಅದು ಆತನಿಗೆ ಹೊರ್ತು ಬೇರೊಬ್ಬರಿಗೂ ತಿಳಿಯಲಾರದು. (೨. ೧೭. ವಚನದ ವ್ಯಾಖ್ಯಾನ ನೋಡ ಬೇಕು.)

7. ಹೇಳಲಶಕ್ಯವಾದ ಉಪದ್ರಗಳನ್ನೂ ಲೆಖ್ಖವಿಲ್ಲದ ಜಯಗಳನ್ನೂ ಹೊಂದಿದವನ ವಸ್ತ್ರವು ರಕ್ತದಲ್ಲಿ ಅದ್ದಿದ ಹಾಗಿತ್ತು. (ಯೆಶಾ. ೬೩. ೧—೩. ವಚನಗಳ ವ್ಯಾಖ್ಯಾನ ನೋಡ ಬೇಕು.)

8. ಯೋಹಾ. ೧. ೧, ೨. ವಚನಗಳ ವ್ಯಾಖ್ಯಾನ ನೋಡ ಬೇಕು.



೧೪ ಡುತ್ತದೆ. ಮತ್ತು [1]ಪರಲೋಕದಲ್ಲಿರುವ ಸೈನ್ಯಗಳು ಬಿಳೀ ಕುದುರೆಗಳ ಮೇಲೆ ಕೂತು ಕೊಂಡು, ಪವಿತ್ರವಾದ
೧೫ ಬಿಳೀ ನಾರುಮಡಿಯನ್ನು ಧರಿಸಿ ಕೊಂಡು, ಅವನನ್ನು ಹಿಂಬಾಲಿಸಿದವು. ಮತ್ತು ಅದರಿಂದ ಜನಾಂಗಗ
ಳನ್ನು ಕಡಿಯುವ ಹಾಗೆ, [2]ಅವನ ಬಾಯಿಯೊಳಗಿಂದ ಹದವಾದ ಕತ್ತಿ ಹೊರಡುತ್ತದೆ; ಮತ್ತು ಅವನು
ಅವುಗಳನ್ನು [3]ಕಬ್ಬಿಣದ ಗದೆಯಿಂದ ಆಳುವನು. ಅವನೇ ಸರ್ವಶಕ್ತನಾದ ದೇವರ ಉಗ್ರ ಕೋಪದ ದ್ರಾಕ್ಷೇ
೧೬ ರಸದ ತೊಟ್ಟಿಯನ್ನು ತುಳಿಯುವನು. ಮತ್ತು ಅವನ ವಸ್ತ್ರದ ಮೇಲೆಯೂ, ಅವನ [4]ಸೊಂಟದ ಮೇಲೆ
ಯೂ, **ಅರಸರ ಅರಸನೂ ಕರ್ತರ ಕರ್ತನೂ**, ಎಂದು ಬರೆದ ಹೆಸರು ಅವನಿಗೆ ಉಂಟು.

೧೭ ಆಗ ಸೂರ್ಯನಲ್ಲಿ ನಿಂತು ಕೊಂಡಿರುವ ಒಬ್ಬ ದೂತನನ್ನು ಕಂಡೆನು; ಅವನು ಮಹಾ ಶಬ್ದದಿಂದ ಕೂಗಿ,
೧೮ ಆಕಾಶಮಧ್ಯದಲ್ಲಿ ಹಾರುವ ಸಕಲ ಹಕ್ಕಿಗಳಿಗೆ, [5]ಮಹಾ ದೇವರ ಔತಣಕ್ಕೆ ಕೂಡಿ ಕೊಂಡು, ಅರಸರ
ಮಾಂಸಗಳನ್ನೂ, ಸಹಸ್ರಾಧಿಪತಿಗಳ ಮಾಂಸಗಳನ್ನೂ, ಬಲಿಷ್ಠರ ಮಾಂಸಗಳನ್ನೂ, ಕುದುರೆಗಳ ಮಾಂಸ
ಗಳನ್ನೂ, ಅವುಗಳ ಮೇಲೆ ಕೂತು ಕೊಂಡವರ ಮಾಂಸಗಳನ್ನೂ, ಸ್ವತಂತ್ರರೂ ದಾಸರೂ ಹಿರಿ ಕಿರಿಯರೂ
ಆಗಿರುವ ಎಲ್ಲರ ಮಾಂಸಗಳನ್ನೂ, [6]ತಿನ್ನುವದಕ್ಕೆ ಬನ್ನಿರಿ, ಅಂದನು.

೧೯ ಮತ್ತು ಮೃಗವೂ, ಭೂರಾಜರೂ, ಅವರ ಸೈನ್ಯಗಳೂ, ಕುದುರೆಯ ಮೇಲೆ ಕೂತು ಕೊಂಡವನ ಸಂಗ
೨೦ ಡಲೂ, ಅವನ ಸೈನ್ಯದ ಸಂಗಡಲೂ, ಯುದ್ಧ ಮಾಡುವದಕ್ಕೆ ಕೂಡಿ ಕೊಂಡಿರುವದನ್ನು ಕಂಡೆನು. ಮತ್ತು
ಮೃಗವೂ, ಅದರ ಮುಂದೆ ಮಾಡಿದ ಗುರುತುಗಳಿಂದ ಮೃಗದ ಮುದ್ರೆಯನ್ನು ಹೊಂದಿದವರನ್ನೂ ಅದರ
ವಿಗ್ರಹಕ್ಕೆ ನಮಸ್ಕರಿಸುವವರನ್ನೂ ಮೋಸಗೊಳಿಸಿದ ಸುಳ್ಳು ಪ್ರವಾದಿಯೂ, ಕೂಡ ಹಿಡಿಯಲ್ಪಟ್ಟು, ಈ
೨೧ ಇಬ್ಬರು ಜೀವಿತರಾಗಿ ಗಂಧಕದಿಂದ ಉರಿಯುವ [7]ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟರು. ಮತ್ತು ಉಳಿದ
ವರು ಕುದುರೆಯ ಮೇಲೆ ಕೂತು ಕೊಂಡವನ ಬಾಯಿಯೊಳಗಿಂದ ಹೊರಡುವ ಕತ್ತಿಯಿಂದ ಕೊಲ್ಲಲ್ಪ
ಟ್ಟರು. ಮತ್ತು ಅವರ ಮಾಂಸಗಳಿಂದ ಹಕ್ಕಿಗಳೆಲ್ಲಾ ತೃಪ್ತಿ ಹೊಂದಿದವು.

1. ಪರಮ ರಾಜನಾದ ಕ್ರಿಸ್ತನು ಒಂಟಿಯಾಗಿ ಹೊರಡದೆ ಬಿಳೀ ಕುದುರೆಗಳ ಮೇಲೆ ಕೂತು ಕೊಂಡು ಪವಿತ್ರವಾದ ಬಿಳೀ ನಾರುಮಡಿಯನ್ನು ಧರಿಸಿ ಕೊಂಡ ಆತನ ಭಕ್ತರಾದ ಪರಮ ಸೈನ್ಯಗಳ ಸಂಗಡ ಮಹಿಮೆಯಾಗಿ ಹೊರಟನು.

2. (೧. ೧೬. ವಚನದ ವ್ಯಾಖ್ಯಾನ ನೋಡ ಬೇಕು.) ಆತನ ಬಾಯಿಂದ ಹೊರಟ ಒಂದು ಮಾತಿನಿಂದ ಆತನನ್ನು ಹಿಡಿಯ ಬಂದ ಶತ್ರುಗಳು ನೆಲಕ್ಕೆ ಬಿದ್ದ ಪ್ರಕಾರ, ಆತನ ಬಾಯಿಯ ಶ್ವಾಸದಿಂದ ಆತನ ಶತ್ರುಗಳೆಲ್ಲರೂ ನಾಶವಾಗುವರು.

3. ಆತನ ಬಾಯಿಯ ಮಾತು ಹದವಾದ ಕತ್ತಿಯಾದರೆ, ಆತನ ಕೈಯಲ್ಲಿರುವ ಕೋಲು ಕಬ್ಬಿಣದ ಗದೆಯಾಗಿದೆ. ಆತನ ನೀತಿಪ್ರಮಾಣವನ್ನು ಮೀರುವ ಅಪಭಕ್ತರೆಲ್ಲರೂ ಕಬ್ಬಿಣದ ಗದೆಯಿಂದ ಜಜ್ಜಲ್ಪಡುವ ಮಣ್ಣಿನ ಪಾತ್ರೆಗಳ ಹಾಗೆ ಛಿನ್ನಾಭಿನ್ನವಾಗುವರು.

4. ಜಯಶೂರನಾಗಿ ಕಾಣಲ್ಪಡುವ ಕರ್ತನನ್ನು ಅರಸರ ಅರಸನು, ಕರ್ತರ ಕರ್ತನು, ಎಂದು ಸರ್ವಲೋಕವು ಹೊಗಳಿ ಕೊಂಡಾಡುವಂತೆ ಆ ಹೆಸರು ಆತನ ವಸ್ತ್ರದ ಮೇಲೆಯೂ ತೊಡೆಯ ಮೇಲೆಯೂ ಪ್ರತ್ಯಕ್ಷವಾಗಿ ಕಾಣಲ್ಪಟ್ಟಿತು. (ಕೀರ್ತ. ೪೫. ೩.)

5. ಈ ಔತಣವು ದೇವರಿಗೂ ಆತನ ಸತ್ಯ ಸಭೆಗೂ ಶತ್ರುಗಳಾಗಿದ್ದ ಹಿರಿ ಕಿರಿಯರಾದ ಸಮಸ್ತ ಜನರ ಹೆಣಗಳುಳ್ಳದ್ದು. ಸರ್ವಶಕ್ತನಾದ ದೇವರ ಸಂಗಡ ಮಾಡಿದ ಯುದ್ಧದಲ್ಲಿ ಸತ್ತವರ ಮಾಂಸವು ಆಕಾಶದ ಪಕ್ಷಿಗಳಿಗೆ ದೊಡ್ಡ ಔತಣವಾಯಿತು. ಇದು ಜೆಕರೀಯನ ಪ್ರವಾದನೆಯಲ್ಲಿ ಹೇಳಿದ ಮಹಾ ಯುದ್ಧವೆಂದು ತೋರುತ್ತದೆ. (ಜೆಕ. ೧೪. ೧—೫.)

6. (ಯೆರೆ. ೭. ೩೩. ಎಜೇಕಿ. ೩೯. ೧೭—೨೦.) ಸರ್ವಲೋಕವು ನೋಡುತ್ತಿರಲು ಸೂರ್ಯನಲ್ಲಿ ನಿಂತ ದೂತನು ಹೆಣಗಳುಳ್ಳ ದೊಡ್ಡ ಔತಣಕ್ಕೆ ಬರುವ ಹಾಗೆ ಪಕ್ಷಿಗಳನ್ನೆಲ್ಲಾ ಮಹಾ ಶಬ್ದದಿಂದ ಕೂಗಿದನು. ಇದರಿಂದ ಬಿಳೀ ಕುದುರೆಯ ಮೇಲೆ ಕುಳಿತು ಕೊಂಡಿದ್ದ ಪರಾಕ್ರಮಿಯಾದ ಕ್ರಿಸ್ತನಿಗೂ ಆತನ ಭಕ್ತರಿಗೂ ಉಂಟಾದ ಮಹಾ ಜಯದ ನಿಶ್ಚಯವೂ ಸಂಪೂರ್ಣತೆಯೂ ತೋರುತ್ತದೆ.

7. ಈ ಮಹಾ ದೊಡ್ಡ ಯುದ್ಧದಲ್ಲಿ ಮೃಗವೂ, ಅದ್ಭುತಗಳನ್ನು ಮಾಡುವಂತೆ ನಟಿಸಿದ ಸುಳ್ಳುಪ್ರವಾದಿಯೂ ಶೆರೆಯವರಾಗಿ ಹಿಡಿಯಲ್ಪಟ್ಟು, ಕೋರಹನು ದಾಥಾನನು ಅಬೀರಮನು ಎಂಬವರು ಜೀವದೊಡನೆ ಭೂಮಿಯಲ್ಲಿ ಇಳಿದ ಪ್ರಕಾರ, ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ ಜೀವದಿಂದ ತಳ್ಳಲ್ಪಟ್ಟರು. ಇಷ್ಟಕ್ಕೆ ಆ ಯುದ್ಧವು ಮುಗಿಯದೆ, ಅದರಲ್ಲಿ ಉಳಿದಿದ್ದವರೆಲ್ಲರೂ, ಸೈನ್ಯಗಳ ಕರ್ತನಾದ ಜಯಶೂರನ ಖಡ್ಗದಿಂದ ಸಮೂಲ ಹತವಾಗಿ ಆಕಾಶದ ಪಕ್ಷಿಗಳಿಗೆ ಆಹಾರವಾದರು. ಅಯ್ಯೋ! ದುರ್ಮಾರ್ಗರ ಅಂತ್ಯವು ಎಷ್ಟೋ ಭಯಂಕರವಾದದ್ದು.

ಸೈತಾನನನ್ನು ಕಟ್ಟಿದ್ದು; ಮೊದಲನೇ ಪುನರುತ್ಥಾನವು; ಸಹಸ್ರ ವರುಷದ ರಾಜ್ಯಭಾರ; ಸೈತಾನನು ಬಿಡಲ್ಪಟ್ಟದ್ದು; ಅವನೂ ಅವನ ಸೈನ್ಯಗಳೂ ಯುದ್ಧಕ್ಕೆ ಕೂಡಿ ಬಂದು ನಾಶವಾದದ್ದು; ಕಡೇ ನ್ಯಾಯತೀರ್ವಿಕೆ.

**20.** ಮತ್ತು [1]ಅಗಾಧದ ಬೀಗದ ಕೈಯನ್ನೂ, ದೊಡ್ಡ ಸಂಕೋಲೆಯನ್ನೂ, ತನ್ನ ಕೈಯಲ್ಲಿ ಹಿಡಿದು ಕೊಂಡ
೨ ದೂತನು ಪರಲೋಕದಿಂದ ಇಳಿದು ಬರುವದನ್ನು ಕಂಡೆನು. ಅವನು ಪಿಶಾಚನೂ ಸೈತಾನನೂ ಆಗಿರುವ
೩ ಹಳೇ [2]ಹಾವು ಆದ ಗಡಸರ್ಪವನ್ನು ಹಿಡಿದು, [3]ಸಾವಿರ ವರುಷ ಅದನ್ನು ಕಟ್ಟಿ, ಅದನ್ನು ಅಗಾಧದಲ್ಲಿ
ಹಾಕಿ, ಅದನ್ನು ಮುಚ್ಚಿ, ಆ ಸಾವಿರ ವರುಷ ತೀರುವ ಪರ್ಯಂತರ ಜನಾಂಗಗಳನ್ನು ಇನ್ನು ಮೋಸಗೊಳಿ
ಸದ ಹಾಗೆ, ಅದರ ಮೇಲೆ ಮುದ್ರೆ ಹಾಕಿದನು. ಇವುಗಳ ತರುವಾಯ ಅದು ಸ್ವಲ್ಪ ಕಾಲ ಬಿಡಿಸಲ್ಪಡ
ಬೇಕು.
೪ ಮತ್ತು [4]ಸಿಂಹಾಸನಗಳನ್ನು ಕಂಡೆನು; ಅವುಗಳ ಮೇಲೆ ಕೂತು ಕೊಂಡಿದ್ದರು. ಮತ್ತು ನ್ಯಾಯತೀರ್ವಿಕೆ
ಅವರಿಗೆ ಕೊಡಲ್ಪಟ್ಟಿತು. ಮತ್ತು ಯೇಸುವಿನ ಸಾಕ್ಷಿಗೋಸ್ಕರವೂ, ದೇವರ ವಾಕ್ಯಕ್ಕೋಸ್ಕರವೂ, ತಲೆ
ಕಡಿಯಲ್ಪಟ್ಟವರ ಪ್ರಾಣಗಳನ್ನೂ, ಮೃಗಕ್ಕೂ ಅದರ ವಿಗ್ರಹಕ್ಕೂ [5]ನಮಸ್ಕರಿಸದೆ, ತಮ್ಮ ಹಣೆಯಲ್ಲಿಯೂ,
ತಮ್ಮ ಕೈಯ ಮೇಲೆಯೂ ಮುದ್ರೆ ಹೊಂದದವರನ್ನೂ, ಕಂಡೆನು. ಅವರು ಬದುಕಿ, ಕ್ರಿಸ್ತನ ಸಂಗಡ ಸಾ
೫ ವಿರ ವರುಷ ಆಳಿದರು. ಆದರೆ ಮಿಕ್ಕಾದ ಸತ್ತವರು, ಆ ಸಾವಿರ ವರುಷ ಮುಗಿಯುವ ವರೆಗೂ ತಿರಿಗಿ
ಬದುಕಲಿಲ್ಲ. ಇದೇ [6]ಮೊದಲನೇ ಪುನರುತ್ಥಾನವು.
೬ ಮೊದಲನೇ ಪುನರುತ್ಥಾನದಲ್ಲಿ ಪಾಲು ಹೊಂದುವವನು ಭಾಗ್ಯವಂತನೂ ಪರಿಶುದ್ಧನೂ ಆಗಿದ್ದಾನೆ.
ಅಂಥವರ ಮೇಲೆ ಎರಡನೇ ಮರಣಕ್ಕೆ ಅಧಿಕಾರವಿಲ್ಲ. ಅವರು ದೇವರಿಗೂ ಕ್ರಿಸ್ತನಿಗೂ ಯಾಜಕರಾಗಿ,
ಆವನ ಸಂಗಡ ಸಾವಿರ ವರುಷ ಆಳುವರು.

1. ೯. ೧. ವಚನದ ವ್ಯಾಖ್ಯಾನ ನೋಡ ಬೇಕು.

2. (೧೨. ೩, ೯.) ಸರ್ಪರೂಪವಾಗಿ ಏಡೆನ್ ತೋಟದಲ್ಲಿ ಪ್ರವೇಶಿಸಿ, ಹವ್ವಳನ್ನು ವಂಚಿಸಿದ ಪಿಶಾಚನಿಗೆ ಹಳೇ ಹಾವು ಎಂಬ ಹೆಸರು ತಕ್ಕದ್ದಾಗಿದೆ. (ಉತ್ಪ. ೩. ೧.)

3. ಸಾವಿರ ವರುಷ ಎಂಬುವದು, ಒಂದು ವಿಶೇಷವಾದ ಕಾಲವನ್ನಾದರೂ, ಒಂದು ದೀರ್ಘವಾದ ಕಾಲವನ್ನಾದರೂ ಸೂಚಿಸುತ್ತದೆ. (೨ ಪೇತ್ರ. ೩. ೮.) ಪಾಪವಿಲ್ಲದ ಲೋಕದಲ್ಲಿ ಪಾಪವನ್ನು ಬರ ಮಾಡಿದವನೂ, ಆರು ಸಾವಿರ ವರುಷ ಕಾಲವಾಗಿ ಅದರಲ್ಲಿ ಘೋರೆತನ ಮಾಡಿ ಅನಂತಾನಂತ ಮನುಷ್ಯರನ್ನು ವಂಚಿಸಿ ಕೆಡಿಸಿದವನೂ ಆದಂಥ, ಹಳೇ ಸರ್ಪವಾದಂಥ ಸೈತಾನನು ಇನ್ನು ಯಾರನ್ನಾದರೂ ತನ್ನ ಮಾಯದ ಬಲೆಗೆ ಎಳೆದು ನಾಶ ಮಾಡದೆ ಇರುವಂತೆ ದೂತನಿಂದ ಕಟ್ಟಲ್ಪಟ್ಟು, ಸಾವಿರ ವರುಷ ಅಗಾಧದಲ್ಲಿ ತಳ್ಳಲ್ಪಟ್ಟನು. ಈ ಸಾವಿರ ವರುಷವೂ ಕ್ರಿಸ್ತನ ಸಭೆಗೆ ಮಹಾ ಸೌಖ್ಯವೂ ವಿಶ್ರಾಂತಿಯೂ ಸಮಾಧಾನವೂ ಉಳ್ಳ ಕಾಲವಾಗಿರುವದು.

4. ದಾನಿ. ೭. ೯. ಮತ್ತಾ. ೧೯. ೨೮. ೧ ಕೊರಿ. ೬. ೨, ೩. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.

5. ಮೃಗವನ್ನೂ ಅದರ ವಿಗ್ರಹವನ್ನೂ ಆರಾಧಿಸದೆ, ಅದರ ಮುದ್ರೆಯನ್ನು ಹಣೆಗಳಲ್ಲಿಯೂ ಕೈಗಳಲ್ಲಿಯೂ ಧರಿಸಿ ಕೊಳ್ಳದೆ ಇದ್ದು, ಕ್ರಿಸ್ತನ ಹೆಸರಿಗೋಸ್ಕರ ತಮ್ಮ ಪ್ರಾಣಗಳನ್ನು ಕೊಟ್ಟ ಆತನ ದಾಸರು ಪುನರುತ್ಥಾನವಾಗಿ, ತಮ್ಮ ಪರಮ ಅರಸನಾದ ಕ್ರಿಸ್ತನ ಸಂಗಡ ಸಾವಿರ ವರುಷ ಆಳುವರು. ಮರಣ ಹೊಂದಿದ ಅಪಭಕ್ತರಾದ ಮಿಕ್ಕಾದವರು ಆ ಸಾವಿರ ವರುಷ ಮುಗಿಯುವ ಮಟ್ಟಿಗೂ ಏಳಲಿಲ್ಲ. ಅವು ಮುಗಿದ ತರುವಾಯ ಪುನರುತ್ಥಾನವಾಗಿ ಎದ್ದು ನ್ಯಾಯತೀರ್ವಿಕೆ ಹೊಂದುವರು.

6. ಮೊದಲನೇ ಪುನರುತ್ಥಾನವಂದರೆ, ಮನುಷ್ಯರು ಗುಣಪಡುವ ಕಾಲದಲ್ಲಿ ಪಾಪದ ನಿದ್ರೆಯನ್ನು ಬಿಟ್ಟು ಏಳುವಂಥಾ ಆತ್ಮದ ಪುನರುತ್ಥಾನವನ್ನು ಕುರಿತದ್ದೆಂದೂ, ಸಭೆಗೆ ಉಂಟಾಗುವ ಪೂರ್ಣ ಮಹಿಮೆಯನ್ನು ಕುರಿತದ್ದೆಂದೂ ಕೆಲ ವಿದ್ವಾಂಸರು ಹೇಳುತ್ತಾರೆ. ಆಲ್‍ಫೊರ್ಡ್ ಎಂಬ ಶಾಸ್ತ್ರಿಯು ಹೇಳುವದನ್ನು ಎಲ್ಲರೂ ಯೋಚಿಸ ತಕ್ಕದ್ದು. ಈ ವಚನದಲ್ಲಿ ಕೆಲವರು ಒಂದು ವಿಶೇಷ ಕಾಲಕ್ಕೆ ಮುಂದಾಗಿ ಎದ್ದರೆಂದೂ, ಬೇರೆ ಕೆಲವರು ಆ ಕಾಲದ ಹಿಂದೆ ಎದ್ದರೆಂದೂ ಹೇಳುತ್ತದೆ. ಮುಂದೆ ಎದ್ದದ್ದು ಮೊದಲನೇ ಪುನರುತ್ಥಾನವು; ಹಿಂದೆ ಏಳುವದು ಎರಡನೇ ಪುನರುತ್ಥಾನವು. ಇದರಲ್ಲಿ ಮೊದಲನೇ ಪುನರುತ್ಥಾನವು ಆತ್ಮಭಾವದ ಪುನರುತ್ಥಾನವನ್ನು ಕುರಿತದ್ದು ಅಂದರೆ, ಎರಡನೇ ಪುನರುತ್ಥಾನವು ಸಹ ಆತ್ಮಭಾವದ ಪುನರುತ್ಥಾನವನ್ನು ಕುರಿತದ್ದೆಂದು ಹೇಳ ಬೇಕು. ಎರಡನೇ ಪುನರುತ್ಥಾನವು ಶರೀರದ ಪುನರುತ್ಥಾನವನ್ನು ಕುರಿತದ್ದೆಂದು ಎಲ್ಲರೂ ಒಪ್ಪಿ ಕೊಳ್ಳುವದರಿಂದ, ಮೊದಲನೇ ಪುನರುತ್ಥಾನವು ಸಹ ಶರೀರದ ಪುನರುತ್ಥಾನವೆಂದು ನಿಶ್ಚಯಿಸ ಬೇಕು. ಈ ಪ್ರಕಾರ ಕ್ರಿಸ್ತನ ಭಕ್ತರು ಮೊದಲು ಪುನರುತ್ಥಾನದಿಂದ ಎದ್ದು, ಪರಮ ರಾಜನಾದ ಕ್ರಿಸ್ತನ ಸಂಗಡ ಸಾವಿರ ವರುಷ ಆಳುವರೆಂಬುವದು, ಕ್ರಿಸ್ತನ ಸಭೆಯುಂಟಾದ ಕಾಲದಿಂದ ಮೂರನೇ ಶತಾಬ್ದದ ಮಟ್ಟಿಗೂ ಇದ್ದ ಕ್ರಿಸ್ತನ ಭಕ್ತರ ಸಿದ್ಧಾಂತವಾಗಿತ್ತು. ಆದದರಿಂದ ಈ ಸತ್ಯವನ್ನು ಪೂರ್ವಿಕ ಸಭೆಯವರ ಹಾಗೆಯೂ, ವೇದಶಾಸ್ತ್ರಿಗಳಲ್ಲಿ ಅನೇಕರ ಹಾಗೆಯೂ, ನಾವೆಲ್ಲರೂ ವಿಶ್ವಾಸಿಸ ತಕ್ಕ ಪ್ರಾಮಾಣ್ಯವಾಗಿದೆ ಎಂದು ಹೇಳುತ್ತಾನೆ.



೭,೮ ಆ ಸಾವಿರ ವರುಷ ಮುಗಿದಾಗ, ಸೈತಾನನು ತನ್ನ [1]ಶೆರೆಯೊಳಗಿಂದ ಬಿಡಿಸಲ್ಪಟ್ಟು, ಭೂಮಿಯ ನಾಲ್ಕು
ದಿಕ್ಕುಗಳಲ್ಲಿರುವ, [2]ಗೋಗ್ ಮಗೋಗ್ ಎಂಬುವಂಥ, ಲೆಖ್ಖಕ್ಕೆ ಸಮುದ್ರದ ಮರಳಿನ ಹಾಗೆ ಇರುವಂಥ
೯ ಜನಾಂಗಗಳನ್ನು ಮೋಸಗೊಳಿಸಿ, ಅವರನ್ನು ಯುದ್ಧಕ್ಕೆ ಕೂಡಿಸುವದಕ್ಕೆ ಹೊರಟು ಹೋಗುವನು. ಮತ್ತು
ಅವರು ಭೂಮಿಯ ಬೈಲಿಗೆ ಏರಿ ಹೋಗಿ, ಪರಿಶುದ್ಧರ ದಂಡನ್ನೂ, [3]ಪ್ರಿಯವಾದ ಪಟ್ಟಣವನ್ನೂ ಮುತ್ತಿ ಕೊಂ
ಡರು. ಆಗ ದೇವರ ಬಳಿಯಿಂದ [4]ಬೆಂಕಿಯು ಪರಲೋಕದೊಳಗಿಂದ ಇಳಿದು, ಅವರನ್ನು ತಿಂದು ಬಿಟ್ಟಿತು.
೧೦ ಮತ್ತು ಅವರನ್ನು ಮೋಸಗೊಳಿಸಿದ ಪಿಶಾಚನು, ಮೃಗವೂ ಸುಳ್ಳು ಪ್ರವಾದಿಯೂ ಇರುವ, ಬೆಂಕಿ ಗಂಧಕ
ಗಳ [5]ಕೆರೆಯಲ್ಲಿ ಹಾಕಲ್ಪಟ್ಟನು. ಮತ್ತು ಎಂದೆಂದಿಗೂ ರಾತ್ರಿ ಹಗಲು ಪೀಡಿಸಲ್ಪಡುವರು.
೧೧ ಆಗ [6]ದೊಡ್ಡ ಬಿಳೀ ಸಿಂಹಾಸನವನ್ನೂ, ಅದರ ಮೇಲೆ ಕೂತು ಕೊಂಡವನನ್ನೂ, ಕಂಡೆನು. ಅವನ ಸಮು
೧೨ ಖದಿಂದ ಭೂಮಿಯೂ ಆಕಾಶವೂ ಓಡಿ ಹೋಗಿ, ಅವುಗಳಿಗೆ ಸ್ಥಳವು ಶಿಕ್ಕಲಿಲ್ಲ. ಮತ್ತು ಹಿರಿ ಕಿರಿಯ
ರಾದ ಸತ್ತವರು ದೇವರ ಮುಂದೆ ನಿಂತಿರುವದನ್ನು ಕಂಡೆನು. [7]ಪುಸ್ತಕಗಳು ತೆರೆಯಲ್ಪಟ್ಟವು. ಮತ್ತೊಂದು

1. ಈ ಶೆರೆಯು ಮಹಾ ಅಗಾಧವಾದ ಪಾತಾಳವೇ. (೨ ಪೇತ್ರ. ೨. ೪.) ಸಹಸ್ರ ವರುಷ ರಾಜ್ಯಭಾರದ ಮಹಿಮೆಯಾದ ಕಾಲವು ಮುಗಿದ ತರುವಾಯ ಸೈತಾನನು ಬಿಡಿಸಲ್ಪಡುವನು. ಆಗ ಲೋಕದವರೆಲ್ಲರೂ ಅವನ ಸಂಗಡ ಶೇರಿ ಕೊಂಡು ಯುದ್ಧಕ್ಕೆ ಬರುವರು. ಕ್ರಿಸ್ತನು ಈ ಭೂಮಿಯಲ್ಲಿದ್ದ ಕಾಲದಲ್ಲಿ ಪಿಶಾಚಿಗಳ ಆಡಳಿತವು ಪ್ರಬಲವಾಗಿದ್ದ ಪ್ರಕಾರ ಸಹಸ್ರ ವರುಷ ರಾಜ್ಯಭಾರದ ಅಂತ್ಯದಲ್ಲಿ ಈ ಪಿಶಾಚಿಗಳ ಆರ್ಭಟವೂ ಅಧಿಕಾರವೂ ಪ್ರಬಲವಾಗಿರುವದೆಂದು ತೋರುತ್ತದೆ. ಆದರೆ ಈ ಅಧಿಕಾರವು ಸ್ವಲ್ಪ ಕಾಲ ಮಾತ್ರ ನಡೆದು ತರುವಾಯ ಪೂರ್ಣವಾಗಿ ನಿಂತು ಹೋಗುವದು.

2. ಗೋಗ್ ಮಗೋಗ್ ಎಂಬ ಜಾತಿಯವರು ಇಂಥವರೆಂದು ಗೊತ್ತು ಮಾಡುವದು ಕಷ್ಟವಾಗಿದೆ. ಮಾಗೋಗನು ಯಾಫೇತನ ಮಕ್ಕಳಲ್ಲಿ ಒಬ್ಬನೆಂದು ಹೇಳಿ ಇದೆ. (ಉತ್ಪ. ೧೦. ೨.) ಮಗೋಗ್ ಎಂಬುವದು ಒಂದು ದೇಶ ಅಥವಾ ಒಂದು ನಾಡನ್ನು ಕುರಿತದ್ದು. ಮಾಗೋಗನ ದೇಶದವನಾದ ಗೋಗನೂ ಅವನ ಸೈನ್ಯಗಳೂ ಯೆಹೂದ್ಯರ ಮೇಲೆ ದಂಡೆತ್ತಿ ಪಾಲೆಸ್ತೀನಕ್ಕೆ ಬಂದು, ಅವರೆಲ್ಲರು ಸಮೂಲವಾಗಿ ನಾಶವಾಗುವರೆಂದೂ, ಅದರ ತರುವಾಯ ಯೆಹೂದ್ಯರು ನಿರ್ವಿಘ್ನವಾಗಿ ಸುಖವಾಗಿರುವರೆಂದೂ ಎಜೇಕಿಯೇಲನ ಪ್ರವಾದನೆಯಲ್ಲಿ ಹೇಳಿ ಇದೆ. (ಎಜೇಕಿ. ೩೮, ೩೯ನೇ ಸಂಧಿಗಳು.) ಈ ಯುದ್ಧವೂ ನಾಶನವೂ ಸಹಸ್ರ ವರುಷ ರಾಜ್ಯಭಾರದ ತರುವಾಯವೂ ಕಡೇ ನ್ಯಾಯತೀರ್ವಿಕೆಗೆ ಮುಂದಾಗಿಯೂ ನಡಿಯುವ ಮಹಾ ಯುದ್ಧಕ್ಕೂ, ಅದರಲ್ಲಿ ಶತ್ರುಗಳಿಗೆ ಸಂಭವಿಸುವ ಸರ್ವ ನಾಶನಕ್ಕೂ ಗುರುತಾಗಿತ್ತು. ಗಡಸರ್ಪದ ಪ್ರೇರಣೆಯಿಂದ ಲೋಕದಲ್ಲೆಲ್ಲಾ ನಡೆದ ಕಲಹವು ಸ್ವಲ್ಪ ಕಾಲ ಮಾತ್ರವಿತ್ತು. ತರುವಾಯ ಸಮೂಲವಾಗಿ ನಿಂತು ಹೋಗುವದು.

3. ಈ ಯುದ್ಧವು ಪಾಲೆಸ್ತೀನದಲ್ಲಿ ನಡೆದದರಿಂದ ಅದರ ಮುಖ್ಯ ಪಟ್ಟಣವಾದ ಯೆರೂಸಲೇಮೆಂಬ ಪ್ರಿಯವಾದ ಪಟ್ಟಣವನ್ನು ಶತ್ರುಗಳು ವಶ ಮಾಡಿ ಕೊಳ್ಳ ಯತ್ನಯಿಸುವರು. (ಕೀರ್ತ. ೭೮. ೬೮.) ಆ ಪ್ರಿಯವಾದ ಪಟ್ಟಣವನ್ನು ಪರಿಶುದ್ಧವಂತರ ಸೈನ್ಯವು ಭದ್ರ ಪಡಿಸಿ ಕೊಳ್ಳುವದು. ಅವರ ಮೇಲೆ ಶತ್ರುಗಳು ಪ್ರವಾಹದೋಪಾದಿಯಾಗಿ ಬಂದು ಮುತ್ತಿ ಕೊಳ್ಳುವರು.

4. ಸೊದೋಮು ಗಮೋರ ಪಟ್ಟಣಗಳಿಗೆ ಸಂಭವಿಸಿದ ಪ್ರಕಾರವೂ, ಎಜೇಕಿಯೇಲನು ಪ್ರವಾದನೆಯಾಗಿ ಹೇಳಿದ ಪ್ರಕಾರವೂ (ಎಜೇಕಿ. ೩೮. ೨೨.) ಈಗ ಈ ದೊಡ್ಡ ಕಲಹಗಾರರಿಗೆ ಸಂಭವಿಸುವದು. ಪ್ರವಾಹದಂತೆ ಹರಿದು ಬಂದವರು ಆಕಾಶದಿಂದ ಇಳಿದ ಅಗ್ನಿಪ್ರವಾಹದಲ್ಲಿ ನಾಶವಾಗುವರು.

5. ಶತ್ರುಗಳೆಲ್ಲಾ ಅಗ್ನಿಯಿಂದ ನಾಶವಾಗಲು, ದೇವರಿಗೂ ಮನುಷ್ಯರಿಗೂ ದೊಡ್ಡ ಶತ್ರುವಾದ ಸೈತಾನನು ಬೆಂಕಿ ಗಂಧಕಗಳಿಂದುರಿಯುವ ಕೆರೆಯಲ್ಲಿ ಹಾಕಲ್ಪಟ್ಟು, ತನ್ನ ಪರಿವಾರದ ಸಂಗಡ ಸದಾಕಾಲ ಬಾಧಿಸಲ್ಪಡುವನು.

6. ಕಡೇ ಯುದ್ಧದಲ್ಲಿ ಸೈತಾನನೂ ಅವನ ಅಪಾರ ಸೈನ್ಯವೂ ನಾಶವಾದ ತರುವಾಯ ಕಡೇ ನ್ಯಾಯತೀರ್ವಿಕೆ ಆಗುತ್ತದೆ. ಸರ್ವಲೋಕಕ್ಕೆ ನ್ಯಾಯಾಧಿಪತಿಯಾದ ಕ್ರಿಸ್ತನು ದೊಡ್ಡ ಬಿಳೀ ಸಿಂಹಾಸನದಲ್ಲಿ ಕುಳಿತಿರುವನು. ಆತನು ಸರ್ವಲೋಕಕ್ಕೆ ನ್ಯಾಯ ತೀರಿಸುವದರಿಂದಲೂ, ನೀತಿ ತಪ್ಪದೆ ಸತ್ಯವಾಗಿ ನ್ಯಾಯ ತೀರಿಸುವದರಿಂದಲೂ, ಆತನ ಸಿಂಹಾಸನವು ದೊಡ್ಡದೂ ಬಿಳೀದೂ ಆಗಿರ ತಕ್ಕದ್ದು. ಆ ಸಿಂಹಾಸನದ ಪ್ರಕಾಶದಿಂದ ಭೂಮಿಯೂ ಆಕಾಶವೂ ಓಡಿ ಹೋಗಿ ಸರ್ವ ಶೂನ್ಯವಾದ ಹಾಗೆ ಇರುವದು.

7. ಆ ನ್ಯಾಯಾಸನದ ಮುಂದೆ ಸತ್ತವರಾದ ಹಿರಿ ಕಿರಿಯರೆಲ್ಲರೂ ದೊಡ್ಡ ಕೂಟವಾಗಿ ನಿಲ್ಲುವರು. ಸನ್ಮಾರ್ಗರು ಪರಮ ರಾಜನ ಬಲಪಾರ್ಶ್ವದಲ್ಲಿಯೂ, ದುರ್ಮಾರ್ಗರು ಆತನ ಎಡಪಾರ್ಶ್ವದಲ್ಲಿಯೂ ನಿಲ್ಲುವರು. ಆಗ ಪುಸ್ತಕಗಳು ತೆರೆಯಲ್ಪಡುವವು. ಲೋಕದ ನ್ಯಾಯಸಭೆಗಳಲ್ಲಿ ಪುಸ್ತಕಗಳನ್ನೂ ದಸ್ತೈವಜುಗಳನ್ನೂ ನೋಡಿ ನ್ಯಾಯತೀರ್ಪು ಕೊಡುವ ಪ್ರಕಾರ, ಪರಮ ನ್ಯಾಯಸ್ಥಳದಲ್ಲಿಯೂ ನಡಿಯುವಂತೆ ಹೇಳಿ ಇದೆ. ನ್ಯಾಯಪ್ರಮಾಣವೆಂಬ ಪುಸ್ತಕವು, (ಯೋಹಾ. ೫. ೪೫.) ಸುವಾರ್ತೆಯ ಪುಸ್ತಕವು, (ಯೋಹಾ. ೧೨. ೪೮.) ಜ್ಞಾಪಕಾರ್ಥದ ಪುಸ್ತಕವು, (ಯೆಶಾ. ೬೫. ೬. ಕೀರ್ತ. ೫೬. ೮. ಮಲ. ೩. ೧೬.) ಜೀವದ ಪುಸ್ತಕವು, (ಹೊರ. ೩೨. ೩೨. ದಾನಿ. ೧೨. ೧. ಲೂಕ. ೧೦. ೨೦. ಪ್ರಕಟ. ೩. ೫.) ಈ ಪುಸ್ತಕಗಳೆಲ್ಲಾ ತೆರೆಯಲ್ಪಡುವವು. ಆಗ ಸತ್ಯಪರನಾದ ದೇವರು ಅವರವರ ಕ್ರಿಯೆಗಳಿಗೆ ತಕ್ಕ ಹಾಗೆ ಫಲ ಕೊಡುವನು. (ರೋಮಾ. ೨. ೬—೧೧.) ಸರ್ವಲೋಕವೂ ಆತನು ಮಾಡಿದ ನ್ಯಾಯತೀರ್ಪು ಸರಿಯಾದದ್ದೆಂದು ಅರಿಕೆ ಮಾಡುವದು. (ಕೀರ್ತ. ೫೧. ೪.)

ಪುಸ್ತಕವು ತೆರೆಯಲ್ಪಟ್ಟಿತು; ಅದು ಜೀವದ ಪುಸ್ತಕವು. ಆಗ ಆ ಪುಸ್ತಕಗಳಲ್ಲಿ ಬರೆದವುಗಳಿಂದ ಸತ್ತವರಿಗೆ
೧೩ ಅವರ [1]ಕ್ರಿಯೆಗಳ ಪ್ರಕಾರ ನ್ಯಾಯ ತೀರಿಸಲ್ಪಟ್ಟಿತು. ಸಮುದ್ರವು ಅದರೊಳಗಿರುವ ಸತ್ತವರನ್ನು ಒಪ್ಪಿ
ಸಿತು. ಮರಣವೂ [2]ಪಾತಾಳವೂ ಅವುಗಳೊಳಗಿರುವ ಸತ್ತವರನ್ನು ಒಪ್ಪಿಸಿದವು. ಆಗ ಎಲ್ಲರಿಗೆ ಅವರ
ವರ ಕ್ರಿಯೆಗಳ ಪ್ರಕಾರ ನ್ಯಾಯ ತೀರಿಸಲ್ಪಟ್ಟಿತು.
೧೪ ಆಗ ಮರಣವೂ ಪಾತಾಳವೂ ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟವು. ಇದು ಎರಡನೇ ಮರಣವು.
೧೫ ಮತ್ತು ಯಾವನಾದರೂ ಜೀವದ ಪುಸ್ತಕದಲ್ಲಿ ಬರೆಯಲ್ಪಟ್ಟವನಾಗಿ ಕಾಣಿಸದಿದ್ದರೆ, ಬೆಂಕಿಯ ಕೆರೆಯಲ್ಲಿ
ಹಾಕಲ್ಪಟ್ಟನು.

ಹೊಸ ಆಕಾಶವನ್ನೂ ಹೊಸ ಭೂಮಿಯನ್ನೂ ಕುರಿತ ದರ್ಶನವು. ಪರಮ ಯೆರೂಸಲೇಮಿನ ಮಹಾನಂದವು.

21. [3]ಮತ್ತು ಹೊಸ ಆಕಾಶವನ್ನೂ, [4]ಹೊಸ ಭೂಮಿಯನ್ನೂ ಕಂಡೆನು; ಯಾಕಂದರೆ ಮೊದಲನೇ ಆಕಾ

1. ಅವರವರ ಕ್ರಿಯೆಗಳಿಗೆ ತಕ್ಕದ್ದಾಗಿ ಅವರವರಿಗೆ ಉಂಟಾಗುವ ಸುಖ ದುಃಖಗಳಲ್ಲಿ ನಾನಾ ವ್ಯತ್ಯಾಸಗಳಿರುವವೆಂದು ತೋರುತ್ತದೆ. (ಲೂಕ. ೧೨. ೪೭, ೪೮. ೨ಕೊರಿ. ೫. ೧೦. ಸರಿ ನೋಡ ಬೇಕು.)

2. ಪಾತಾಳವೆಂಬುವದಕ್ಕೆ ಸತ್ತವರಿರುವ ಐಡೇಸ್ ಎಂಬದಾಗಿ ಉಂಟು. ಆ ಮಹಾ ನ್ಯಾಯತೀರ್ವಿಕೆಯ ದಿವಸದಲ್ಲಿ ಸರ್ವಶಕ್ತನ ಅಪ್ಪಣೆಯ ಪ್ರಕಾರ ಸಮುದ್ರವು ತನ್ನಲ್ಲಿರುವ ಸತ್ತವರನ್ನು ಒಪ್ಪಿಸುವದು. ಭಯಂಕರ ದೂತನಾದ ಮರಣವು ಸಹ, ಅವನ ಶೆರೆಯವರಿದ್ದ ಸ್ಥಳವಾದ ಪಾತಾಳವು ಸಹ ತಮ್ಮಲ್ಲಿರುವ ಸತ್ತವರನ್ನು ಒಪ್ಪಿಸುವವು. ತರುವಾಯ ಆ ಮರಣದೂತನಿಗೂ ಮರಣವು ಸಂಭವಿಸುವದು. ಮರಣವೂ ಪಾತಾಳವೂ, ಗಡಸರ್ಪವಾದ ಸೈತಾನನು ಬಿದ್ದಿರುವ ಬೆಂಕಿಯ ಕೆರೆಯಲ್ಲಿ ತಳ್ಳಲ್ಪಡುವವು. ಇದೇ ಎರಡನೇ ಮರಣವು; ಇದೇ ನಿತ್ಯ ಮರಣವು. ಕುರಿಮರಿಯ ಜೀವದ ಪುಸ್ತಕದಲ್ಲಿ ಹೆಸರು ಬರೆಯಲ್ಪಡದ ಅಪಭಕ್ತರೆಲ್ಲರಿಗೂ ಈ ಮರಣಕ್ಕೊಳಗಾಗುವರು. ಎರಡನೇ ಜೀವವು ಇರುವ ಪ್ರಕಾರ ಎರಡನೇ ಮರಣವೂ ಉಂಟು. ಆ ಜೀವದ ತರುವಾಯ ಮರಣವು ಇಲ್ಲದೆ ಇರುವ ಪ್ರಕಾರ (೨೧. ೪.) ಆ ಮರಣದ ತರುವಾಯ ಜೀವವು ಇರದು. (ಮತ್ತಾ. ೨೫. ೪೧.) ಕುರಿಮರಿಯ ಜೀವದ ಪುಸ್ತಕದಲ್ಲಿ ಹೆಸರು ಬರೆಯಲ್ಪಟ್ಟವರಿಗೆ ಈ ಜೀವವೂ, ಹೆಸರು ಬರೆಯಲ್ಪಡದವರಿಗೆ ಈ ಮರಣವೂ ಉಂಟಾಗುವದು. ಇವೆರಡಕ್ಕೂ ಮಧ್ಯವಾದ ಸ್ಥಿತಿ ಇಲ್ಲವೇ ಇಲ್ಲ.

3. ಈ ಗ್ರಂಥದ ಕಡೇ ಭಾಗ ಮೂರು ವಿಭಾಗಗಳಾಗಿದೆ. ೧ನೇದು, ಹೊಸ ಸೃಷ್ಟಿಯನ್ನು ಕುರಿತ ಕ್ಲುಪ್ತವಾದ ಸಂಗತಿ. (೨೧. ೧—೮.) ೨ನೇದು, ಉತ್ತಮ ಭಕ್ತರ ನಿತ್ಯ ವಾಸಸ್ಥಳವನ್ನು ಕುರಿತ ಸಮಾಚಾರ. (೯. ವಚನದಿಂದ ೨೨. ೫. ವಚನದ ವರಿಗೂ.) ೩ನೇದು, ದೇವದೂತನೂ, ಕ್ರಿಸ್ತನೂ, ಯೋಹಾನನೂ ಕಡೆಯಾಗಿ ಹೇಳಿದ ಬುದ್ಧಿಬೋಧನೆಗಳು. (೬—೨೧. ವ.) ಈ ವಿಭಾಗಗಳ ಒಂದೊಂದರಲ್ಲಿಯೂ ಮೂರು ಭಾಗಗಳುಂಟು. ೧ನೇದು, ಕಡೇ ನ್ಯಾಯತೀರ್ವಿಕೆಯ ವಿಷಯ ದರ್ಶನದ ತರುವಾಯ, ಹೊಸ ಆಕಾಶವೂ ಹೊಸ ಭೂಮಿಯೂ ಉಂಟಾದದ್ದೂ, ಅದರಲ್ಲಿ ಪರಿಶುದ್ಧ ಪಟ್ಟಣವಾದ ಹೊಸ ಯೆರೂಸಲೇಮು ಕಾಣಲ್ಪಟ್ಟದ್ದೂ, ಆದ ಒಂದು ದರ್ಶನವು ಯೋಹಾನನಿಗೆ ಕಾಣಿಸಿತು. (೨೧. ೧, ೨.) ದೇವರು ಮನುಷ್ಯರ ಸಂಗಡ ವಾಸ ಮಾಡುವನೆಂದೂ, ಗೋಳಾಟವೂ ಅಳುವಿಕೆಯೂ ಕಷ್ಟವೂ ಇನ್ನು ಇರುವದಿಲ್ಲವೆಂದೂ, ಆಕಾಶದಿಂದ ಒಂದು ಶಬ್ದವು ಹೊರಟಿತು. (೩, ೪. ವ.) ಹಾಗೆಯೇ ಸಿಂಹಾಸನದ ಮೇಲೆ ಕುಳಿತ ಮಹಾ ದೇವರು ಎಲ್ಲವನ್ನು ಹೊಸದಾಗಿ ಮಾಡುತ್ತೇನೆಂಬದಾಗಿಯೂ, ಪ್ರವಾದನೆಗಳೆಲ್ಲಾ ನಿಶ್ಚಯವಾಗಿ ಈಡೇರುವವೆಂಬದಾಗಿಯೂ, ಸನ್ಮಾರ್ಗರಿಗೆ ಪೂರ್ಣ ಸುಖವೂ, ದುರ್ಮಾರ್ಗರಿಗೆ ಪೂರ್ಣ ನಾಶನವೂ, ತನ್ನ ಮಾರ್ಪಡದ ಪ್ರಮಾಣದ ಪ್ರಕಾರ ಸಂಭವಿಸುವವೆಂಬದಾಗಿಯೂ, ಹೇಳಿದನು. (೫—೮. ವ.) ೨ನೇದು, ಒಬ್ಬ ದೇವದೂತನಿಂದ ಯೋಹಾನನು ಉನ್ನತವಾದ ಬೆಟ್ಟಕ್ಕೆ ಒಯ್ಯಲ್ಪಟ್ಟು, ಹೊಸ ಯೆರೂಸಲೇಮು ಪರಮ ಮಹಿಮೆಯುಳ್ಳದ್ದಾಗಿ ಪರಲೋಕದೊಳಗಿಂದ ಇಳಿದು ಬಂದದ್ದನ್ನು ಕಂಡನು. (೯—೧೧. ವ.) ಅದರ ಗೋಡೆಗಳು, ಬಾಗಲುಗಳು, ಅಸ್ತಿವಾರಗಳು, ವಿಸ್ತೀರ್ಣವು, ಅಲಂಕಾರವು ಮುಂತಾದವುಗಳನ್ನು ಕುರಿತ ಸೂಕ್ಷ್ಮ ಸಂಗತಿಗಳು. (೧೨—೨೧. ವ.) ಮಂದಿರವಿಲ್ಲದ ಆರಾಧನೆ, ಸೂರ್ಯನಿಲ್ಲದ ಪ್ರಕಾಶ, ರಾತ್ರಿ ಇಲ್ಲದ ಹಗಲು, ಪಾಪಕಲ್ಮಷವಿಲ್ಲದ ಪ್ರಜೆಗಳು, ಇವೇ ಅದರ ಅಲಂಕಾರ. (೨೨—೨೭. ವ.) ಅದರ ಮಧ್ಯದಲ್ಲಿ ಹರಿಯುವ ಜೀವನದಿಯು ಜೀವವೃಕ್ಷವನ್ನು ಎಂದೂ ಹಸುರಾಗಿ ಫಲವುಳ್ಳದ್ದಾಗ ಮಾಡಿತು. (೨೨. ೧, ೨.) ಇದರಿಂದ ಪಾಪದಿಂದುಂಟಾದ ಶಾಪವು ನಿವರ್ತಿಯಾಗಲಾಗಿ, ದೇವರು ತಿರಿಗಿ ಮನುಷ್ಯರ ಸಂಗಡ ಸಹವಾಸ ಮಾಡಿ, ಆತನ ಕೃಪಾಕಿರಣಗಳನ್ನು ಅವರ ಮೇಲೆ ಪಸರಿಸಲೂ, ಅವರು ಪಾಪದಿಂದ ಕಳಕೊಂಡ ರಾಜತ್ವದ ಮಹಿಮೆಯನ್ನು ತಿರಿಗಿ ಅವರಿಗೆ ಕೊಡಲೂ ಹೇತುವೆಯಾಯಿತು. (೩—೫. ವ.) ೩ನೇ ಭಾಗವನ್ನು ಕುರಿತು ೨೨. ೬. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.

4. ಆಕಾಶವೂ ಭೂಮಿಯೂ ನಾಶವಾಗಿ ಸರ್ವ ಶೂನ್ಯವಾಗಿ ಹೋಗದೆ ಹೊಸವಾಗಿ ಮಾರ್ಪಟ್ಟವು. ದೇವರು ತನ್ನ ಮಹಿಮೆ ಪ್ರಕಟವಾಗುವ ನಿಮಿತ್ತ ಸೃಷ್ಟಿಸಿದ ಲೋಕವನ್ನು ಪೂರ್ಣವಾಗಿ ನಾಶ ಮಾಡದೆ ನವೀಕರಿಸುವನು. ಜಲಪ್ರಳಯದಿಂದ ಹಳೇ ಲೋಕವು ನಾಶವಾದಂತೆ ಹೇಳಿ ಇದೆ. (೨ ಪೇತ್ರ. ೩. ೬, ೧೩.) ಒಬ್ಬನು ಕ್ರಿಸ್ತನಲ್ಲಿದ್ದರೆ, ಹೊಸ ಸೃಷ್ಟಿಯೇ, ಹಳೆಯವುಗಳು ಕಳೆದು ಹೋದವು; ಇಗೋ, ಎಲ್ಲಾ ಹೊಸದಾಯಿತು, ಎಂದು ವೇದವು ಹೇಳುತ್ತದೆ. (೨ ಕೊರಿ. ೫. ೧೭.) ಇವುಗಳನ್ನು ಯೋಚಿಸುವಾಗ, ಹಳೇ ಲೋಕವು ಜಲಪ್ರಳಯದಿಂದ ಹೊಸದಾಯಿತೇ ಹೊರ್ತು ನಾಶವಾಗಲಿಲ್ಲವೆಂದೂ, ಕ್ರಿಸ್ತನ ಶರಣಾಗತನಾದ ಭಕ್ತನ ಹೃದಯವು ಶುದ್ಧವಾಯಿತೇ ಹೊರ್ತು ಅಳಿದು ಹೋಗುವದಿಲ್ಲ. ಅದೇ ಪ್ರಕಾರ ಅಗ್ನಿಪ್ರಳಯದಿಂದ ಅಳಿದು ಹೋಗುವ ಹಳೇ ಲೋಕವು ನಿರ್ನಾಮವಾಗಿ ಹೋಗದೆ ಹೊಸದಾಗಿ ಮಾರ್ಪಡುವದು. (೨ ಪೇತ್ರ. ೩. ೭—೧೩. ವಚನಗಳ ವ್ಯಾಖ್ಯಾನ ನೋಡ ಬೇಕು.) ಇದೇ ಕ್ರಿಸ್ತನು ಅಪ್ಪಣೆ ಕೊಟ್ಟ ಪುನರ್ಜನ್ಮದ ಕಾಲವು. (ಮತ್ತಾ. ೧೯. ೨೮.) ಇದು ಸಾವಿರ ವರುಷ ರಾಜ್ಯಭಾರದ ಕಾಲದಲ್ಲಿ ಇರುವ ಮಹಿಮೆಗಿಂತ ಅಧಿಕ ಮಹಿಮೆಯುಳ್ಳದ್ದಾಗಿರುವದು. ಅದರಲ್ಲಿ ಪಾಪವೂ ಉಪದ್ರವೂ ದುಃಖವೂ ಎಂದಿಗೂ ಇಲ್ಲದೆ ಹೋಗುವವು. ಆದದರಿಂದ ಅದರ ಮಹಿಮೆಯನ್ನು ಹೇಳಲಸಾಧ್ಯವಾಗಿದೆ.



೨ ಶವೂ ಮೊದಲನೇ ಭೂಮಿಯೂ ಇಲ್ಲದೆ ಹೋದವು. ಸಮುದ್ರವು ಇನ್ನು ಮೇಲೆ ಇಲ್ಲ. ಮತ್ತು ಯೆ
ಹಾನನೆಂಬ ನಾನು ಪರಿಶುದ್ಧ ಪಟ್ಟಣವಾದ [1]ಹೊಸ ಯೆರೂಸಲೇಮು, ತನ್ನ ಗಂಡನಿಗೋಸ್ಕರ ಅಲಂಕರಿಸಲ್ಪ
ಮದಲಗಿತ್ತಿಯಂತೆ ಸಿದ್ಧವಾಗಿ, ದೇವರ ಕಡೆಯಿಂದ, ಪರಲೋಕದೊಳಗಿಂದ, ಇಳಿದು ಬರುವದ
ಕಂಡೆನು.
೩ ಮತ್ತು ಪರಲೋಕದಿಂದಾದ ಮಹಾ ಶಬ್ದವನ್ನು ಕೇಳಿದೆನು; ಏನಂದರೆ—ಇಗೋ, [2]ದೇವರ ಗುಡಾ
ಮನುಷ್ಯರ ಸಂಗಡ ಅದೆ. ಅವನು ಅವರ ಸಂಗಡ ವಾಸ ಮಾಡುವನು. ಅವರು ಅವನ ಪ್ರಜೆಯಾಗಿ
೪ ವರು. ದೇವರು ತಾನೇ ಅವರ ದೇವರಾಗಿ, ಅವರ ಸಂಗಡ ಇರುವನು. ಮತ್ತು ದೇವರು [3]ಕಣ್ಣೀರೆ
ಅವರ ಕಣ್ಣುಗಳಿಂದ ಒರಸುವನು. (ಯೆಶಾ. ೨೫. ೮.) ಮತ್ತು ಮರಣವು ಇನ್ನೂ ಇರುವದಿಲ್ಲ. ಗೋ
ಳಾಟವೂ ಅಳುವಿಕೆಯೂ ಕಷ್ಟವೂ ಇನ್ನೂ ಇರುವದಿಲ್ಲ; ಯಾಕಂದರೆ, [4]ಮೊದಲಿನವುಗಳು ಹೋದವು.
೫ ಮತ್ತು ಸಿಂಹಾಸನದ ಮೇಲೆ ಕೂತು ಕೊಂಡವನು, ಇಗೋ, ಎಲ್ಲಾ ಹೊಸದಾಗಿ ಮಾಡುತ್ತೇನೆ,
ದನು. ಮತ್ತು ನನಗೆ, ಬರೆ; ಯಾಕಂದರೆ ಈ ವಾಕ್ಯಗಳು ಸತ್ಯವೂ ನಂಬಿಕೆಯೂ ಆಗಿವೆ, ಅಂದನು.
೬ ಇನ್ನು ನನಗೆ ಹೇಳಿದ್ದು, [5]ಆಯಿತು; ನಾನು ಅಕಾರವೂ [6]ಓಕಾರವೂ, ಆದಿಯೂ ಅಂತ್ಯವೂ, ಆಗಿದ್ದೇ
೭ ನಾನು [7]ದಾಹಗೊಂಡವನಿಗೆ ಜೀವದ ನೀರಿನ ಬುಗ್ಗೆಯಿಂದ ಉಚಿತವಾಗಿ ಕೊಡುವೆನು. ಜಯಿಸುವವ
[8]ಎಲ್ಲವುಗಳನ್ನು ಬಾಧ್ಯವಾಗಿ ಹೊಂದುವನು; ಮತ್ತು ನಾನು ಅವನಿಗೆ ದೇವರಾಗಿರುವೆನು; ಅವನು ನ

1. ಸಭೆಯ ಮಹಿಮೆಯನ್ನು ಯೆಶಾಯನ ಪ್ರವಾದನೆಯಲ್ಲಿ ಪರಿಶುದ್ಧ ಯೆರೂಸಲೇಮಿಗೆ ಉಪಮಾನಿಸಿ ಹೇಳಿ ಇದೆ, (ಯೆಶಾ. ೬೬. ೨೦.) ಎಜೇಕಿಯೇಲನ ಪ್ರವಾದನೆಯಲ್ಲಿ ವಿಸ್ತಾರವಾಗಿ ಹೇಳಿ ಇದೆ. (ಎಜೇಕಿ. ೪೦—೪೮. ಸಂಧಿ.) ಹೊಸ ಒಡಂಬಡಿಕೆಯಲ್ಲಿಯೂ ಅನೇಕ ಸ್ಥಳಗಳಲ್ಲಿ ಹೀಗೆಯೇ ಹೇಳಿ ಇದೆ. ಇದು ದೇವರ ಬಲದಿಂದ ಸ್ಥಾಪಿಸಲ್ಪಟ್ಟದರಿಂದಲೂ, ದಿವ್ಯ ಮಹಿಮೆ ಹೊಂದಿದ್ದಾಗಿರುವದರಿಂದಲೂ, ದೇವರ ಬಳಿಯಿಂದ ಪರಲೋಕದಿಂದ ಇಳಿದು ಬಂತೆಂದು ಹೇಳಿ ಇದೆ. ಹೊಸ ಯೆರೂಸಲೇಮೆಂಬ ಸಭೆಯು ತನ್ನ ಗಂಡನಿಗಾಗಿ ಅಲಂಕರಿಸಲ್ಪಟ್ಟ ಮದಲಗಿತ್ತಿಯ ಹಾಗೆ ಶುದ್ಧವೂ ಪ್ರಕಾಶವೂ ಉಳ್ಳದ್ದಾಗಿ ವಿರಾಜಿಸುತ್ತದೆ.

2. (ಎಜೇಕಿ. ೩೭. ೨೫—೨೮. ಯೋಹಾ. ೧. ೧೪. ವಚನಗಳ ವ್ಯಾಖ್ಯಾನ ನೋಡ ಬೇಕು.) ದೇವರು ವಾಸವಾಗಿದ್ದ ಆಚರಣೆಯ ಗುಡಾರವು ಇಸ್ರಯೇಲ್ಯರ ಮಧ್ಯದಲ್ಲಿದ್ದ ಪ್ರಕಾರ ದೇವರ ವಾಸಸ್ಥಳವು ಮನುಷ್ಯರ ಮಧ್ಯದಲ್ಲಿರುವದು. ದೇವರಿಗೂ ಆತನ ದಾಸರಾದ ಮನುಷ್ಯರಿಗೂ ಸಮೀಪವಾದ ಅನ್ಯೋನ್ಯ ಐಕ್ಯವಿರುವದು. ಇಮ್ಮಾನುವೇಲೆಂಬ ಹೆಸರುಳ್ಳಾತನು ಮನುಷ್ಯರ ಮಕ್ಕಳ ಸಂಗಡ ವಾಸ ಮಾಡುವನು.

3. ದೇವರು ತನ್ನ ದಾಸರ ಕಣ್ಣೀರೆಲ್ಲಾ ಒರಸುವದರಿಂದ, ಇಮ್ಮಾನುವೇಲನೆಂಬ ದೇವರ ಕನಿಕರವೂ ಪ್ರೀತಿಯೂ ತೋರುವದು.

4. ಮುಂಚಿನ ಅಪೂರ್ಣ ಸ್ಥಿತಿಗೆ ತಕ್ಕಂಥ ಮರಣ, ದುಃಖ, ಗೋಳಾಟ, ಕಷ್ಟ ಮುಂತಾದ ಸಕಲ ಪೀಡೆಗಳೂ ನಿಂತು ಹೋಗುವಾಗ ಕಣ್ಣೀರಿಗೆ ಸ್ಥಳವಿರಲಾರದು. ಹೊಸ ಲೋಕದ ಮೊದಲಿನವುಗಳು ಕಳೆದು ಹೋದವು, ಎಲ್ಲಾ ಹೊಸದಾಗಿರುವದ

5. ಆಯಿತು ಎಂಬುವದು, ಸಕಲವೂ ಹೊಸದಾಯಿತೆ ಅರ್ಥವು. ದೇವರ ಸ್ಥಿರವಾದ ವಾಕ್ಯದ ಪ್ರಕಾರ, ಕಡೆಯ ಸಮಸ್ತ ಕಾರ್ಯಗಳೂ ಪೂರ್ಣವಾಗಿಯೂ ಮಹಿಮೆಯಾಯೂ ಆಯಿತು.

6. ಜಗದ್ರಕ್ಷಕನಾದ ಕ್ರಿಸ್ತನು ತನ್ನ ಭಕ್ತರು ತನ್ನಲ್ಲಿ ಪೂಣ ಭರವಸವಿಡ ತಕ್ಕದ್ದಾಗಿ, ತನ್ನ ನಿತ್ಯ ಬಲವೂ ಮಹಿಮೆಯ ಪ್ರಕಟವಾಗುವ ಪ್ರಸಂಗವನ್ನು ಜಯಪ್ರದವಾಗಿ ಆರಂಭಿಸಿದ ಕಾರವೇ ಜಯಪ್ರದವಾಗಿ ಮುಗಿಸುತ್ತಾನೆ. (೧. ೮, ೧೮. ವಚ ಗಳ ವ್ಯಾಖ್ಯಾನ ನೋಡ ಬೇಕು.)

7. ಯೆರೂಸಲೇಮಿನಲ್ಲಿ ಒಂದು ಗುಡಾರದ ಹಬ್ಬದಲ್ಲಿ ಸಂಗಿಸಿದಾತನ ಶಬ್ದವೇ ಈಗ ಪರಮ ಯೆರೂಸಲೇಮಿನಲ್ಲಿಯ ಕೇಳಿಸಲ್ಪಡುತ್ತದೆ. (ಯೋಹಾ. ೭. ೩೭.) ಹೊಸ ಸೃಷ್ಟಿ ಆರಂಭವು ಅದರ ಮಹಿಮೆಯಾದ ಅಂತ್ಯಕ್ಕೆ ಶೇರುತ್ತದೆ. ದಾ ವು ಪ್ರಾರಂಭಿಸುವಾಗಲೇ ಉಚಿತವಾಗಿ ಕೊಡಲ್ಪಡುವ ವರ ಪ್ರಾರಂಭಿಸುತ್ತದೆ. ಜಯ ಹೊಂದುವ ಕ್ರೈಸ್ತವೀರರ ಆತ್ಮಭಾವ ಹೋರಾಟದಲ್ಲಿ ಅವರ ಆತ್ಮದ ದಾಹವು ಹೆಚ್ಚುವದಕ್ಕೆ ತ ಹಾಗೆ ಈ ವರವು ಸಹ ಹೆಚ್ಚುತ್ತಾ ಬರುತ್ತದೆ.

8. ಜಯಿಸುವ ಭಕ್ತನು, ಸರ್ವ ಸ್ವತಂತ್ರನಾಗಿರುವ ಕ್ರಿಸ್ತ ಸಂಗಡ ಜತೆಯ ಸ್ವತಂತ್ರನಾಗಿ, ಎಲ್ಲವುಗಳನ್ನು ಬಾಧ್ಯವಾ ಹೊಂದುವನು. (ಯೋಹಾ. ೧. ೧೨. ರೋಮಾ. ೮. ೧೭. ವ ನಗಳ ವ್ಯಾಖ್ಯಾನ ನೋಡ ಬೇಕು.)

೮ ಮಗನಾಗಿರುವನು. ಆದರೆ [1]ಅಂಜುವವರಿಗೂ, ಅವಿಶ್ವಾಸಿಗಳಿಗೂ, ಅಪಭ್ರಷ್ಟರಿಗೂ, ಕೊಲೆಗಾರರಿಗೂ,
ಜಾರರಿಗೂ, ಶೂನ್ಯಗಾರರಿಗೂ, ವಿಗ್ರಹಾರಾಧಕರಿಗೂ, ಸುಳ್ಳುಗಾರರೆಲ್ಲರಿಗೂ—ಬೆಂಕಿ ಗಂಧಕಗಳಿಂದ ಉರಿ
ಯುವ ಕೆರೆಯಲ್ಲಿ ಅವರಿಗೆ ಪಾಲು ಉಂಟು. ಇದು ಎರಡನೇ ಮರಣವು.

೯ ಮತ್ತು ಏಳು ಕಡೇ ಬಾಧೆಗಳಿಂದ ತುಂಬಿದ ಏಳು ಪಾತ್ರೆಗಳನ್ನು ಹಿಡಿದ ಏಳು ದೂತರಲ್ಲಿ [2]ಒಬ್ಬನು ನನ್ನ
ಬಳಿಗೆ ಬಂದು, ನನ್ನ ಸಂಗಡ ಮಾತಾಡಿ, ಬಾ, ಕುರಿಮರಿಯ [3]ಹೆಂಡತಿಯಾದ ಮದಲಗಿತ್ತಿಯನ್ನು ನಿನಗೆ
೧೦ ತೋರಿಸುತ್ತೇನೆ, ಅಂದನು. ಆಗ ಆತ್ಮದಲ್ಲಿ ನನ್ನನ್ನು ಎತ್ತರವಾದ ದೊಡ್ಡ ಬೆಟ್ಟಕ್ಕೆ ಕರಕೊಂಡು ಹೋಗಿ,
ಪರಲೋಕದೊಳಗಿಂದ, ದೇವರ ಕಡೆಯಿಂದ, ಇಳಿದು ಬರುವ ಪರಿಶುದ್ಧ [4]ಯೆರೂಸಲೇಮೆಂಬ ಮಹಾ ಪಟ್ಣ
೧೧ ವನ್ನು ನನಗೆ ತೋರಿಸಿದನು. ಅದಕ್ಕೆ [5]ದೇವರ ಮಹಿಮೆಯು ಇತ್ತು, ಮತ್ತು ಆದರ ಬೆಳಕು ಥಳಥಳಿಸುವ
೧೨ ವಜ್ರದಂತಿರುವ ಬಹು ಬೆಲೆಯುಳ್ಳ ಕಲ್ಲಿಗೆ ಸಮಾನವಾಗಿತ್ತು. ಅದಕ್ಕೆ ಎತ್ತರವಾದ ದೊಡ್ಡ ಗೋಡೆಯು;
ಅದಕ್ಕೆ [6]ಹನ್ನೆರಡು ಬಾಗಲುಗಳೂ, ಬಾಗಲುಗಳಲ್ಲಿ [7]ಹನ್ನೆರಡು ದೂತರೂ, ಇಸ್ರಯೇಲನ ಮಕ್ಕಳ ಹನ್ನೆ
೧೩ ರಡು ಕುಲದವುಗಳಾದ, ಮೇಲೆ ಬರೆಯಲ್ಪಟ್ಟ ಹೆಸರುಗಳೂ, ಉಂಟು. ಪೂರ್ವದಲ್ಲಿ ಮೂರು ಬಾಗಲು
ಗಳು; ಉತ್ತರದಲ್ಲಿ ಮೂರು ಬಾಗಲುಗಳು; ದಕ್ಷಿಣದಲ್ಲಿ ಮೂರು ಬಾಗಲುಗಳು; ಪಶ್ಚಿಮದಲ್ಲಿ ಮೂರು
೧೪ ಬಾಗಲುಗಳು. ಮತ್ತು ಪಟ್ಣದ ಗೋಡೆಗೆ ಹನ್ನೆರಡು ಅಸ್ತಿವಾರಗಳು. ಅವುಗಳಲ್ಲಿ ಕುರಿಮರಿಯ [8]ಹನ್ನೆ
ರಡು ಅಪೊಸ್ತಲರ ಹೆಸರುಗಳು.

೧೫ ಮತ್ತು ನನ್ನ ಸಂಗಡ ಮಾತಾಡುವವನಿಗೆ, ಪಟ್ಣವನ್ನೂ, ಅದರ ಬಾಗಲುಗಳನ್ನೂ, ಅದರ ಗೋಡೆಯನ್ನೂ,

---

1. ಅಂಜುವವರು ಎಂಬುವದು, ಮನುಷ್ಯರಿಗೆ ಭಯ ಪಟ್ಟು, ಉಪದ್ರವೂ ನಷ್ಟವೂ ಬರುವದೆಂಬ ಅಂಜಿಕೆಯಿಂದ, ಕ್ರಿಸ್ತನನ್ನು ಬಹಿರಂಗವಾಗಿ ಅರಿಕೆ ಮಾಡಲೂ ಸೇವಿಸಲೂ ಹಿಂಜರಿಯುವ ಹೇಡಿಗಳನ್ನು ಕುರಿತದ್ದು. ಇಂಥಾ ಭಯದಿಂದ ಹಿಂಜರಿಯುವವರಿಗೆ, ಅವಿಶ್ವಾಸಿಗಳು, ಅಪಭ್ರಷ್ಟರು, ಕೊಲೆಗಾರರು, ಜಾರರು, ಶೂನ್ಯಗಾರರು, ವಿಗ್ರಹಾರಾಧಕರು, ಸುಳ್ಳುಗಾರರು ಮುಂತಾದ ಮಹಾ ಪಾತಕರಿಗೆ ಸಂಭವಿಸುವ ದಂಡನೆಯ ಹಾಗೆ ಮಹಾ ಭಯಂಕರವಾದ ದಂಡನೆ ಸಂಭವಿಸುವದು.

2. ತಿರುಸಭೆಯ ಶತ್ರುಗಳನ್ನು ಬಾಧಿಸಿದ ದೂತರಲ್ಲಿ ಒಬ್ಬನು ಸಭೆಯ ಜಯವನ್ನೂ ಮಹಿಮೆಯನ್ನೂ ಕಂಡು, ಯೋಹಾನನಿಗೆ ಕುರಿಮರಿಯ ಹೆಂಡತಿಯಾದ ಮದಲಗಿತ್ತಿಯನ್ನು ತೋರಿಸಿದ್ದರಲ್ಲಿಯೂ, ಒಬ್ಬ ದೂತನು ಜಾರೆಯಾದ ಬಾಬೆಲನ್ನು ಯೋಹಾನನಿಗೆ ತೋರಿಸಿದ್ದರಲ್ಲಿಯೂ ಸಮ್ಮಂಧ ಕಾಣುತ್ತದೆ. (೯, ೧೦. ವ. ೧೭. ೧—೩.)

3. ಹೆಂಡತಿ ಎಂಬುವದು, ಮಹಿಮೆಯುಳ್ಳ ಕರ್ತನಲ್ಲಿ ನಿತ್ಯ ಐಕ್ಯ ಹೊಂದಿದ ವಿಮೋಚಿಸಲ್ಪಟ್ಟ ಸಭೆಯನ್ನು ಕುರಿತದ್ದು.

4. ಪೂರ್ವದ ಯೆರೂಸಲೇಮು ಭೂಲೋಕದಲ್ಲಿದ್ದ ಸಭೆಗೆ ಗುರುತಾಗಿದ್ದ ಪ್ರಕಾರ, ಪರಮ ಯೆರೂಸಲೇಮು ಪರಲೋಕದಲ್ಲಿರುವ ಸಭೆಗೆ ಗುರುತಾಗಿದೆ. ಪರಮ ಸಭೆಯ ಮಹಿಮೆಯು ಭೂಲೋಕದ ಸಭೆಯ ಮಹಿಮೆಗಿಂತ ಅನಂತ ಭಾಗ ಅಧಿಕವಾಗಿರುವದು. ಆ ಮಹಿಮೆ ಮುಂದಿನ ವಚನಗಳಲ್ಲಿ ಹೇಳಿ ಇದೆ.

5. ಯೆರೂಸಲೇಮಿನ ದೇವಾಲಯದ ಮಹಾ ಪರಿಶುದ್ಧ ಸ್ಥಳದಲ್ಲಿ ತೋರಿದ ಷೆಕೀನಾ ಎಂಬ ಪ್ರಕಾಶವುಳ್ಳ ಮೇಘವೇ ಆ ಮಂದಿರಕ್ಕೆ ಬೆಳಕು ಕೊಡುವದಾಗಿತ್ತು. ಪರಮ ಯೆರೂಸಲೇಮಿನ ಮಹಿಮೆಯ ಪ್ರಕಾಶವು ಅದಕ್ಕಿಂತ ಅಧಿಕ ಮುಖ್ಯವಾದದ್ದಾಗಿದೆ. (೨೩. ವ.)

6. ಆಚರಣೆಯು ಗುಡಾರದ ಒಂದೊಂದು ಪಾರ್ಶ್ವದಲ್ಲಿಯೂ ಮೂರು ಗೋತ್ರಗಳು ದಂಡಿಳಿದಿದ್ದ ಪ್ರಕಾರ, ಪರಲೋಕದಿಂದಿಳಿದು ಬಂದ ಈ ಪರಿಶುದ್ಧ ಪಟ್ಣಕ್ಕೆ ಒಂದೊಂದು ಪಾರ್ಶ್ವಕ್ಕೆ ಮೂರು ಮೂರು ಬಾಗಲುಗಳಾಗಿ ಹನ್ನೆರಡು ಬಾಗಲುಗಳಿದ್ದವು. ಇದು ಇಸ್ರಯೇಲ ಹನ್ನೆರಡು ಗೋತ್ರಗಳನ್ನೂ ಹನ್ನೆರಡು ಅಪೊಸ್ತಲರನ್ನೂ ಕುರಿತು ಉಪಮಾನವಾಗಿರ ಬಹುದು. ಹನ್ನೆರಡು ಎಂಬುವದು ಪೂರ್ಣ ಸಂಖ್ಯೆಯು.

7. ಒಂದೊಂದು ಬಾಗಲಿಗೂ ಒಬ್ಬೊಬ್ಬ ದೂತನಾಗಿ ಹನ್ನೆರಡು ದೂತರಿದ್ದರು. ಹನ್ನೆರಡು ದೂತರೆಂದೂ, ಹನ್ನೆರಡು ಗೋತ್ರಗಳೆಂದೂ, ಹನ್ನೆರಡು ಅಪೊಸ್ತಲರೆಂದೂ ಹೇಳಿರುವದರಲ್ಲಿ ಹಳೇ ಒಡಂಬಡಿಕೆಯ ಕಾಲದಲ್ಲಿಯೂ ಹೊಸ ಒಡಂಬಡಿಕೆಯ ಕಾಲದಲ್ಲಿಯೂ ಇದ್ದ ಭಕ್ತರ ಐಕ್ಯವನ್ನು ಮಾತ್ರವಲ್ಲ, ಪರಲೋಕದ ಸಭೆಗೂ ಭೂಲೋಕದ ಸಭೆಗೂ ಇರುವ ಐಕ್ಯವು ತೋರುತ್ತದೆ. ಭೂಲೋಕದಲ್ಲಿ ವಿಮೋಚಿಸಲ್ಪಟ್ಟ ಸಭೆಯೂ, ಪಾಪ ಮಾಡದ ದೂತರುಳ್ಳ ಪರಲೋಕದ ಸಭೆಯೂ ಪರಿಶುದ್ಧ ಐಕ್ಯ ಉಳ್ಳದ್ದಾಗಿ ಪ್ರಕಾಶಿಸುವದು.

8. ಆಗಾಗ್ಯೆ ಅಸ್ತಿವಾರದ ಕಲ್ಲುಗಳಲ್ಲಿಯೂ ಸ್ತಂಭಗಳಲ್ಲಿಯೂ ಹೆಸರುಗಳು ಕೆತ್ತಲ್ಪಟ್ಟಿರುತ್ತವೆ. (ಎಫೆ. ೨. ೨೦. ೨ತಿಮೋ. ೨. ೧೯. ವಚನಗಳ ವ್ಯಾಖ್ಯಾನ ನೋಡ ಬೇಕು.) ಹಾಗೆಯೇ ಪರಮ ಯೆರೂಸಲೇಮಿನ ಹನ್ನೆರಡು ಅಸ್ತಿವಾರದ ಕಲ್ಲುಗಳಲ್ಲಿಯೂ ಪರಮ ಗುರುವಿನ ಹನ್ನೆರಡು ಅಪೊಸ್ತಲರ ಹನ್ನೆರಡು ಹೆಸರುಗಳು ಕೆತ್ತಲ್ಪಟ್ಟಿದ್ದವು. ಇದು ಅಪೊಸ್ತಲರು ಪ್ರವಾದಿಗಳು ಎಂಬವರ ಸತ್ಯೋಪದೇಶವಾದ ಅಸ್ತಿವಾರದ ಮೇಲೆ ಕಟ್ಟಲ್ಪಟ್ಟ ಸಭೆಯಾದದರಿಂದ ಹೀಗೆ ಹೇಳಿ ಇದೆ. ಈ ಮಾಳಿಗೆಗೆ ಕ್ರಿಸ್ತನೇ ಒಂದಾದ ಅಸ್ತಿವಾರವೂ ಮೂಲೇ ಕಲ್ಲೂ ಆಗಿದ್ದಾನೆ.



೧೬ ಅಳತೆ ಮಾಡುವದಕ್ಕೆ, ಚಿನ್ನದ ಕೋಲು ಇತ್ತು. ಆ ಪಟ್ಣವು ಚೌಕವಾಗಿದೆ; ಅದರ ಉದ್ದವು
ಲದಷ್ಟು ಇರುವದು. ಮತ್ತು ಅವನು ಕೋಲಿನಿಂದ ಪಟ್ಣವನ್ನು ಅಳತೆ ಮಾಡಿ, [1]ಹನ್ನೆರಡು ಸಾವಿರ ಸ್ತಾ
೧೭ ಗಳೆಂದು ತಿಳಿದನು. ಅದರ ಉದ್ದವೂ ಅಗಲವೂ ಎತ್ತರವೂ ಸಮವಾಗಿದೆ. ಮತ್ತು ಅದರ ಗೋ
ಯನ್ನು ಅಳತೆ ಮಾಡಿ, ದೂತನಾದ [2]ಮನುಷ್ಯನ ಅಳತೆಯಿಂದ ನೂರ ನಾಲ್ವತ್ತು ನಾಲ್ಕು ಮೊಳಗಳೆಂ
ತಿಳಿದನು.

೧೮ ಮತ್ತು ಅದರ ಗೋಡೆಯ ಶಿಲ್ಪ ಕೆಲಸವು ವಜ್ರದ್ದು; ಮತ್ತು ಪಟ್ಣವು ಶುದ್ಧವಾದ ಗಾಜಿಗೆ ಸಮಾನ
೧೯ ದ ಶುದ್ಧ ಭಂಗಾರವು. ಮತ್ತು ಪಟ್ಣದ ಗೋಡೆಯ ಅಸ್ತಿವಾರಗಳು ಬೆಲೆಯುಳ್ಳ ಸಕಲ ವಿಧವಾದ [3]ಕಲ್ಲಿ
ದ ಅಲಂಕರಿಸಲ್ಪಟ್ಟವುಗಳು. ಮೊದಲನೇ ಅಸ್ತಿವಾರವು ವಜ್ರವು; ಎರಡನೇದು ನೀಲವು; ಮೂರನೇದು ಕೆಂ
೨೦ ನಾಲ್ಕನೇದು ಪಚ್ಚೆಯು; ಐದನೇದು ಸಲೀಮ; ಆರನೇದು ಅಕ್ಕೀಕ; ಏಳನೇದು ಪುಷ್ಯರಾಗ; ಎಂಟನೇ
ಬೆರುಲ್ಲ; ಒಂಭತ್ತನೇದು ತಲುಕುಪಡಿಕ; ಹತ್ತನೇದು ವೈಡೂರ್ಯ; ಹನ್ನೊಂದನೇದು ಗೋಮೇಧಿಕ;
೨೧ ರಡನೇದು ಸುಗಂಧಿ. ಮತ್ತು ಹನ್ನೆರಡು ಬಾಗಲುಗಳು ಹನ್ನೆರಡು ಮುತ್ತುಗಳಾಗಿ, ಒಂದೊಂದು ಬಾ
ಒಂದೊಂದು ಮುತ್ತಿನಿಂದ ಉಂಟಾಗಿದೆ. ಪಟ್ಣದ ಬೀದಿಯು ಥಳಥಳಿಸುವ ಗಾಜಿನಂತಿರುವ ಶುದ್ಧ ಭಂ
ರವು.

೨೨ ಅದರಲ್ಲಿ [4]ಮಂದಿರವನ್ನು ಕಾಣಲಿಲ್ಲ. ಯಾಕಂದರೆ ಸರ್ವಶಕ್ತನಾದ ದೇವರಾಗಿರುವ ಕರ್ತನೂ ಕು
೨೩ ರಿಯೂ ಅದರ ಮಂದಿರವಾಗಿದ್ದಾರೆ. ಮತ್ತು ಪಟ್ಣಕ್ಕೆ ಅದರಲ್ಲಿ ಪ್ರಕಾಶಿಸುವದಕ್ಕೋಸ್ಕರ, ಸೂರ್ಯ
ದರೂ ಚಂದ್ರನಾದರೂ ಅಗತ್ಯವಿಲ್ಲ. ಯಾಕಂದರೆ ದೇವರ ಮಹಿಮೆಯು ಅದಕ್ಕೆ ಬೆಳಕು ಮಾಡಿ
ಕುರಿಮರಿಯೇ ಅದರ ದೀಪವು.

೨೪ ಮತ್ತು ರಕ್ಷಿಸಲ್ಪಡುವವರ ಜನಾಂಗಗಳು ಅದರ ಬೆಳಕಿನಲ್ಲಿ ಸಂಚರಿಸುವರು. [5]ಭೂರಾಜರು ತಮ್ಮ ಪ
೨೫ ಮೆಯನ್ನೂ ಘನವನ್ನೂ ಅದರೊಳಗೆ ತರುವರು. ಮತ್ತು ಅದರ ಬಾಗಲುಗಳು ದಿನವೆಲ್ಲಾ ಮುಚ್ಚ
೨೬ ದೆ ಇರುವವು; ಯಾಕಂದರೆ ಅಲ್ಲಿ [6]ರಾತ್ರಿಯು ಇರುವದಿಲ್ಲ. ಮತ್ತು ಜನಾಂಗಗಳ ಮಹಿಮೆಯನ್ನೂ

---

1. ದೇವದೂತನು ಚಿನ್ನದ ಕೋಲಿನಿಂದ ಪರಿಶುದ್ಧ ಪಟ್ಣವನ್ನು ಅಳೆದದರಲ್ಲಿ ಅದು ಚೌಕವಾಗಿಯೂ, ಹನ್ನೆರಡು ಸಾವಿರ ಸ್ತಾದ್ಯಗಳಾಗಿಯೂ ಇರುವದನ್ನು ಕಂಡನು. ಒಂದೊಂದು ಬಾಗಲಿನ ಮಧ್ಯದಳತೆ ಸಾವಿರ ಸ್ತಾದ್ಯಗಳಾಗಿತ್ತು. ಈ ಅಳತೆಯನ್ನು ಕುರಿತು ಯೋಚಿಸುವಾಗ ಈ ಪಟ್ಣದ ಒಂದೊಂದು ಪಾರ್ಶ್ವವೂ ಹೆಚ್ಚುಕಡಿಮೆ ೪೦೦ ಮೈಲು ಅಳತೆಯುಳ್ಳದ್ದಾಗಿತ್ತೆಂದು ತಿಳಿಯ ಬಹುದು. ಇದರ ಎತ್ತರವು ಸುಮಾರು ೨೦೦ ಅಡಿಗಳ ಅಳತೆಯಾಗಿತ್ತು. ಈ ಪಟ್ಣದ ವಿಸ್ತೀರ್ಣವು ಮೋಕ್ಷಪಟ್ಣದ ವಿಶಾಲಕ್ಕೂ, ಇದರ ಎತ್ತರವು ಮೋಕ್ಷವಾಸಿಗಳ ಭದ್ರತೆಗೂ ಗುರುತಾಗಿದೆ ಎಂಧೇಳ ಬಹುದು.

2. ಈ ಪಟ್ಣವನ್ನು ಅಳೆದ ದೂತನು ಮನುಷ್ಯರು ಪ್ರಯೋಗಿಸುವ ಅಳತೆಯನ್ನೇ ಪ್ರಯೋಗಿಸಿದನು.

3. ಪಟ್ಣದ ಗೋಡೆಗಳ ಅಸ್ತಿವಾರಗಳು ರತ್ನಗಳಿಂದ ಅಲಂಕರಿಸಲ್ಪಟ್ಟದ್ದು ಮಾತ್ರವಲ್ಲ, ಅವು ರತ್ನಗಳಾಗಿಯೇ ಇದ್ದವು. ಅದರ ಬಾಗಲುಗಳು ಹನ್ನೆರಡು ಮುತ್ತುಗಳಾಗಿದ್ದವು.

4. ಭೂಲೋಕದಲ್ಲಿ ಆರಾಧನೆ ನಡಿಸುವದಕ್ಕೆ ಮಂದಿರಗಳು ಇರುವ ಪ್ರಕಾರ, ಆ ಪರಿಶುದ್ಧ ಪಟ್ಣದಲ್ಲಿ ಮಂದಿರವಿಲ್ಲ. ಆ ಪಟ್ಣವೆಲ್ಲಾ ದೇವರ ಸಮುಖವೂ ಮಹಿಮೆಯೂ ತುಂಬಿದ ಮಂದಿರವಾಗಿತ್ತು. ವಿಮೋಚಿಸಲ್ಪಟ್ಟ ಸಭೆಯಾದ ರಾಜಯಾಜಕಟವು ದೇವರ ಸನ್ನಿಧಿಯಲ್ಲಿದ್ದು ಆತನನ್ನು ಆರಾಧಿಸುವರು. ಮಂದಿರವಾದ ಪರಿಶುದ್ಧ ಪಟ್ಣಕ್ಕೆ ಸೂರ್ಯ ಚಂದ್ರರ ಬೆ ಅವಶ್ಯವಿಲ್ಲ. ತಂದೆಯ ಸ್ವರೂಪವಾಗಿಯೂ ಪ್ರತಿಕಾಂತಿಯಯೂ ಇರುವ ಕ್ರಿಸ್ತನು ಅದರ ಬೆಳಕಾಗಿದ್ದಾನೆ.

5. ಘನ ಧನಗಳಲ್ಲಿ ಹೆಸರ್ವಾಶಿಯಾದ ಅರಸರ ಮ ಯನ್ನೆಲ್ಲಾ ಒಂದಾಗಿ ಕೂಡಿಸಿದರೂ, ಆ ಪಟ್ಣದ ಮಹಿಮೆಗೆ ಯಾಗಲಾರದು. ಆಗ ಯೆಶಾಯನು ಪ್ರವಾದಿಸಿದ ಮಹಿಮೆ ಕಾಲವು ಕ್ರಿಸ್ತನ ದಾಸರಾದ ಪವಿತ್ರ ಸಭೆಗೆ ಸಂಪೂರ್ಣವಾಗಿ ವದು. (ಯೆಶಾ. ೬೦. ೩—೧೧.)

6. ಆ ನಿತ್ಯಾನಂದವುಳ್ಳ ಮನೆಯಾದ ಪರಮ ಯೆರೂ ಮಿನಲ್ಲಿ ನಿತ್ಯವಾದ ಹಗಲಿರುವದೇ ಹೊರ್ತು ರಾತ್ರಿಕಾಲವಿ ರದು. ಆದದರಿಂದ ಅದರ ಬಾಗಲುಗಳು ಮುಚ್ಚ ಬೇಕಾದ ಆ ಪಟ್ಣದವರಿಗೆ ದೇವರ ಸಮುಖದಲ್ಲಿ ಶೇರುವ ಶ್ಲಾಘ್ಯವೂ ತನ ಮುಖದರ್ಶನವೂ ಸದಾಕಾಲ ಇರುವದು. ಅದರ ವದೆಲ್ಲಾ ಪರಿಶುದ್ಧವಾಗಿರುವದು. ಬೆಳಕಿನ ಮಕ್ಕಳು ವಾಸ ಡುವ ನಿತ್ಯಲೋಕದಲ್ಲಿ ಅಶುದ್ಧವಾದದ್ದೇನೂ ಪ್ರವೇಶಿ ರದು.

೨೭ ವನ್ನೂ ಅದರೊಳಗೆ ತರುವರು. ಮತ್ತು, ಕುರಿಮರಿಯ ಜೀವದ ಪುಸ್ತಕದಲ್ಲಿ ಬರೆಯಲ್ಪಟ್ಟವರಲ್ಲದೆ, ಹೊಲೆ
ಮಾಡುವಂಥ, ಅಸಹ್ಯವನ್ನೂ ಸುಳ್ಳನ್ನೂ ಮಾಡುವಂಥ ಒಂದಾದರೂ ಅದರೊಳಗೆ ಶೇರುವದಿಲ್ಲ.

22. ಮತ್ತು ದೇವರೂ, [1]ಕುರಿಮರಿಯೂ, ಇವರ ಸಿಂಹಾಸನದೊಳಗಿಂದ ಹೊರಡುವ ಪವಿತ್ರವಾದಂಥ, ಸ್ಫಟಿ
೨ ಕದ ಹಾಗೆ ಪ್ರಕಾಶವಾದಂಥ, [2]ಜೀವದ ನೀರಿನ ನದಿಯನ್ನು ನನಗೆ ತೋರಿಸಿದನು. ಅದರ ಬೀದಿಯ
[3]ಮಧ್ಯದಲ್ಲಿಯೂ, ನದಿಯ ಈಚೆ ಆಚೆಯಲ್ಲಿಯೂ, ತಿಂಗಳು ತಿಂಗಳಿಗೆ ತನ್ನ ಫಲವನ್ನು ಕೊಟ್ಟು, ಹನ್ನೆ
ರಡು ವಿಧವಾದ ಫಲಗಳನ್ನು ಫಲಿಸುವ ಜೀವದ ಮರವು ಇತ್ತು. ಆ ಮರದ ಎಲೆಗಳು [4]ಜನಾಂಗಗಳನ್ನು
ಸ್ವಸ್ಥ ಮಾಡುವದಕ್ಕಾಗಿವೆ.
೩ ಮತ್ತು ಯಾವ [5]ಶಾಪವಾದರೂ ಇನ್ನು ಇರುವದೇ ಇಲ್ಲ. (ಜೆಕ. ೧೪. ೧೧.) ಮತ್ತು ದೇವರು, ಕುರಿ
೪ ಮರಿಯು, ಇವರ [6]ಸಿಂಹಾಸನವು ಅದರೊಳಗಿರುವದು; ಅವನ ದಾಸರು ಅವನನ್ನು ಸೇವಿಸುವರು; ಅವನ
೫ [7]ಮುಖವನ್ನು ನೋಡುವರು; ಅವನ ಹೆಸರು ಅವರ ಹಣೆಗಳ ಮೇಲಿರುವದು. [8]ರಾತ್ರಿಯು ಅಲ್ಲಿ ಇರುವ
ದಿಲ್ಲ, ಮತ್ತು ದೀಪವೂ ಸೂರ್ಯನ ಬೆಳಕೂ ಅವರಿಗೆ ಅಗತ್ಯವಿಲ್ಲ; ಯಾಕಂದರೆ ಕರ್ತನಾದ ದೇವರು ಅವ
ರಿಗೆ ಬೆಳಕು ಕೊಡುತ್ತಾನೆ. ಯುಗಯುಗಾಂತರಗಳ ವರೆಗೂ ಆಳುವರು.

1. ಈ ಸಂಧಿಯ ೧—೫. ವಚನಗಳಲ್ಲಿ ಪರಮ ಯೆರೂಸಲೇಮಿನ ವಿಷಯವಾದ ಸಂಗತಿಗಳುಂಟು. ದೇವರೂ ಕುರಿಮರಿಯೂ ಸಲ್ಲಿಸುವ ಆಳಿಕೆಯೇ ಜೀವಕ್ಕೂ ಮೋಕ್ಷಾನಂದಕ್ಕೂ ಬುಗ್ಗೆಯಾಗಿದೆ.

2. ಆ ಪಟ್ಟಣದಲ್ಲಿ ಸ್ಫಟಿಕದಂತೆ ಪ್ರಕಾಶವೂ ನಿರ್ಮಲವೂ ಆದಂಥ ಜೀವದ ನೀರಿನ ನದಿಯು ಹರಿಯುತ್ತಿತ್ತು. ಅದು ಹರಿದ ಸ್ಥಳಗಳಲ್ಲೆಲ್ಲಾ ಜೀವವೂ ಕ್ಷೇಮವೂ ಉಂಟಾಗಿತ್ತು. (೭. ೧೭. ಉತ್ಪ. ೨. ೧೦. ಕೀರ್ತ. ೪೬. ೪. ಎಜೇಕಿ. ೪೭. ೧—೧೨. ಯೋಹಾ. ೪. ೧೦.)

3. ಆ ಪಟ್ಟಣದ ದೊಡ್ಡ ಬೀದಿಗೂ ಜೀವನದಿಗೂ ಮಧ್ಯದಲ್ಲಿ ಆ ನದಿಯ ಉಭಯ ಪಾರ್ಶ್ವಗಳಲ್ಲಿಯೂ, ಹನ್ನೆರಡು ತಿಂಗಳಿಗೂ ಹನ್ನೆರಡು ವಿಧವಾದ ಫಲಗಳನ್ನು ಕೊಡುವ ಜೀವವೃಕ್ಷವಿತ್ತು. ಆ ಪಟ್ಟಣದ ಮಧ್ಯದಲ್ಲಿ ಒಂದು ನದಿ ಇದ್ದಂತೆಯೂ, ಅದರ ಉಭಯ ಪಾರ್ಶ್ವಗಳಲ್ಲಿ ವೃಕ್ಷಗಳಿದ್ದಂತೆಯೂ ಒಂದೊಂದು ಥಡದಲ್ಲಿಯೂ ಒಂದೊಂದು ದೊಡ್ಡ ಬೀದಿ ಇದ್ದಂತೆಯೂ ಹೇಳಿ ಇದೆ.

4. ಆ ವೃಕ್ಷದ ಫಲದಲ್ಲಿ ಜೀವವಿದ್ದ ಪ್ರಕಾರ, ಅದರ ಎಲೆಗಳಲ್ಲಿಯೂ ಜೀವವಿತ್ತು. ಅದು ಜನಾಂಗಗಳು ಸ್ವಸ್ಥ ಹೊಂದ ತಕ್ಕ ಸಂಜೀವಿಯ ಹಾಗಿತ್ತು. ಆ ಜೀವವೃಕ್ಷದ ಫಲಗಳನ್ನು ತಿಂದು, ಜೀವನದಿಯ ಜಲವನ್ನು ಕುಡಿದವರಿಗೆ ಹಸಿವೆ ದಾಹ ಇರಲಾರದು. ಅವರಿಗೆ ಯಾವಾಗಲೂ ಆರೋಗ್ಯವಾಗಿರುವದು. ಅವರ ಆತ್ಮದ ಜೀವವನ್ನು ಪರಿಪಾಲಿಸುವದಕ್ಕೆ ದೇವರು ನೇಮಿಸಿರುವ ಯತ್ನವು ಮಹಿಮೆಯೂ ಜೀವವೂ ಉಳ್ಳದ್ದಾಗಿರುವದು. (ಎಜೇಕಿ. ೪೭. ೧೨.) ಜೀವನದಿ ಪಟ್ಟಣದ ಮಧ್ಯದಲ್ಲಿಯೂ, ಅದರ ಉಭಯ ಪಾರ್ಶ್ವಗಳಲ್ಲಿ ಜೀವವೃಕ್ಷಗಳೂ ಇದ್ದದರಿಂದ ಅದರ ಪ್ರಜೆಗಳು ಅವುಗಳ ಬಳಿಗೆ ಧಾರಾಳವಾಗಿ ಬರಲೂ, ಅವುಗಳನ್ನು ಧಾರಾಳವಾಗಿ ಅನುಭವಿಸಲೂ ಅನುಕೂಲ ಉಂಟು. ಏಡೆನ್ ತೋಟದಲ್ಲಿ ನಾಲ್ಕು ನದಿಗಳೂ ಜೀವವೃಕ್ಷವೂ ಇದ್ದ ಪ್ರಕಾರ, ಪರಮ ಯೆರೂಸಲೇಮಿನಲ್ಲಿಯೂ ಇರುವದು. ಅದರ ಪ್ರಜೆಗಳು ಎಂದೂ ಸಾಯದಂಥ ವರವುಳ್ಳವರಾಗಿ ಚಿರಂಜೀವಿಗಳಾಗಿರುವರು.

5. ಪಾಪದಿಂದ ಬಂದ ಶಾಪ ಮುಂತಾದ ಕೇಡುಗಳೆಲ್ಲಾ ಸಂಪೂರ್ಣವಾಗಿ ನಿವರ್ತಿಯಾಗುವವು. (ಉತ್ಪ. ೩. ೧೭.) ದೇವರು ಆ ಹೊಸ ಲೋಕವನ್ನು ನೋಡುವಾಗ, ಸಕಲವೂ ತನ್ನ ದಿವ್ಯ ಚಿತ್ತಕ್ಕೆ ಅನುಕೂಲವಾಗಿ ಒಳ್ಳೇದಾಗಿಯೂ ಸಮರ್ಪಕವಾಗಿಯೂ ಇರುವದು.

6. ತಂದೆಗೂ ಮಗನಿಗೂ ಒಂದೇ ಸಿಂಹಾಸನವಿರುವದು. ತಂದೆಯ ಹಾಗೆ ಮಗನು ಸಹ ಆ ಪರಮ ಸಿಂಹಾಸನದಲ್ಲಿ ಆಸೀನನಾಗಿದ್ದು, ಪರಮ ಸಭೆಯ ಸ್ತುತಿಯನ್ನೂ ಸೇವೆಯನ್ನೂ ಹೊಂದುತ್ತಾ ಇರುವನು.

7. (ಮತ್ತಾ. ೫. ೮.) ಅವರು ಆತನ ಹೆಸರನ್ನು ತಮ್ಮ ಹಣೆಗಳಲ್ಲಿ ಧರಿಸಿರುವದೇ ಆತನ ಸೇವಕರೆಂಬುವದಕ್ಕೆ ಗುರುತಾಗಿದೆ. (೭. ೩.) ಅವರು ಯಾವಾಗಲೂ ಸಿಂಹಾಸನದಲ್ಲಿ ಕುಳಿತಿರುವ ದೇವರ ಸಮುಖವನ್ನು ದರ್ಶಿಸಿ, ಆತನ ಪ್ರಕಾಶದಲ್ಲಿ ಮಹಿಮೆಯಾಗಿ ಕಾಣಿಸುವರು. ಅವರ ಸೇವೆ ಎಂಥಾದ್ದಾಗಿರುವದೋ ತಿಳಿಯಲಿಲ್ಲ. ಆದಾಗ್ಯೂ ಅದು ಅವರ ಮನಸ್ಸನ್ನು ಪರವಶ ಮಾಡ ತಕ್ಕದ್ದಾಗಿರುವದು.

8. ಪರಂಜ್ಯೋತಿಯ ಸಮುಖದಲ್ಲಿದ್ದು ಆತನ ಮುಖವನ್ನು ದರ್ಶಿಸುವವರಿಗೆ ರಾತ್ರಿಕಾಲವಿರದು. (೨೧. ೨೪. ವಚನದ ವ್ಯಾಖ್ಯಾನ ನೋಡ ಬೇಕು.) ಸೃಷ್ಟಿಸಲ್ಪಡದ ಬೆಳಕಾದ ದೇವರ ಬೆಳಕಿನಲ್ಲಿರುವವರು ತಮ್ಮ ನಾಯಕನಾದ ಕ್ರಿಸ್ತನ ಸಂಗಡ ಸದಾಕಾಲವಾಗಿ ಆಳುವರು. ಆ ಪರಮ ಮನೆಯ ಮಹಿಮೆಯನ್ನು ಈಗ ನಮ್ಮ ಮನಸ್ಸಿನಿಂದ ಗ್ರಹಿಸಲಸಾಧ್ಯವಾಗಿದೆ. ಆ ಪರಮ ಮನೆಯಲ್ಲಿ ಶೇರಿ ಅನುಭವಿಸುವಾಗಲೇ ಅದರ ಆನಂದವು ಸಂಪೂರ್ಣವಾಗಿ ತಿಳಿಯುವದು.



ಕಡೇ ಬೋಧನೆ; ಕರಿಯುವಿಕೆ.

೬ [1]ಮತ್ತು ಅವನು ನನಗೆ ಹೇಳಿದ್ದು, ಈ ವಾಕ್ಯಗಳು ನಂಬಿಕೆಯೂ ಸತ್ಯವೂ ಆಗಿವೆ. ಮತ್ತು ಪ
ಪ್ರವಾದಿಗಳ ದೇವರಾಗಿರುವ ಕರ್ತನು, ತ್ವರೆಯಾಗಿ ಆಗ ಬೇಕಾದವುಗಳನ್ನು ತನ್ನ ದಾಸರಿಗೆ ತೋ
೭ ದಕ್ಕೆ, ತನ್ನ ದೂತನನ್ನು ಕಳುಹಿಸಿದ್ದಾನೆ. ಇಗೋ, ಬೇಗ ಬರುತ್ತೇನೆ. [2]ಈ ಪುಸ್ತಕದ ಪ್ರವಾ
ವಾಕ್ಯಗಳನ್ನು ಕೈಕೊಳ್ಳುವವನು ಭಾಗ್ಯವಂತನು.
೮ ಯೋಹಾನನೆಂಬ ನಾನು ಇವುಗಳನ್ನು ನೋಡಿ, ಕೇಳಿದೆನು. ಅವುಗಳನ್ನು ಕೇಳಿ ನೋಡಿದ ಮೇಲೆ,
೯ ಗಳನ್ನು ನನಗೆ ತೋರಿಸಿದ ದೂತನ ಪಾದಗಳ ಮುಂದೆ [3]ನಮಸ್ಕರಿಸುವದಕ್ಕೆ ಬಿದ್ದೆನು. ಆಗ ಅವನ
ಗೆ ಹೇಳಿದ್ದು, ಬೇಡವೇ ಬೇಡ; ಯಾಕಂದರೆ ನಿನಗೂ ನಿನ್ನ ಸಹೋದರರಾದ ಪ್ರವಾದಿಗಳಿಗೂ, ಈ
ಕದ ವಾಕ್ಯಗಳನ್ನು ಕೈಕೊಳ್ಳುವವರಿಗೂ, ಜತೆದಾಸನಾಗಿದ್ದೇನೆ; ದೇವರಿಗೆ ನಮಸ್ಕರಿಸು.
೧೦ ಮತ್ತು ನನಗೆ ಹೇಳಿದ್ದು, ಈ ಪುಸ್ತಕದ ಪ್ರವಾದನೆಯ ವಾಕ್ಯಗಳಿಗೆ [4]ಮುದ್ರೆ ಹಾಕ ಬೇಡ; ಯಾಕ
೧೧ ಸಮಯವು ಸಮೀಪವಾಗಿದೆ. [5]ಅನ್ಯಾಯ ಮಾಡುವವನು ಇನ್ನೂ ಅನ್ಯಾಯ ಮಾಡಲಿ. ಮೈಲಿ
ವನು ಇನ್ನೂ ಮೈಲಿಗೆಯಾಗಿರಲಿ. ನೀತಿವಂತನು ಇನ್ನೂ ನೀತಿವಂತನಾಗಿರಲಿ. ಪರಿಶುದ್ಧನು ಇನ್ನೂ
ದ್ಧನಾಗಿರಲಿ.

1. ಇಲ್ಲಿಗೆ ಪರಮ ದರ್ಶನಗಳೆಲ್ಲಾ ಮುಗಿದು ಹೋದದರಿಂದ ಯೋಹಾನನೆಂಬವನು ಕಂಡದ್ದೂ ಕೇಳಿದ್ದೂ ಆದ ವಿಷಯಗಳೆಲ್ಲಾ ನಿಶ್ಚಯವಾಗಿ ಸಂಭವಿಸುವವೆಂದೂ, ಅವುಗಳನ್ನು ಕೈಕೊಳ್ಳುವವರಿಗೆ ಭಾಗ್ಯ ಉಂಟಾಗುವದೆಂದೂ, ದೇವದೂತನು ಯೋಹಾನನಿಗೆ ತಿಳಿಸಿದನು. (೬, ೭. ವ.) ಯೋಹಾನನು ಮುಂಚಿನ ಹಾಗೆ ದೇವದೂತನಿಗೆ ನಮಸ್ಕರಿಸ ಹೋದದರಿಂದ ತಿರಿಗಿ ತಡೆಯಲ್ಪಟ್ಟನು. (೮, ೯. ವ.) ಈ ಪ್ರವಾದನೆಗಳು ಈಡೇರುವ ಕಾಲವು ಸಮೀಪವಾಗಿರುವದರಿಂದಲೂ ಸನ್ಮಾರ್ಗರನ್ನೂ ದುರ್ಮಾರ್ಗರನ್ನೂ ವಿಂಗಡಿಸಿ, ಅವರವರ ಕ್ರಿಯೆಗಳಿಗೆ ತಕ್ಕ ಸುಖದುಃಖಗಳನ್ನು ಕೊಡುವದಕ್ಕೆ ಕರ್ತನು ಪ್ರಸನ್ನನಾಗುವ ಕಾಲವು ಸಮೀಪವಾಗಿರುವದರಿಂದಲೂ, ಅವುಗಳನ್ನು ಬಚ್ಚಿಡ ಬಾರದೆಂದು ಕಟ್ಟಳೆಯಾಯಿತು. (೧೦—೧೬. ವ.) ಈ ಗ್ರಂಥದ ಕಡೆಯಲ್ಲಿ ಪ್ರೀತಿಯ ಕರೆಯುವಿಕೆಯೂ, ಮುಖ್ಯವಾದ ಎಚ್ಚರಿಕೆಯೂ, ವಾಗ್ದತ್ತವೂ, ಪ್ರಾರ್ಥನೆಯೂ, ಆಶೀರ್ವಾದವೂ ಅಡಕವಾಗಿವೆ. (೧೭—೨೧. ವ.)

2. ಇದು ದೇವರ ಮಗನಾದ ಯೇಸು ಕ್ರಿಸ್ತನ ಪರಿಶುದ್ಧ ವಾಕ್ಯವು. ಆತನು ತನ್ನ ತಂದೆಯಿಂದ ಹೊಂದಿದ್ದೂ, ಯೋಹಾನನಿಗೆ ತಿಳಿಸುವದಕ್ಕೆ ದೂತನಿಗೆ ಅಪ್ಪಣೆ ಕೊಟ್ಟದ್ದೂ, ಆದ ದಿವ್ಯ ಪ್ರಕಟಣೆಯನ್ನು ತನ್ನ ಸ್ವಂತ ಮುದ್ರೆಯಿಂದ ಮುದ್ರೆ ಹಾಕುತ್ತಾನೆ. ಇಗೋ, ಬೇಗ ಬರುತ್ತೇನೆ ಎಂಬ ವಚನವು ಈ ಸಂಧಿಯಲ್ಲಿ ಮೂರು ಸಾರಿ ಬರುತ್ತದೆ. (೧೨, ೨೦. ವ.) ರಾತ್ರಿ ಹಗಲು ಆಶೆಯಿಂದ ಎದುರು ನೋಡುತ್ತಿರುವ ಪವಿತ್ರ ಸಭೆಗೆ ಇದು ಆನಂದವನ್ನು ಉಂಟು ಮಾಡ ತಕ್ಕ ಸಮಾಚಾರವಾಗಿದೆ. ಇದನ್ನು ಹೇಳಿದ ಕೂಡಲೇ ಈ ಗ್ರಂಥದಲ್ಲಿರುವ ಕಟ್ಟಳೆಗಳನ್ನು ಕೈಕೊಳ್ಳುವವರಿಗೆ ಬರುವ ಆಶೀರ್ವಾದ ಹೇಳಿ ಇದೆ. ಇದರಿಂದ ಈ ಗ್ರಂಥದ ಪ್ರಾಮುಖ್ಯತ್ವವು ಚನ್ನಾಗಿ ತೋರುತ್ತದೆ. (೧. ೩.)

3. ೧೯. ೧೦. ವಚನದ ವ್ಯಾಖ್ಯಾನ ನೋಡ ಬೇಕು.

4. ಇದು ಕ್ರಿಸ್ತನು ಹೇಳಿದ ಕಡೇ ಮಾತು. ಇನ್ನು ಆತನು ತನ್ನ ಮಹಿಮೆಯ ಸಂಗಡ ಮೇಘಗಳಲ್ಲಿ ಬರುವ ಆತನ ಮಾತುಗಳನ್ನು ಕೇಳ ತಕ್ಕದ್ದು. ದಾನಿಯೇಲನು ದರ್ಶನಗಳಿಗೆ ಮುದ್ರೆ ಹಾಕುವದಕ್ಕೆ ಅಪ್ಪಣೆಯಾಯಿತು. (೧೨. ೯.) ಯೋಹಾನನು ಕಂಡ ದರ್ಶನಗಳಿಗೆ ಮುದ್ರೆ ಬೇಡವೆಂದು ಅಪ್ಪಣೆಯಾಯಿತು. (೧೦. ೪. ವಚನದ ವ್ಯಾ ನೋಡ ಬೇಕು.) ಇದು ಯೋಹಾನನ ಕಾಲದಿಂದ ಲೋ ತ್ಯದ ಮಟ್ಟಿಗೂ ತಿರುಸಭೆಯ ಚರಿತ್ರೆಯನ್ನು ತೋರಿಸುವ ಹಾಗಿರುವದರಿಂದ ಇದಕ್ಕೆ ಮುದ್ರೆ ಹಾಕ ಅವಶ್ಯವಿಲ್ಲ. (೧ ೧೯. ವಚನಗಳ ವ್ಯಾಖ್ಯಾನ ನೋಡ ಬೇಕು.)

5. ಈ ವಚನವು, ನ್ಯಾಯತೀರ್ವಿಕೆಯ ತರುವಾಯ ಯ ಸ್ಥಿತಿಯೂ ಮಾರ್ಪಡುವದಿಲ್ಲವೆಂಬುವದಕ್ಕೆ ಆಧಾರವಾಗಿ ಬುವದು ಸಾಧಾರಣ ಅಭಿಪ್ರಾಯವಾಗಿದೆ. ಆದಾಗ್ಯೂ ದಾನಿ. ೧೨. ೧೦. ವಚನಕ್ಕೆ ವಿವರಣೆಯ ಹಾಗಿದೆ. ಪಾಪ ನೆಲೆಯಾಗಿರುವ ಅಪಭಕ್ತರಿಗೆ ಸಂಭವಿಸುವ, ಬದಲಾಗದ ಯನ್ನು ತೋರಿಸಿ, ಅವರನ್ನು ಎಚ್ಚರಿಸಿ ಇದೆ. ಮತ್ತು ಅತಿ ವಾಗಿ ಕರ್ತನು ಪ್ರಸನ್ನನಾಗುವ ಕಾಲದಲ್ಲಿ ಭಕ್ತರಿಗುಂಟಾ ರಕ್ಷಣೆಯಿಂದ ಅವರು ಕಡೇ ಮಟ್ಟಿಗೂ ದೃಢವಾಗಿ ನಡಿ ವಂತೆ ಆಜ್ಞಾಪಿಸಿ ಇದೆ. ಗೋಧಿಯನ್ನೂ ಜೂದರೆಯನ್ನೂ ಕ ಸಾಮ್ಯದಲ್ಲಿ ಕೊಯ್ಯುವ ಕಾಲದ ಮಟ್ಟಿಗೂ ಎರಡನ್ನೂ ಬೆ ಬಿಡಿರಿ ಎಂದು ಹೇಳಿರುವದಕ್ಕೆ ಇದು ತಕ್ಕ ವ್ಯಾಖ್ಯಾನವಾ ಪಾಪ ಮಾಡುವವನೂ ಪುಣ್ಯ ಮಾಡುವವನೂ ಸ್ವಲ್ಪ ಮಾತ್ರ ಮಾಡ ಕೂಡುವದು. ಬಿತ್ತುವ ಕಾಲ ಬೇಗನೆ ಕೊಯ್ಯುವ ಕಾಲ ಬರುವದು. ಆಗ ಮಾಂಸಕ್ಕೆ ಬಿತ್ತಿದ ನಾಶನವನ್ನೂ, ಆತ್ಮಕ್ಕೆ ಬಿತ್ತಿದವರು ನಿತ್ಯಜೀವವನ್ನೂ ಕೊಂ ವರು. (ಗಲಾ. ೬. ೮.)

೧೨ [1]ಇಗೋ, ಬೇಗ ಬರುತ್ತೇನೆ; ಮತ್ತು ಒಬ್ಬೊಬ್ಬನಿಗೆ ಅವನವನ ಕ್ರಿಯೆಯು ಇರುವ ಪ್ರಕಾರವೇ ಕೊಡು
೧೩ ವದಕ್ಕೆ, ನನ್ನ ಪ್ರತಿಫಲವು ನನ್ನ ಸಂಗಡ ಇರುತ್ತದೆ. ನಾನು ಅಕಾರವೂ ಓಕಾರವೂ, ಆದಿಯೂ ಅಂತ್ಯವೂ,
ಮೊದಲಿನವನೂ ಕಡೆಯವನೂ, ಆಗಿದ್ಧೇನೆ.

೧೪ ಜೀವದ ಮರದ ಮೇಲೆ ಅವರಿಗೆ ಅಧಿಕಾರವು ಇರುವ ಹಾಗೆಯೂ, ಬಾಗಲುಗಳಿಂದ ಪಟ್ಣದಲ್ಲಿ ಪ್ರವೇಶಿ
೧೫ ಸುವ ಹಾಗೆಯೂ, ಅವನ ಕಟ್ಟಳೆಗಳನ್ನು ಮಾಡುವವರು [2]ಭಾಗ್ಯವಂತರು. ಆದರೆ [3]ನಾಯಿಗಳೂ,
ಶೂನ್ಯಗಾರರೂ, ಜಾರರೂ, ಕೊಲೆಗಾರರೂ, ವಿಗ್ರಹಾರಾಧಕರೂ, ಸುಳ್ಳನ್ನು ಪ್ರೀತಿ ಮಾಡಿ ನಡಿಸುವವರೆ
೧೬ ಲ್ಲರೂ ಹೊರಗೆ ಇದ್ದಾರೆ. ಸಭೆಗಳಲ್ಲಿ ಇವುಗಳ ಸಾಕ್ಷಿಯನ್ನು ನಿಮಗೆ ಹೇಳುವ ಬಗ್ಯೆ, ಯೇಸುವೆಂಬ
ನಾನು ನನ್ನ ದೂತನನ್ನು ಕಳುಹಿಸಿದ್ಧೇನೆ. ನಾನು [4]ದಾವೀದನ ಬೇರೂ, ಸಂತತಿಯೂ, ಉದಯದ ಪ್ರಕಾ
ಶವಾದ [5]ನಕ್ಷತ್ರವೂ, ಆಗಿದ್ಧೇನೆ.

೧೭ [6]ಆತ್ಮವೂ ಮದಲಗಿತ್ತಿಯೂ, ಬಾ, ಅನ್ನುತ್ತಾರೆ. [7]ಕೇಳುವವನು, ಬಾ, ಅನ್ನಲಿ. [8]ದಾಹವುಳ್ಳವನು ಬರಲಿ.
ಬೇಕಾದವನು ಜೀವದ ನೀರನ್ನು ಉಚಿತವಾಗಿ ತಕ್ಕೊಳ್ಳಲಿ.

1. ಇದು ಕ್ರಿಸ್ತನು ತನ್ನ ಬರುವಿಕೆಯನ್ನು ಕುರಿತು ಎರಡನೇ ಸಾರಿ ಹೇಳಿದ ವಾಕ್ಯವಾಗಿದೆ. ಇದರ ತರುವಾಯ ಕ್ರಿಸ್ತನ ಭಕ್ತರಿಗೆ ಉಂಟಾಗುವ ಭಾಗ್ಯವನ್ನು ಕುರಿತು ಶ್ರೇಷ್ಠ ವಾಗ್ದತ್ತವು ಬರುತ್ತದೆ. ಅವರವರ ಕ್ರಿಯೆಗಳಿಗೆ ತಕ್ಕ ಫಲವು ಬಾರದೆ ಹೋಗದು. ಕರ್ತನ ಹೆಸರಿನಲ್ಲಿ ಒಂದು ಪಂಚಪಾತ್ರೆ ತಣ್ಣೀರು ಕೊಟ್ಟವನು ಸಹ ತನ್ನ ಫಲವನ್ನು ಕಳಕೊಳ್ಳನು. ಸರ್ವಜ್ಞನೂ ಸರ್ವವ್ಯಾಪಕನೂ ನಿತ್ಯನೂ ಆದ ಯೇಸು ಸ್ವಾಮಿಯು ಅವನವನಿಗೆ ತಕ್ಕ ಪ್ರತಿಫಲವನ್ನು ತಕ್ಕೊಂಡು ಬರುವಾಗ, ಭಕ್ತನಿಗೆ ಫಲವಿಲ್ಲದೆ ಹೋಗದು.

2. ಈ ಉಪದೇಶವು ೧ ಯೋಹಾ. ೩. ೨೩ಲ್ಲಿರುವ ಉಪದೇಶಕ್ಕೆ ಸಮವಾಗಿದೆ. ಅಶುದ್ಧವಾದದ್ದು ಏನೂ ಪ್ರವೇಶಿಸ ಕೂಡದಂಥ ಬಾಗಲುಗಳಿಂದ ಪರಿಶುದ್ಧ ಪಟ್ಣದಲ್ಲಿ ಪ್ರವೇಶಿಸುವವರಿಗೆ ಮಾತ್ರ ಜೀವವೃಕ್ಷದ ಫಲಗಳನ್ನು ಅನುಭವಿಸುವ ಅಧಿಕಾರ ಉಂಟು. ದೇವರ ಕಟ್ಟಳೆಗಳನ್ನು ಅನುಸರಿಸಿ ಪರಿಶುದ್ಧರಾಗಿ ನಡಿಯುವವರಿಗೆ ಮಾತ್ರ (ಯೆಶಾ. ೨೬. ೧, ೨ಲ್ಲಿ) ಇರುವ ವಾಗ್ದತ್ತದ ಪ್ರಕಾರ ತಿರುಸಭೆಯ ಆಶೀರ್ವಾದಗಳೂ ಪರಮ ಸಭೆಯ ಮೇಲುಗಳೂ ಸಂಪೂರ್ಣವಾಗಿ ಉಂಟಾಗುವವು.

3. ಕ್ರಿಸ್ತನು ದೇವಭಕ್ತರಿಗೆ ಬರುವ ಮಹಾ ಆನಂದವನ್ನು ಕಡೇ ಸಾರಿ ಹೇಳಿ, ಅಪಭಕ್ತರಿಗೆ ಸಂಭವಿಸುವ ನಿತ್ಯವಾದ ದೌರ್ಭಾಗ್ಯವನ್ನು ಕುರಿತು ಭಯಂಕರ ವಿಧವಾಗಿ ಹೇಳುತ್ತಾನೆ. ನಾಯಿಯ ಅಶುದ್ಧ ಗುಣವುಳ್ಳವರೂ, ಶೂನ್ಯಗಾರರಾದ ಕಪಟಿಗಳೂ, ಜಾರರಾದ ಅಪಭಕ್ತರೂ, ಕೊಲೆಗಾರರಾದ ಕ್ರೂರರೂ, ವಿಗ್ರಹಾರಾಧಕರಾದ ದೇವದ್ರೋಹಿಗಳೂ, ಸುಳ್ಳನ್ನು ಪ್ರೀತಿ ಮಾಡಿ ನಡಿಸುವ ವಂಚಕರೂ, ಆ ಪರಿಶುದ್ಧ ಪಟ್ಣದಲ್ಲಿ ಪ್ರವೇಶಿಸದೆ, ಅದಕ್ಕೆ ಹೊರಗೆ ಇರುವ ಕಾರ್ಗತ್ತಲೆಯಲ್ಲಿ ಎಂದೆಂದಿಗೂ ಬಿದ್ದಿರುವರು.

4. ದೈವತ್ವದ ಪ್ರಕಾರ ದಾವೀದನ ಬೇರೂ, ಮನುಷ್ಯತ್ವದ ಪ್ರಕಾರ ದಾವೀದನ ಸಂತತಿಯೂ, ನಿತ್ಯವೆಂಬ ಹಗಲಿಗೆ ಪ್ರಕಾಶವುಳ್ಳ ಉದಯದ ನಕ್ಷತ್ರವೂ ಆಗಿರುವ ಕ್ರಿಸ್ತನು ತನ್ನ ದೂತನಿಂದ ಸಭೆಗೆ ಹೇಳಿದ ಸತ್ಯಗಳನ್ನು ತಾನೇ ದೃಢ ಪಡಿಸುತ್ತಾನೆ. ಇದು, ಈ ಗ್ರಂಥದಲ್ಲಿರುವ ಪ್ರವಾದನೆಯು ದೇವರ ಮಾರ್ಪಡದ ಸತ್ಯವೆಂದು ಮುದ್ರೆಯ ಮೇಲೆ ಮುದ್ರೆ ಹಾಕಿದ ಹಾಗಿದೆ.

5. ಲೋಕದ ರಾಜ್ಯಗಳೂ ರಾಜವಂಶಗಳೂ ಸಮೂಲವಾಗಿ ನಾಶವಾದ ತರುವಾಯ ದಾವೀದನ ಬೇರೂ ಸಂತತಿಯೂ ಆದ ಕ್ರಿಸ್ತ ಮಹಾರಾಜನು ತನ್ನ ಸಿಂಹಾಸನದ ಮೇಲೆ ಕೂತಿರುವನು. ಆತನ ರಾಜ್ಯದ ಮಹಿಮೆ ಎಂದಿಗೂ ಕುಂದದು. ಆದದರಿಂದ ಅತಿ ಶೀಘ್ರವಾಗಿ ಸ್ಥಾಪಿಸಲ್ಪಡುವ ಆತನ ರಾಜ್ಯಭಾರದಲ್ಲಿ ಎಲ್ಲರೂ ಬಂದು ಪೂರ್ಣ ಭಾಗ್ಯವನ್ನು ಹೊಂದುವ ಹಾಗೆ ಕರೆಯಲ್ಪಡುತ್ತಾರೆ. (೧೭, ೨೦. ವ.)

6. ಪರಿಶುದ್ಧಾತ್ಮನು ಮದಲಗಿತ್ತಿಯಾದ ಸಭೆಯ ಮೂಲಕವಾಗಿ ಭಕ್ತರ ಅಂತರ್ಯದಲ್ಲಿ ಹುಟ್ಟಿಸುವ ವಾಂಛೆಯಿಂದ, ಬಾ! ಅನ್ನುತ್ತಾನೆ. ಇದು ಸಭೆಯು ಕ್ರಿಸ್ತನನ್ನು ತನ್ನ ಪರಮ ಮಹಿಮೆಯೊಂದಿಗೆ ಅತಿ ಶೀಘ್ರವಾಗಿ ಬರುವಂತೆ ಕರೆಯುವದನ್ನು ಕುರಿತದ್ದೆಂದೂ, ಪರಿಶುದ್ಧಾತ್ಮನೂ ಸಭೆಯೂ ಮನುಷ್ಯಮಕ್ಕಳೆಲ್ಲರನ್ನು ರಕ್ಷಕನ ಬಳಿಗೆ ಬರುವಂತೆ ಕರೆಯುವದನ್ನು ಕುರಿತದ್ದೆಂದೂ, ವಿದ್ವಾಂಸರು ಉಭಯಾರ್ಥವಾಗಿ ತಾತ್ಪರ್ಯ ಹೇಳುತ್ತಾರೆ. ಕೇಳುವವನು, ಬಾ! ಅನ್ನಲಿ, ಎಂದು ಹೇಳಿರುವದರಿಂದ ಇದು ದೇವರು ಮನುಷ್ಯರನ್ನು ಕರೆಯುವ ಕರೆಯುವಿಕೆ ಎಂದು ತೋರುತ್ತದೆ. ಈ ಸುಕೃತವೂ ಉಚಿತವೂ ಆದ ಕರೆಯುವಿಕೆ ಈ ಗ್ರಂಥದ ಕಡೆಯಲ್ಲಿರುವದು ಅತಿಶಯವಾದ ಕರುಣೆ ಜ್ಞಾನಗಳನ್ನು ತೋರಿಸುತ್ತದೆ.

7. ಈ ದಿವ್ಯ ಕರೆಯುವಿಕೆಯನ್ನು ಕೇಳಿ ಅಂಗೀಕರಿಸುವವನು ಕ್ರಿಸ್ತನನ್ನು ತನ್ನ ಪರಮ ಮಹಿಮೆಯೊಂದಿಗೆ ಬರುವಂತೆ ಭಕ್ತಿವಿನಯದಿಂದ ಕರೆಯುತ್ತಾನೆ. ಮತ್ತು ತನ್ನ ಸ್ನೇಹಿತರೆಲ್ಲರನ್ನು ಆ ಪರಮ ಪಟ್ಣಕ್ಕೆ ತನ್ನ ಸಂಗಡ ಬರ ಬೇಕೆಂದು ಕರೆಯುತ್ತಾನೆ. (ಯೋಹಾ. ೪. ೧೦; ೭. ೩೭.)

8. ಪೂರ್ವ ಪ್ರವಾದಿಯಾದ ಯೆಶಾಯನು ದೇವರ ಹೆಸರಿನಿಂದ ಮನುಷ್ಯರನ್ನು ಕರೆದ ಕರೆಯುವಿಕೆ ವೇದದ ಕಡೇ ಪತ್ರದಲ್ಲಿ ಬಲವಾದ ಶಬ್ದದಿಂದ ತಿರಿಗಿ ಧ್ವನಿ ಗೈಯುತ್ತದೆ. (ಯೆಶಾ. ೫೫. ೧.) ಆತ್ಮದ ದಾಹವೂ ಬಳಲಿಕೆಯೂ ತೀರ ಬೇಕಾದರೆ, ಜೀವದ ಬುಗ್ಗೆಯಾದ ಕ್ರಿಸ್ತನ ಬಳಿಗೆ ಬರ ಬೇಕು. ಎಲ್ಲರೂ ಧಾರಾಳವಾಗಿ ಬರ ಬಹುದು. ತಡೆಯೇನೂ ಇಲ್ಲ.



೧೮ ಈ ಪುಸ್ತಕದ ಪ್ರವಾದನೆಯ ವಾಕ್ಯಗಳನ್ನು ಕೇಳುವ ಪ್ರತಿ ಮನುಷ್ಯನಿಗೆ ನಾನು ಸಾಕ್ಷಿ ಹೇಳುವದೇನ
ದರೆ, ಒಬ್ಬನು ಇವುಗಳಿಗೆ ಹೆಚ್ಚು ಮಾತು ಕೂಡಿಸಿದರೆ, ದೇವರು ಈ ಪುಸ್ತಕದಲ್ಲಿ ಬರೆದಿರುವ ಬಾಧೆಗಳನ
೧೯ ಅವನ ಮೇಲೆ ಕೂಡಿಸಿಡುವನು. ಮತ್ತು ಒಬ್ಬನು ಈ ಪ್ರವಾದನೆಯ ಪುಸ್ತಕದ ವಾಕ್ಯಗಳಿಂದ ಏ
ದರೂ ತೆಗೆದು ಹಾಕಿದರೆ, [1]ದೇವರು ಜೀವದ ಪುಸ್ತಕದಿಂದಲೂ, ಪರಿಶುದ್ಧ ಪಟ್ಣದಿಂದಲೂ, ಈ ಪುಸ್ತಕದ
ಬರೆದಿರುವವುಗಳಿಂದಲೂ, ಅವನ ಪಾಲನ್ನು ತೆಗೆದು ಹಾಕುವನು.

೨೦ ಇವುಗಳಿಗೆ ಸಾಕ್ಷಿಯಾದವನು ಹೇಳುತ್ತಾನೆ—ಹೌದು, [2]ಬೇಗ ಬರುತ್ತೇನೆ; ಆಮೆನ್. ಹೌದು, [3]ಕರ್ತ
ನಾದ ಯೇಸುವೇ, ಬಾ.

೨೧ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು [4]ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

1. ದೇವರ ಕೃಪಾಭರಿತವಾದ ಕರೆಯುವಿಕೆಯ ತರುವಾಯ ಭಯಂಕರವಾದ ಎಚ್ಚರಿಕೆ ಬರುತ್ತದೆ. ದೇವರ ನಿರ್ಣಯಗಳಿಗೆ ಅನುಸಾರವಾದ ಪ್ರವಾದನೆಗಳುಳ್ಳ ವೇದಗ್ರಂಥಕ್ಕೆ ಒಂದನ್ನು ಕೂಡಿಸಿದರೂ, ಒಂದನ್ನು ತೆಗೆದು ಹಾಕಿದರೂ, ಮಹಾ ಮೋಸ ಬರುವದೆಂದು ಇದರಿಂದ ಪ್ರತ್ಯಕ್ಷವಾಗಿದೆ. ಕಲ್ಪನಾಶಕ್ತಿಯುಳ್ಳವರು ದೇವರ ಹೆಸರಿನಿಂದ ಸುಳ್ಳು ಮತಗಳನ್ನು ಸ್ಥಾಪಿಸುವದೂ, ದೇವರ ವಾಕ್ಯಕ್ಕೆ ಅವರವರು ತಮ್ಮ ತಮ್ಮ ಸ್ವಂತ ಇಷ್ಟದ ಪ್ರಕಾರ ಅರ್ಥ ಹೇಳುವದೂ, ಸಾಧಾರಣವಾಗಿದೆ. ಎರಡನೇ ಶತಾಬ್ದದಲ್ಲಿ ಅಪೊಸ್ತಲರ ಹೆಸರಿನಿಂದ ಅನೇಕ ಮತಗ್ರಂಥಗಳು ಪ್ರಕಟಿಸಲ್ಪಟ್ಟವು. ಯೋಹಾನನ ಪ್ರಕಟಣೆಯ ಹಾಗೆ ಪೇತ್ರ, ಪೌಲ, ತೋಮಾ ಮುಂತಾದ ಅಪೊಸ್ತಲರ ಹೆಸರಿನಿಂದ ಪ್ರಕಟಣೆ ಎಂಬ ಕೆಲವು ಗ್ರಂಥಗಳು ಜನರಲ್ಲಿ ಬಳಿಕೆಯಾಗಿದ್ದವು. ಇಂಥಾ ಸುಳ್ಳು ಗ್ರಂಥಗಳನ್ನು ಏರ್ಪಡಿಸಿದವರಿಗೂ, ಸತ್ಯಮಾರ್ಗವನ್ನು ಬದಲು ಮಾಡಿ, ತಮ್ಮ ಅಭಿಪ್ರಾಯಗಳಿಗೆ ಅನುಕೂಲವಾಗುವಂತೆ ಹೆಚ್ಚು ಕೂಡಿಸಿ, ಅಥವಾ ತೆಗೆದು ಹಾಕುವವರಿಗೆ ಭಯಂಕರವಾದ ದಂಡನೆ ಬರುವದು. ಒಡಂಬಡಿಕೆಯ ಪೆಟ್ಟಿಗೆಯನ್ನು ತೃಣೀಕರವಾಗಿ ಹಿಡಿದ ಉಜ್ಜನಿಗೆ ತಕ್ಷಣವೇ ಮರಣ ಪ್ರಾಪ್ತಿಸಿದ ಪ್ರಕಾರ, ದೇವರ ಕೃಪಾವೇದವಾದ ಒಡಂಬಡಿಕೆಯ ಪೆಟ್ಟಿಗೆಯನ್ನು ತೃಣೀಕರವಾಗಿ ಮುಟ್ಟುವವರ ಮೇಲೆಯೂ ಆತನ ರೌದ್ರಾಗ್ನಿಯು ಇಳಿಯುವದು ಎಂಬುವದಕ್ಕೆ ಸಂದೇಹವಿಲ್ಲ.

2. ಇದು ಉತ್ತಮ ಸಾಕ್ಷಿಯಾದ ಕ್ರಿಸ್ತನು ತನ್ನ ಬರುವಿಕೆಯನ್ನು ಕುರಿತು ಮೂರನೇ ಸಾರಿ ಹೇಳಿದ ವಚನವಾಗಿದೆ. ಈ ಪ್ರವಾದನೆಗಳೆಲ್ಲಾ ಸತ್ಯವೆಂದು ಆತನು ಸಾಕ್ಷಿ ಕೊಟ್ಟು, ಅವುಗಳನ್ನು ಈಡೇರಿಸುವದಕ್ಕೆ ಶೀಘ್ರವಾಗಿ ಬರುತ್ತೇನೆಂದು ಹೇಳುತ್ತಾನೆ. ಆತನು ಈ ಮಾತುಗಳನ್ನು ಹೇಳಿ ೧೮೦೦ ವರುಷವಾದಾಗ್ಯೂ, ಬೇಗ ಬರುತ್ತೇನೆಂದು ಹೇಳಿದ ಆತನ ಮಾತು ಬದಲಾಗಲಿಲ್ಲ. ಆತನ ನಿತ್ಯತ್ವವನ್ನೂ, ಸಾವಿರ ವರುಷ ಒಂದು ದಿವಸವಾಗಿ ಎಣಿಸುವ ಆತನ ದೈವಸ್ವಭಾವವನ್ನೂ ಯೋಚಿಸುವಾಗ ಇದು ಬಹಳ ದೀರ್ಘವಾದ ಕಾಲವಲ್ಲ. ಆದರೂ ಒಬ್ಬೊಬ್ಬನ ಕ್ರಿಯೆ ನಡಿಸ ತಕ್ಕ ಕಾಲವನ್ನೂ ಮರಣವಾಗ ತಕ್ಕ ಕಾಲವನ್ನು ನೆನಸುವಾಗ ಇದು ಮಹಾ ಸಂಕ್ಷೇಪವಾದ ಕಾಲವೆಂದು ಹೇ[ಳ]ಬೇಕು.

3. ಬೇಗ ಬರುತ್ತೇನೆಂದು ಮದಲಿಂಗನಾದ ಕ್ರಿಸ್ತನು ಹೇ[ಳಿ]ದ್ದಕ್ಕೆ ಮದಲಗಿತ್ತಿಯಾದ ಸಭೆಯು ಯೋಹಾನನ ಮೂ[ಲಕ]ವಾಗಿ, ಹೌದು, ಕರ್ತನಾದ ಯೇಸುವೇ, ಬಾ! ಎಂದು ಅತ್ಯಾ[ಸೆ]ಯಿಂದ ಹೇಳುತ್ತದೆ. ಇದು ನನ್ನ ಮನೋಭಿಲಾಷೆಯೋ? ನಾ[ನು] ಕರ್ತನಾದ ಯೇಸುವಿನ ಬರುವಿಕೆಯನ್ನು ಆಶೆಯಿಂದ ಎದು[ರು] ನೋಡುತ್ತೇನೋ? ಎಂದು ಒಬ್ಬೊಬ್ಬನು ತನ್ನನ್ನು ವಿಚಾ[ರಿಸಿ]ಕೊಳ್ಳ ತಕ್ಕದ್ದು.

4. ಹೊಸ ಒಡಂಬಡಿಕೆಯ ಈ ಕಡೇ ಗ್ರಂಥವು, ಆಶೀರ್ವಾ[ದ]ದೊಂದಿಗೆ ಮುಗಿಯುತ್ತದೆ. ಹಿರಿಯರ ಸಹಾಯದಿಂದ ಈ ಗ್ರಂ[ಥ]ವನ್ನು ಬರೆದವನೂ, ಇದನ್ನು ಓದುವವರೂ, ಅಸ್ಥಿರವಾದ ತ[ಮ್ಮ] ಅಲ್ಪಾಯುಷ್ಯದಿವಸಗಳನ್ನು ಮುಗಿಸಿ, ನಿತ್ಯಲೋಕದಲ್ಲಿ ಶೀ[ಘ್ರ] ಮೋಕ್ಷಮನೆಗೆ ನೇತ್ರದಂತೆಯೂ ಮಾಣಿಕ್ಯದಂತೆಯೂ ಅಧಿ[ಪ]ತಿಯಾಗಿ ವಿರಾಜಿಸುವ ಕ್ರಿಸ್ತನ ಸನ್ನಿಧಿಯಲ್ಲಿ ನಿಲ್ಲ ಬೇಕಾದ ಕಾ[ಲ]ವು ಬೇಗ ಬರುವದು. ಆಗ ಆತನ ಮುಖವನ್ನು ನಾಚಿಕೆಯಿಂ[ದ]ದಲೂ ದುಃಖದಿಂದಲೂ ಅಲ್ಲ, ಆನಂದ ಸಂತೋಷದಿಂದ ದರ್ಶಿ[ಸಿ] ಆ ಮೋಕ್ಷಪಟ್ಣದಲ್ಲಿ ನಿರ್ಲಯವಾದ ಭಾಗ್ಯವನ್ನು ಹೊಂ[ದಿ] ಸದಾಕಾಲ ಸುಖವಾಗಿ ಬಾಳುವ ಹಾಗೆ, ಈಗಲೇ ಆತನ ಶರಣ[ಾ]ಗತರಾಗಿ, ನಮ್ಮ ಹೃದಯಕಮಲವನ್ನು ಆತನ ಪಾದಗಳಿಗೆ ಕಾ[ಣ]ಣಿಕೆಯಾಗಿ ಸಮರ್ಪಿಸಿ, ಕರ್ತನಾದ ಯೇಸುವೇ! ಬಾ! ಎಂದ[ು] ಆತನ ಪ್ರಸನ್ನತೆಯನ್ನು ಅಪೇಕ್ಷೆಯಿಂದ ಎದುರು ನೋಡುವಂ[ತೆ] ಪರಿಶುದ್ಧಾತ್ಮನು ಕೃಪೆ ಮಾಡಲಿ. ಆಮೆನ್.